ಗುರುವಾರ, ಆಗಸ್ಟ್ 5, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 217 | ಪುಟ 18

● www.prajavani.net


/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾ ವಾಣಿ

ಸದ್ಯದಲ್ಲೇ ಇರುವ ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ)ಗೆ ಸರಿಯಾಗಿ ಯೋಜನೆ ಮಾಡಿಕೊಂಡರೆ ಕಡಿಮೆ ಸಮಯದಲ್ಲಿ ಸಿದ್ಧತೆ ನಡೆಸಿ, ಪರೀಕ್ಷೆಯಲ್ಲಿ ಯಶಸ್ವಿಯಾಗಬಹುದು.



ಆಳ-ಅಗಲ ಉಗ್ರವಾದವೇ ಈಗಲೂ ಸವಾಲು

ಕೋವಿಡ್: 25 ಸಾವಿರ ಸಕ್ರಿಯ ಪ್ರಕರಣ 12

ಕಲಾಪ ಸ್ಥಗಿತಕ್ಕೆ ಸರ್ಕಾರವೇ ಕಾರಣ 8

ಸೆನ್ಸೆಕ್ಸ್	ನಿಫ್ಟಿ	₹/$
54,369 ▲	16,268 ▲	74.19 ▲

13 ಜಿಲ್ಲೆಗಳಿಗೆ ಪ್ರಾತಿನಿಧ್ಯವೇ ಇಲ್ಲ • ಲಿಂಗಾಯತ–ಒಕ್ಕಲಿಗ–ಬ್ರಾಹ್ಮಣರದ್ದೇ ಪಾರುಪತ್ಯ • ಉಪ ಮುಖ್ಯಮಂತ್ರಿ ಸ್ಥಾನ ನೀಡದಿರಲು ವರಿಷ್ಠರ ನಿರ್ಧಾರ

ಹಳಬರಿಗೇ ಮಣೆ: ಬೊಮ್ಮಾಯಿಗೆ ಪೂರ್ಣ ಹೊಣೆ

• ವೈ.ಗ. ಜಗದೀಶ್

ಸುದ್ದಿ ವಿಶ್ಲೇಷಣೆ

ಬೆಂಗಳೂರು: ಕಳಂಕ ರಹಿತರೂ, ಭ್ರಷ್ಟರಲ್ಲದವರನ್ನು ಹೊಸ ಸಚಿವ ಸಂಪುಟಕ್ಕೆ ತಂದು ಆಡಳಿತಕ್ಕೆ ಹೊಸ ಸ್ಪರ್ಶ ನೀಡಲಾಗುತ್ತದೆ ಹಾಗೂ ಯುವ ತಲೆಮಾರಿಗೆ ಆದ್ಯತೆ ಸಿಗಲಿದೆ ಎಂಬೆಲ್ಲ ವಾದಗಳು ಬದಿಗೆ ತಳ್ಳಲ್ಪಟ್ಟಿವೆ. ಯಡಿಯೂರಪ್ಪ ಛಾಯೆಯಿಂದ ಸರ್ಕಾರವನ್ನು ಹೊರತರುವ ಸಲುವಾಗಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕೈ ಕಟ್ಟಿ ಹಾಕದಂತಹ ವಾತಾವರಣ ನಿರ್ಮಿಸಿ, ಅವರಿಗೇ ಪೂರ್ತಿ ಹೊಣೆ ವಹಿಸುವ ಚಾಣಾಕ್ಷ ನಡೆಯನ್ನು ಬಿಜೆಪಿ ವರಿಷ್ಠರು ಕೈಗೊಂಡಿದ್ದಾರೆ.

ಯಡಿಯೂರಪ್ಪ ಅವರ ಸಂಪುಟ ರಚನೆಗೆ 25 ದಿನ ಕಾಯಿಸಿದ್ದ ಬಿಜೆಪಿ ವರಿಷ್ಠರು, ಅವರ ಸರ್ಕಾರವನ್ನು ತಮ್ಮದೇ ನಿಯಂತ್ರಣದಲ್ಲಿ ಇಟ್ಟುಕೊಳ್ಳಲು ಕೆಲವು ಕಡಿವಾಣಗಳನ್ನು ಹಾಕಿದ್ದರು. ಬೊಮ್ಮಾಯಿ ಅವರ ಸಂಪುಟ ರಚನೆಗೆ ಒಂದೇ ವಾರದಲ್ಲಿ ಹಸಿರು ನಿಶಾನೆ ತೋರಿಸಿದ ಆ ಪಕ್ಷದ ನಾಯಕರು, ಯಡಿಯೂರಪ್ಪ ಹಟ, ಬೊಮ್ಮಾಯಿ ಮನವಿಗೆ ಮಣಿಯದೇ ತಮ್ಮದೇ ಪಟ್ಟಿಯನ್ನು ಕಳಿಸಿ, ತಮ್ಮ ಮೂಗಳತೆಯಲ್ಲಿ ಸರ್ಕಾರ ಇರುವಂತೆ ನೋಡಿಕೊಂಡಿದ್ದಾರೆ.

ರಾಜಭವನದಲ್ಲಿ ಬುಧವಾರ(ಆ.4)ರಂದು ನಡೆದ ಸಮಾರಂಭದಲ್ಲಿ 29 ಶಾಸಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಇದರಿಂದಾಗಿ ಮುಖ್ಯಮಂತ್ರಿಯೂ ಸೇರಿಕೊಂಡಂತೆ ಬೊಮ್ಮಾಯಿ ಸಂಪುಟದ ಬಲ ಮೂವತ್ತಕ್ಕೆ ಏರಿದೆ. ನಾಲ್ಕು ಸಚಿವ ಸ್ಥಾನವನ್ನು ಖಾಲಿ ಉಳಿಸಿಕೊಳ್ಳಲಾಗಿದೆ.

29 ಜನರ ಪೈಕಿ 23 ಹಳೆಯ ಮುಖಗಳೇ ಆಗಿವೆ. ಆರು ಹೊಸ ಮುಖಗಳಿಗಷ್ಟೇ ಅವಕಾಶ ಸಿಕ್ಕಿದೆ.

ಶಕ್ತಿಕೇಂದ್ರ ತಪ್ಪಿಸುವ ಲೆಕ್ಕ: ಕರ್ನಾಟಕದ ಬಿಜೆಪಿ ಮತ್ತು ಸರ್ಕಾರವನ್ನು ಯಡಿಯೂರಪ್ಪ ಹಿಡಿತದಿಂದ ತಪ್ಪಿಸಲು ಹೊಸ ಮಾರ್ಗ ಹುಡುಕುವುದು, ಬೊಮ್ಮಾಯಿ ನೇತೃತ್ವದಲ್ಲಿ 'ಪರ್ಯಾಯ'ವೊಂದನ್ನು ಸೃಷ್ಟಿಸುವುದು ಬಿಜೆಪಿ ವರಿಷ್ಠರ ಲೆಕ್ಕಾಚಾರ ಇದ್ದಂತೆ ಮೇಲ್ನೋಟಕ್ಕೆ ತೋರುತ್ತಿದೆ.

ಮುಖ್ಯಮಂತ್ರಿಯಾಗಿ ನಿಯುಕ್ತಿಗೊಂಡಾಗ, ದೆಹಲಿಗೆ ಹೋಗುವ ಮುನ್ನ ಯಡಿಯೂರಪ್ಪ ಅವರ ಜತೆ ಚರ್ಚೆ ನಡೆಸಿ ಹೋಗುತ್ತಿದ್ದ ಬೊಮ್ಮಾಯಿ, ಎರಡು ದಿನಗಳ ದೆಹಲಿ ಪ್ರವಾಸ ಮುಗಿಸಿ ರಾಜಧಾನಿಗೆ ಬುಧವಾರ ಬೆಳಿಗ್ಗೆ ಬರುತ್ತಲೇ ನೇರ ವಿಧಾನಸೌಧಕ್ಕೆ ಹೋದರು. ಅಲ್ಲಿ ಸಭೆ, ಪತ್ರಿಕಾಗೋಷ್ಠಿ ನಡೆಸಿ ಸಚಿವ ಸಂಪುಟದ ರೂಪುರೇಷೆಯನ್ನು ರಾಜ್ಯದ ಜನರ ಮುಂದಿಟ್ಟರು. ಅದಾದ ಬಳಿಕ ವಷ್ಟೇ ಯಡಿಯೂರಪ್ಪ ಮನೆಗೆ ಧಾವಿಸಿದರು. ವರಿಷ್ಠರ ಸೂಚನೆಯ ಮೇರೆಗೆ ಬೊಮ್ಮಾಯಿ ಈ ಮಾರ್ಗ ಅನುಸರಿಸಿದರು. ತಮ್ಮ ಶಕ್ತಿಕೇಂದ್ರ ವಿಧಾನಸೌಧವೇ ವಿನಃ ಯಡಿಯೂರಪ್ಪ ಮನೆಯಲ್ಲ ಎಂಬ ಸೂಚನೆಯನ್ನು ನೀಡುವುದು ಇದರ ಉದ್ದೇಶ ಇದ್ದಂತಿದೆ.

ಗೋವಿಂದ ಕಾರಜೋಳ, ಶ್ರೀರಾಮುಲು, ಅಶೋಕ, ಈಶ್ವರಪ್ಪ ಅವರನ್ನು ಉಪಮುಖ್ಯಮಂತ್ರಿ ಮಾಡದೇ ಇದ್ದರೆ ಎಲ್ಲ ಸಮುದಾಯವರನ್ನು ಓಲೈಸಿಕೊಂಡು, ಸರ್ಕಾರವನ್ನು ಸುಗಮವಾಗಿ ನಡೆಸುವುದು ಕಷ್ಟ. ಸಾಮಾಜಿಕ ನ್ಯಾಯದ ಆಶಯವನ್ನು ಕಡೆಗಣಿಸಿದಂತಾಗುತ್ತದೆ ಎಂಬುದು ಬೊಮ್ಮಾಯಿ ವಾದವಾಗಿತ್ತು. ಉಪಮುಖ್ಯಮಂತ್ರಿ ಪಟ್ಟವೆಂಬುದು ಮತ್ತೊಂದು ಶಕ್ತಿಕೇಂದ್ರವಾಗಬಾರದು; ನಿರ್ಧಾರ ಸಾಮೂಹಿಕವಾದರೂ ನಾಯಕತ್ವ ಏಕಾತ್ಮಕವಾಗಿರಬೇಕು ಎಂಬ ತರ್ಕದಲ್ಲಿ ಉಪಮುಖ್ಯಮಂತ್ರಿ ಹುದ್ದೆ ಸೃಷ್ಟಿಗೆ ಬಿಜೆಪಿ ವರಿಷ್ಠರು ನಿರಾಕರಿಸಿದರು.

ತಮ್ಮ ಮಗ ಬಿ.ವೈ. ವಿಜಯೇಂದ್ರ ಅವರನ್ನು ಸರ್ಕಾರಕ್ಕೆ ಸೇರಿಸಿಕೊಳ್ಳಲೇಬೇಕು ಎಂದು ಯಡಿಯೂರಪ್ಪ ಬೆದರಿಕೆ ಹಾಕಿದ್ದರು. ನಾಯಕನ ಬೇಡಿಕೆ ನಿರಾಕರಿಸಲಾಗದೇ ಬೊಮ್ಮಾಯಿ ಈ ಪ್ರಸ್ತಾವನೆಯನ್ನೂ ವರಿಷ್ಠರ ಮುಂದಿಟ್ಟಿದ್ದರು. ಮತ್ತೊಂದು ಶಕ್ತಿಕೇಂದ್ರಕ್ಕೆ ಅವಕಾಶವಾಗುತ್ತದೆ; ಭ್ರಷ್ಟಾಚಾರ ತಡೆಯಬೇಕೆಂಬ ಒತ್ತಾಸೆ ಮಣ್ಣುಪಾಲಾಗುತ್ತದೆ ಎಂಬ ಕಾರಣ ಮುಂದಿಟ್ಟ ಬಿಜೆಪಿ ವರಿಷ್ಠರು ಅದನ್ನು ನಿರಾಕರಿಸಿದರು.

ಮರೆಯಾದ ಪ್ರಾದೇಶಿಕ ನ್ಯಾಯ: ಹಿಂದಿನ ಬಾರಿಯಂತೆ ಈಗಲೂ ಪ್ರಾದೇಶಿಕ ನ್ಯಾಯ ಮರೆಯಾಗಿದೆ. 31 ಜಿಲ್ಲೆಗಳಲ್ಲಿ 18 ಜಿಲ್ಲೆಗಳಿಗಷ್ಟೇ ಪ್ರಾತಿನಿಧ್ಯ ಸಿಕ್ಕಿದೆ. ಅದರಲ್ಲೂ ಹಿಂದುಳಿದ ಜಿಲ್ಲೆಗಳಿಗೆ ಸ್ಥಾನವೇ ಸಿಕ್ಕಿಲ್ಲ.

ಹಳೆ ಮೈಸೂರು ಭಾಗದ ಮೈಸೂರು, ರಾಮನಗರ, ಹಾಸನ, ಕೊಡಗು ಜಿಲ್ಲೆಗಳಿಗೂ ಪ್ರಾತಿನಿಧ್ಯ ಇಲ್ಲದಂತಾಗಿದೆ. ಬಿಜೆಪಿಗೆ ಗಟ್ಟಿ ನೆಲೆಯೇ ಇಲ್ಲದ (ಕೊಡಗು ಬಿಟ್ಟು) ಈ ಜಿಲ್ಲೆಗಳಲ್ಲಿ ಆದ್ಯತೆ ನೀಡಿದರೆ ವಿಧಾನಸಭೆ ಚುನಾವಣೆ ಹೊತ್ತಿಗೆ ಅನುಕೂಲಕಾರಿ ವಾತಾವರಣ ನಿರ್ಮಾಣವಾಗಬಹುದು ಎಂಬ ಲೆಕ್ಕಾಚಾರ ಇತ್ತು. ಯಡಿಯೂರಪ್ಪ ಸರ್ಕಾರದ ಅವಧಿಯಲ್ಲಿ ಸಿ.ಪಿ. ಯೋಗೇಶ್ವರ್ ಅವರಿಗೆ ಸಚಿವ ಸ್ಥಾನ ಕೊಡುವಾಗ ಈ ಭಾಗದಲ್ಲಿ ಪಕ್ಷಕ್ಕೆ ನೆಲೆ ಕಟ್ಟುವ ಆಶಯ ಇದೆ ಎಂದು ಹೇಳಲಾಗಿತ್ತು. ಜೆಡಿಎಸ್ ಜತೆಗೆ ಉತ್ತಮ ಬಾಂಧವ್ಯ ಬೆಳೆಸಿಕೊಳ್ಳುವ ಲೆಕ್ಕಾಚಾರದಲ್ಲಿ ಈ ಭಾಗವನ್ನು ನಿರ್ಲಕ್ಷ್ಯಿಸಲಾಗಿದೆಯೇ ಎಂಬ ಚರ್ಚೆಯೂ ಶುರುವಾಗಿದೆ.

ಲಿಂಗಾಯತ-ಒಕ್ಕಲಿಗರ ಪಾರುಪತ್ಯ: ಈಗಿನ 30 ಸದಸ್ಯರ ಸಂಪುಟ ಬಲದಲ್ಲಿ ಮುಖ್ಯಮಂತ್ರಿ ಸೇರಿದಂತೆ 10 ಸ್ಥಾನಗಳು ಪ್ರಬಲ ಲಿಂಗಾಯತ-ವೀರಶೈವ ಕೋಮಿಗೆ ಮೀಸಲಾಗಿವೆ.

6ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 5,6,7



ಬೆಂಗಳೂರಿನ ರಾಜಭವನದಲ್ಲಿ ಬುಧವಾರ ನೂತನ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಮುನಿರತ್ನ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕಾಲಿಗೆ ನಮಸ್ಕರಿಸಿದರು – ಪ್ರಜಾವಾಣಿ ಚಿತ್ರ

ಸಿಗದ ಸಚಿವಗಿರಿ: ಆಕ್ರೋಶ

ಸಂಪುಟ ರಚನೆಯ ಬೆನ್ನಲ್ಲೇ ಸಚಿವ ಸ್ಥಾನ ವಂಚಿತರಾಗಿರುವ ಶಾಸಕರು ಮತ್ತು ಅವರ ಬೆಂಬಲಿಗರ ಅಸಮಾಧಾನವೂ ಹೊರಬಿದ್ದಿದೆ. ಕೆಲವು ಶಾಸಕರು ನೇರವಾಗಿ ಸಿಟ್ಟು ಹೊರ ಹಾಕಿದ್ದರೆ, ಹಲವು ಶಾಸಕರ ಬೆಂಬಲಿಗರು ಬಿಜೆಪಿ ವರಿಷ್ಠರ ವಿರುದ್ಧ ಹರಿ ಹಾಯ್ದಿದ್ದಾರೆ.

ಹಾವೇರಿ ಶಾಸಕ ನೆಹರೂ ಓಲೇಕಾರ್ ನೇರವಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ವಿರುದ್ಧವೇ ಆರೋಪ ಮಾಡಿದ್ದಾರೆ. ತಮಗೆ ಸಚಿವ ಸ್ಥಾನ ಕೈತಪ್ಪಲು ಮುಖ್ಯಮಂತ್ರಿಯೇ ಕಾರಣ ಎಂದು ದೂರಿದ್ದಾರೆ. ಓಲೇಕಾರ್ ಬೆಂಬಲಿಗರು ಉರುಳು ಸೇವೆಯ ಮೂಲಕ ತಮ್ಮ ಕೋಪ ಪ್ರದರ್ಶಿಸಿದ್ದಾರೆ.

ಹಿರಿಯೂರು ಶಾಸಕಿ ಕೆ.ಪೂರ್ಣಿಮಾ ಸಂಪುಟ ಸೇರುವ ಖಚಿತ ವಿಶ್ವಾಸದಲ್ಲಿದ್ದರು. ಕೊನೆಯ ಹಂತದಲ್ಲಿ ಅವಕಾಶ ಕೈತಪ್ಪಿದ್ದರಿಂದ ಸಿಟ್ಟಿಗೆದ್ದಿರುವ ಅವರು, ಸಾಮಾಜಿಕ ಮಾಧ್ಯಮಗಳಲ್ಲಿ ನೇರವಾಗಿಯೇ ಪಕ್ಷದ ವರಿಷ್ಠರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಪೂರ್ಣಿಮಾ ಅವರಿಗೆ ಸಚಿವ ಸ್ಥಾನ ನೀಡದಿರುವುದಕ್ಕೆ ಅಸಮಾಧಾನ ವ್ಯಕ್ತಪಡಿಸಿರುವ ಚಿತ್ರದುರ್ಗ ಯಾದವ ಗುರುಪೀಠದ ಶ್ರೀಕೃಷ್ಣ ಯಾದವಾನಂದ ಸ್ವಾಮೀಜಿ, 'ಬಿಜೆಪಿ ಎಲ್ಲ ಚುನಾವಣೆಗಳಲ್ಲೂ ಗೊಲ್ಲ ಸಮುದಾಯವನ್ನು ಬಳಸಿಕೊಂಡಿದ್ದು, ಸಂಪುಟ ರಚನೆಯಲ್ಲಿ ಮೋಸ ಮಾಡಿದೆ. ಇದನ್ನು ಖಂಡಿಸಿ ವಿಧಾನಸೌಧಕ್ಕೆ ಮುತ್ತಿಗೆ ಹಾಕುವ ಕುರಿತು ಯೋಚಿಸುತ್ತಿದ್ದೇವೆ' ಎಂದಿದ್ದಾರೆ.

5ನೇ ಪುಟ ನೋಡಿ

ನೂತನ ಸಚಿವರ ಪಟ್ಟಿ

- ಗೋವಿಂದ ಎಂ. ಕಾರಜೋಳ
- ಕೆ.ಎಸ್. ಈಶ್ವರಪ್ಪ
- ಆರ್. ಅಶೋಕ
- ಬಿ. ಶ್ರೀರಾಮುಲು
- ವಿ. ಸೋಮಣ್ಣ
- ಉಮೇಶ ಕತ್ತಿ
- ಎಸ್. ಅಂಗಾರ
- ಜೆ.ಸಿ. ಮಾಧುಸ್ವಾಮಿ
- ಆರಗ ಜ್ಞಾನೇಂದ್ರ
- ಡಾ.ಸಿ.ಎನ್. ಅಶ್ವತ್ಥ ನಾರಾಯಣ
- ಸಿ.ಸಿ. ಪಾಟೀಲ
- ಆನಂದ್ ಸಿಂಗ್
- ಕೋಟ ಶ್ರೀನಿವಾಸ ಪೂಜಾರಿ
- ಪ್ರಭು ಚವ್ಹಾಣ್
- ಮುರುಗೇಶ್ ಆರ್. ನಿರಾಣಿ
- ಅರಬೈಲ್ ಶಿವರಾಂ ಹೆಬ್ಬಾರ್
- ಎಸ್.ಟಿ. ಸೋಮಶೇಖರ್
- ಬಿ.ಸಿ. ಪಾಟೀಲ
- ಬೈರತಿ ಬಸವರಾಜ್
- ಡಾ.ಕೆ. ಸುಧಾಕರ್
- ಕೆ. ಗೋಪಾಲಯ್ಯ
- ಶಶಿಕಲಾ ಜೊಲ್ಲೆ
- ಎಂ.ಟಿ.ಬಿ. ನಾಗರಾಜು
- ಕೆ.ಸಿ. ನಾರಾಯಣಗೌಡ
- ಬಿ.ಸಿ. ನಾಗೇಶ್
- ವಿ. ಸುನೀಲ್ ಕುಮಾರ್
- ಹಾಲಪ್ಪ ಆಚಾರ್
- ಶಂಕರ್ ಬಿ. ಪಾಟೀಲ್ ಮುನೇನಕೊಪ್ಪ
- ಮುನಿರತ್ನ

ಸಂಪುಟದಿಂದ ಹೊರ ಹೋದವರು

- ಜಗದೀಶ ಶೆಟ್ಟರ್
- ಲಕ್ಷ್ಮಣ ಎಂ. ಸವದಿ
- ಎಸ್. ಸುರೇಶ್ ಕುಮಾರ್
- ಅರವಿಂದ ಲಿಂಬಾವಳಿ
- ಸಿ.ಪಿ. ಯೋಗೇಶ್ವರ್
- ಆರ್. ಶಂಕರ್
- ಶ್ರೀಮಂತ ಪಾಟೀಲ

ಪರಿಶಿಷ್ಟ ಪಂಗಡಕ್ಕೆ ಪ್ರತ್ಯೇಕ ಸಚಿವಾಲಯ

ಬೆಂಗಳೂರು: ಪರಿಶಿಷ್ಟ ಪಂಗಡದವರ (ಎಸ್‌ಟಿ) ಅಭಿವೃದ್ಧಿಗೆ ಪ್ರತ್ಯೇಕ ಸಚಿವಾಲಯ ಸ್ಥಾಪಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ನೂತನ ಸಚಿವರು ಪ್ರಮಾಣ ವಚನ ಸ್ವೀಕರಿಸಿದ ಬೆನ್ನಲ್ಲೆ ನಡೆದ ಸಚಿವ ಸಂಪುಟ ಸಭೆಯ ಬಳಿಕ ಈ ವಿಷಯ ತಿಳಿಸಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಈ ಮೂಲಕ ಎಸ್‌ಟಿ ಸಮುದಾಯದ ಬಹಳ ದಿನಗಳ ಬೇಡಿಕೆ ಈಡೇರಿಸಲಾಗುವುದು' ಎಂದರು.

ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ದಿನ ಏಕಾಂಗಿಯಾಗಿ ಸಂಪುಟ ಸಭೆ ನಡೆಸಿದ್ದ ಬೊಮ್ಮಾಯಿ, ರೈತರ ಮಕ್ಕಳಿಗೆ ಶಿಷ್ಯವೇತನ ಹಾಗೂ ವಿಧವೆಯವರು, ಸಂಧ್ಯಾ ಸುರಕ್ಷಾ ಮತ್ತು ಅಂಗವಿಕಲರ ಪಿಂಚಣಿ ಹೆಚ್ಚಿಸುವುದಾಗಿ ಪ್ರಕಟಿಸಿದ್ದರು. ಪೂರ್ಣ ಪ್ರಮಾಣದಲ್ಲಿ ಸಚಿವ ಸಂಪುಟ ಅಸ್ತಿತ್ವಕ್ಕೆ ಬಂದ ಬಳಿಕ ಮತ್ತೆರಡು ಪ್ರಮುಖ ನಿರ್ಣಯಗಳನ್ನು ಕೈಗೊಳ್ಳಲಾಗಿದೆ.

6ನೇ ಪುಟ ನೋಡಿ

ರಾಜ್ಯ ಕೋವಿಡ್ ಅಂಕಿ–ಅಂಶ

29,11,727	ಒಟ್ಟು ಸೋಂಕಿತರು (29,09,958 ನಿನ್ನೆಯ ವಿವರ) ▲
24,305	ಸಕ್ರಿಯ ಪ್ರಕರಣಗಳು ▲
28,50,717	ಗುಣಮುಖರಾದವರು ▲
36,680	ಒಟ್ಟು ಸಾವು ▲

ದಿನದ ಏರಿಕೆ

ಹೊಸ ಪ್ರಕರಣ	1,769	▲
ಗುಣಮುಖ	1,714	▲
ಸಾವು	30	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಟೋಕಿಯೊದಲ್ಲಿ ಸಾಧನೆಗಳ ಸಾಲು..



ಫೈನಲ್‌ಗೆ ರವಿ ಹೆಜ್ಜೆ..
(57 ಕೆ.ಜಿ ಫ್ರೀಸ್ಟೈಲ್ ಕುಸ್ತಿ) ಸೆಮಿಫೈನಲ್
ರವಿ ದಹಿಯಾ 7
ನೂರಿಸ್ಲಾಮ್ ಸ್ಯಾನಿಯಾವ್ 9
(ಫಾಲ್ ಆಧಾರದಲ್ಲಿ ರವಿಗೆ ಜಯ)

ಮೆಕ್‌ಲಾಫ್ಲಿನ್ ಮಿಂಚಿನ ಓಟ
400 ಮೀ. ಓಟ (ಅಮೆರಿಕ)
ಸಿಡ್ನಿ ಮೆಕ್‌ಲಾಫ್ಲಿನ್
51.46 ಸೆಕೆಂಡು (ವಿಶ್ವದಾಖಲೆ)

ಲವ್ಲಿನಾಗೆ ಕಂಚು: ಫೈನಲ್‌ಗೆ ಸುರ್ಮೆನೆಲಿ
ಮಹಿಳೆಯರ ಬಾಕ್ಸಿಂಗ್ ಸೆಮಿಫೈನಲ್‌ನಲ್ಲಿ ಟರ್ಕಿಯ ಸುರ್ಮೆನೆಲಿ ವಿರುದ್ಧ ಪರಾಭವಗೊಂಡ ಲವ್ಲಿನಾ ಬೊರ್ಗೊಹೈನ್ ಅವರಿಗೆ ಕಂಚಿನ ಪದಕ ಲಭಿಸಿತು.

ಅಂದಗಾತಿಗೆ ಆರನೇ ಚಿನ್ನ..
ಆರ್ಟಿಸ್ಟಿಕ್ ಈಜು ಕ್ರೀಡೆಯ ಸುಂದರ ಜೋಡಿ ರಷ್ಯಾದ ಸ್ವೆಟ್ಲಾನಾ ರೊಮಶಿನಾ ಮತ್ತು ಸ್ವೆಟ್ಲಾನಾ ಕೊಲೆಶ್ನಿಚೆಂಕೊ ಡ್ಯುಯೆಟ್ ವಿಭಾಗದಲ್ಲಿ ಚಿನ್ನ ಗೆದ್ದಿತು. ಇದರೊಂದಿಗೆ ರೊಮಶಿನಾ ಒಲಿಂಪಿಕ್ ಇತಿಹಾಸದಲ್ಲಿ ಆರು ಚಿನ್ನ ಗೆದ್ದ ಸಾಧನೆ ಮಾಡಿದರು.
ಪಾಯಿಂಟ್: 195.9079

ನೀರಜ್ ನಿರೀಕ್ಷೆ..
ನೀರಜ್ ಚೋಪ್ರಾ (ಜಾವೆಲಿನ್ ಥ್ರೋ)
86.65 ಮೀ
ಫೈನಲ್‌ಗೆ ಪ್ರವೇಶ

ವಿಶೇಷ ಪುಟಗಳು 14,15

ಒಳ ಪುಟಗಳು

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸ್ಥಳೀಯ ಸಂಸ್ಥೆ ಚುನಾವಣೆ ಮುಂದೂಡಿಕೆ ಪ್ರಮಾಣಪತ್ರ ಸಲ್ಲಿಸಲು ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಡಿಸೆಂಬರ್ ತನಕ ಮುಂದೂಡಿರುವ ರಾಜ್ಯ ಸಚಿವ ಸಂಪುಟದ ನಿರ್ಧಾರ ಸಮರ್ಥಿಸುವ ಪ್ರಮಾಣಪತ್ರ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಈ ಸಂಬಂಧ ಸ್ವಯಂ ಪ್ರೇರಿತ ಅರ್ಜಿ ದಾಖಲಿಸಿಕೊಂಡಿರುವ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, 'ಧಾರ್ಮಿಕ ಸ್ಥಳಗಳಿಗೆ ಜನರು ಭೇಟಿ ನೀಡಲು ಸರ್ಕಾರ ಅನುಮತಿ ನೀಡಿದೆ. ಆದರೆ, ಮತಗಟ್ಟೆಗಳಿಗೆ ಬರಲು ಅವಕಾಶ ಇಲ್ಲ ಎಂದರೆ ಏನರ್ಥ' ಎಂದು ಸರ್ಕಾರದ ವಕೀಲರನ್ನು ಪ್ರಶ್ನಿಸಿತು.

'ಸಾಂಕ್ರಾಮಿಕ ರೋಗ ಉಲ್ಬಣಗೊಂಡಿದ್ದ ಸಂದರ್ಭದಲ್ಲೇ ವಿಧಾನಸಭೆ ಉಪಚುನಾವಣೆಗಳನ್ನು ನಡೆಸಲಾಯಿತು. ಸ್ಥಳೀಯ ಸಂಸ್ಥೆಗಳ ಚುನಾವಣೆ ಬಗ್ಗೆ ಸಚಿವ ಸಂಪುಟ ನಿರ್ಧಾರ ಕೈಗೊಂಡ ಸಮಯದಲ್ಲಿ ಕೋವಿಡ್ ಪರಿಸ್ಥಿತಿ ಸುಧಾರಿಸಿತ್ತು. ಆದರೂ ವರ್ಷಾಂತ್ಯದ ತನಕ ಮುಂದೂಡುವ ನಿರ್ಧಾರ ಕೈಗೊಳ್ಳಲಾಗಿದೆ' ಎಂದು ಪೀಠ ಹೇಳಿತು.

ರಾಜ್ಯ ಚುನಾವಣಾ ಆಯೋಗದ ಪರ ಹಾಜರಾಗಿದ್ದ ಹಿರಿಯ ವಕೀಲ ಕೆ.ಎನ್. ಫಣೀಂದ್ರ, 'ಜುಲೈ 28ರಂದು ಸಭೆ ನಡೆಸಲಾಗಿದ್ದು, ಬೆಳಗಾವಿ, ಕಲಬುರ್ಗಿ, ಹುಬ್ಬಳ್ಳಿ–ಧಾರವಾಡ, ದೊಡ್ಡಬಳ್ಳಾಪುರ, ತರೀಕೆರೆ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಶೀಘ್ರವೇ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಹೇಳಿದರು. ವಿಚಾರಣೆಯನ್ನು ಪೀಠ ಆ.13ಕ್ಕೆ ಮುಂದೂಡಿತು.

ವಿಐಟಿ: ಇಬ್ಬರಿಗೆ ವಾರ್ಷಿಕ ₹75 ಲಕ್ಷದ ಉದ್ಯೋಗ

81 ವಿದ್ಯಾರ್ಥಿಗಳಿಗೆ ₹25 ಲಕ್ಷ ವೇತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೆಲ್ಲೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ವಿಐಟಿ) ಇಬ್ಬರು ವಿದ್ಯಾರ್ಥಿಗಳು ವಾರ್ಷಿಕ ₹75 ಲಕ್ಷ ಹಾಗೂ 81 ವಿದ್ಯಾರ್ಥಿಗಳು ವಾರ್ಷಿಕ ₹25 ಲಕ್ಷ ವೇತನದ ಉದ್ಯೋಗಗಳಿಗೆ ಕ್ಯಾಂಪಸ್ ಸಂದರ್ಶನದಲ್ಲಿ ಆಯ್ಕೆಯಾಗಿದ್ದಾರೆ.

ವಿಐಟಿಯ ಈ ಸಾಲಿನ ಪದವೀಧರರಿಗೆ ಜುಲೈ 15ರಂದು ಮೊದಲ ಹಂತದ ಕ್ಯಾಂಪಸ್ ಸಂದರ್ಶನ ನಡೆದಿತ್ತು. ಆನ್‌ಲೈನ್ ಮೂಲಕ ನಡೆದ ಸಂದರ್ಶನ ಪ್ರಕ್ರಿಯೆಗಳಲ್ಲಿ ವಿಐಟಿಯ ವೆಲ್ಲೂರು, ಚೆನ್ನೈ, ಭೋಪಾಲ್ ಹಾಗೂ ಆಂಧ್ರಪ್ರದೇಶದ ಅಮರಾವತಿ ಕ್ಯಾಂಪಸ್‌ಗಳ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವಿಐಟಿ ಕುಲಪತಿ ಡಾ.ಜಿ.ವಿಶ್ವನಾಥನ್, 'ಮೈಕ್ರೊಸಾಫ್ಟ್ ಸಂಸ್ಥೆಯು 21 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿಕೊಂಡಿದೆ. ಪೇಪಾಲ್ 13, ಉಡಾನ್ 3, ಡ್ರೈಟ್ 6, ವರ್ಕ್‌ಇಂಡಿಯಾ 8, ಡಿ.ಇ.ಶಾ ಇಂಡಿಯಾ ಪ್ರೈವೇಟ್ ಲಿಮಿಟೆಡ್ 2, ಮೋರ್ಗನ್ ಸ್ಟಾನ್ಲಿ 10 ಹಾಗೂ ಅಮೆಜಾನ್ 13 ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶ ನೀಡಿದೆ. ಈ ಪೈಕಿ ಡ್ರೈಟ್ ಕಂಪನಿ ಇಬ್ಬರು ವಿದ್ಯಾರ್ಥಿಗಳಿಗೆ ವಾರ್ಷಿಕ ₹75 ಲಕ್ಷ ವೇತನದ ಉದ್ಯೋಗ ನೀಡಿದ್ದು, ಇದು ಈ ಸಾಲಿನ ಗರಿಷ್ಠ ವೇತನದ ಉದ್ಯೋಗ' ಎಂದರು.

'ಸಂಸ್ಥೆಯ 129 ವಿದ್ಯಾರ್ಥಿಗಳು ವಿವಿಧ ಕಂಪನಿಗಳಲ್ಲಿ ತಮ್ಮ ಇಂಟರ್ನ್‌ಶಿಪ್ ಅವಧಿಯಲ್ಲೇ ಉದ್ಯೋಗಗಳಿಗೆ ಪೂರ್ವ ನಿಯೋಜನೆಗೊಂಡಿದ್ದಾರೆ' ಎಂದರು.

‘ಬಿಬಿಎಂಪಿ ಜಾಹೀರಾತು ನಿಯಮ ಸಮಂಜಸ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಬಿಎಂಪಿ ಜಾಹೀರಾತು ನಿಯಮಗಳು–2019’ ಸೈನೇಜ್ ಬೈಲಾದಡಿ ಬರುವುದಿಲ್ಲ. ಈ ನಿಯಮದಡಿ ನೀಡುವ ಜಾಹೀರಾತುಗಳಿಂದ ಸರ್ಕಾರಕ್ಕೂ ಆದಾಯ ಬರಲಿದ್ದು, ಈ ನಿಯಮಗಳು ಸಮಂಜಸವಾಗಿವೆ’ ಎಂದು ಬೆಂಗಳೂರು ಹೊರಾಂಗಣ ಜಾಹೀರಾತು ಸಂಘ ತಿಳಿಸಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎಸ್.ಎಂ.ಜವಾದ್, ‘ಹೊರಾಂಗಣ ಜಾಹೀರಾತು ಸಂಸ್ಥೆಗಳು ಕಾನೂನು ಬದ್ಧ ಜಾಹೀರಾತುಗಳನ್ನು ಮಾತ್ರ ಪ್ರದರ್ಶಿಸುತ್ತದೆ. ಈ ನಿಯಮಗಳಿಂದ ನಗರದ ಮೇಲೆ ಹೆಚ್ಚು ಪರಿಣಾಮ ಬೀರಲಿದೆ ಎನ್ನುವುದು ತಪ್ಪು ಕಲ್ಪನೆ. ಇವು, ಆರ್ಥಿಕ ಸಂಕಷ್ಟದ ಸಮಯದಲ್ಲಿ ಆದಾಯ ಮತ್ತು ಉದ್ಯೋಗಾವಕಾಶಗಳನ್ನು ಒದಗಿಸುವ ದೂರ ದೃಷ್ಟಿಯ ನಿಯಮಗಳು’ ಎಂದರು.

‘ಸಾರ್ವಜನಿಕ ಸ್ಥಳಗಳಲ್ಲಿ ಜಾಹೀರಾತು ಪ್ರದರ್ಶನದ ಮೇಲೂ ಈ ನಿಯಮಗಳು ಸಮಗ್ರ ನಿಯಂತ್ರಣ ಹೊಂದಿವೆ. ಜಾಹೀರಾತು ಪ್ರದರ್ಶನಕ್ಕೆ ಪರವಾನಗಿ, ಶುಲ್ಕ ಸಂಗ್ರಹ ಹಾಗೂ ನವೀಕರಣ ಪ್ರಕ್ರಿಯೆಗಳು ಆನ್‌ಲೈನ್ ಮೂಲಕ ನಡೆಯುವುದರಿಂದ ಪಾರದರ್ಶಕವಾಗಿರಲಿದೆ ಹಾಗೂ ಅಕ್ರಮ ಜಾಹೀರಾತುಗಳನ್ನು ಸುಲಭವಾಗಿ ಪತ್ತೆ ಹಚ್ಚಬಹುದಾಗಿದೆ’ ಎಂದು ವಿವರಿಸಿದರು.

ಸಂಘದ ಗೌರವ ಕಾರ್ಯದರ್ಶಿ ಮನಮೋಹನ್ ಸಿಂಗ್ ಮಾನ್, ‘ಲೆಗಸಿ ಬಿಲ್‌ಬೋರ್ಡ್‌ಗಳಿಂದ ನಾಗರಿಕ ಮೂಲ ಸೌಕರ್ಯಕ್ಕೆ ಹೊರೆಯಾಗುವುದಿಲ್ಲ. ಜಾಹೀರಾತುಗಳನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ ಎಂಬ ತಪ್ಪು ಮಾಹಿತಿ ಎಲ್ಲೆಡೆ ವ್ಯಾಪಿಸಿದೆ. ರಸ್ತೆಗಳಲ್ಲಿ ಅನಧಿಕೃತವಾಗಿ ಅಳವಡಿಸುವ ಫ್ಲೆಕ್ಸ್‌ನಂತಹ ಜಾಹೀರಾತುಗಳಿಗೆ ಮಾತ್ರ ನಿಷೇಧ ಹೇರಲಾಗಿದ್ದು, ಹೊರಾಂಗಣ ಜಾಹೀರಾತನ್ನು ನಿರ್ಬಂಧಿಸಿಲ್ಲ’ ಎಂದು ಸ್ಪಷ್ಟಪಡಿಸಿದರು.

ಅರ್ಕಾವತಿ ಬಡಾವಣೆ: ಹಂಚಿಕೆಯಾದ ನಿವೇಶನ ಕಳೆದುಕೊಂಡು ಗೊಂದಲದಲ್ಲಿದ್ದ ಫಲಾನುಭವಿಗಳು

307 ಸಂತ್ರಸ್ತರಿಗೆ ಬದಲಿ ನಿವೇಶನ ಹಂಚಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರ್ಕಾವತಿ ಬಡಾವಣೆಯಲ್ಲಿ ಹಂಚಿಕೆಯಾಗಿದ್ದ ನಿವೇಶನವನ್ನು ಡಿನೋಟಿಫಿಕೇಷನ್ ಹಾಗೂ ರೀಡೂ ಪ್ರಕ್ರಿಯೆಯಿಂದಾಗಿ ಕಳೆದುಕೊಂಡಿದ್ದ 307 ಫಲಾನುಭವಿಗಳಿಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಬುಧವಾರ ಬದಲಿ ನಿವೇಶನಗಳನ್ನು ಹಂಚಿಕೆ ಮಾಡಿತು.

249 ಫಲಾನುಭವಿಗಳಿಗೆ ಅದೇ ಬಡಾವಣೆಯಲ್ಲಿ ಹಾಗೂ 58 ಮಂದಿಗೆ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಬದಲಿ ನಿವೇಶನ ಹಂಚಿಕೆ ಮಾಡಲಾಗಿದೆ.

‘ಪ್ರಜಾವಾಣಿ’ ಇತ್ತೀಚೆಗೆ ಏರ್ಪಡಿಸಿದ್ದ ‘ಫೋನ್–ಇನ್’ ಕಾರ್ಯಕ್ರಮದಲ್ಲಿ ಅರ್ಕಾವತಿ ಬಡಾವಣೆಯ ಅನೇಕ ನಿವೇಶನದಾರರು ತಮಗೆ ಬದಲಿ ನಿವೇಶನ ಹಂಚಿಕೆ ಆಗದ ಬಗ್ಗೆ ಅಳಲು ತೋಡಿಕೊಂಡಿದ್ದರು. ಕೆಲವು ಸಂತ್ರಸ್ತರಂತೂ, ‘15 ವರ್ಷಗಳಿಂದ ನಿವೇಶನಕ್ಕಾಗಿ ಬಿಡಿಎ ಕಚೇರಿಗೆ ಅಲೆದಾಡುತ್ತಿದ್ದೇವೆ. ನಮ್ಮ ಜೀವಿತಾವಧಿಯ ಉಳಿತಾಯದ ಹಣವನ್ನು ಸೇರಿಸಿ, ಸಾಲ ಮಾಡಿ ಈ ಬಡಾವಣೆಯಲ್ಲಿ ನಿವೇಶನ ಖರೀದಿಸಿದ್ದೆವು. ಬಿಡಿಎ ತಪ್ಪಿನಿಂದಾಗಿ ನಾವು ನಮ್ಮ ನಿವೇಶನದಲ್ಲಿ ಮನೆ ನಿರ್ಮಿಸಲು ಇನ್ನೂ ಸಾಧ್ಯವಾಗಿಲ್ಲ. ನಮಗೆ ಈಗ ವಯಸ್ಸಾಗಿದೆ. ಇನ್ನಷ್ಟು ದಿನ ಕಾಯಲು ನಮ್ಮಿಂದಾಗದು’ ಎಂದು ಪರಿಸ್ಥಿತಿ ವಿವರಿಸಿದ್ದರು.



ಅರ್ಕಾವತಿ ಬಡಾವಣೆ ನಿವೇಶನದಾರರಿಗೆ ಬದಲಿ ನಿವೇಶನ ಹಂಚಿಕೆ ಪ್ರಕ್ರಿಯೆಯನ್ನುಬಿಡಿಎ ಅಧ್ಯಕ್ಷ ಎಸ್.ಆರ್.ವಿಶ್ವನಾಥ್ ಬುಧವಾರ ನಡೆಸಿಕೊಟ್ಟರು. ಬಿಡಿಎ ಆಯುಕ್ತ ರಾಜೇಶ್ ಗೌಡ, ಕಾರ್ಯದರ್ಶಿ ಆನಂದ್ ಹಾಗೂ ಬಡಾವಣೆಯ ನಿವೇಶನದಾರರು ಇದ್ದಾರೆ

ಅಂಕಿ-ಅಂಶಗಳು

140 ಅರ್ಕಾವತಿ ಬಡಾವಣೆ ಸಂತ್ರಸ್ತರಿಗೆ ಹಂಚಿಕೆ ಮಾಡಿದ 20x30 ಚ.ಅಡಿ ವಿಸ್ತೀರ್ಣದ ಬದಲಿ ನಿವೇಶನಗಳು

85 30x40 ಚ.ಅಡಿ ವಿಸ್ತೀರ್ಣದ ನಿವೇಶನಗಳು

24 40x60 ಚ.ಅಡಿ ವಿಸ್ತೀರ್ಣದ ಬದಲಿ ನಿವೇಶನಗಳು

ಫೋನ್ ಇನ್ ಕಾರ್ಯಕ್ರಮದಲ್ಲಿ ಅರ್ಕಾವತಿ ಬಡಾವಣೆಯ ಸಂತ್ರಸ್ತರ ಅಳಲು ಆಲಿಸಿದ್ದ ಬಿಡಿಎ ಅಧ್ಯಕ್ಷ ಎಸ್. ಆರ್.ವಿಶ್ವನಾಥ್ ಅದೇ ಬಡಾವಣೆಯಲ್ಲಿ ಶೀಘ್ರವೇ ಬದಲಿ ನಿವೇಶನ ಹಂಚಿಕೆ ಮಾಡುವ ಬಗ್ಗೆ ಭರವಸೆ ನೀಡಿದ್ದರು. ಬಿಡಿಎ ಕೇಂದ್ರ ಕಚೇರಿಯಲ್ಲಿ ನಿವೇಶನ ದಾರರ ಸಮ್ಮುಖದಲ್ಲಿಯೇ ಕಂಪ್ಯೂಟರೀಕೃತ ಆಯ್ಕೆ ಪ್ರಕ್ರಿಯೆ ಮೂಲಕ ಬದಲಿ ನಿವೇಶನ ಹಂಚಿಕೆ ಮಾಡಿದರು.

ಪಾರದರ್ಶಕವಾಗಿ ನಿವೇಶನ ಹಂಚಿಕೆ: ‘ಸಾಮಾನ್ಯವಾಗಿ ನಿವೇಶನ ಹಂಚಿಕೆ ವೇಳೆ ದಲ್ಲಾಳಿಗಳು, ಮಧ್ಯವರ್ತಿಗಳ ಹಸ್ತಕ್ಷೇಪ ಇರುತ್ತದೆ ಎಂಬ ಆರೋಪಗಳು ಕೇಳಿ ಬರುತ್ತಿದ್ದವು. ಈ ಸಲ ಬದಲಿ ನಿವೇಶನ ಹಂಚಿಕೆಗೆ ಯಾರ ಹಸ್ತಕ್ಷೇಪಕ್ಕೂ ಅವಕಾಶ ಇಲ್ಲದ ರೀತಿ ಸಂಪೂರ್ಣ ಕಂಪ್ಯೂಟರೀಕೃತ ಆಯ್ಕೆ ಪ್ರಕ್ರಿಯೆಯನ್ನು ಅಳವಡಿಸಿಕೊಳ್ಳುವ ಮೂಲಕ ಪಾರದರ್ಶಕತೆ ಕಾಯ್ದುಕೊಂಡಿದ್ದೇವೆ. ಫಲಾನುಭವಿಗಳ ವಯಸ್ಸನ್ನು ಪರಿಗಣಿಸಿ, ಜ್ಯೇಷ್ಠತೆ ಆಧಾರದಲ್ಲಿ ಬದಲಿ ನಿವೇಶನ ಹಂಚಿಕೆ ಮಾಡಲಾಗಿದೆ’ ಎಂದು ವಿಶ್ವನಾಥ್ ತಿಳಿಸಿದರು.

‘ಬಡಾವಣೆಯಲ್ಲಿ ಎಷ್ಟು ನಿವೇಶನಗಳು ಲಭ್ಯವಾಗಲಿವೆ ಎಂದು ನೋಡಿಕೊಂಡು ಹಂತಹಂತವಾಗಿ ಇನ್ನಷ್ಟು ಮಂದಿಗೆ ಬದಲಿ ನಿವೇಶನಗಳನ್ನು ಇದೇ ಮಾದರಿಯಲ್ಲಿ ಹಂಚಿಕೆ ಮಾಡಲಾಗುತ್ತದೆ’ ಎಂದು ಅವರು ಭರವಸೆ ನೀಡಿದರು.

‘ಅರ್ಕಾವತಿಯಲ್ಲಿ ನಿವೇಶನ ಹಂಚಿಕೆಯಾಗಿ ನೋಂದಣಿ ಮಾಡಿಕೊಂಡು ನಾನಾ ಕಾರಣಗಳಿಂದಾಗಿ ನಿವೇಶನ ವಂಚಿತರಾಗಿರುವವರು ಬಯಸಿದರೆ ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಬದಲಿ ನಿವೇಶನ ನೀಡಲು ಬಿಡಿಎ ಸಿದ್ಧ. ಕೆಂಪೇಗೌಡ ಬಡಾವಣೆಯಲ್ಲಿ ಬದಲಿ ನಿವೇಶನ ಕೋರಿ ಅರ್ಜಿ ಸಲ್ಲಿಸುವವರಿಗೆ 15 ರಿಂದ 20 ದಿನಗಳೊಳಗಾಗಿ ನಿವೇಶನವನ್ನು ಹಂಚಿಕೆ ಮಾಡಿಕೊಡಲಾಗುವುದು’ ಎಂದು ತಿಳಿಸಿದರು.

ಬಿಡಿಎ ಆಯುಕ್ತ ಎಂ.ಬಿ. ರಾಜೇಶ್ ಗೌಡ, ಇತರ ಅಧಿಕಾರಿಗಳು ಹಾಗೂ ಅರ್ಕಾವತಿ ನಿವೇಶನದಾರರು ಭಾಗವಹಿಸಿದರು.

ಸಂಕ್ಷಿಪ್ತ ಸುದ್ದಿ

13ರಿಂದ ಅನುವಾದ ಕಮ್ಮಟ

ಬೆಂಗಳೂರು: ಕನ್ನಡ ಕಾಯಕ ವರ್ಷದ ಅಂಗವಾಗಿ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಭಾಷಾಂತರ ನಿರ್ದೇಶನಾಲಯದ ಸಹಯೋಗದಲ್ಲಿ ಇದೇ 13ರಿಂದ 15ರವರೆಗೆ ಅನುವಾದ ಕಮ್ಮಟವನ್ನು ಹಮ್ಮಿಕೊಂಡಿದೆ.

ಪ್ರಾಧಿಕಾರದ ಸದಸ್ಯರಾದ ಪ್ರೊ. ಎಂ. ಅಬ್ದುಲ್ ರೆಹಮಾನ್ ಪಾಷಾ ಅವರ ನೇತೃತ್ವದಲ್ಲಿ ಈ ಕಮ್ಮಟ ನಡೆಯಲಿದೆ. ಆಡಳಿತ, ನ್ಯಾಯಾಂಗ, ಶಿಕ್ಷಣ, ವಾಣಿಜ್ಯ, ವಿಜ್ಞಾನ ಮತ್ತು ತಂತ್ರಜ್ಞಾನ ಸೇರಿದಂತೆ ಸೃಜನೇತರ ಹಾಗೂ ತಾಂತ್ರಿಕ ಸಾಹಿತ್ಯದ ಅನುವಾದದ ಬಗ್ಗೆ ಕಮ್ಮಟದಲ್ಲಿ ತಿಳಿಸಿಕೊಡಲಾಗುತ್ತದೆ. ಈ ಕ್ಷೇತ್ರಗಳಲ್ಲಿ ಅನುವಾದ ಕೈಗೊಳ್ಳುವವರಿಗಾಗಿ ಅವಕಾಶ ನೀಡಲಾಗುತ್ತದೆ.

ಆಸಕ್ತರು ಆ.8ರೊಳಗೆ pasha1950@gamil.com ಅಥವಾ secretary.kanpra@gmail.com ಸಂಪರ್ಕಿಸಬೇಕು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಕ್ಕೆ ದೂ.: 98452 99621 ಅಥವಾ 2228 6773

ರಾಷ್ಟ್ರೋತ್ಥಾನ ಸಾಹಿತ್ಯಕ್ಕೆ ‘ಅಂಕಿತ ಪುಸ್ತಕ ದತ್ತಿ ಪ್ರಶಸ್ತಿ’

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು ಅತ್ಯುತ್ತಮ ಪ್ರಕಾಶನ ಸಂಸ್ಥೆಗೆ ನೀಡುವ 2021ನೇ ಸಾಲಿನ ‘ಅಂಕಿತ ಪುಸ್ತಕ ದತ್ತಿ ಪ್ರಶಸ್ತಿ’ಗೆ ರಾಷ್ಟ್ರೋತ್ಥಾನ ಸಾಹಿತ್ಯ ಆಯ್ಕೆಯಾಗಿದೆ.

ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ನೇತೃತ್ವದಲ್ಲಿ ಈ ಆಯ್ಕೆ ನಡೆದಿದೆ. ಪ್ರಶಸ್ತಿಯು ₹ 35 ಸಾವಿರ ನಗದು ಹಾಗೂ ಸ್ಮರಣಿಕೆಯನ್ನು ಒಳಗೊಂಡಿದೆ. ರಾಷ್ಟ್ರೋತ್ಥಾನ ಸಾಹಿತ್ಯವು ಕಳೆದ 56 ವರ್ಷಗಳಿಂದ ಕೃತಿಗಳನ್ನು ಪ್ರಕಟಿಸುತ್ತಿದೆ. ಇದುವರೆಗೆ ಒಟ್ಟು 750 ಮೌಲಿಕ ಕೃತಿಗಳನ್ನು ಹೊರತಂದಿದೆ. ಸ್ವಾತಂತ್ರ್ಯ ಹೋರಾಟ, ದೇಶಭಕ್ತಿ, ಜೀವನ ಚರಿತ್ರೆ, ವ್ಯಕ್ತಿತ್ವ ವಿಕಸನ, ಧಾರ್ಮಿಕ, ಆಧ್ಯಾತ್ಮಿಕ, ಯೋಗ ಕುರಿತಾದ ಕೃತಿಗಳನ್ನು ಹೊರತಂದಿದೆ.

ಇದೇ 17ರಂದು ಸಂಜೆ 4 ಗಂಟೆಗೆ ಪರಿಷತ್ತಿನ ಶ್ರೀಕೃಷ್ಣರಾಜ ಪರಿಷನ್ಮಂದಿರದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ವಿದ್ಯುತ್ ವ್ಯತ್ಯಯ ನಾಳೆ

ಬೆಂಗಳೂರು: ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ಜಯದೇವ ಉಪವಿಭಾಗದ ವಿವಿಧ ಪ್ರದೇಶಗಳಲ್ಲಿ ಇದೇ 6ರಂದು ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ಐ.ಬಿ.ಎಂ, ಗುರಪ್ಪನ ಪಾಳ್ಯ, ಸೋಬಾ ಮಜಾರಿಯಾ ಅಪಾರ್ಟ್‌ಮೆಂಟ್, ಬಿ.ಜಿ.ರಸ್ತೆ, ಬಿ.ಟಿ.ಎಂ ಬಡಾವಣೆ ಒಂದನೇ ಹಂತ, ವಕೀಲ್ ಚೌಕ್ ಕಟ್ಟಡ, ಮಡಿವಾಳ, ಮಾರುತಿನಗರ, ಬಿಸ್ಮಿಲ್ಲಾ ನಗರ, ಶೋಭಾ ಡೆವಲಪರ್ಸ್ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

ಮಹಾರಾಷ್ಟ್ರ: ರಾಮನ 25 ಅಡಿ ಎತ್ತರದ ಪ್ರತಿಮೆ ನಿರ್ಮಾಣಕ್ಕೆ ಮುಂದಾದ ಪುಣೆ ಪಾಲಿಕೆ

ಪುಣೆ: ನಿರ್ಮಾಣ ಹಂತದ ಆಟದ ಮೈದಾನದಲ್ಲಿ ಭಗವಾನ್ ರಾಮನ 25 ಅಡಿ ಎತ್ತರದ ಪ್ರತಿಮೆ ಸ್ಥಾಪಿಸುವ ಸಂಬಂಧ ಪುಣೆ ನಗರ ಪಾಲಿಕೆ ನಿಲುವಳಿಗೆ ಅನುಮೋದನೆ ಪಡೆದಿದೆ ಎಂದು ಕಾರ್ಪೊರೇಟರ್ ವರ್ಷಾ ತಾಪ್ಕಿರ್ ತಿಳಿಸಿದ್ದಾರೆ.

ನಗರಪಾಲಿಕೆಯ ಸ್ಥಾಯಿ ಸಮಿತಿಯು ನಿಲುವಳಿ ಮಂಡಿಸಿದೆ ಎಂದು ಅವರು ತಿಳಿಸಿದ್ದಾರೆ. ಧನ್‌ಕಾವಾಡಿ–ಅಂಬೆಗಾಂವ್ ಕಾರ್ಪೊರೇಟರ್ ವರ್ಷಾ ತಾಪ್ಕಿರ್ ಪ್ರತಿಮೆ ನಿರ್ಮಾಣದ ಪ್ರಸ್ತಾವ ಇಟ್ಟಿದ್ದರು.ಪ್ರತಿಮೆ ನಿರ್ಮಾಣಕ್ಕಾಗಿ ₹2 ಕೋಟಿ ಅನುದಾನ ಒದಗಿಸುವಂತೆಯೂ ಅವರು ಮನವಿ ಮಾಡಿದ್ದರು.

ಎನ್‌ಐಎ ಶೋಧ: ಶಂಕಿತ ನಾಲ್ವರು ಉಗ್ರರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಐಸಿಸ್ ಉಗ್ರರೊಂದಿಗೆ ನಂಟು ಹೊಂದಿರುವ ಶಂಕೆಯ ಮೇರೆಗೆ ಬೆಂಗಳೂರಿನ ಶಂಕರ್ ವೆಂಕಟೇಶ್ ಪೆರುಮಾಳ್ ಎಂಬಾತನನ್ನು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ಬುಧವಾರ ಬಂಧಿಸಿದ್ದಾರೆ.

‘ಜಮ್ಮು ಮತ್ತು ಕಾಶ್ಮೀರ ಹಾಗೂ ಕರ್ನಾಟಕ ಸೇರಿದಂತೆ ಐದು ಸ್ಥಳಗಳಲ್ಲಿ ಎನ್‌ಐಎ ದಾಳಿ ನಡೆಸಿತು. ರಾಜ್ಯದ ಬೆಂಗಳೂರು ಹಾಗೂ ಮಂಗಳೂರಿನಲ್ಲಿ ದಾಳಿ ನಡೆಸಲಾಯಿತು. ಶಂಕಿತರಾದ ಬೆಂಗಳೂರಿನ ಶಂಕರ್ ವೆಂಕಟೇಶ್ ಪೆರುಮಾಳ್, ಮಂಗಳೂರಿನ ಉಮ್ಮರ್ ಅಬ್ದುಲ್ ರೆಹಮಾನ್, ಶ್ರೀನಗರದ ಒಬೇದ್ ಹಮೀದ್ ಹಾಗೂ ಕಾಶ್ಮೀರದ ಮುಜಾಮಿಲ್ ಹಸ್ಸನ್ ಭಟ್ ಎಂಬ ನಾಲ್ವರನ್ನು ಬಂಧಿಸಲಾಗಿದೆ’ ಎಂದು ಎನ್‌ಐಎ ಮೂಲಗಳು ತಿಳಿಸಿವೆ.

‘ಐಸಿಎಸ್ ಉಗ್ರರೊಂದಿಗೆ ಸಂಪರ್ಕದಲ್ಲಿದ್ದ ಮೊಹಮದ್ ಅಮೀನ್ ಜೊತೆಗೆ ಈ ನಾಲ್ವರು ನಂಟು ಹೊಂದಿದ್ದರು ಎಂದು ಆರೋಪಿಸಲಾಗಿದೆ. ಅಮೀನ್ ಉಗ್ರಗಾಮಿ ಚಟುವಟಿಕೆಗಳಿಗೆ ಹಣಕಾಸು ಒದಗಿಸುತ್ತಿದ್ದ. ಸಾಮಾಜಿಕ ಜಾಲತಾಣಗಳ ಮುಖೇನ ಹಣ ಸಂಗ್ರಹಿಸುವ ಕೃತ್ಯದಲ್ಲಿ ಆರೋಪಿಗಳೂ ಭಾಗಿಯಾಗಿರುವ ಶಂಕೆ ಇದೆ’ ಎಂದೂ ಹೇಳಲಾಗಿದೆ.

ಬಂಧನದ ವೇಳೆ ಲ್ಯಾಪ್‌ಟಾಪ್, ಹಾರ್ಡ್‌ಡಿಸ್ಕ್, ಪೆನ್ ಡ್ರೈವ್, ಸಿಮ್ ಕಾರ್ಡ್ ಹಾಗೂ ಎಲೆಕ್ಟ್ರಾನಿಕ್ ವಸ್ತುಗಳನ್ನು ಜಪ್ತಿ ಮಾಡಿರುವುದಾಗಿ ರಾಷ್ಟ್ರೀಯ ತನಿಖಾ ದಳ ಮಾಹಿತಿ ನೀಡಿದೆ.

‘ಅಧಿಕಾರಕ್ಕಾಗಿ ಬಿಜೆಪಿಯಲ್ಲಿ ಕಿತ್ತಾಟ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ’ಬಿಜೆಪಿಯು ಕೊರೊನಾ ಮೂರನೇ ಅಲೆಯ ಬಗ್ಗೆ ಎಚ್ಚರವಿಲ್ಲದೆ ಅಧಿಕಾರಕ್ಕಾಗಿ ಕಿತ್ತಾಟ ನಡೆಸಿದೆ. ಯಾರೇ ಸಚಿವರಾದರೂ ಜನರಿಗೆ ಪ್ರಯೋಜನವಿಲ್ಲ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ರಾಮಲಿಂಗಾರೆಡ್ಡಿ ಹೇಳಿದರು.

ಕೆ.ಆರ್.ಪುರ ರಾಮಮೂರ್ತಿ ನಗರದಲ್ಲಿ ಬ್ಲಾಕ್ ಕಾಂಗ್ರೆಸ್ ಪಕ್ಷದ ವತಿಯಿಂದ ವಾರ್ಡ್ ಅಧ್ಯಕ್ಷ ಕಲ್ಕೆರೆ ಸುನಿಲ್ ಕುಮಾರ್ ನೇತೃತ್ವದಲ್ಲಿ ಹಮ್ಮಿಕೊಂಡಿದ್ದ ಅಭಯ ಹಸ್ತ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

’ಬಿಜೆಪಿಯವರು ಅಧಿಕಾರಕ್ಕಾಗಿ ಬಣ್ಣಬಣ್ಣದ ಮಾತುಗಳನ್ನು ಆಡಿದ್ದರು. ಅಧಿಕಾರ ಬಂದ ನಂತರ ಜನರ ಬಗ್ಗೆ ಕಾಳಜಿ ಇಲ್ಲ. ಸರ್ಕಾರ ಎರಡನೇ ಅಲೆ ನಿಭಾಯಿಸುವಲ್ಲಿ ವಿಫಲವಾಗಿರುವುದನ್ನು ಕಂಡಿದ್ದೇವೆ. ಈ ಸಾವುನೋವುಗಳಿಗೆ ಸರ್ಕಾರ ನೇರ ಹೊಣೆ. ರಾಜ್ಯ ಮತ್ತು ಕೇಂದ್ರ ಸರ್ಕಾರ ಕೊರೊನಾ ನಿಯಂತ್ರಿಸಲು ಸಂಪೂರ್ಣ ವಿಫಲವಾಗಿದೆ‘ ಎಂದು ಹೇಳಿದರು.

ರಾಮಮೂರ್ತಿನಗರ ವಾರ್ಡ್ ಅಧ್ಯಕ್ಷ ಕಲ್ಕೆರೆ ಸುನಿಲ್ ಕುಮಾರ್, ’ಕೊರೊನಾದಿಂದ ತೊಂದರೆಯಲ್ಲಿರುವ 500 ಕ್ಕೂ ಬಡಜನರಿಗೆ ಆಹಾರ ಧಾನ್ಯಗಳ ಕಿಟ್ ಹಾಗೂ 50 ಆಟೊ ಚಾಲಕರಿಗೆ ಸಮವಸ್ತ್ರ, 20 ಕ್ಕೂ ಹೆಚ್ಚು ಮಡಿವಾಳ ಸಮಾಜದವರಿಗೆ ಇಸ್ತ್ರಿ ಪೆಟ್ಟಿಗೆಗಳನ್ನು ವಿತರಿಸಲಾಗಿದೆ‘ ಎಂದರು.



ಶಾಸಕ ರಾಮಲಿಂಗಾರೆಡ್ಡಿ ಅವರು ವಾರ್ಡ್ ಅಧ್ಯಕ್ಷ ಕಲ್ಕೆರೆ ಸುನಿಲ್ ಕುಮಾರ್ ನೇತೃತ್ವದಲ್ಲಿ ಆಟೋ ಚಾಲಕರಿಗೆ ಆಹಾರ ಧಾನ್ಯಗಳ ಕಿಟ್, ಸಮವಸ್ತ್ರ, ಚೆಕ್ ವಿತರಿಸಿದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹಮದ್, ಶಾಸಕ ಕೃಷ್ಣಬೈರೇಗೌಡ, ವಿಧಾನ ಪರಿಷತ್ ಸದಸ್ಯ ಎಂ.ನಾರಾಯಣಸ್ವಾಮಿ, ಕೆಪಿಸಿಸಿ ಸದಸ್ಯ ಕಲ್ಕೆರೆ ಎಸ್ ನಾರಾಯಣಸ್ವಾಮಿ, ಬ್ಲಾಕ್ ಅಧ್ಯಕ್ಷ ಮಂಜುನಾಥ್, ಮುಖಂಡರಾದ ಡಿ.ಕೆ.ಮೋಹನ್, ಅಗರ ಆರ್ ಪ್ರಕಾಶ್ ಇದ್ದರು



ಗರುಡಾಚಾರ್ ಪಾಳ್ಯದ ಕೆರೆ ಅಭಿವೃದ್ಧಿಗೆ ಶಾಸಕ ಅರವಿಂದ ಲಿಂಬಾವಳಿ ಹಾಗೂ ಸ್ಥಳೀಯ ಮುಖಂಡ ನಿತಿನ್ ಪುರುಷೋತ್ತಮ ಭೂಮಿ ಪೂಜೆ ನೆರವೇರಿಸಿದರು. ಮುಖಂಡರಾದ ಮನೋಹರ ರೆಡ್ಡಿ, ಅನಂತ ರಾಮಯ್ಯ, ಮಹೇಂದ್ರ ಮೋದಿ, ರವಿ ಹಾಗೂ ಇತರರು ಇದ್ದರು.

‘ಜಲ ಸಂರಕ್ಷಣೆ ಮುಂದಿನ ಪೀಳಿಗೆಗೆ ಬಳುವಳಿ’

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ:‘ನಗರಗಳಲ್ಲಿ ನೀರಿನ ಬವಣೆ ಹೆಚ್ಚುತ್ತಿರುವುದರಿಂದ ಜಲ ಮೂಲಗಳನ್ನು ಸಂರಕ್ಷಿಸುವ ಜೊತೆಗೆ ಮುಂದಿನ ಪೀಳಿಗೆಗೆ ನೀರು ಲಭ್ಯವಾಗುವಂತೆ ಮಾಡಬೇಕಿದೆ’ ಎಂದು ಶಾಸಕ ಅರವಿಂದ ಲಿಂಬಾವಳಿ ತಿಳಿಸಿದರು.

ಇಲ್ಲಿನ ಗರುಡಾಚಾರ್ ಪಾಳ್ಯದ ಕೆರೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಿ ಅವರು ಮಾತನಾಡಿದರು.

‘ಜಲಮೂಲಗಳು ಹಾಗೂ ಪರಿಸರ ಸಂರಕ್ಷಣೆ ಮಾಡುವುದೇ ಮುಂದಿನ ಪೀಳಿಗೆಗೆ ನಾವು ನೀಡುವ ಬಳುವಳಿ. ಇತ್ತೀಚಿನ ದಿನಗಳಲ್ಲಿ ಜಲಮೂಲಗಳು ಕಣ್ಮರೆಯಾಗುತ್ತಿವೆ. ಬಿಜೆಪಿ ಸರ್ಕಾರ ಬಂದ ನಂತರ ಕೆರೆಗಳ ಅಭಿವೃದ್ಧಿಗೆ ಹೆಚ್ಚಿನ ಮಹತ್ವ ನೀಡಲಾಗಿದೆ’ ಎಂದರು.

‘ಮಹದೇವಪುರ ವ್ಯಾಪ್ತಿಯಲ್ಲಿರುವ ಕೆರೆಗಳನ್ನು ಸಿಎಸ್‌ಆರ್ ಅನುದಾನ ಸೇರಿದಂತೆ ವಿವಿಧ ಅನುದಾನಗಳಲ್ಲಿ ಹಂತ ಹಂತವಾಗಿ ಅಭಿವೃದ್ಧಿಗೊಳಿಸಲಾಗುತ್ತಿದೆ. ಕ್ಷೇತ್ರದಲ್ಲಿರುವ 40ಕ್ಕೂ ಹೆಚ್ಚು ಕೆರೆಗಳು ಅಭಿವೃದ್ಧಿ ಹಂತದಲ್ಲಿವೆ’ ಎಂದು ಹೇಳಿದರು.

ಮೇಕೆದಾಟು ಯೋಜನೆ ಅನುಷ್ಠಾನಕ್ಕೆ ಆಗ್ರಹ: ಇಂದು ಉಪವಾಸ ಸತ್ಯಾಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೇಕೆದಾಟು ಯೋಜನೆಯ ಅನುಷ್ಠಾನದಲ್ಲಿ ರಾಜ್ಯ ಸರ್ಕಾರದ ವಿಳಂಬ ನೀತಿ ಖಂಡಿಸಿ ಮೌರ್ಯ ವೃತ್ತದ ಗಾಂಧಿ ಪ್ರತಿಮೆ ಎದುರು ಆಗಸ್ಟ್ 5ರಂದು ಉಪವಾಸ ಸತ್ಯಾಗ್ರಹ ನಡೆಸಲಾಗುವುದು’ ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ರಾಜಕೀಯ ಚಟುವಟಿಕೆ ವಿಭಾಗದ ಮುಖ್ಯಸ್ಥ ಎಸ್. ವಿ.ಫಣೀರಾಜ್ ತಿಳಿಸಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,‘ಈ ಹಿಂದೆ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ಅಧಿಕಾರದಲ್ಲಿದ್ದಾಗ ಕುಂಟು ನೆಪ ಹೇಳಿಕೊಂಡು ಈ ಯೋಜನೆಯನ್ನು ಮುಂದೂಡಿ, ಜನರನ್ನು ವಂಚಿಸಿವೆ. ಈಗಿನ ‘ಡಬಲ್ ಎಂಜಿನ್’ ಬಿಜೆಪಿ ಸರ್ಕಾರವೂ ವಿಳಂಬ ನೀತಿ ಅನುಸರಿಸುತ್ತಿದೆ’ ಎಂದು ದೂರಿದರು.

‘ಭವಿಷ್ಯದ ದೃಷ್ಟಿಯಿಂದ ಮೇಕೆದಾಟು ಯೋಜನೆ ಅನಿವಾರ್ಯವಾಗಿದೆ. ಒಂದು ವರ್ಷದೊಳಗೆ ಈ ಯೋಜನೆಯನ್ನು ಪೂರ್ಣಗೊಳಿಸಬೇಕೆಂದು ಆಗ್ರಹಿಸಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ನೇತೃತ್ವದಲ್ಲಿ ಗುರುವಾರ ಬೆಳಿಗ್ಗೆ 9ರಿಂದ ಸಂಜೆ 6 ಗಂಟೆಯ ವರೆಗೆ ಉಪವಾಸ ಸತ್ಯಾಗ್ರಹ ನಡೆಸಲಾಗುವುದು’ ಎಂದು ಹೇಳಿದರು.

ಮಹಿಳಾ ಘಟಕದ ನಾಯಕಿ ಉಷಾ ಮೋಹನ್,‘ತಮಿಳುನಾಡಿನ ಬಿಜೆಪಿ ಮತ್ತು ಕಾಂಗ್ರೆಸ್ ನಾಯಕರು ಮೇಕೆದಾಟು ಯೋಜನೆಗೆ ಅವಕಾಶ ನೀಡುವುದಿಲ್ಲ ಎಂದು ಹೇಳಿಕೆ ನೀಡುತ್ತಿದ್ದಾರೆ. ಕುಡಿಯುವ ನೀರಿನ ಯೋಜನೆಯಿಂದ ತಮಿಳುನಾಡಿಗೆ ಯಾವುದೇ ತೊಂದರೆಯಾಗುವುದಿಲ್ಲ ಎಂಬುದನ್ನು ರಾಜ್ಯದ ನಾಯಕರು ಅವರಿಗೆ ಮನವರಿಕೆ ಮಾಡಲಿ’ ಎಂದರು.



ನಗರದ ಆರ್‌.ಪಿ.ಎ. ವಿದ್ಯಾಸಂಸ್ಥೆಯಲ್ಲಿ ಲಯನ್ಸ್ ಕ್ಲಬ್ ಆಫ್ ಪೀಣ್ಯ ಯಶವಂತಪುರವು ಬುಧವಾರ ಆಯೋಜಿಸಿದ ಕೋವಿಡ್ ಲಸಿಕಾ ಅಭಿಯಾನದಲ್ಲಿ ಜನರು ಲಸಿಕೆ ಪಡೆದುಕೊಂಡರು

ಸ್ಥಳೀಯವಾಗಿ ಪ್ರಕಟಣೆ ನೀಡಿದ ಮುಕ್ತ ವಿ.ವಿ: ಆಕಾಂಕ್ಷಿಗಳ ಅನುಮಾನ

ಬೋಧಕ ಹುದ್ದೆ ಭರ್ತಿಗೆ ತರಾತುರಿ

• ಕೆ.ಓಂಕಾರ ಮೂರ್ತಿ

ಮೈಸೂರು: ರಾಜ್ಯ ಮುಕ್ತ ವಿಶ್ವವಿದ್ಯಾಲಯವು ತರಾತುರಿಯಲ್ಲಿ ತಾತ್ಕಾಲಿಕ ಬೋಧಕರ ಹುದ್ದೆ ಭರ್ತಿ ಮಾಡಲು ಮುಂದಾಗಿರುವುದು ಅನುಮಾನಗಳಿಗೆ ದಾರಿ ಮಾಡಿದೆ.

24 ವಿಭಾಗಗಳಿಗೆ ಗುತ್ತಿಗೆ ಆಧಾರದಲ್ಲಿ ಸಹಾಯಕ ಪ್ರಾಧ್ಯಾಪಕರನ್ನು ನೇರ ಸಂದರ್ಶನದ ಮೂಲಕ ನೇಮಿಸಲು ಜುಲೈ 28ರಂದು ನೇಮಕಾತಿ ಅಧಿಸೂಚನೆ ಹೊರಡಿಸಿದ್ದ ವಿಶ್ವವಿದ್ಯಾಲಯವು ಐದು ದಿನ ತಡವಾಗಿ, ಆ.2ರಂದು ಸ್ಥಳೀಯವಾಗಿ ಜಾಹೀರಾತು ನೀಡಿತ್ತು. ಇದೇ 10ರಿಂದ ಸಂದರ್ಶನ ನಿಗದಿಯಾಗಿದ್ದು, ಸ್ಥಳವನ್ನು ವೆಬ್‌ಸೈಟ್‌ನಲ್ಲಿ 9ರಂದು ಪ್ರಕಟಿಸುವುದಾಗಿ ಹೇಳಿದೆ. ತರಾತುರಿಯ ಈ ಪ್ರಕ್ರಿಯೆಗೆ ಆಕಾಂಕ್ಷಿಗಳು ವಿರೋಧ ವ್ಯಕ್ತಪಡಿಸಿದ್ದಾರೆ.

‘ರಾಜ್ಯವ್ಯಾಪಿ ಕಾರ್ಯನಿರ್ವಹಿಸುವ ವಿಶ್ವವಿದ್ಯಾಲಯವು ಮೈಸೂರಿನ ಸ್ಥಳೀಯ ದಿನಪತ್ರಿಕೆಯೊಂದರಲ್ಲಿ ಮಾತ್ರ ಜಾಹೀರಾತು ನೀಡಿ ನೇಮಕಾತಿ ವಿಚಾರವನ್ನು ಮರೆಮಾಚಲು ಯತ್ನಿಸಿದೆ. ಹಣ ಪಡೆದು ನೇಮಕ ಮಾಡಲು ಮುಂದಾಗಿದೆ’ ಎಂದು ಹೆಸರು ಬಹಿರಂಗಪಡಿಸಲು ಬಯಸದ ಆಕಾಂಕ್ಷಿಗಳು ಬಳಿ ಅಳಲು ತೋಡಿಕೊಂಡಿದ್ದಾರೆ.

ಮುಖ್ಯಾಂಶಗಳು

- ಸ್ಥಳೀಯವಾಗಿ ನೇಮಕಾತಿ ಜಾಹೀರಾತು
- 24 ವಿಭಾಗದಲ್ಲಿ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಅರ್ಜಿ
- ಆ.2ರಂದು ಜಾಹೀರಾತು, 10ರಿಂದ ನೇರ ಸಂದರ್ಶನ



ನೇರ ಸಂದರ್ಶನಕ್ಕೆ ಯಾರೂ ಇಷ್ಟೊಂದು ಸಮಯ ಕೊಡಲ್ಲ. ಸ್ಥಳೀಯವಾಗಿ ಜಾಹೀರಾತು ಪ್ರಕಟಿಸಿದ್ದು, ವೆಬ್‌ಸೈಟ್‌ನಲ್ಲೂ ಮಾಹಿತಿ ಇದೆ

ಪ್ರೊ.ಎಸ್.ವಿದ್ಯಾಶಂಕರ್
ಕುಲಪತಿ, ಕೆಎಸ್‌ಒಯು



ಸಿಬ್ಬಂದಿ ಕೊರತೆ: ‘11 ಹೊಸ ಕೋರ್ಸ್ ಆರಂಭಿಸಿದ್ದು, ಬೋಧಕ ಸಿಬ್ಬಂದಿ ಕೊರತೆಯಿದೆ. ತಿಂಗಳೊಳಗೆ ಹುದ್ದೆ ಭರ್ತಿ ಮಾಡುವುದಾಗಿ ಯುಜಿಸಿಗೆ ಪತ್ರ ಬರೆದಿದ್ದು, ಈಗಾಗಲೇ ವಿಳಂಬವಾಗಿದೆ. ಹುದ್ದೆಗೆ ಪರಿಗಣಿಸುವಂತೆ ಅಭ್ಯರ್ಥಿಗಳು ಒತ್ತಡ ತರುತ್ತಿದ್ದಾರೆ. ಜಾಹೀರಾತು ನೀಡುವ ಮುನ್ನವೇ ಹಲವರಿಗೆ ಗೊತ್ತಾಗಿದೆ’ ಎಂದು ಪ್ರೊ.ಎಸ್. ವಿದ್ಯಾಶಂಕರ್ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದರು.

‘ಮೂರು ವರ್ಷಗಳ ಅವಧಿಯ ಹುದ್ದೆಯ ಗುತ್ತಿಗೆಯನ್ನು ಪ್ರತಿ ವರ್ಷ ನವೀಕರಿಸಲಾಗುವುದು. ವೇತನವನ್ನು ನಿಗದಿಪಡಿಸಿಲ್ಲ. ಆಡಳಿತ ಮಂಡಳಿ ಸಭೆಯಲ್ಲಿ ಒಪ್ಪಿಗೆ ಪಡೆಯಬೇಕಿದ್ದು, ಸಾಮಾನ್ಯವಾಗಿ ₹ 45 ಸಾವಿರದವರೆಗೆ ವೇತನ ನೀಡಲಾಗುತ್ತದೆ’ ಎಂದರು.

ಹುದ್ದೆಗಳು ಯಾವುವು?: ಇಂಗ್ಲಿಷ್, ಹಿಂದಿ, ಸಂಸ್ಕೃತ, ತೆಲುಗು, ಉರ್ದು, ಇತಿಹಾಸ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಸಾರ್ವಜನಿಕ ಆಡಳಿತ, ಸಮಾಜ ವಿಜ್ಞಾನ ಮತ್ತು ಮಾನವ ವಿಜ್ಞಾನ, ನಿರ್ವಹಣಾಶಾಸ್ತ್ರ, ಶಿಕ್ಷಣ, ಭೌತವಿಜ್ಞಾನ, ಸೂಕ್ಷ್ಮಜೀವಾಣು ವಿಜ್ಞಾನ, ಬಯೋ ಟೆಕ್ನಾಲಜಿ ಮತ್ತು ಪ್ರಾಣಿ ವಿಜ್ಞಾನ, ರಸಾಯನ ವಿಜ್ಞಾನ, ಬಯೋ ಕೆಮಿಸ್ಟ್ರಿ, ಮನೋವಿಜ್ಞಾನ, ಪರಿಸರ ವಿಜ್ಞಾನ, ಆಹಾರ ವಿಜ್ಞಾನ, ಭೂಗೋಳ ವಿಜ್ಞಾನ, ಗಣಕಯಂತ್ರ ವಿಜ್ಞಾನ, ಮಾಹಿತಿ ತಂತ್ರಜ್ಞಾನ, ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ, ಗಣಿತ ಮತ್ತು ಸಸ್ಯ ವಿಜ್ಞಾನ ವಿಭಾಗಗಳಿಗೆ ಗುತ್ತಿಗೆ ಆಧಾರ ಮೇಲೆ ನೇಮಕ ಮಾಡಿಕೊಡಿಕೊಳ್ಳಲಿದೆ.

3 ದಿನಗಳ ಬಳಿಕ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಕಳಸ: ಆಗಸ್ಟ್ 1ರಂದು ಪಟ್ಟಣದ ಹೊರವಲಯದ ವಸಿಷ್ಠಾಶ್ರಮದ ಸಮೀಪ ಭದ್ರಾ ನದಿಗೆ ಕಾಲು ಜಾರಿ ಬಿದ್ದು ನಾಪತ್ತೆಯಾಗಿದ್ದ ಪ್ರವಾಸಿ, ಬೆಂಗಳೂರಿನ ಕೆಂಗೇರಿಯ ವೈದ್ಯ ರುದ್ರೇಶ್ (35) ಅವರ ಮೃತದೇಹ ಬುಧವಾರ ಮಧ್ಯಾಹ್ನ ಪತ್ತೆಯಾಗಿದೆ.

ಸತತ ಮೂರು ದಿನಗಳ ಕಾರ್ಯಾಚರಣೆ ನಂತರ ಮೃತ ದೇಹ ಪತ್ತೆಯಾಗಿದೆ. ಹಳುವಳ್ಳಿ ಸಮೀಪದ ಕಲ್ಲಾನೆ ಬಳಿ ನದಿ ದಂಡೆಯ ಪೊದೆಯೊಂದರಲ್ಲಿ ಸಿಲುಕಿದ್ದ ಮೃತದೇಹವನ್ನು ವಿಪತ್ತು ನಿರ್ವಹಣಾ ತಂಡದ ಕಾರ್ಯಕರ್ತರು ಕುಶಾಲನಗರದ ರ‍್ಯಾಫ್ಟಿಂಗ್ ತಂಡದ ನೆರವಿನೊಂದಿಗೆ ದಡಕ್ಕೆ ತಂದರು.

ಕಳಸ ಪ್ರವಾಸಕ್ಕೆ ಬಂದಿದ್ದ ರುದ್ರೇಶ್ ಅವರು ಛಾಯಾಚಿತ್ರ ತೆಗೆಯುವ ಸಲುವಾಗಿ ನದಿ ದಡಕ್ಕೆ ಹೋಗಿದ್ದಾಗ ಕಾಲು ಜಾರಿ ಬಿದ್ದು, ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದರು. ರಾಜ್ಯ ವಿಪತ್ತು ನಿರ್ವಹಣಾ ತಂಡ, ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ವಿಪತ್ತು ನಿರ್ವಹಣಾ ತಂಡ, ಕಳಸ, ಮಲ್ಪೆ ಮತ್ತು ಉಜಿರೆಯ ಈಜುಗಾರರು 3 ದಿನಗಳಿಂದ ಶೋಧ ನಡೆಸಿದ್ದರು.

ಬುಧವಾರ ನದಿ ದಂಡೆಯ ಉದ್ದಕ್ಕೂ ಹುಡುಕಾಟ ನಡೆಸಿದಾಗ, ಅವರು ಕಾಲು ಜಾರಿ ಬಿದ್ದಿದ್ದ ಸ್ಥಳದಿಂದ 3 ಕಿ.ಮೀ. ದೂರದ ಪ್ರದೇಶದಲ್ಲಿ ಮೃತದೇಹ ಸಿಕ್ಕಿದೆ. ಮರಣೋತ್ತರ ಪರೀಕ್ಷೆ ನಂತರ ಅವರ ಕುಟುಂಬ ಸದಸ್ಯರಿಗೆ ಮೃತ ದೇಹ ಒಪ್ಪಿಸಲಾಯಿತು. ಕಳಸ ಠಾಣಾಧಿಕಾರಿ ಹರ್ಷವರ್ಧನ್, ವಿಪತ್ತು ನಿರ್ವಹಣಾ ತಂಡದ ಸದಸ್ಯರು ಇದ್ದರು.

ಕೇರಳ: ಕೋವಿಡ್ ಪರೀಕ್ಷೆ ಹೆಚ್ಚಿಸಲು ಸಲಹೆ

ನವದೆಹಲಿ (ಪಿಟಿಐ): ಕೇರಳದಲ್ಲಿ ಕೋವಿಡ್–19 ರೋಗಿಗಳ ಜತೆಗೆ ಸಂಪರ್ಕಕ್ಕೆ ಬಂದವರವನ್ನು ಪತ್ತೆ ಮಾಡುವುದು ಅತಿ ಕಡಿಮೆಯಾಗಿದೆ ಮತ್ತು ಸೋಂಕು ಪತ್ತೆ ಮಾಡಲು ಪರೀಕ್ಷೆಗಳನ್ನು ಸಹ ಕಡಿಮೆ ಮಾಡಲಾಗಿದೆ ಎಂದು ರಾಜ್ಯಕ್ಕೆ ಭೇಟಿ ನೀಡಿದ್ದ ಕೇಂದ್ರೀಯ ತಂಡ ತಿಳಿಸಿದೆ.

ಈ ಬಗ್ಗೆ ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಈ ತಂಡವು ವರದಿ ಸಲ್ಲಿಸಿದೆ. ಎರಡು ತಂಡಗಳು ದಕ್ಷಿಣ ಮತ್ತು ಉತ್ತರ ಕೇರಳದಲ್ಲಿ ಪ್ರತ್ಯೇಕವಾಗಿ ಅಧ್ಯಯನ ನಡೆಸಿದ್ದವು.



ಕೇರಳದಲ್ಲಿ ಲಸಿಕಾ ಅಭಿಯಾನವನ್ನು ತೀವ್ರಗೊಳಿಸುವುದು ಅಗತ್ಯವಿದೆ ಎಂದು ತಂಡವು ವರದಿಯಲ್ಲಿ ಉಲ್ಲೇಖಿಸಿದೆ.

ಜನರು ಸಹ ಕೋವಿಡ್–19 ನಿಯಮಾವಳಿಗಳನ್ನು ಪಾಲಿಸುವಲ್ಲಿ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದ್ದಾರೆ. ಪ್ರತ್ಯೇಕ ವಾಸಕ್ಕೆ ಸಂಬಂಧಿಸಿದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿಲ್ಲ. ಹೀಗಾಗಿ, ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿವೆ ಎಂದು ವರದಿ ತಿಳಿಸಿದೆ.

ರಾಜ್ಯದಲ್ಲಿ ಪಾಸಿಟಿವಿಟಿ ದರ ಶೇಕಡ 17.26ಕ್ಕೆ ತಲುಪಿದೆ. ಅಧಿಸೂಚಿತ ಕಂಟೈನ್‌ಮೆಂಟ್ ವಲಯಗಳು ಸಹ ಹಲವು ಜಿಲ್ಲೆಗಳಲ್ಲಿ ಕಂಡು ಬಂದಿಲ್ಲ ಎಂದು ವರದಿಯಲ್ಲಿ ವಿವರಿಸಲಾಗಿದೆ.

ರಾಜ್ಯದಲ್ಲಿ ಆರ್‌ಟಿ–ಪಿಸಿಆರ್ ಪರೀಕ್ಷೆಯನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೈಗೊಳ್ಳಬೇಕು ಎಂದು ತಂಡವು ಸಲಹೆ ನೀಡಿದೆ.

ಮೈಂಡ್‌ಟ್ರೀ ಫೌಂಡೇಷನ್‌ನ ದಯಾಪಾತ್ರ ನವಾಟಿಯಾ ಅಭಿಮತ • ಬಾಲಕಿಯರ ಕಾಲೇಜಿಗೆ ಕಂಪ್ಯೂಟರ್ ದಾನ

‘ತಂತ್ರಜ್ಞಾನ ಯುಗದಲ್ಲಿ ಕಂಪ್ಯೂಟರ್ ಜ್ಞಾನ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ತಂತ್ರಜ್ಞಾನ ಯುಗದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಕಂಪ್ಯೂಟರ್ ಜ್ಞಾನ ಹೊಂದಬೇಕು. ಬದಲಾದ ಪರಿಸ್ಥಿತಿಯಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಈ ಜ್ಞಾನವು ಅಗತ್ಯ’ ಎಂದು ಮೈಂಡ್‌ಟ್ರೀ ಕಂಪನಿಯ ಕಾರ್ಯನಿರ್ವಾಹಕ ನಿರ್ದೇಶಕ ದಯಾಪಾತ್ರ ನವಾಟಿಯಾ ತಿಳಿಸಿದರು.

ಬಸವನಗುಡಿಯ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಕಂಪ್ಯೂಟರ್ ಪ್ರಯೋಗಾಲಯವನ್ನು ಉದ್ಘಾಟಿಸಿದರು. ಮೈಂಡ್‌ಟ್ರೀ ಕಂಪನಿಯು ರೈಟ್ ಟು ಲಿವ್ ಸರ್ಕಾರೇತರ ಸಂಸ್ಥೆಯ ಸಹಯೋಗದಲ್ಲಿ 15 ಕಂಪ್ಯೂಟರ್‌ಗಳನ್ನು ಕಾಲೇಜಿಗೆ ದಾನವಾಗಿ ನೀಡಿದೆ.

‘ಕೋವಿಡ್‌ನಿಂದ ಒಂದೂವರೆ ವರ್ಷದಿಂದ ಎಲ್ಲ ವರ್ಗದವರೂ ಸಮಸ್ಯೆಗಳನ್ನು ಎದುರಿಸಿದ್ದಾರೆ. ಶಿಕ್ಷಣ ವ್ಯವಸ್ಥೆಯಲ್ಲಿ ಕೂಡ ಸಾಕಷ್ಟು ಬದಲಾವಣೆಯಾಗಿವೆ. ಆನ್‌ಲೈನ್ ಶಿಕ್ಷಣದಿಂದಾಗಿ ಸ್ಮಾರ್ಟ್‌ಫೋನ್ ಹೊಂದಿರದ ಬಡ ವರ್ಗದ ಕೆಲ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗಿದೆ. ಎಲ್ಲರಿಗೂ ಡಿಜಿಟಲ್ ಶಿಕ್ಷಣ ಸಿಗುವಂತಾಗಬೇಕು. ತಂತ್ರಜ್ಞಾನದ ಬಳಕೆಯ ಬಗ್ಗೆಯೂ ವಿದ್ಯಾರ್ಥಿಗಳು ತಿಳಿದಿರಬೇಕು. ಅಂತಹ ಶಿಕ್ಷಣ ನೀಡಬೇಕು’ ಎಂದರು.

ಮೈಂಡ್‌ಟ್ರೀ ಕಂಪನಿಯ ಪ್ರಧಾನ ವ್ಯವಸ್ಥಾಪಕ ಅಬ್ರಾಹಂ ಮೋಸೆಸ್ ಮಾತನಾಡಿ, ‘ಶಿಕ್ಷಣ ಸಂಸ್ಥೆಗಳು ಗುಣಮಟ್ಟದ ಶಿಕ್ಷಣದ ಜೊತೆಗೆ ಮಕ್ಕಳಿಗೆ ಸುರಕ್ಷತೆಯನ್ನೂ ಒದಗಿಸಬೇಕು. ಸರ್ಕಾರಿ ಶಾಲಾ–ಕಾಲೇಜುಗಳಲ್ಲಿ ಶಿಕ್ಷಣಕ್ಕೆ ಉತ್ತಮ ಪರಿಸರವಿದ್ದರೂ ಅದರ ನಿರ್ವಹಣೆ ಸಮರ್ಪಕವಾಗಿ ಆಗುತ್ತಿಲ್ಲ. ಶಿಕ್ಷಕರು ಮೂಲಸೌಕರ್ಯಕ್ಕಾಗಿ ದಾನಿಗಳನ್ನು ಸಂಪರ್ಕಿಸುವ ಮೊದಲು ಶಾಲೆಯ ಕಟ್ಟಡಕ್ಕೆ ಸುಣ್ಣ ಬಣ್ಣದಂತಹ ಕೆಲಸಗಳನ್ನು ಮಾಡಿಸಬೇಕು. ಆಗ ದಾನಿಗಳು ಕೂಡ ಮುಂದೆ ಬರುತ್ತಾರೆ’ ಎಂದರು.

ರೈಟ್ ಟು ಲಿವ್ ಸರ್ಕಾರೇತರ ಸಂಸ್ಥೆಯ ಸಂಸ್ಥಾಪನಾ ಟ್ರಸ್ಟಿ ರಘುರಾಮ್ ಕೋಟೆ, ‘ವಿದ್ಯಾರ್ಥಿಗಳ ಡಿಜಿಟಲ್ ಕಲಿಕೆಗೆ ಒತ್ತು ನೀಡಲು ಸರ್ಕಾರಿ ಪದವಿಪೂರ್ವ ಕಾಲೇಜು, ಪಾಲಿಟೆಕ್ನಿಕ್‌ಗಳಲ್ಲಿ ಕಂಪ್ಯೂಟರ್ ಪ್ರಯೋಗಾಲಯಗಳನ್ನು ತೆರೆದು, ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡುತ್ತಿದ್ದೇವೆ. ಶೀಘ್ರದಲ್ಲಿಯೇ 10ಕ್ಕೂ ಅಧಿಕ ಕಂಪ್ಯೂಟರ್ ಪ್ರಯೋಗಾಲಯಗಳನ್ನು ತೆರೆಯಲಾಗುತ್ತದೆ’ ಎಂದರು.



ಕಾಲೇಜಿನಲ್ಲಿ ನೂತನ ಕಂಪ್ಯೂಟರ್ ಪ್ರಯೋಗಾಲಯದಲ್ಲಿ ವಿದ್ಯಾರ್ಥಿಗಳು ಕಲಿಕೆಯಲ್ಲಿ ನಿರತರಾಗಿರುವುದನ್ನು ರಘುರಾಮ್ ಕೋಟೆ, ದಯಾಪಾತ್ರ ನವಾಟಿಯಾ, ರಾಜಕುಮಾರ್ ಬಿ.ಎಂ., ಉಪನ್ಯಾಸಕ ವೆಂಕಟೇಶ್ ಗೌಡ, ಜಿ. ನಾಗಣ್ಣ, ಅಬ್ರಾಹಂ ಮೋಸೆಸ್ ವೀಕ್ಷಿಸಿದರು – ಪ್ರಜಾವಾಣಿ ಚಿತ್ರ

‘3 ತಿಂಗಳಲ್ಲಿ ಕಾಲೇಜಿಗೆ ಹೊಸ ಸ್ಪರ್ಶ’

‘ಬಸವನಗುಡಿಯ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನ ಕಟ್ಟಡವು ಸುಣ್ಣ, ಬಣ್ಣ ಹಾಗೂ ಮೂಲಸೌಲಭ್ಯಕ್ಕೆ ಎದುರು ನೋಡುತ್ತಿದೆ. ಮೂರು ತಿಂಗಳಲ್ಲಿ ಇದಕ್ಕೆ ಹೊಸ ಸ್ಪರ್ಶ ನೀಡಲಾಗುವುದು. ಈ ಕಾರ್ಯಕ್ಕೆ ಸರ್ಕಾರೇತರ ಸಂಸ್ಥೆಯೊಂದು ಮುಂದೆ ಬಂದಿದೆ’ ಎಂದು ಪದವಿಪೂರ್ವ ಶಿಕ್ಷಣ ಇಲಾಖೆಯ (ಬೆಂಗಳೂರು ದಕ್ಷಿಣ) ಉಪನಿರ್ದೇಶಕ ರಾಜಕುಮಾರ್ ಬಿ.ಎಂ. ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲ ಜಿ. ನಾಗಣ್ಣ, ‘ನಮ್ಮ ಕಾಲೇಜಿನಲ್ಲಿ 700 ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ಸಂಖ್ಯೆಯನ್ನು ಎರಡು ಸಾವಿರಕ್ಕೆ ಹೆಚ್ಚಳ ಮಾಡುವ ಗುರಿ ಹೊಂದಿದ್ದೇವೆ‘ ಎಂದರು.

ದಿನಸಿ ಕಿಟ್ ವಿತರಣೆಯಲ್ಲಿ ಅಕ್ರಮ: ತನಿಖೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯ ದಿನಸಿ ಕಿಟ್ ವಿತರಣೆಯಲ್ಲಿ ಭಾರಿ ಅಕ್ರಮ ನಡೆದಿದ್ದು, ಈ ಬಗ್ಗೆ ನ್ಯಾಯಾಧೀಶರ ನೇತೃತ್ವದಲ್ಲಿ ತನಿಖೆ ನಡೆಯಬೇಕು' ಎಂದು ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ (ಜೆಸಿಟಿಯು) ಆಗ್ರಹಿಸಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಐಎನ್‌ಟಿಯುಸಿ ಸಂಘಟನೆಯ ಶ್ಯಾಮಣ್ಣ ರೆಡ್ಡಿ,'ಮಂಡಳಿಯು ಸುಮಾರು ₹2,500 ಕೋಟಿ ಸೆಸ್ ಹಣದಿಂದ ಕೆಲವು ಪರಿಹಾರ ಕಾರ್ಯಗಳನ್ನು ಕೈಗೊಂಡಿತ್ತು. ಕಟ್ಟಡ ಕಾರ್ಮಿಕರಿಗಾಗಿ ಮಂಡಳಿ 21 ಲಕ್ಷ ದಿನಸಿ ಕಿಟ್‌ಗಳನ್ನು ಹಂಚಿಕೆ ಮಾಡಿರುವುದಾಗಿ ವರದಿಯಲ್ಲಿದೆ. ಆದರೆ, ವಿತರಣೆಯಾಗಿರುವ ದಿನಸಿ ಹಾಗೂ ಸುರಕ್ಷಾ ಕಿಟ್‌ಗಳ ಗುಣಮಟ್ಟ ತೀರಾ ಕಳಪೆಯಾಗಿದೆ' ಎಂದು ಆರೋಪಿಸಿದರು.

'ಮಂಡಳಿಯಲ್ಲಿ ಕೋಟ್ಯಂತರ ಹಣ ಖರ್ಚು ಮಾಡಿ ದುಬಾರಿ ಕಾರುಗಳನ್ನು ಖರೀದಿಸಲಾಗಿದೆ. ಕೋವಿಡ್ ಪರಿಸ್ಥಿತಿಯಲ್ಲಿ ಈ ರೀತಿ ದುಂದುವೆಚ್ಚದ ಅಗತ್ಯ ಏನಿತ್ತು?' ಎಂದು ಪ್ರಶ್ನಿಸಿದರು.

ಎಐಯುಟಿಯುಸಿ ಸಂಘಟನೆಯ ಕೆ.ವಿ.ಭಟ್,'ಕಟ್ಟಡ ಕಾರ್ಮಿಕರ ಹಾಗೂ ಇತರೆ ಕಾರ್ಮಿಕರ ಖಾತೆಗಳಿಗೆ ಕೋವಿಡ್ ಪರಿಹಾರವಾಗಿ ತಲಾ ₹10 ಸಾವಿರ ಜಮಾ ಆಗಬೇಕು. ಮಂಡಳಿಯಲ್ಲಿ ನಡೆದಿರುವ ಭಾರಿ ಅಕ್ರಮದ ಬಗ್ಗೆ ತನಿಖೆ ನಡೆಯಬೇಕು ಹಾಗೂ ಮಂಡಳಿಯ ಹಣ ದುರುಪಯೋಗ ಆಗದಂತೆ ತಡೆಯಬೇಕು' ಎಂದು ಆಗ್ರಹಿಸಿದರು.

ಹಣ ದುರುಪಯೋಗ ಆರೋಪ; ಪ್ರತಿಭಟನೆ

ಬೆಂಗಳೂರು: 'ಫೆಡರೇಷನ್ ಆಫ್ ಕರ್ನಾಟಕ ಲಾರಿ ಓನರ್ಸ್ ಅಸೋಸಿಯೇಷನ್ ಹಣವನ್ನು ಅಧ್ಯಕ್ಷ ಜಿ. ಚನ್ನಾರೆಡ್ಡಿ ಹಾಗೂ ಅವರ ಪುತ್ರ ದುರುಪಯೋಗಪಡಿಸಿಕೊಂಡಿದ್ದಾರೆ' ಎಂದು ಆರೋಪಿಸಿ ಕೆಲ ಸದಸ್ಯರು ನಗರದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಸಂಘದ ಕಚೇರಿ ಎದುರು ಸೇರಿದ್ದ ಸದಸ್ಯರು, ಅಧ್ಯಕ್ಷರ ವಿರುದ್ಧ ಘೋಷಣೆ ಕೂಗಿದರು. ಯಶವಂತಪುರ ಲಾರಿ ಮಾಲೀಕರ ಸಂಘದ ಸದಸ್ಯರೂ ಪ್ರತಿಭಟನೆಯಲ್ಲಿದ್ದರು.

'ಸಂಘದ ಅಭಿವೃದ್ಧಿಗಾಗಿ ಗೊರಗುಂಟೆಪಾಳ್ಯ ಮುಖ್ಯರಸ್ತೆಯಲ್ಲಿ ಭಾರತ್ ಪೆಟ್ರೋಲ್ ಬಂಕ್ ತೆರೆಯಲಾಗಿದೆ. ಕೋಟ್ಯಂತರ ರೂಪಾಯಿ ವಹಿವಾಟು ನಡೆಯುತ್ತಿದೆ. ಆದರೆ, ಸುಳ್ಳು ಲೆಕ್ಕ ತೋರಿಸಿ ಹಣ ದುರುಪಯೋಗ ಪಡಿಸಿಕೊಳ್ಳಲಾಗಿದೆ. ಅಧ್ಯಕ್ಷರ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಸಹಕಾರ ಇಲಾಖೆಯ ನಿಬಂಧಕರಿಗೆ ದೂರು ನೀಡಲಾಗುವುದು' ಎಂದು ಪ್ರತಿಭಟನಕಾರರು ಹೇಳಿದರು.

ಪಡಿತರ ಅಕ್ಕಿ ಕಳ್ಳಸಾಗಣೆ: ನ್ಯಾಯಬೆಲೆ ಅಂಗಡಿ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಡಿತರ ಚೀಟಿದಾರರಿಗೆ ಉಚಿತವಾಗಿ ವಿತರಿಸಲು ಹಂಚಿಕೆ ಮಾಡಿದ್ದ ಅಕ್ಕಿ ಮತ್ತು ರಾಗಿಯನ್ನು ಕಾಳಸಂತೆಗೆ ಕಳ್ಳಸಾಗಣೆ ಮಾಡಲು ಯತ್ನಿಸಿದ ಆರೋಪದಡಿ ಕ್ರಿಮಿನಲ್ ಪ್ರಕರಣ ದಾಖಲಾಗಿರುವ ಕಾರಣದಿಂದ ಮಂಜುನಾಥ ನಗರದ ಮಂಜುನಾಥ ಸ್ಟೋರ್ಸ್ (ಬಿಎಲ್‌ಬಿಎಲ್‌-190) ನ್ಯಾಯಬೆಲೆ ಅಂಗಡಿಯನ್ನು ಅಮಾನತುಗೊಳಿಸಿ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಬೆಂಗಳೂರು ಪಶ್ಚಿಮ ವಿಭಾಗದ ಉಪ ನಿರ್ದೇಶಕರು ಆದೇಶ ಹೊರಡಿಸಿದ್ದಾರೆ.

ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಜಂಟಿ ನಿರ್ದೇಶಕ ಡಾ.ಕೆ. ರಾಮೇಶ್ವರಪ್ಪ ನೇತೃತ್ವದ ತನಿಖಾ ದಳ ಜುಲೈ 15ರಂದು ಯಶವಂತಪುರದ ಆರ್‌.ಎಂ.ಸಿ. ಯಾರ್ಡ್ ಆವರಣದಲ್ಲಿರುವ ಕರ್ನಾಟಕ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮದ (ಕೆಎಫ್‌ಸಿಎಸ್‌ಸಿ) ಉಗ್ರಾಣಗಳ ಮೇಲೆ ದಾಳಿ ನಡೆಸಿ ತಪಾಸಣೆ ನಡೆಸಿತ್ತು. ಆಗ, ಮಂಜುನಾಥ ಸ್ಟೋರ್ಸ್ ನ್ಯಾಯಬೆಲೆ ಅಂಗಡಿ ಹೆಸರಿನಲ್ಲಿ ಕೆಎಫ್‌ಸಿಎಸ್‌ಸಿಯ ಎನ್‌ಜಿ-1 ಉಗ್ರಾಣದಿಂದ ಬಿಲ್ ಮಾಡಲಾಗಿದ್ದ 95 ಕ್ವಿಂಟಲ್ ಪಡಿತರ ಅಕ್ಕಿ ಮತ್ತು ಲಾರಿಗಳನ್ನು ಬಿಟ್ಟು ನ್ಯಾಯಬೆಲೆ ಅಂಗಡಿ ಮಾಲೀಕರು ಪರಾರಿಯಾಗಿದ್ದರು.

ಕಾಳಸಂತೆಗೆ ಪಡಿತರ ಧಾನ್ಯ ಕಳ್ಳಸಾಗಣೆ ಮಾಡುತ್ತಿದ್ದ ಆರೋಪದ ಮೇಲೆ ನ್ಯಾಯಬೆಲೆ ಅಂಗಡಿ ಮಾಲೀಕ ಲಕ್ಷ್ಮೀನಾರಾಯಣ, ಲಾರಿ ಮಾಲೀಕರಾದ ಮಲ್ಲಿಕಾರ್ಜುನ, ಮುನಿರಾಜು ಹಾಗೂ ಪಡಿತರ ರಾಗಿ ಸಾಗಿಸುತ್ತಿದ್ದ ಮತ್ತೊಂದು ಲಾರಿ ಮಾಲೀಕ ಫಯಾಜ್ ಸೇರಿದಂತೆ ಹಲವರ ವಿರುದ್ಧ ಆರ್‌ಎಂಸಿ ಯಾರ್ಡ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು.

ಪಡಿತರ ಧಾನ್ಯ ಕಳ್ಳಸಾಗಣೆ ಆರೋಪದಡಿ ಮಂಜುನಾಥ ಸ್ಟೋರ್ಸ್ ನ್ಯಾಯಬೆಲೆ ಅಂಗಡಿ ಮಾಲೀಕರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿರುವ ಕುರಿತು ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಗೆ ಪೊಲೀಸರು ಮಾಹಿತಿ ನೀಡಿದ್ದರು. ಈ ಸಂಬಂಧ ಪ್ರತ್ಯೇಕ ಪ್ರಕರಣ ದಾಖಲಿಸಿರುವ ಇಲಾಖೆಯ ಬೆಂಗಳೂರು ಪಶ್ಚಿಮ ವಿಭಾಗದ ಉಪ ನಿರ್ದೇಶಕ ರಘು, ನ್ಯಾಯಬೆಲೆ ಅಂಗಡಿಯನ್ನು ಅಮಾನತುಗೊಳಿಸಿ ಆದೇಶ ಹೊರಡಿಸಿದ್ದಾರೆ.

ಈ ಅಂಗಡಿಯಲ್ಲಿ ಅಂತ್ಯೋದಯ ಅನ್ನ ಯೋಜನೆಯ 12 ಮತ್ತು ಆದ್ಯತಾ ವಲಯದ 318 ಕುಟುಂಬಗಳಿಗೆ ಜುಲೈ ತಿಂಗಳಿನಲ್ಲಿ ಪಡಿತರ ವಿತರಿಸಿಲ್ಲ. ಬಾಕಿ ಉಳಿದಿರುವ ಆಹಾರ ಧಾನ್ಯವನ್ನು ವಶಕ್ಕೆ ಪಡೆಯುವಂತೆ ಹಾಗೂ ಈ ಅಂಗಡಿಯ ವ್ಯಾಪ್ತಿಯಲ್ಲಿದ್ದ ಪಡಿತರ ಚೀಟಿದಾರರಿಗೆ ಬೇರೆ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ವಿತರಣೆಗೆ ವ್ಯವಸ್ಥೆ ಮಾಡುವಂತೆ ಆದೇಶದಲ್ಲಿ ತಿಳಿಸಲಾಗಿದೆ.

CSIR-CENTRAL INSTITUTE OF MEDICAL AND AROMATIC PLANTS
(Council of Scientific & Industrial Research)
P.O. CIMAP, Kukrail Picnic Spot Road, Lucknow-226015
E-Tender Notice

Item rate tenders are hereby invited Online in two Bid System (Technical and Price Bid) for the work **"Providing & fixing of street lights at CSIR-CIMAP, R.C. Bengaluru"** as detailed below:-

Tender No.	Estimated Cost (Rs.)	EMD (Rs.)	Bid Submission end date	Bid Opening Date
68_040/831/2021-MP (Works)	12,76,820.00	Earnest Money deposit declaration required	13.08.2021	16.08.2021

Tender documents & other details are available on **http://etender.gov.in/eprocure/app**

(Controller of Administration)

ಮೀನುಗಾರಿಕೆ ಇಲಾಖೆ,
ಗೌರಿಬಿದನೂರು ತಾಲ್ಲೂಕು

ಸಂ: ಮೀ.ಸ.ನಿ/ಎಫ್‌ವೈಪಿ-1/2021-22 ದಿನಾಂಕ: 02.08.2021

ಟೆಂಡರ್ ಪ್ರಕಟಣೆ

ಮೀನುಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿ ಮೀನುಗಾರರಿಗೆ ಅಗತ್ಯವಿರುವ ಮೀನುಗಾರಿಕೆ ಸಲಕರಣೆಗಳಾದ ನೈಲಾನ್ ಬಲೆಗಳು, ಹರಿಗೋಲು, ತಕ್ಕಡಿ, ಬಟ್ಟಲುಗಳು, ಪ್ಲಾಸ್ಟಿಕ್ ಕ್ರೇಟ್ ಇತ್ಯಾದಿ ಸಾಮಾಗ್ರಿಗಳನ್ನು ಖರೀದಿಸಲು ಅತೀ ಕಡಿಮೆ ದರದಲ್ಲಿ ಸರಬರಾಜು ಮಾಡುವ ತಯಾರಕರು/ಅಧಿಕೃತ ಸರಬರಾಜುದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರಿನ ಮೊತ್ತ: **ರೂ.1,50,000/-** (ರೂ. ಒಂದು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಮಾತ್ರ). ಇ.ಎಂ.ಡಿ. ಮೊತ್ತ: **ರೂ.3000/-** (ರೂ. ಮೂರು ಸಾವಿರ ಮಾತ್ರ). ಟೆಂಡರ್ ಫಾರಂಗಳನ್ನು ಕಛೇರಿಯ ವೇಳೆಯಲ್ಲಿ ದಿ: **02.08.2021** ರಿಂದ ಪಡೆಯಬಹುದಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **18.08.2021 ಸಂಜೆ 4.00 ಗಂಟೆಯೊಳಗಾಗಿ.** ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯಲ್ಲಿ ಸಂಪರ್ಕಿಸಬಹುದಾಗಿದೆ.

ಸಹಿ/- ಮೀನುಗಾರಿಕೆ ಸಹಾಯಕ ನಿರ್ದೇಶಕರು, ಗೌರಿಬಿದನೂರು ತಾಲ್ಲೂಕು

ವಾಸಾಸಂಇ/ಚಿಕ್ಕಬಳ್ಳಾಪುರ/ಆರ್.ಓ.ಸಂಖ್ಯೆ113/ಎಂ.ಸಿ.ಎ/2021-22

ಕೋವಿಡ್-19: ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ
ಮಾಸ್ಕ್ ಧರಿಸಿ | ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಭಾರತೀಯ ಸೆಕ್ಯೂರಿಟೀಸ್ ಮತ್ತು ಎಕ್ಸ್‌ಚೇಂಜ್ ಮಂಡಳಿ
Securities and Exchange Board of India

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಕೆಳಗಿನ ನೋಟಿಸ್‌ದಾರರಿಗೆ ತಿಳಿಸುವುದು ಏನೆಂದರೆ, ಭಾರತೀಯ ಸೆಕ್ಯೂರಿಟೀಸ್ ಮತ್ತು ಎಕ್ಸ್‌ಚೇಂಜ್ ಮಂಡಳಿಯ ತೀರ್ಮಾನ ಜಾರಿ ಅಧಿಕಾರಿಯು **ಸಿದ್ಧಾರ್ಥ ಬಿಜಿನೆಸ್ ಲಿಮಿಟೆಡ್** (ಪ್ರಸ್ತುತ ಶಿವಾರ್ಥ ಬಿಜಿನೆಸ್ ಲಿಮಿಟೆಡ್) ವಿಷಯದಲ್ಲಿ ಜನವರಿ 24, 2020 ರಂದು ಆದೇಶ ಹೊರಡಿಸಿದ್ದಾರೆ. ಸದರಿ ಆದೇಶವನ್ನು ಕೆಳಗಿನ ಸಂಸ್ಥೆಗೆ ರವಾನಿಸಲಾಗಿತ್ತು, ಆದರೆ ಬಟವಾಡೆಗೊಳ್ಳದೆ ಮರಳಿ ಬಂದಿರುತ್ತದೆ–

ವಿಜು ಬಾಬುಲಾಲ್ ಜೈನ್
I 804, ಮಂತ್ರಿ ಟ್ರ್ಯಾಂಕ್ವಿಲ್, ಕನಕಪುರ ರಸ್ತೆ ಪಕ್ಕ, ಗುಬ್ಬಲಾಳ, ಬೆಂಗಳೂರು, ಕರ್ನಾಟಕ–560061

ಸದರಿ ಆದೇಶ ಪ್ರತಿಯು ಸೆಬಿ ಸಂಸ್ಥೆಯ **www.sebi.gov.in** ವೆಬ್‌ಸೈಟ್‌ನಲ್ಲಿ "ಎನ್‌ಫೋರ್ಸ್‌ಮೆಂಟ್ ಆರ್ಡರ್ಸ್ ಆಫ್ ಎಒ" ಶೀರ್ಷಿಕೆ ಅಡಿಯಲ್ಲಿ ಲಭ್ಯವಿರುತ್ತದೆ. **ಭಾರತೀಯ ಸೆಕ್ಯೂರಿಟೀಸ್ ಮತ್ತು ಎಕ್ಸ್‌ಚೇಂಜ್ ಮಂಡಳಿ, ಸೆಬಿ ಭವನ–II, ಪ್ಲಾಟ್ ನಂ. ಸಿ–7, ಜಿ ಬ್ಲಾಕ್, ಬಾಂದ್ರಾ ಕುರ್ಲಾ ಕಾಂಪ್ಲೆಕ್ಸ್, ಬಾಂದ್ರಾ (ಈಸ್ಟ್), ಮುಂಬೈ–400 051** ವಿಳಾಸದಲ್ಲಿರುವ ನಮ್ಮ ಕಚೇರಿಯಿಂದ ಕೂಡ ಸದರಿ ಆದೇಶದ ಪ್ರತಿಯನ್ನು ಪಡೆದುಕೊಳ್ಳಬಹುದು.

ಸ್ಥಳ: ಮುಂಬೈ — ಜನರಲ್ ಮ್ಯಾನೇಜರ್

davp 15204/11/0163/2122

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.

ಸಂಖ್ಯೆ: ಬೆಂಅಪ್ರಾ/ವಿಭೂಸ್ವಾಅ–5/2021–22/21 ದಿನಾಂಕ: 04.08.2021

ಸಾರ್ವಜನಿಕ ಪ್ರಕಟಣೆ

ಬೆಂಗಳೂರು ಉತ್ತರ (ಅಪರ) ತಾಲ್ಲೂಕು, ಯಲಹಂಕ ಹೋಬಳಿ, **ದೊಡ್ಡಬೆಟ್ಟಹಳ್ಳಿ** ಮತ್ತು **ಕೆಂಪನಹಳ್ಳಿ** ಗ್ರಾಮಗಳಿಗೆ ಸಂಬಂಧಿಸಿದಂತೆ ಜಮೀನುಗಳ ಅಧಿಸೂಚಿತ ಖಾತಾದಾರರು, ಅನುಭವದಾರರು, ಆಕ್ಷೇಪಣೆದಾರರು ಹಾಗೂ ಎಲ್ಲಾ ಆಸಕ್ತ ವ್ಯಕ್ತಿಗಳಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಡಾ॥ ಕೆ. ಶಿವರಾಮ ಕಾರಂತ ಬಡಾವಣೆ ರಚಿಸುವ ಸಲುವಾಗಿ ಸದರಿ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪ್ರಾರಂಭಿಕ ಅಧಿಸೂಚನೆ ಸಂಖ್ಯೆ: ಬಿಡಿಎ/ಕಮೀಷನರ್/ಡಿಸಿ(ಎಲ್ಎ)/ಎಸ್ಎಲ್ಎಒ/ಎ5/ಪಿಆರ್/283/2008–09, ದಿನಾಂಕ: 30.12.2008 ನ್ನು ಹೊರಡಿಸಿದ್ದು, ಅದನ್ನು ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ 31.12.2008 ರ ಭಾಗ–3, ಪುಟ ಸಂಖ್ಯೆ 1368 ರಲ್ಲಿ ಪ್ರಕಟಣೆ ಮಾಡಲಾಗಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ಸಂಖ್ಯೆ Civil Appeal No. 7661-63/2018 (Arising out of SLP(C) No. 10216–218/2018) Dated 03.08.2018 ರ ಮೇರೆಗೆ ಸರ್ಕಾರದ ಆದೇಶ ಸಂಖ್ಯೆ: ನಅಇ/553/ಬೆಂಭೂಸ್ವಾ/2018 ದಿನಾಂಕ 29.10.2018 ರಂತೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಡಾ॥ ಕೆ. ಶಿವರಾಮ ಕಾರಂತ ಬಡಾವಣೆಯನ್ನು 3546 ಎಕರೆ 12 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡು ಬಡಾವಣೆ ನಿರ್ಮಿಸುವ ಯೋಜನೆಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಕಾಯ್ದೆ 1976 ಕಲಂ 18(3) ರಡಿಯಲ್ಲಿ ಯೋಜನಾ ಮಂಜೂರಾತಿಯನ್ನು ನೀಡಲಾಗಿದ್ದು, ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ/553/ಎಂಎನ್‌ಎಕ್ಸ್/2018, ದಿನಾಂಕ 29.10.2018 ರಂದು ಬಿಡಿಎ ಕಾಯ್ದೆ 1976 ಕಲಂ 19(1) ರನ್ವಯ ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದ್ದು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ 01.11.2018 ರಂದು ಪ್ರಕಟಿಸಲಾಗಿರುತ್ತದೆ. ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಿರುವ ಜಮೀನನ್ನು ಆಯಾ ಸರ್ವೆ ನಂಬರಿನ ಮುಂದೆ ನಮೂದಿಸಿರುವ ದಿನಾಂಕಗಳಂದು ಹಸ್ತಾಂತರ ಮಾಡಿಕೊಳ್ಳಲಾಗುವುದು.

ಕೋಷ್ಟಕ

ಗ್ರಾಮ	ಸರ್ವೆ ನಂ.	ಹಸ್ತಾಂತರ ಮಾಡಿಕೊಳ್ಳುವ ದಿನಾಂಕ
ದೊಡ್ಡಬೆಟ್ಟಹಳ್ಳಿ	15/1, 15/2A,B, 18, 20/1, 20/2	12.08.2021
ದೊಡ್ಡಬೆಟ್ಟಹಳ್ಳಿ	4/1, 4/2, 4/4, 4/5, 6/2	13.08.2021
ದೊಡ್ಡಬೆಟ್ಟಹಳ್ಳಿ	21, 22/1, 22/2, 22/4, 31/1,2,3	16.08.2021
ದೊಡ್ಡಬೆಟ್ಟಹಳ್ಳಿ	29/2, 30, 34, 39/3	17.08.2021
ದೊಡ್ಡಬೆಟ್ಟಹಳ್ಳಿ	39/8, 42, 43/4, 43/5	18.08.2021
ಕೆಂಪನಹಳ್ಳಿ	19/7, 19/8, 19/9, 19/10	24.08.2021
ಕೆಂಪನಹಳ್ಳಿ	20/3, 20/6, 28, 29/1, 30	25.08.2021

ಆದ್ದರಿಂದ ಸಂಬಂಧಪಟ್ಟ ಎಲ್ಲಾ ಖಾತೆದಾರರು, ಅನುಭವದಾರರು ಮತ್ತು ಆಸಕ್ತ ವ್ಯಕ್ತಿಗಳಿಗೆ ಈಗಾಗಲೇ ಭೂಸ್ವಾಧೀನ ಕಾಯ್ದೆ 12(2) ರಡಿ ಅವಾರ್ಡ್ ನೋಟಿಸನ್ನು ಲಭ್ಯವಿರುವ ವಿಳಾಸಗಳಿಗೆ ಸ್ಪೀಡ್ ಪೋಸ್ಟ್ ಮೂಲಕ ಈಗಾಗಲೇ ಜಾರಿ ಮಾಡಲಾಗಿದ್ದು, ಒಂದು ವೇಳೆ 12(2) ನೋಟಿಸ್ ತಲುಪದಿದ್ದಲ್ಲಿ, ಸದರಿ ಪ್ರಕಟಣೆಯನ್ನೇ ಭೂಸ್ವಾಧೀನ ಕಾಯ್ದೆ 12(2) ನೋಟಿಸ್ ಎಂದು ಪರಿಗಣಿಸಿ, ಮೇಲ್ಕಂಡ ಸರ್ವೆ ನಂಬರುಗಳ ಸ್ವತ್ತುಗಳನ್ನು ಮರ–ಮಾಲ್ಕಿ, ಕಟ್ಟಡಗಳ ಸಮೇತವಾಗಿ ಜಮೀನಿನ ಸ್ವಾಧೀನವನ್ನು ಭೂಸ್ವಾಧೀನ ಕಾಯ್ದೆ 16(1) ರನ್ವಯ ಹಸ್ತಾಂತರಿಸಲು ಹಾಗೂ ಸದರಿ ದಿನಾಂಕದಂದು ಸ್ಥಳದಲ್ಲಿ ಹಾಜರಿದ್ದು ಜಮೀನನ್ನು ಸ್ವಾಧೀನಕ್ಕೆ ನೀಡುವಲ್ಲಿ ಸಹಕರಿಸಲು ಕೋರಿದೆ.

ಸಹಿ/– ವಿಶೇಷ ಭೂಸ್ವಾಧೀನಾಧಿಕಾರಿಗಳು–5,
ಡಾ॥ ಕೆ.ಶಿವರಾಮ ಕಾರಂತ ಬಡಾವಣೆ, ಬೆಂ.ಅ.ಪ್ರಾ. ಬೆಂಗಳೂರು

THE KARNATAKA STATE CRICKET ASSOCIATION
M. Chinnaswamy Stadium, Cubbon Road, Bangalore - 560 001.
Tender Notification

The Karnataka State Cricket Association, M.Chinnaswamy Stadium, Cubbon Road, Bangalore, invites sealed tenders from Class I Contractors/Eligible contractor for Proposed Interior, Lighting, Soft furnishing and allied works for KSCA Cricket Academy at Alur.

The details of issue/submission of tender document are as follows:-

1. Name of work :- Proposed Interior Lighting, Soft furnishing and allied works for KSCA Cricket Academy at Alur.
2. Estimate Cost :- Rs. 2.80 Crores
3. Earnest Money Deposit the :- Rs. 5,60,000/- should be enclosed in technical bid cover
4. Cost of tender form :- Rs.15,000/- plus GST (Non Refundable)
5. Date of issue of tender form :- 06/8/2021 to 21/8/2021
6. Last date of submission of filled tender form :- 26/8/2021 before 4.00 p.m. two covers bid system (Technical & Commercial Separately)
7. Completion of work by :- 4 months from the date of work order
8. Eligibility of contractors :- Class I and above PWD/CPWD/ Equivalent

Registered, similar work done contractors and GST Complaint.

Tender documents may be obtained from the Office of the KSCA, by submitting a requisition in the company's letter head between 11.00 a.m. to 5.00 p.m. on any working day. For any clarification please contact Mr. H.A.Venkatesprasad, AGM Civil Engineering Dept, Mobile No. 9945604515/8150900022

Hon. Secretary
KSCA

ಪ್ರಕಟಣೆ

ಟಿಮ್‌ಕೆನ್ ಇಂಡಿಯಾ ನಿಯಮಿತ
CIN - L29130KA1996PLC048230
ನೋಂದಣಿ ಕಛೇರಿ: ಸಂಖ್ಯೆ. 39-42, ಎಲೆಕ್ಟ್ರಾನಿಕ್ ಸಿಟಿ, ಫೇಸ್ II, ಹೊಸೂರು ರಸ್ತೆ, ಬೆಂಗಳೂರು-560 100 ದೂರವಾಣಿ : 080 41362000 ಫ್ಯಾಕ್ಸ್ : 080 41362010
ಇ-ಮೇಲ್: tilinvestor@timken.com ವೆಬ್‌ಸೈಟ್ : www.timken.com/en-in

ಈಕ್ವಿಟಿ ಷೇರುಗಳನ್ನು ಹೂಡಿಕೆದಾರರ ವಿದ್ಯಾಭ್ಯಾಸ ಮತ್ತು ಸಂರಕ್ಷಣ ನಿಧಿಗೆ ವರ್ಗಾಯಿಸಲು ಷೇರುದಾರರಿಗೆ ಸೂಚನ

ಹೂಡಿಕೆದಾರರ ವಿದ್ಯಾಭ್ಯಾಸ ಮತ್ತು ಸಂರಕ್ಷಣ ನಿಧಿಗಳ ಪ್ರಾಧಿಕಾರ (ಲೆಕ್ಕಪತ್ರ, ಪರಿಶೋಧನೆ, ವರ್ಗಾವಣೆ ಮತ್ತು ಹಿಂದಿರುಗಿಸುವುದು) ನಿಯಮ, 2016 ಆಗಿಂದಾಗ್ಗೆ ಬದಲಾವಣೆಯಾದ ಪ್ರಕಾರವಾಗಿ ("ಈ ನಿಯಮಗಳು") ಓದಿಕೊಳ್ಳುವ ಕಂಪನಿಗಳ ಕಾಯಿದೆ, 2013 ರ ನಿಬಂಧನೆಗಳಿಗೆ ಅನುಗುಣವಾಗಿ ಈ ಸೂಚನೆಯನ್ನು ಪ್ರಕಟಿಸಲಾಗಿದೆ.

ಈ ನಿಯಮಗಳು, ಇನ್ನಿತರ ವಿಷಯಗಳೊಂದಿಗೆ, ಸತತವಾಗಿ ಏಳು ವರ್ಷಗಳಿಗೆ ಕೇಂದ್ರ ಸರ್ಕಾರ ಸ್ಥಾಪಿಸಿದ ಹೂಡಿಕೆದಾರರ ವಿದ್ಯಾಭ್ಯಾಸ ಮತ್ತು ಸಂರಕ್ಷಣ ನಿಧಿಗೆ (ಐಇಪಿಎಫ್) ಡಿವಿಡೆಂಡ್‌ಗಳನ್ನು ಪಾವತಿಸದೆ ಅಥವಾ ಷೇರುದಾರರು ಪಡೆಯದೆ ಇರುವ ಎಲ್ಲಾ ರೀತಿಯ ಷೇರುಗಳಿಗೆ ಸಂಬಂಧಿಸಿದಂತೆ ವರ್ಗಾವಣೆಯನ್ನು ಒದಗಿಸುವುದು. ಅದರಂತೆ, ಸದರಿ ನಿಯಮದ ಅಡಿಯಲ್ಲಿ ಯಾರ ಷೇರುಗಳು ಐಇಪಿಎಫ್ ಡೀಮ್ಯಾಟ್ ಖಾತೆಗೆ 2021 ರ ಡಿಸೆಂಬರ್ ತಿಂಗಳಲ್ಲಿ ವರ್ಗಾಯಿಸಲು ಅನ್ವಯಿಸುವಂತಹ ಸಂಬಂಧಿತ ಷೇರುದಾರರಿಗೆ ಸೂಚನೆ ನೀಡಿದೆ. ಕಂಪನಿಯು ಇಂತಹ ಷೇರುದಾರರ ಮತ್ತು ಐಇಪಿಎಫ್‌ಗೆ ಡೀಮ್ಯಾಟ್ ಖಾತೆಗೆ ವರ್ಗಾಯಿಸಲು ನಿಶ್ಚಯಿಸಿರುವ ಷೇರುಗಳ ವಿವರಗಳನ್ನು ತನ್ನ ವೆಬ್‌ಸೈಟ್ https://www.timken.com/en-in/investors/statutory-compliances/ಕಂಪನಿ ನಲ್ಲಿ ಅಪ್‌ಲೋಡ್ ಮಾಡಿದೆ. ಕಂಪನಿಯು ಸಂಬಂಧಿತ ಷೇರುದಾರರಿಗೆ ಅಗತ್ಯವಿರುವ ಕ್ರಮ ಕೈಗೊಳ್ಳಲು ಲಭ್ಯವಿರುವ ಇತ್ತೀಚಿನ ವಿಳಾಸಕ್ಕೆ ಪ್ರತ್ಯೇಕವಾದ ಸಂದೇಶವನ್ನು ರವಾನಿಸಿದೆ.

ಐಇಪಿಎಫ್‌ಗೆ ವರ್ಗಾಯಿಸದೆ ಉಳಿದಿರುವ ಷೇರುಗಳ ಬಗ್ಗೆ 2014–15 ಹಾಗೂ ಮುಂದಿನ ಸಾಲುಗಳ (ಗಳಿಗೆ), ಯಾವುದೇ ಪಡೆಯದೆ ಉಳಿದಿರುವ ಅಂತಿಮ ಡಿವಿಡೆಂಡ್ ಅನ್ನು ಪಡೆಯಲು ಕಂಪನಿ / ರಿಜಿಸ್ಟ್ರಾರ್ ಹಾಗೂ ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ) ಗೆ 30 ನವೆಂಬರ್, 2021 ರೊಳಗೆ ತಮ್ಮ ಅರ್ಜಿಯನ್ನು ಸಲ್ಲಿಸಲು ಸಂಬಂಧಪಟ್ಟ ಎಲ್ಲಾ ಷೇರುದಾರರಿಗೆ ಮನವಿ ಮಾಡಲಾಗಿದೆ. ತಾವುಗಳು ಗಮನಿಸಬೇಕಾದ ಅಂಶವೇನೆಂದರೆ ಮೇಲಿನ ನಿಗಧಿತ ದಿನದೊಳಗೆ ತಮಗೆ ಸಲ್ಲಬೇಕಾದ ಡಿವಿಡೆಂಡ್‌ಗಾಗಿ ಅರ್ಜಿ ಸಲ್ಲಿಸಲು ವಿಫಲವಾದರೆ, ಕಂಪನಿಯು ಮುಂದೆ ಷೇರುದಾರರಿಗೆ ಯಾವುದೇ ಸೂಚನೆ ನೀಡದೆ ಷೇರುಗಳನ್ನು ಐಇಪಿಎಫ್‌ಗೆ ವರ್ಗಾಯಿಸುವುದಲ್ಲದೆ ಬೇರೆ ದಾರಿ ಇರುವುದಿಲ್ಲ. ಷೇರುದಾರರಿಗೆ ತಿಳಿಸುವುದೇನೆಂದರೆ ಐಇಪಿಎಫ್‌ಗೆ ಷೇರುಗಳನ್ನು ವರ್ಗಾಯಿಸುವ ಉದ್ದೇಶ : ಕಂಪನಿಯು ತಾವು ಹೊಂದಿರುವ ಮೂಲ ಷೇರು ಪ್ರಮಾಣ ಪತ್ರ (ಗಳು)ದ ಬದಲಾಗಿ ಷೇರು ಪ್ರಮಾಣ ಪತ್ರ (ಗಳ)ದ ಪ್ರತಿಯನ್ನು ನೀಡುವುದು ಮತ್ತು ಇಂತಹ ಸಂದರ್ಭದಲ್ಲಿ, ಮೂಲ ಷೇರು ಪ್ರಮಾಣ ಪತ್ರ (ಗಳ)ದ ನೋಂದಾಯಿಸಲಾದ ತಮ್ಮ ಹೆಸರು ನಿಯಮಾನುಸಾರ ರದ್ದುಗೊಳ್ಳುತ್ತದೆ.


ಈ ಮೂಲಕ ಸೂಚಿಸುವುದೇನೆಂದರೆ ಐಇಪಿಎಫ್‌ಗೆ ವರ್ಗಾಯಿತಗೊಂಡ ಷೇರುಗಳು, ಯಾವುದೇ ಷೇರಿಗಗಳಿಗೆ ಅನ್ವಯಿಸುವ ಎಲ್ಲಾ ಸೌಲಭ್ಯಗಳು ಇದ್ದಲ್ಲಿ, ಇದನ್ನು ಒಳಗೊಂಡಂತೆ ಐಇಪಿಎಫ್ ಪ್ರಾಧಿಕಾರದಿಂದ ನಿಯಮದ ಅನುಸಾರ ಇವೆಲ್ಲವನ್ನು ಅನುಸರಿಸಿ ಅಂತಹ ಷೇರುಗಳನ್ನು ಪಡೆಯಬಹುದು. ಈ ವಿಷಯದ ಬಗ್ಗೆ ಸ್ಪಷ್ಟತೆಗಾಗಿ, ಕಂಪನಿ ರಿಜಿಸ್ಟ್ರಾರ್ಸ್ ಅಂಡ್ ಷೇರ್ ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ), ಸಿಬಿ ಮ್ಯಾನೇಜ್‌ಮೆಂಟ್ ಸರ್ವಿಸಸ್ (ಪ್ರೈ) ಲಿಮಿಟೆಡ್, ಪಿ–22, ಬಾಂಡೆಲ್ ರಸ್ತೆ, ಕೋಲ್ಕತಾ – 700 019 ದೂರವಾಣಿ ಸಂಖ್ಯೆ 033 – 40116700/6725/6729, ಫ್ಯಾಕ್ಸ್ ಸಂಖ್ಯೆ 033–4011 6739, ಇ–ಮೇಲ್: rta@cbmsl.com, website: www.cbmsl.com ಮೂಲಕ ಸಂಪರ್ಕಿಸಬಹುದು.

ಟಿಮ್‌ಕೆನ್ ಇಂಡಿಯ ನಿಯಮಿತ ಪರವಾಗಿ
ಸಹಿ/– ಮಂದಾರ್ ವಸಮತ್‌ಕರ್
ಕಂಪನಿ ಕಾರ್ಯದರ್ಶಿ ಮತ್ತು ಮುಖ್ಯ–ಕಾಂಪ್ಲಯನ್ಸ್

ಸ್ಥಳ: ಬೆಂಗಳೂರು
ದಿನಾಂಕ: 4 ಆಗಸ್ಟ್, 2021

'ಬಿಜೆಪಿಯಿಂದ ಕೋಟ್ಯಂತರ ಹಣ ಲೂಟಿ'

ಪ್ರಜಾವಾಣಿ ವಾರ್ತೆ



ಕಾಂಗ್ರೆಸ್ ಮುಖಂಡ ಆರ್‌.ಕೆ.ರಮೇಶ್ ಬಡವರಿಗೆ ದಿನಸಿ ಕಿಟ್ ವಿತರಿಸಿದರು. ಮುಖಂಡರಾದ ಶ್ರೀಧರ್ ಲಕ್ಷ್ಮಣ್, ಜಿ.ಕೆ.ರವಿ, ಜಿ.ಆರ್‌.ದಿನೇಶ್, ಚಂದ್ರಶೇಖರ್ ಹಾಗೂ ಇತರರು ಇದ್ದಾರೆ

ಬೆಂಗಳೂರು: 'ಬಿಜೆಪಿ ಸರ್ಕಾರ ಕೋವಿಡ್ ಸಮಯದಲ್ಲಿ ಮಾಸ್ಕ್, ವೆಂಟಿಲೇಟರ್, ಪಿಪಿಇ ಕಿಟ್‌ಗಳಿಗೆ ತಪ್ಪು ಲೆಕ್ಕ ತೋರಿಸಿ, ಕೋಟ್ಯಂತರ ಹಣ ಲೂಟಿ ಮಾಡಿದ ಪರಿಣಾಮ ಮುಖ್ಯಮಂತ್ರಿಯ ಬದಲಾವಣೆಯಾಗಿದೆ' ಎಂದು ಕಾಂಗ್ರೆಸ್ ಮುಖಂಡ ಆರ್.ಕೆ.ರಮೇಶ್ ಆರೋಪಿಸಿದರು.

ಗೊಟ್ಟಿಗೆರೆ ವಾರ್ಡ್‌ನ ವೀವರ್ಸ್ ಕಾಲೊನಿಯಲ್ಲಿ ಕೆಪಿಸಿಸಿ ಕಾರ್ಮಿಕ ಘಟಕದ ವತಿಯಿಂದ ಬಡ ಕುಟುಂಬಗಳಿಗೆ ಉಚಿತ ದಿನಸಿ ಕಿಟ್ ವಿತರಿಸಿ ಅವರು ಮಾತನಾಡಿದರು.

'ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಸಂಸದ ಡಿ.ಕೆ.ಸುರೇಶ್ ಅವರ ಮಾರ್ಗದರ್ಶನದಲ್ಲಿ ಈಗಾಗಲೇ 30 ಸಾವಿರ ಕುಟುಂಬಗಳಿಗೆ ದಿನಸಿ ಕಿಟ್‌ಗಳನ್ನು ಕ್ಷೇತ್ರದಲ್ಲಿ ವಿತರಿಸಲಾಗಿದೆ. ಕಾಂಗ್ರೆಸ್ ಸಹಾಯಹಸ್ತದ ಮೂಲಕ ಹಲವು ಕುಟುಂಬಗಳಿಗೆ ತಲಾ ₹10 ಸಾವಿರ ಧನಸಹಾಯ ನೀಡಲಾಗಿದೆ' ಎಂದರು.

ಗೊಟ್ಟಿಗೆರೆ ವಾರ್ಡ್‌ನ ಅಧ್ಯಕ್ಷ ಶ್ರೀಧರ್ ಲಕ್ಷ್ಮಣ್, 'ಹಸಿವು ಮುಕ್ತ ಕಾರ್ಯಕ್ರಮದಡಿ ಕಾಂಗ್ರೆಸ್ ಸರ್ಕಾರ ಬಡವರಿಗಾಗಿ ಇಂದಿರಾ ಕ್ಯಾಂಟೀನ್ ತೆರೆದಿತ್ತು. ಅದನ್ನು ಹಂತ ಹಂತವಾಗಿ ಮುಚ್ಚುವ ಹುನ್ನಾರ ನಡೆದಿದೆ' ಎಂದು ದೂರಿದರು.

'ಗೌಡರ ನಿವಾಸಕ್ಕೆ ಸಿ.ಎಂ ಭೇಟಿ ಹಿಂದೆ ರಾಜಕೀಯ'

ಪ್ರಜಾವಾಣಿ ವಾರ್ತೆ

ಹಾಸನ: 'ರಾಜಕೀಯ ಉದ್ದೇಶಕ್ಕಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರನ್ನು ಭೇಟಿ ಮಾಡಿದ್ದಾರೆ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ ಹೇಳಿದರು.

ನಗರದಲ್ಲಿ ಬುಧವಾರ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ದೇವೇಗೌಡರ ನಿವಾಸಕ್ಕೆ ಭೇಟಿ ನೀಡಿರುವುದರಲ್ಲಿ ರಾಜಕೀಯ ಅಡಗಿದ್ದು, ಮುಂದಿನ ರಾಜಕೀಯ ಬೆಳವಣಿಗೆಗೆ ಸಹಕರಿಸಲು ಮನವಿ ಮಾಡಲು ಭೇಟಿ ಮಾಡಿದ್ದರು' ಎಂದರು.

'ಕೇವಲ ಸೌಜನ್ಯದ ಭೇಟಿ ಎಂದು ಹೇಳಿ ಬೊಮ್ಮಾಯಿ ಸಮರ್ಥಿಸಿಕೊಂಡಿರುವುದು ಸರಿಯಲ್ಲ. ಸೌಜನ್ಯದ ಭೇಟಿಯಾಗಿದ್ದರೆ ಒಳ್ಳೆಯದು. ದೇವೇಗೌಡರ ಸಲಹೆಯಂತೆ ಉತ್ತಮ ಆಡಳಿತ ನೀಡಲಿ' ಎಂದು ಹೇಳಿದರು.

'ಬಿಎಸ್‌ಪಿ ಶಾಸಕ ಎನ್. ಮಹೇಶ್ ಅವರು ಬಿಜೆಪಿ ಸೇರುವುದಾಗಿ ಹೇಳಿದ್ದಾರೆ. ಬಿಎಸ್ಪಿಯಿಂದ ಗೆದ್ದು ಈಗ ಅಧಿಕಾರಕ್ಕೆ ಏಕಾಏಕಿ ಬಿಜೆಪಿ ಸೇರುವುದು ಸರಿಯಲ್ಲ. ರಾಜೀನಾಮೆ ನೀಡಿ ನಂತರ ಸ್ಪರ್ಧಿಸಿ ಗೆಲ್ಲುವ ಮೂಲಕ ಸೇರುವುದು ಸೂಕ್ತ. ಇಷ್ಟು ವರ್ಷದ ಬಳಿಕ ಬಿಎಸ್‌ಪಿ ಬಿಟ್ಟು ಈಗ ಬಿಜೆಪಿ ಸೇರುವುದು ಎಷ್ಟು ಸಮಂಜಸ' ಎಂದು ಪ್ರಶ್ನಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

House

J P Nagar

PRIME PROPERTY G+2 Floor Duplex House total area 1350Sqft Site area 500sqft opposite park posh location BDA property JP Nagar 1st Phase. 20x50 BDA site west facing with duplex house Contact- 9845033641

PUBLIC NOTICE

ಸಾರ್ವಜನಿಕ ಪ್ರಕಟಣೆ

ನಾನು, ಅನಿಲ್ ಕುಮಾರ್ ಬಿನ್ ಮಹೇಂದ್ರ ಸಿಂಗ್ ನಿವಾಸ ನಂ. 962, 3ನೇ ಅಡ್ಡರಸ್ತೆ, 1ನೇ ಬ್ಲಾಕ್, ಹೆಚ್.ಆರ್.ಬಿ.ಆರ್ ಲೇಔಟ್, ಕಲ್ಯಾಣನಗರ್, ಬೆಂಗಳೂರು ಈ ಮೂಲಕ ಸಾರ್ವಜನಿಕರಲ್ಲಿ ಪ್ರಕಟಿಸುವುದೇನೆಂದರೆ, ಸದರಿ ಶೆಡ್ಯೂಲ್ A ನಲ್ಲಿ ವಿವರಿಸಿರುವ ಸ್ವತ್ತು ನನ್ನ ಮಾಲೀಕತ್ವದಲ್ಲಿರುತ್ತದೆ. ಅದನ್ನು ಆಂಬಿಯೆಂಟ್ ಕಂಟ್ರೋಲ್ಸ್ ಪ್ರೈವೇಟ್ ಲಿಮಿಟೆಡ್, ಬೆಂಗಳೂರು ಇವರು ಈ ಕೆಳಗಿನ ಬ್ಯಾಂಕಿನಿಂದ ಪಡೆದಿರುವ ವಿವಿಧ ಸಾಲ ಸೌಲಭ್ಯಗಳಿಗಾಗಿ ಭಾರತೀಯ ಸ್ಟೇಟ್ ಬ್ಯಾಂಕ್ ಶೃಂಗಾರ್ ಕಾಂಪ್ಲೆಕ್ಸ್ ಎಂ.ಜಿ. ರಸ್ತೆ, ಶಾಖೆ, ಬೆಂಗಳೂರು–560 001 ಇವರಿಗೆ ದಿನಾಂಕ 13–12–2017 ರಂದು ಅಡಮಾನ ಮಾಡಿರುತ್ತೇನೆ. ಅಲ್ಲದೆ ಹೆಚ್ಚಿನ ಸಾಲ ಸೌಲಭ್ಯಗಳಿಗಾಗಿ ದಿನಾಂಕ 01–06–2020 ರಂದು ಅಡಮಾನವನ್ನು ವಿಸ್ತರಿಸಿರುತ್ತೇನೆ. ಈ ಸ್ವತ್ತಿಗೆ ಸಂಬಂಧಪಟ್ಟ ಎಲ್ಲ ಮಾಲೀಕತ್ವ ದಾಖಲೆಗಳನ್ನು ಈ ಮೇಲಿನ ಬ್ಯಾಂಕಿನಲ್ಲಿ ದಿನಾಂಕ 13–12–2017ರಂದು ಜಮೆ ಮಾಡಿರುತ್ತೇನೆ. (ಕೆಲವು ದಾಖಲೆಗಳು ಲ್ಯಾಮಿನೇಟ್ ಆಗಿರುತ್ತದೆ) ಹಾಗೂ ಜಮೆ ಮಾಡಿರುವ ಮೆಮೊರಾಂಡಮ್ ಅನ್ನು ಸಬ್ ರಿಜಿಸ್ಟ್ರಾರ್, ಬಾಣಸವಾಡಿ, ಬೆಂಗಳೂರು ಇವರಲ್ಲಿ ದಿನಾಂಕ 13–12–2017 ನೋಂದಣಿ ಮಾಡಲಾಗಿರುತ್ತದೆ. ಈ ಸ್ವತ್ತನ್ನು ಭಾರತೀಯ ಸ್ಟೇಟ್ ಬ್ಯಾಂಕ್ ಇವರಿಗೆ ಮಾತ್ರ ಅಡಮಾನ ಮಾಡಲಾಗಿರುತ್ತದೆ. ಅಲ್ಲದೆ ಬೇರಾವುದೇ ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗೆ ಈ ಸ್ವತ್ತಿನ ಮೇಲೆ ಯಾವುದೇ ಋಣಭಾರ ಇರುವುದಿಲ್ಲ.
ಯಾವುದೇ ವ್ಯಕ್ತಿ / ಸಂಸ್ಥೆಗೆ ಈ ಸ್ವತ್ತಿನ ಮಾಲೀಕತ್ವ ಅಡಮಾನ ಅಥವಾ ಯಾವುದೇ ವಿಚಾರದಲ್ಲಿ ಆಕ್ಷೇಪಣೆ ಇದ್ದಲ್ಲಿದನ್ನು ಈ ಪ್ರಕಟಣೆಯ 15 ದಿನಗಳ ಒಳಗಾಗಿ ಮುಖ್ಯ ವ್ಯವಸ್ಥಾಪಕರು ಅ ಭಾರತೀಯ ಸ್ಟೇಟ್ ಬ್ಯಾಂಕ್ ಶೃಂಗಾರ್ ಕಾಂಪ್ಲೆಕ್ಸ್ ಎಂ.ಜಿ. ರಸ್ತೆ, ಶಾಖೆ, ಅಲ್ಲಾಸ್ ಸೆಂಟರ್, ಎಂ.ಜಿ.ರಸ್ತೆ, ಬೆಂಗಳೂರು , ಇವರ ಗಮನಕ್ಕೆ ತರತಕ್ಕದ್ದು.

ಷೆಡ್ಯೂಲ್ ಸ್ವತ್ತಿನ A ವಿವರ

ಸರ್ವೆನಂ. 112, ದೊಡ್ಡಮಳ್ಳಿ, ತೇಕಲ್ ಹೋಬಳಿ, ಮಾಲೂರು ತಾಲ್ಲೂಕು, ಕೋಲಾರ ಜಿಲ್ಲೆ ಇಲ್ಲಿ ಇರುವ ಸಂಪೂರ್ಣ ಸ್ಥಿರಾಸ್ತಿ (ಫ್ಯಾಕ್ಟರಿ ಬಿಲ್ಡಿಂಗ್ ಸಹಿತ) ವಿಸ್ತಾರ: 4 ಎಕರೆ 25 ಗುಂಟೆ (10 ಗುಂಟೆ ಕರಾಬ್ ಹೊರತಾಗಿ) ಚಕ್ಕುಬಂದಿ:
ಪೂರ್ವ: ಚೌಡಪ್ಪನವರ ಸ್ವತ್ತು ಪಶ್ಚಿಮ : ಚೌಡಪ್ಪನವರ ಸ್ವತ್ತು
ಉತ್ತರ: ವೆಂಕಟೇಶಪ್ಪನವರ ಸ್ವತ್ತು
ದಕ್ಷಿಣ: ಸರ್ಕಾರೀ ಕೆರೆಯ ಏರಿ ರಸ್ತೆ

PUBLIC NOTICE
To Place your Classified Ads Contact:
9880856233

ಫಾರಂ ಯುಆರ್‌ಸಿ-2

ಕಾಯ್ದೆಯ ಅಧ್ಯಾಯ 21ರ ಭಾಗ 1ರ ಅಡಿಯಲ್ಲಿ ನೊಂದಣಿ ಕುರಿತಾದ ಜಾಹೀರಾತು ನೀಡುವ ಪ್ರಕಟಣೆ [ಕಂಪನಿಗಳ ಕಾಯ್ದೆ, 2013 ರ ಸೆಕ್ಷನ್ 374 (ಬಿ) ಮತ್ತು ಕಂಪನಿಗಳ (ನೊಂದಣಿಗೆ ಅಧಿಕೃತಗೊಂಡ) ನಿಯಮಗಳು, 2014ರ ನಿಯಮ 4(1)ಕ್ಕೆ ಅನುಗುಣವಾಗಿ]

1. ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 366ರ ಸಬ್–ಸೆಕ್ಷನ್ (2)ಕ್ಕೆ ಅನುಗುಣವಾಗಿ ಹದಿನೈದು ದಿನಗಳ ನಂತರ, ಅರ್ಜಿ ಒಂದನ್ನು ಸಲ್ಲಿಸಲು ಉದ್ದೇಶಿಸಲಾಗಿದೆ, ಆದರೆ ಮೂವತ್ತು ದಿನಗಳ ಅವಧಿಯ ಒಳಗೆ ರಿಜಿಸ್ಟ್ರಾರ್, ಸೆಂಟ್ರಲ್ ರಿಜಿಸ್ಟ್ರೇಶನ್ ಸೆಂಟರ್ (ಸಿಆರ್‌ಸಿ), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಪೊರೇಟ್ ಅಫೇರ್ (ಐಐಸಿಎ), ಪ್ಲಾಟ್ ನಂ. 6, 7, 8, ಸೆಕ್ಟರ್ 5, ಐಎಂಟಿ ಮಾನೇಸರ್, ಗುರಗಾಂವ್ ಜಿಲ್ಲೆ (ಹರ್‍ಯಾಣ) ಪಿನ್–122050 ಇವರಿಗೆ ಪರಮನೆಟ್‌ವರ್ಕ್ ಇಂಡಿಯಾ ಎಲ್‌ಎಲ್ ಪಿ ಎಂಬ ಎಲ್‌ಎಲ್‌ಪಿ ಕಂಪನಿಗಳ ಕಾಯ್ದೆ 2013ರ ಅಧ್ಯಾಯ 21, ಭಾಗ 1ರ ಅಡಿಯಲ್ಲಿ ಕಂಪನಿ ಲಿಮಿಟೆಡ್‌ನ ಷೇರುಗಳ ವ್ಯವಹಾರಿಕ ಸಂಸ್ಥೆಯಾಗಿ ನೊಂದಾಯಿಸಲು ಅರ್ಜಿ ಸಲ್ಲಿಸಲು ಉದ್ದೇಶಿಸಿರುತ್ತದೆ.
2. ಕಂಪನಿಯ ಮೂಲ ಉದ್ದೇಶಗಳು ಹೀಗಿವೆ: ಮಾಹಿತಿ ತಂತ್ರಜ್ಞಾನ ಬಳಸಿಕೊಂಡು ಕಾರ್ಪೊರೇಟ್‌ಗಳು ತಮ್ಮ ವ್ಯವಹಾರಗಳನ್ನು ಸುಧಾರಿಸಿಕೊಳ್ಳಲು ಸಂಶೋಧನೆ, ಸಮಾಲೋಚನೆ, ಅಭಿವೃದ್ಧಿ ಹಾಗೂ ಕಸ್ಟಮೈಸ್ ಸೊಲ್ಯೂಷನ್ ಕೈಗೊಳ್ಳುವುದು.
3. ಪ್ರಸ್ತಾವಿತ ಕಂಪನಿಯ ಡ್ರಾಫ್ಟ್ ಮೆಮೊರ್ಯಾಂಡಮ್ ಹಾಗೂ ಆರ್ಟಿಕಲ್ ಆಫ್ ಅಸೋಸಿಯೇಶನ್‌ಗಳನ್ನು, ನಂ. 303, ಶ್ರೀ ಶ್ರೀ ಫ್ಯಾರಾಡೈಸ್, 3ನೇ ಮೈನ್, ನ್ಯೂ ತಿಪ್ಪಸಂದ್ರ, ಬೆಂಗಳೂರು – 560 075 ಕರ್ನಾಟಕ ಭಾರತ ವಿಳಾಸದಲ್ಲಿ ಪರಿಶೀಲಿಸಬಹುದಾಗಿದೆ.
4. ಸದರಿ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಸದರಿ ಅರ್ಜಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಆಕ್ಷೇಪಣೆಗಳಿದ್ದಲ್ಲಿ, ಅಂತಹವರು ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ರಿಜಿಸ್ಟ್ರಾರ್, ಸೆಂಟ್ರಲ್ ರಿಜಿಸ್ಟ್ರೇಶನ್ ಸೆಂಟರ್ (ಸಿಆರ್‌ಸಿ), ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕಾರ್ಪೊರೇಟ್ ಅಫೇರ್ಸ್ (ಐಐಸಿಎ), ಪ್ಲಾಟ್ ನಂ. 6, 7, 8, ಸೆಕ್ಟರ್ 5, ಐಎಂಟಿ ಮಾನೇಸರ್, ಗುರಗಾಂವ್ ಜಿಲ್ಲೆ (ಹರ್‍ಯಾಣ) ಪಿನ್–122050 ಇವರಿಗೆ ಸದರಿ ಪ್ರಕಟಣೆಯು ಪ್ರಕಟಗೊಂಡ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗೆ ಸಲ್ಲಿಸುವುದು ಹಾಗೂ ಒಂದು ಪ್ರತಿಯನ್ನು ಕಂಪನಿಯ ನೊಂದಾಯಿತ ಕಚೇರಿಗೂ ಸಲ್ಲಿಸುವುದು.

ದಿನಾಂಕ : 05.08.2021

ಅರ್ಜಿದಾರರ ಹೆಸರು
1. ಸೇತುರಾಮನ್ ವೈದೀಶ್ವರನ್
2. ಶ್ರೀಲಕ್ಷ್ಮಿ ವೈದೀಶ್ವರನ್

BUSINESS

Business to Business

Finance

NRI'S INVESTMENT And Finance AvailableOn LowInterest AgainstProperties, Land & Building,Sites,Flats, Converted& AgricultureLandsCall: 7411265189

Business

WANTED BUSINESS Partner, Lahab Veg Hotel, Investment Rs 5 Lakhs, Income 50:50. Contact: 8892501007/ 9606701007

Business Offers

Franchise

Shrinath Group of Companies SINCE 1978
TRANSPORT FRANCHISEE OPPORTUNITIES
For All Area of Bangalore city, Surrounding and Karnataka State On Revenue Sharing Basis
Must have Exp. in the Field of Courier/Cargo & Transport, Own/Rented Office with Computer System & Staff
Call Between : 11am to 5pm (Ex. Sunday)
MR. JAYESH - 9925465003
MR.KIRTAN - 9227591708
Email: helpdesk@shrinath.biz marketing@shrinath.biz

General

WANTED INVESTORS Min 5 Lakhs Immediately In Education Start-Up Company Good ROI. Call/ Whatsapp: 8217324605

JOB OPPORTUNITIES

Teachers/ Professors

WANTED TRAINED LADY TEACHERS to teach ALL SUBJECTS in English Medium Primary School. Walk-in Interview on 6.8.2021 between 11.30AM and 1.30PM at 'PRATHIBHA SHIKSHANA SAMITHI', #9, 18th Main, BSK II Stage, Bangalore-70. Phone: 080-26710170/ 77833-77387

Atma College
Affiliated to Bangalore University & Approved by Govt. of Karnataka
Creating Global Entrepreneurs Leaders with Strong Values
Professor(1) Asso. Professor(1) Physical Instructor (1)
Need BCOM, MBA faculty Urgently, Qualifications, Pay scales & Other details as per 7th Pay / AICTE & BU & UGC/MHRD norms. Walk-in Interview on 9th August 2021 from 10am till 3PM. Two positions are reserved for SC/ST/OBC Faculty. PhD is mandatory for Prof. & Ass.Prof. Whatsapp +91 9036338485 your profile for scheduling Interview time.
+91 7795852804 | enquiry@atma.edu.in | www.atma.edu.in

Part-Time Jobs

PANDEMIC SITUATION Lost Job. MNC Provide Work From Home 30 to 35K Call: 7019215243/ 9886641282

Multiple Vacancy

REQUIRED IMMEDIATELY HR, Administration, Manager, Accounts, Supervisor, technical Mechanical, Electronics, Electrical, Computer Engineers-7676760299/ 7676760399

EDUCATIONAL

Training

FELLOWSHIP IN Aesthetic Dermatology RGUHS LAST-DATE to apply 10.08.2021, Email:training.venkatcharmalaya@gmail.com, Ph-080 23392416

PERSONAL

Change of Name

I, NOOR ARSHIYA KOUSER, resident at. No.32/5/1,Basavalingappana gar, Sampigehalli, Jakkur Post, Bangalore-560064 have changedmy daughter name from (Old Name) SAFAA RAFEEQ, to (New Name) SAFAA AIMAN, videaffidavit dated 03-08-2021 before Notary LEELA, Bangalore.

I, GEETHA BADKAMBI R/a Flat #202, Indraprastha Ruhe Apartments, Whitefield main Road, Near Hopefarm Signal, Whitefield, Bangalore-66, Have Changed my name to GEETAA BHADKAMBII vide Affidavit Dated 02/08/2021 Before Notary Aravind Patil G.G, Bangalore.

6395338X HAV Devaraja AS, ASC Centre & College, my mother's name Service Record NEELAMMA, instead of NILAMMA, Notary KV Mani, Bangalore

I, NIDHI Prakash Poduval aged about 18 years, D/o K. Prakash, Residing at Flat #1-C, Lumbini Apartments, Rest House Road, Shanthala Nagar, Bengaluru 560001, have changed my name to NIDHI PRAKASH vide affidavit dated 04.08.2021 before notary S. Samuel Solomon, Bangalore.


KIRAN SINGH, Wife/o, 6495221N, NK/ASH, JAY SINGH RANA, Vill-BABHANGAVA, DUMARI BUJURG, SONPUR, SARAN, BIHAR, have changed my name from KIRAN SINGH to KIRAN DEVI, 03/08/2021, Notary K.V. Mani, Bangalore

PANKAJ KUMAR, Brother/o, 6506118L, SEP, SHEETAL KUMAR, Vill-Ranitarai, Patan, Durg, Chhattisgarh, have changed my name from PANKAJ KUMAR to PANKAJ KUMAR YADAV, 04/08/2021, Notary K.V. Mani, Bangalore

ROMA KUMARI, Wife/o, 6495219W, HAV, AMARJEET KUMAR RAY, Vill- FATEPUR KAMALI, MAHNAR, VAISHALI, BIHAR, have changed my name from ROMA KUMARI to ROMA DEVI, 03/08/2021, Notary K.V. Mani, Bangalore

Lost

LOST
I, K. Bhagyalakshmamma W/o. Honnaiah have lost Original BDA Katha letter No. BDA/DS-2 / 1716/ 4th Block/ FE of BSK 6th st/ 04-05 issued on 21/03/2005. While shifting our House.
If anybody found Call nearest police station or 9591860508



ರಾಜಭವನ ಸುತ್ತ ಸಂಭ್ರಮದ ಅಲೆಯ ಜತೆಗೆ ಆಕಾಂಕ್ಷಿಗಳ, ಹಿತೈಷಿಗಳ ಪ್ರತಿಭಟನೆ

ಬೆಂಬಲಿಗರ ಅಸಮಾಧಾನ, ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಭವನದ ಒಳಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸಚಿವ ಸಂಪುಟ ಸೇರುವ ಸಚಿವರು ಒಬ್ಬೊಬ್ಬರಾಗಿ ಪ್ರಮಾಣ ವಚನ ಸ್ವೀಕರಿಸುತ್ತಿದ್ದಂತೆ ಹೊರಗೆ ಅವರ ಬೆಂಬಲಿಗರ ಸಂಭ್ರಮ ಮುಗಿಲು ಮುಟ್ಟಿತ್ತು. ಮತ್ತೊಂದೆಡೆ, ಸಚಿವ ಸ್ಥಾನ ಕೈತಪ್ಪಿದ ಶಾಸಕರ ಅಭಿಮಾನಿಗಳು, ಹಿತೈಷಿಗಳ ಆಕ್ರೋಶದ ಕಟ್ಟೆಯೂ ಒಡೆದಿತ್ತು.

ಈ ವಾತಾವರಣವನ್ನು ಮೊದಲೇ ಅರಿತಿದ್ದ ಪೊಲೀಸರು, ರಾಜಭವನದ ಪ್ರವೇಶದ್ವಾರದ ಬಳಿ ಭಾರಿ ಬಂದೋಬಸ್ತ್ ಏರ್ಪಡಿಸಿದ್ದರು. ಪಾಸ್ ಇದ್ದವರಿಗೆ ಮಾತ್ರ ಒಳಗೆ ಪ್ರವೇಶಿಸಲು ಅವಕಾಶ ನೀಡಲಾಗಿತ್ತು.

ಯಾವುದೇ ಪರಿಸ್ಥಿತಿ ನಿಭಾಯಿಸಲು ಸಿದ್ಧರಾಗಿ ಹಿರಿಯ ಪೊಲೀಸ್ ಅಧಿಕಾರಿಗಳೂ ಹೆಚ್ಚಿನ ಸಂಖ್ಯೆಯಲ್ಲಿ ಹಾಜರಿದ್ದರು. ಪೊಲೀಸ್ ಕಮಿಷನರ್ ಕಮಲ್ ಪಂತ್ ಕೂಡಾ ಸ್ಥಳಕ್ಕೆ ಭೇಟಿ ನೀಡಿದರು.

ರಾಜಭವನದ ಗಾಜಿನ ಮನೆಯಲ್ಲಿ ಬುಧವಾರ ಮಧ್ಯಾಹ್ನ 2.15ಕ್ಕೆ ನೂತನ ಸಚಿವರ ಪ್ರತಿಜ್ಞಾ ವಿಧಿ ನಿಗದಿಯಾಗಿತ್ತು. ಅದಾಗಲೇ ಸಂಪುಟ ಸೇರುವ ಭಾಗ್ಯ ಗಿಟ್ಟಿಸಿಕೊಂಡವರ ಪಟ್ಟಿ ಬಹಿರಂಗಗೊಂಡಿದ್ದರಿಂದ, ಮಧ್ಯಾಹ್ನ 12 ಗಂಟೆಯಿಂದಲೇ ರಾಜಭವನದ ಸುತ್ತ ಅವರೆಲ್ಲರ ಬೆಂಬಲಿಗರು ಜಮಾಯಿಸಿದ್ದರು.

ಶಾಸಕರ ಜೊತೆ ಅವರ ಕುಟುಂಬ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದುದರಿಂದ ರಾಜಭವನದ ಪ್ರವೇಶದ್ವಾರದ ಬಳಿ ದಟ್ಟಣೆ ಉಂಟಾಯಿತು.

ಅದೇ ವೇಳೆ, ತಮ್ಮ ನಾಯಕನಿಗೆ ಸಚಿವ ಸ್ಥಾನ ಖಚಿತವೆಂದು ನಂಬಿದ್ದ ಕೆಲವು ಶಾಸಕರ ಬೆಂಬಲಿಗರು, ಶುಭ ಕೋರುವ ಬ್ಯಾನರ್‌ಗಳ ಸಹಿತ ಅಲ್ಲಿಗೆ ಬಂದಿದ್ದರು. ಸಂಪುಟ ಸೇರುವವರ ಪಟ್ಟಿ ಅಧಿಕೃತವಾಗಿ ಬಿಡುಗಡೆ ಆಗುತ್ತಿದ್ದಂತೆ, ಸಚಿವ ಸ್ಥಾನ ವಂಚಿತರ ಬೆಂಬಲಿಗರು ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಶಾಸಕರಾದ ರಾಜೂಗೌಡ, ರೇಣುಕಾಚಾರ್ಯ, ಅರವಿಂದ ಬೆಲ್ಲದ ಅವರ ಬೆಂಬಲಿಗರು, ತಮ್ಮ ನಾಯಕರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ಘೋಷಣೆ ಕೂಗಿದರು.

'ಝೀರೋ ಟ್ರಾಫಿಕ್'ನಲ್ಲಿ ದೌಡಾಯಿಸಿದ ಜೊಲ್ಲೆ!: ದೆಹಲಿಯಿಂದ ವಿಮಾನದಲ್ಲಿ ಬರುವುದು ವಿಳಂಬವಾಗಿದ್ದರಿಂದ ಶಶಿಕಲಾ ಜೊಲ್ಲೆ ಅವರು ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ರಾಜಭವನದವರೆಗೂ 'ಝೀರೋ ಟ್ರಾಫಿಕ್' (ತಡೆರಹಿತ ಸಂಚಾರ) ಸೌಲಭ್ಯದಲ್ಲಿ ದೌಡಾಯಿಸಿ ಬಂದು ಸಚಿವೆಯಾಗಿ ಪ್ರಮಾಣವಚನ ಸ್ವೀಕರಿಸಿದರು.

ಬುಧವಾರ ಮಧ್ಯಾಹ್ನ 2.15ರಿಂದ ನೂತನ ಸಚಿವರ ಪ್ರಮಾಣವಚನ ಸ್ವೀಕಾರ ನಿಗದಿಯಾಗಿದ್ದು. ದೆಹಲಿಯಲ್ಲಿದ್ದ ಶಶಿಕಲಾ ಜೊಲ್ಲೆ, ಸಂಪುಟದಲ್ಲಿ ಸ್ಥಾನ ಖಾತರಿಯಾದ ಬಳಿಕ ವಿಮಾನದಲ್ಲಿ ಬೆಂಗಳೂರಿನತ್ತ ಹೊರಟಿದ್ದರು. ಮಧ್ಯಾಹ್ನ 1.30ಕ್ಕೆ ಬೆಂಗಳೂರು ತಲುಪಬೇಕಿದ್ದ ವಿಮಾನ ಅರ್ಧ ಗಂಟೆಗೂ ಹೆಚ್ಚು ತಡವಾಗಿ ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಬಂದಿಳಿಯಿತು.

ತಾವು ಬರುವುದು ವಿಳಂಬವಾಗುತ್ತಿರುವ ಕುರಿತು ಶಶಿಕಲಾ ಜೊಲ್ಲೆ ಅವರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸುದ್ದಿ ಮುಟ್ಟಿಸಿದ್ದರು. ತಕ್ಷಣವೇ ಪೊಲೀಸ್ ಅಧಿಕಾರಿಗಳಿಗೆ ಸೂಚನೆ ನೀಡಿದ್ದ ಮುಖ್ಯಮಂತ್ರಿ, ಜೊಲ್ಲೆ ಅವರ ಸಂಚಾರಕ್ಕೆ 'ಝೀರೋ ಟ್ರಾಫಿಕ್' ವ್ಯವಸ್ಥೆ ಮಾಡುವಂತೆ ತಿಳಿಸಿದ್ದರು.

ದೆಹಲಿಯಿಂದ ಹೊರಟ ವಿಮಾನ ಬಂದಿಳಿಯುವಷ್ಟರಲ್ಲಿ ಪೊಲೀಸರು ಬೆಂಗಾವಲು ವಾಹನಗಳೊಂದಿಗೆ ಸಿದ್ಧವಾಗಿದ್ದರು.

ಕೆಂಪೇಗೌಡ ವಿಮಾನ ನಿಲ್ದಾಣ ತಲುಪಿದ ಶಶಿಕಲಾ ಅವರನ್ನು ತಡೆರಹಿತ ಸಂಚಾರ ವ್ಯವಸ್ಥೆಯಡಿ ಕೆಲವೇ ನಿಮಿಷಗಳಲ್ಲಿ ರಾಜಭವನಕ್ಕೆ ಕರೆತರಲಾಯಿತು.

ವಾಹನ ಇಳಿದು ಓಡೋಡಿ ರಾಜಭವನದ ಗಾಜಿನಮನೆಗೆ ಹೋದ ಶಾಸಕಿ, ಸಚಿವೆಯಾಗಿ ಪ್ರಮಾಣವಚನ ಸ್ವೀಕರಿಸಿದರು.



ಶಾಸಕ ನೆಹರು ಓಲೇಕಾರ ಅವರಿಗೆ ಸಚಿವ ಸ್ಥಾನ ಕೈತಪ್ಪಿದ ಹಿನ್ನೆಲೆಯಲ್ಲಿ, ಹಾವೇರಿ ನಗರದ ಹೊಸಮನಿ ಸಿದ್ದಪ್ಪ ವೃತ್ತದಲ್ಲಿ ಬುಧವಾರ ಬಿಜೆಪಿ ಕಾರ್ಯಕರ್ತರು ಉರುಳು ಸೇವೆ ಮಾಡಿ ಆಕ್ರೋಶ ಹೊರಹಾಕಿದರು —ಪ್ರಜಾವಾಣಿ ಚಿತ್ರ

'ಪಕ್ಷದ ನಿರ್ಧಾರದಿಂದ ಆಘಾತ'

'ಗೊಲ್ಲ ಸಮುದಾಯದ ಏಕೈಕೆ ಪ್ರತಿನಿಧಿಯಾದ ನಾನು ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿರಲಿಲ್ಲ, ಭ್ರಷ್ಟಾಚಾರದ ಆರೋಪ ಸುತ್ತಿಕೊಂಡಿರಲಿಲ್ಲ. ಆದರೆ, ಪಕ್ಷದ ಇಂದಿನ ನಿರ್ಧಾರ ಘಾಸಿ ಉಂಟು ಮಾಡಿದೆ' ಎಂದು ಶಾಸಕಿ ಕೆ. ಪೂರ್ಣಿಮಾ ಶ್ರೀನಿವಾಸ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಹಗರಣದಲ್ಲಿ ಸಿಲುಕಿರುವ ಮಾಜಿ ಸಚಿವರಿಗೆ ಮತ್ತೆ ಸಚಿವ ಸ್ಥಾನ ನೀಡಲಾಗಿದೆ. ಒಂದೇ ಮನೆಯಲ್ಲಿ ಎರಡು, ಮೂರು ಅಧಿಕಾರ ನೀಡಲಾಗಿದೆ. ಯಾವುದೇ ಆರೋಪ ಇಲ್ಲದ ಮತ್ತೊಬ್ಬ ಮಹಿಳೆಗೆ ಸಚಿವ ಸ್ಥಾನ ನೀಡಿದ್ದರೆ ಬೇಸರವಾಗುತ್ತಿರಲಿಲ್ಲ' ಎಂದು ಸಾಮಾಜಿಕ ಜಾಲತಾಣದಲ್ಲಿ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

'ಶಿರಾ ಉಪಚುನಾವಣೆ ಮತ್ತು ತುಮಕೂರು ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಗೆಲುವಿಗಾಗಿ ಗೊಲ್ಲ ಸಮುದಾಯದ ಮತಗಳು ಸಂಪೂರ್ಣವಾಗಿ ಪಕ್ಷದ ಅಭ್ಯರ್ಥಿಗಳಿಗೆ ಬೀಳುವಂತೆ ಶ್ರಮಿಸಿದ್ದೆ. ಆದರೆ ಪಕ್ಷ ಎಲ್ಲವನ್ನು ಮರೆತು ಜಾಣ ಕುರುಡನಂತೆ ವರ್ತಿಸುತ್ತಿರುವುದು ನೋವುಂಟು ಮಾಡಿದೆ' ಎಂದಿದ್ದಾರೆ.



ಪೂರ್ಣಿಮಾ ಶ್ರೀನಿವಾಸ್

'ನಮ್ಮ ನಸೀಬು ಚೆನ್ನಾಗಿಲ್ಲ'



ನಮ್ಮಂತವರು ಲೆಕ್ಕಕ್ಕೇ ಇಲ್ಲ. ನಮಗಿಂತ ಕಿರಿಯರಿಗೆ, ನಾನೇ ಪಕ್ಷಕ್ಕೆ ಕರೆತಂದವರಿಗೆ ಮಂತ್ರಿ ಸ್ಥಾನ ನೀಡಲಾಗಿದೆ. ನಮ್ಮಲ್ಲಿ ಕೊರತೆ ಏನಿದೆ ಎಂಬುದನ್ನು ಹೈಕಮಾಂಡ್ ಬಳಿಯೇ ಕೇಳಬೇಕು. ಮೌನವಾಗಿ, ಪಕ್ಷಕ್ಕೆ ನಿಷ್ಠರಾಗಿ ಇದ್ದವರಿಗೆ ಅವಕಾಶ ಸಿಗಲ್ಲ. ಪಕ್ಷಕ್ಕೆ ದ್ರೋಹ ಮಾಡುವವರಿಗೆ, ಬೆನ್ನಿಗೆ ಚೂರಿ ಹಾಕುವವರಿಗೇ ಅವಕಾಶ ನೀಡಲಾಗುತ್ತಿದೆ. ನಮ್ಮ ನಸೀಬು ಚೆನ್ನಾಗಿಲ್ಲ, ದೇವರೇನು ಮಾಡುತ್ತಾನೆ. ಲಾಬಿ ಮಾಡುವುದಿಲ್ಲ, ಪಕ್ಷದ ವಿರುದ್ಧ ನಡೆದುಕೊಳ್ಳುವುದಿಲ್ಲ. ಪಕ್ಷವೇ ಉಚ್ಚಾಟನೆ ಮಾಡಿದರೂ ಬಿಜೆಪಿಗೇ ಮತ ಹಾಕುತ್ತೇನೆ.

–**ಸಿದ್ದು ಸವದಿ,** ತೇರದಾಳ ಶಾಸಕ

'ಮಂತ್ರಿ ಸ್ಥಾನಕ್ಕೆ ಭಿಕ್ಷೆ ಬೇಡುವುದಿಲ್ಲ'

ಭಿಕ್ಷೆ ಬೇಡಿ ಮಂತ್ರಿ ಸ್ಥಾನ ಪಡೆಯುವಂತ ಪರಿಸ್ಥಿತಿ ನನಗೆ ಬಂದಿಲ್ಲ. ಬಕೆಟ್ ಹಿಡಿದು ಸಚಿವ ಆಗುವ ಅವಶ್ಯಕತೆ ಇಲ್ಲ. ಸಚಿವರ ಪಟ್ಟಿಯಲ್ಲಿ ಹೆಸರು ಪದೇ ಪದೇ ಕೈತಪ್ಪುತ್ತಿದೆ. ಪಕ್ಷ ತಾಯಿ ಇದ್ದಂತೆ, ತಾಯಿಗೆ ದ್ರೋಹ ಮಾಡುವ ಪ್ರಶ್ನೆ ಇಲ್ಲ. ಮಾತನಾಡದೆ ಇರುವುದೇ ನನ್ನ ವೈಫಲ್ಯ ಇರಬಹುದು. ಯಡಿಯೂರಪ್ಪ ಅವರು ನನಗೆ ಸಚಿವ ಸ್ಥಾನ ಸಿಗಲಿಲ್ಲ ಎಂದು ಕಣ್ಣೀರು ಹಾಕಿದರು. ಅವರ ಕಣ್ಣಲ್ಲಿ ನೀರು ತರಿಸಿದ ಕೊರಗು ಸದಾ ನನ್ನನ್ನು ಕಾಡುತ್ತದೆ.



– **ರಾಜುಗೌಡ,** ಸುರಪುರ ಶಾಸಕ

'ಮುಖ್ಯಮಂತ್ರಿ ಮೋಸ ಮಾಡಿದ್ದಾರೆ'



ಪಕ್ಷಕ್ಕಾಗಿ ಹೋರಾಟ ಮಾಡಿಕೊಂಡು ಬಂದಿದ್ದೇನೆ. ಸಚಿವ ಸ್ಥಾನ ಕೊಡುವುದಾಗಿ ಹೇಳಿ ಮುಖ್ಯ ಮಂತ್ರಿ ಮೋಸ ಮಾಡಿದ್ದಾರೆ. ಪಟ್ಟಿ ಸಿದ್ಧಪಡಿಸಿದ ಮುಖ್ಯಮಂತ್ರಿಯೇ ನಮ್ಮ ವಿರುದ್ಧವಾಗಿ ಕೆಲಸ ಮಾಡಿದ್ದಾರೆ. ನಮ್ಮ ವಿನಂತಿ ಕಡೆಗಣಿಸಿದ್ದಾರೆ. ಕಾರ್ಯಕರ್ತರ ಜತೆ ಚರ್ಚಿಸಿ ಮುಂದಿನ ನಿರ್ಣಯ ಕೈಗೊಳ್ಳುತ್ತೇನೆ.

–**ನೆಹರು ಓಲೇಕಾರ್,** ಹಾವೇರಿ ಶಾಸಕ

ಸಚಿವ ಸಂಪುಟದಲ್ಲಿ ಜಾತಿವಾರು ಪ್ರಾತಿನಿಧ್ಯ

ಪ್ರಜಾವಾಣಿ ವಾರ್ತೆ


ಬೆಂಗಳೂರು: ರಾಜ್ಯದ ಸಚಿವ ಸಂಪುಟದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ 30 ಸದಸ್ಯರಿದ್ದಾರೆ. ಈ ಪೈಕಿ ಅರ್ಧಕ್ಕಿಂತಲೂ ಹೆಚ್ಚು ಮಂದಿ ಲಿಂಗಾಯತ ಮತ್ತು ಒಕ್ಕಲಿಗ ಸಮುದಾಯದವರು. ಈ ಎರಡೂ ಸಮುದಾಯಗಳಿಗೆ ಸಂಪುಟದಲ್ಲಿ ಹೆಚ್ಚು ಪ್ರಾತಿನಿಧ್ಯ ದೊರಕಿದೆ.

ಮುಖ್ಯಮಂತ್ರಿಯೂ ಸೇರಿದಂತೆ ಲಿಂಗಾಯತ ಸಮುದಾಯದ ಹತ್ತು ಜನರು ಸಂಪುಟದಲ್ಲಿದ್ದಾರೆ. ಲಿಂಗಾಯತ ಪಂಚಮಸಾಲಿ ಸಮುದಾಯದ ಮೂವರು, ವೀರಶೈವ ಸಾದರ ಲಿಂಗಾಯತ ಸಮುದಾಯದ ಇಬ್ಬರು, ವೀರಶೈವ ಲಿಂಗಾಯತರ ಬಣಜಿಗ ಮತ್ತು ಚತುರ್ಥ ಉಪ ಪಂಗಡಗಳ ತಲಾ ಒಬ್ಬರು, ಗೌಡ ಲಿಂಗಾಯತ, ನೊಳಂಬ, ರಡ್ಡಿ ಲಿಂಗಾಯತ ಉಪ ಪಂಗಡಗಳ ತಲಾ ಒಬ್ಬರು ಸಂಪುಟದಲ್ಲಿದ್ದಾರೆ.

ಒಕ್ಕಲಿಗ ಸಮುದಾಯದ ಏಳು ಮಂದಿಗೆ ಸಚಿವ ಸ್ಥಾನ ನೀಡಲಾಗಿದೆ. ಗಂಗಟಕಾರ ಒಕ್ಕಲಿಗ ಉಪ ಪಂಗಡದ ನಾಲ್ವರು, ಮರಸು ಒಕ್ಕಲಿಗ, ರೆಡ್ಡಿ ಒಕ್ಕಲಿಗ ಮತ್ತು ನಾಮಧಾರಿ ಒಕ್ಕಲಿಗ ಉಪ ಪಂಗಡಗಳ ತಲಾ ಒಬ್ಬರಿಗೆ ಸಚಿವ ಸ್ಥಾನ ನೀಡಲಾಗಿದೆ.

ಪರಿಶಿಷ್ಟ ಜಾತಿಯ ಎಡಗೈ, ಮೊಗೇರ ಮತ್ತು ಲಂಬಾಣಿ ಸಮುದಾಯದ ತಲಾ ಒಬ್ಬರು ಹಾಗೂ ಪರಿಶಿಷ್ಟ ಪಂಗಡಗಳ ಕೋಟಾದಲ್ಲಿ ವಾಲ್ಮೀಕಿ ಸಮುದಾಯದ ಒಬ್ಬರಿಗೆ ಸಂಪುಟದಲ್ಲಿ ಅವಕಾಶ ದೊರಕಿದೆ. ಬ್ರಾಹ್ಮಣ ಸಮುದಾಯದ ಇಬ್ಬರಿಗೆ ಸಚಿವ ಸ್ಥಾನ ನೀಡಲಾಗಿದೆ.

ಹಿಂದುಳಿದ ವರ್ಗಗಳ ಏಳು ಮಂದಿಗೆ ಸಂಪುಟದಲ್ಲಿ ಅವಕಾಶ ದೊರಕಿದೆ. ಕುರುಬ ಸಮುದಾಯದ ಮೂವರು, ಈಡಿಗ (ಬಿಲ್ಲವ) ಸಮುದಾಯದ ಇಬ್ಬರು, ರಜಪೂತ ಮತ್ತು ಕಮ್ಮ (ನಾಯ್ಡು) ಸಮುದಾಯದ ತಲಾ ಒಬ್ಬರಿಗೆ ಸಚಿವ ಸ್ಥಾನ ನೀಡಲಾಗಿದೆ. ಬೊಮ್ಮಾಯಿ ಅವರ ಸಂಪುಟದಲ್ಲಿ ಅಲ್ಪಸಂಖ್ಯಾತ ವರ್ಗಗಳಿಗೆ ಸೇರಿದ ಯಾರೂ ಇಲ್ಲ.



ಸಿಗದ ಸಚಿವಗಿರಿ: ಆಕ್ರೋಶ

ಒಂದನೇ ಪುಟದಿಂದ...

ಸುರಪುರ ಶಾಸಕ ರಾಜು ಗೌಡ, ತೇರದಾಳ ಶಾಸಕ ಸಿದ್ದು ಸವದಿ, ಮೈಸೂರಿನ ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ. ರಾಮದಾಸ್ ಸೇರಿದಂತೆ ಕೆಲವರು ನೇರವಾಗಿಯೇ ಅತೃಪ್ತಿ ಹೊರಹಾಕಿದ್ದಾರೆ. ಹೊನ್ನಾಳಿ ಶಾಸಕ ಎಂ.ಪಿ. ರೇಣುಕಾಚಾರ್ಯ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರನ್ನು ಭೇಟಿಯಾಗಿ ಕಣ್ಣೀರು ಹಾಕಿದ್ದಾರೆ.

ಟ್ವಿಟರ್‌ನಲ್ಲಿ ವ್ಯಂಗ್ಯ

ತಮಗೆ ಸಂಪುಟದಲ್ಲಿ ಅವಕಾಶ ದೊರೆಯದೇ ಇರುವ ಕುರಿತು ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿರುವ ಎಸ್.ಎ. ರಾಮದಾಸ್, 'ಪಕ್ಷ ಕಟ್ಟಿ ಬೆಳೆಸಿ, ಅರ್ಹತೆ ಹೊಂದಿ ಸಚಿವರಾಗಿ ಪ್ರಮಾಣವಚನ ತೆಗೆದುಕೊಳ್ಳುತ್ತಿರುವ ನೂತನ ಸಚಿವರಿಗೆ ಅಭಿನಂದನೆಗಳು' ಎಂದು ವ್ಯಂಗ್ಯವಾಡಿದ್ದಾರೆ.

ಸ್ವಾಮೀಜಿ ಅಸಮಾಧಾನ: ಭೋವಿ ಸಮುದಾಯದ ಯಾರಿಗೂ ಸಂಪುಟದಲ್ಲಿ ಅವಕಾಶ ನೀಡದೇ ಇರುವುದಕ್ಕೆ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. 'ಬಿಜೆಪಿ ಮೇಲ್ವರ್ಗದ ಪಕ್ಷ ಎಂಬ ಹಣೆಪಟ್ಟಿಯನ್ನು ಕಳಚಿಕೊಳ್ಳಬೇಕು' ಎಂದು ಆಗ್ರಹಿಸಿದ್ದಾರೆ.

ತಮ್ಮ ಕ್ಷೇತ್ರದ ಶಾಸಕರು ಸಚಿವರಾಗುತ್ತಾರೆ ಎಂಬ ಆಸೆಯಿಂದ ರಾಜ್ಯದ ವಿವಿಧೆಡೆಯಿಂದ ಜನರು ರಾಜಭವನದತ್ತ ಬಂದಿದ್ದರು. ಆದರೆ, ತಮ್ಮ ನಾಯಕರಿಗೆ ಸಂಪುಟದಲ್ಲಿ ಅವಕಾಶ ದೊರಕಿಲ್ಲ ಎಂಬುದು ತಿಳಿಯುತ್ತಿದ್ದಂತೆಯೇ ಗುಂಪುಗೂಡಿ ಅಸಮಾಧಾನ ಹೊರಹಾಕುವ ಪ್ರಯತ್ನವನ್ನೂ ಕೆಲವರು ಮಾಡಿದರು.

ಕಾಗೇರಿಗೆ ಸಭಾಧ್ಯಕ್ಷ ಸ್ಥಾನ ಸದ್ಯಕ್ಕೆ ಕಾಯಂ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಸಚಿವ ಸ್ಥಾನ ಸಿಗಬಹುದು ಎಂಬ ನಿರೀಕ್ಷೆಯಲ್ಲಿದ್ದ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರಿಗೆ ಕೊನೇ ಕ್ಷಣದಲ್ಲಿ ನಿರಾಶೆ ಉಂಟಾಗಿದೆ.

ತೀರ್ಥಹಳ್ಳಿ ಶಾಸಕ ಆರಗ ಜ್ಞಾನೇಂದ್ರ ಸಭಾಧ್ಯಕ್ಷ ಸ್ಥಾನಕ್ಕೆ ಒಪ್ಪಿಕೊಂಡರೆ, ಆಗ ಕಾಗೇರಿಯವರಿಗೆ ಸಚಿವ ಸ್ಥಾನ ನೀಡಬಹುದು ಎಂಬ ಸೂತ್ರವನ್ನು ಮುಂದಿಡಲಾಯಿತು.

ಈವರೆಗೂ ಸಚಿವರಾಗದ ಜ್ಞಾನೇಂದ್ರ ಅವರು ಈ ಬಾರಿ ಸಚಿವ ಸ್ಥಾನ ಸಿಗದೇ ಇದ್ದರೆ ಮುಂದೆ ಎಂದಿಗೂ ಸಿಗುವುದಿಲ್ಲ ಎಂಬ ಕಾರಣಕ್ಕೆ ಈ ಸೂತ್ರವನ್ನು ಒಪ್ಪಿಕೊಳ್ಳಲಿಲ್ಲ ಎಂದು ಮೂಲಗಳು ಹೇಳಿವೆ.

ಇದರಿಂದಾಗಿ ಇನ್ನುಳಿದ ಅವಧಿಗೆ ಕಾಗೇರಿ ಸಭಾಧ್ಯಕ್ಷರಾಗಿ ಮುಂದುವರಿಯಲಿದ್ದಾರೆ.

ಬ್ರಾಹ್ಮಣ ಕೋಟಾದಲ್ಲಿ ನಾಗೇಶ್ ಅವರು ಸಂಪುಟ ಸೇರಲು, ಮೈಸೂರಿನ ರಾಮದಾಸ್, ಸುರೇಶ್‌ಕುಮಾರ್ ಮತ್ತು ಕಾಗೇರಿ ಅವರ ಹೆಸರುಗಳನ್ನು ಕೈಬಿಡಲು ಬಿ.ಎಲ್.ಸಂತೋಷ್ ಸಲಹೆಯೂ ಪ್ರಮುಖ ಕಾರಣ ಎನ್ನಲಾಗಿದೆ.

ಕೈ ಕೊಯ್ದುಕೊಂಡ ವಿಜಯೇಂದ್ರ ಬೆಂಬಲಿಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪುತ್ರರೂ ಆದ ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರಿಗೆ ನೂತನ ಸಚಿವ ಸಂಪುಟದಲ್ಲಿ ಸ್ಥಾನ ಸಿಗಲಿಲ್ಲವೆಂಬ ಕಾರಣಕ್ಕೆ ಬೆಂಬಲಿಗರೊಬ್ಬರು ಬ್ಲೇಡ್‌ನಿಂದ ಕೈ ಕೊಯ್ದುಕೊಂಡ ಘಟನೆ ಬುಧವಾರ ನಡೆಯಿತು.

ನಗರದಲ್ಲಿರುವ ಯಡಿಯೂರಪ್ಪ ಅವರ ಮನೆ ಎದುರು ಈ ಘಟನೆ ನಡೆದಿದ್ದು, ಗಾಯಗೊಂಡಿರುವ ಮಂಡ್ಯದ ಶಿವಕುಮಾರ್ ಆರಾಧ್ಯ ಎಂಬಾತನಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗಿದೆ.

ಬುಧವಾರ ಬೆಳಿಗ್ಗೆಯೇ ಇವರು ನಗರಕ್ಕೆ ಬಂದಿದ್ದರು.

ಸಂಪುಟದಲ್ಲಿ ಅರ್ಧಕ್ಕಿಂತ ಹೆಚ್ಚು ಹಿರಿಯರು

ಬೆಂಗಳೂರು: ಹೊಸ ಸಂಪುಟದಲ್ಲಿ ಅರ್ಧಕ್ಕಿಂತ ಹೆಚ್ಚು ಮಂದಿ ಹಿರಿಯರಿದ್ದಾರೆ. 27 ಮಂದಿ ಸಚಿವರು 50 ವರ್ಷ ಮತ್ತು ಅದಕ್ಕಿಂತ ಹಿರಿಯರು. ಇಬ್ಬರು ಮಾತ್ರ 50ರ ಕೆಳಗಿನ ವಯೋಮಾನದವರು.

73 ವರ್ಷ ವಯಸ್ಸಾಗಿರುವ ಕೆ.ಎಸ್. ಈಶ್ವರಪ್ಪ ಈ ಸಂಪುಟದಲ್ಲಿರುವ ಅತ್ಯಂತ ಹಿರಿಯರು. ಅವರ ನಂತರ 72 ವರ್ಷ ವಯಸ್ಸಾಗಿರುವ ಗೋವಿಂದ ಕಾರಜೋಳ ಇದ್ದಾರೆ.

ವಿ. ಸೋಮಣ್ಣ, ಆರಗ ಜ್ಞಾನೇಂದ್ರ ಮತ್ತು ಎಂ.ಟಿ.ಬಿ. ನಾಗರಾಜು ಮೂವರೂ 70 ವರ್ಷ ವಯಸ್ಸಿನವರು.


ಬಸವರಾಜ ಬೊಮ್ಮಾಯಿ ಅವರ ಸಂಪುಟದ ಸದಸ್ಯರಲ್ಲಿ 70 ವರ್ಷ ಮತ್ತು ಅದಕ್ಕಿಂತ ಹೆಚ್ಚಿನ ವಯಸ್ಸಾಗಿರುವ ಐವರು, 60ರಿಂದ 69 ವರ್ಷ ವಯಸ್ಸಿನ 11 ಮಂದಿ, 50ರಿಂದ 59 ವರ್ಷ ವಯಸ್ಸಿನ 11 ಮಂದಿ ಹಾಗೂ 40ರಿಂದ 49 ವರ್ಷ ವಯಸ್ಸಿನ ನಡುವಿನ ಇಬ್ಬರು ಇದ್ದಾರೆ. ಕಾರ್ಕಳದ ವಿ. ಸುನೀಲ್ ಕುಮಾರ್ (45) ಈ ಸಂಪುಟದ ಅತ್ಯಂತ ಕಿರಿಯ ಸದಸ್ಯ. ಅವರ ನಂತರ ಸಚಿವ ಡಾ.ಕೆ. ಸುಧಾಕರ್ (48) ಇದ್ದಾರೆ.



ರಾಜಭವನದಲ್ಲಿ ನಡೆದ ಪ್ರಮಾಣವಚನ ಸಮಾರಂಭದಲ್ಲಿ ಸೇರಿದ್ದ ನೂತನ ಸಚಿವರ ಬೆಂಬಲಿಗರು, ಕುಟುಂಬದ ಸದಸ್ಯರು – ಪ್ರಜಾವಾಣಿ ಚಿತ್ರ

'ಸಿ.ಎಂ ಸ್ಥಾನಕ್ಕೆ ಧಕ್ಕೆಯಿಲ್ಲ'

ಹಾವೇರಿ: 'ಬಸವರಾಜ ಬೊಮ್ಮಾಯಿ ಅವರು 6 ತಿಂಗಳು ಮಾತ್ರ ಮುಖ್ಯಮಂತ್ರಿಯಾಗಿರುತ್ತಾರೆ. ನಂತರ ಗಡ್ಡಧಾರಿಯೊಬ್ಬರು ಮುಖ್ಯ ಮಂತ್ರಿ ಸ್ಥಾನಕ್ಕೇರುತ್ತಾರೆ ಎಂದು ಮೈಲಾರ ಲಿಂಗೇಶ್ವರ ದೇವಸ್ಥಾನದ ಅರ್ಚಕ ವೆಂಕಪ್ಪಯ್ಯ ಒಡೆಯರ್ ಹೇಳಿಕೆ ಸುಳ್ಳು. ಬಾಕಿ 17 ತಿಂಗಳೂ ಬೊಮ್ಮಾಯಿ ಅವರೇ ಸಿ.ಎಂ ಆಗಿರುತ್ತಾರೆ ಎಂಬ ನಂಬಿಕೆಯಿದೆ' ಎಂದು ಮೈಲಾರಲಿಂಗೇಶ್ವರ ಕಾರ್ಣಿಕ ನುಡಿಯುವ ಗೊರವಯ್ಯ ರಾಮಪ್ಪಜ್ಜ ಹೇಳಿದರು.



ಗೊರವಯ್ಯ ರಾಮಪ್ಪಜ್ಜ

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, 'ಅರ್ಚಕ ವೆಂಕಪ್ಪಯ್ಯ ತಾವು ಧರ್ಮದರ್ಶಿ ಎಂದು ಹೇಳಿಕೊಂಡು, ಸುಳ್ಳು ಹೇಳಿಕೆಗಳ ಮೂಲಕ ಜನರ ಹಾದಿ ತಪ್ಪಿಸುತ್ತಿದ್ದಾರೆ' ಎಂದು ಆರೋಪಿಸಿದರು.

ಮೈಲಾರಲಿಂಗೇಶ್ವರ ದೇವಸ್ಥಾನದ ಬಾಬುದಾರರಾದ ಜಜ್ಜುರಿ ಲಿಂಗಪ್ಪ ಮಾತನಾಡಿ, 'ಕಾರ್ಣಿಕ ಗೊರವಯ್ಯ 11 ದಿನ ಉಪವಾಸವಿದ್ದು, ರಥಸಪ್ತಮಿ ದಿನ ಸಂಜೆ 5.30ಕ್ಕೆ ಮೈಲಾರ ಲಿಂಗಪ್ಪನ ಬಿಲ್ಲನ್ನು ಏರಿ, ಮೈಲಾರಲಿಂಗ ಕೊಡುವ ವಾಣಿಯನ್ನು ನುಡಿಯುತ್ತಾರೆ. ಆದರೆ, ವೆಂಕಪ್ಪಯ್ಯ ಸುಳ್ಳು ಹೇಳಿಕೆ ನೀಡುತ್ತ ಭಕ್ತರಲ್ಲಿ ಗೊಂದಲ ಉಂಟು ಮಾಡುತ್ತಿದ್ದಾರೆ' ಎಂದು ದೂರಿದರು.

'ಕೆಲ ದಿನಗಳ ಹಿಂದೆ ದೇವಸ್ಥಾನಕ್ಕೆ ಭೇಟಿ ನೀಡಿದ್ದ ಕೆ.ಎಸ್. ಈಶ್ವರಪ್ಪ ಮತ್ತು ಬೊಮ್ಮಾಯಿ ಇಬ್ಬರಿಗೂ ಸಿ.ಎಂ. ಸ್ಥಾನ ಸಿಗುತ್ತದೆ ಎಂದು ವೆಂಕಪ್ಪಯ್ಯ ಭವಿಷ್ಯ ನುಡಿದಿದ್ದರು. ಡಿ.ಕೆ. ಶಿವಕುಮಾರ್ ಕೊಟ್ಟ 'ಬೆಳ್ಳಿ ಹೆಲಿಕಾಪ್ಟರ್' ಅನ್ನು ತಮ್ಮ ಮನೆಯಲ್ಲಿಟ್ಟುಕೊಂಡಿದ್ದಾರೆ. ಪ್ರಚಾರಕ್ಕಾಗಿ ರಾಜಕೀಯ ಮುಖಂಡರ ಕುರಿತು ಹೇಳಿಕೆ ಹರಿಬಿಡುತ್ತಾರೆ' ಎಂದು ಟೀಕಿಸಿದರು.

ರೈಲುಗಳಲ್ಲಿ ವೈಫೈ ಸೇವೆ ನೀಡುವ ಯೋಜನೆ ರದ್ದು

ನವದೆಹಲಿ: ರೈಲುಗಳಲ್ಲಿ ಇಂಟರ್ನೆಟ್ ಸಂಪರ್ಕ ಕಲ್ಪಿಸುವ ಯೋಜನೆಯನ್ನು ಕೈಬಿಡಲಾಗಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಉಪಗ್ರಹ ಸಂವಹನ ತಂತ್ರಜ್ಞಾನದ ಮೂಲಕ ಹೌರಾ ರಾಜಧಾನಿ ಎಕ್ಸ್‌ಪ್ರೆಸ್‌ನಲ್ಲಿ ವೈ–ಫೈ ಆಧಾರಿತ ಇಂಟರ್ನೆಟ್ ಸೇವೆಯನ್ನು ಪ್ರಾಯೋಗಿಕವಾಗಿ ನೀಡಲಾಗಿತ್ತು ಎಂದು ಲೋಕಸಭೆಯಲ್ಲಿ ನೀಡಿದ ಲಿಖಿತ ಉತ್ತರದಲ್ಲಿ ಸಚಿವರು ತಿಳಿಸಿದ್ದಾರೆ.

‘ಈ ಯೋಜನೆಗೆ ಹೆಚ್ಚಿನ ಬಂಡವಾಳ ಬೇಕಾಗುತ್ತದೆ. ಹೀಗಾಗಿ ವೆಚ್ಚದ ದೃಷ್ಟಿಯಿಂದ ಇದು ಪರಿಣಾಮಕಾರಿಯಾಗಿಲ್ಲ’ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

4 ವರ್ಷದ ಮಕ್ಕಳಿಗೂ ದಿನಕ್ಕೆ 5 ತಾಸು ಬೋಧನೆ • ಆರೋಗ್ಯ ತೊಂದರೆ ಎದುರಿಸುತ್ತಿರುವ ಚಿಣ್ಣರು

ಆನ್‌ಲೈನ್ ತರಗತಿ: ಮಾರ್ಗಸೂಚಿಯೇ ಇಲ್ಲ!

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ತೊಂದರೆ ಅನುಭವಿಸುತ್ತಿರುವ ವಿದ್ಯಾರ್ಥಿಗಳು, ಪೋಷಕರು
- ಮಕ್ಕಳ ಆರೋಗ್ಯದ ಕುರಿತು ಪೋಷಕರು ಆತಂಕ
- ಮಕ್ಕಳ ಕಲಿಕೆಗೆ ಇದು ಅಗತ್ಯ ಎನ್ನುವ ಶಾಲಾ ಶಿಕ್ಷಕರು

ಬೆಂಗಳೂರು: ಶೈಕ್ಷಣಿಕ ವರ್ಷ ಆರಂಭವಾಗಿ ತಿಂಗಳೇ ಕಳೆದಿದ್ದರೂ, ಆನ್‌ಲೈನ್ ತರಗತಿಗಳನ್ನು ಹಮ್ಮಿಕೊಳ್ಳುವ ಬಗ್ಗೆ ರಾಜ್ಯ ಸರ್ಕಾರ ಸ್ಪಷ್ಟ ಮಾರ್ಗಸೂಚಿಗಳನ್ನು ಹೊರಡಿಸದ ಕಾರಣ ವಿದ್ಯಾರ್ಥಿಗಳು, ಪೋಷಕರು ತೊಂದರೆ ಅನುಭವಿಸುತ್ತಿದ್ದಾರೆ.

ಕಳೆದ ವರ್ಷ ರಾಜ್ಯ ಸರ್ಕಾರ ಆನ್‌ಲೈನ್ ತರಗತಿಗಳನ್ನು ನಡೆಸುವ ಕುರಿತು ಶಾಲೆಗಳಿಗೆ ಸ್ಪಷ್ಟ ಮಾರ್ಗಸೂಚಿಗಳನ್ನು ಹೊರಡಿಸಿತ್ತು. ಆದರೆ, ಈ ಬಾರಿ ಅಂತಹ ಯಾವುದೇ ಕ್ರಮವನ್ನು ಈವರೆಗೆ ಕೈಗೊಂಡಿಲ್ಲ. ಆನ್‌ಲೈನ್ ತರಗತಿಗಳನ್ನು ನಡೆಸುವ ಕುರಿತಂತೆ ನಿರ್ಧಾರ ತೆಗೆದುಕೊಳ್ಳುವ ಹೊಣೆಯನ್ನು ಖಾಸಗಿ ಶಾಲೆಗಳಿಗೇ ನೀಡಿರುವುದರಿಂದ ಮಕ್ಕಳ ಆರೋಗ್ಯದ ಕುರಿತು ಪೋಷಕರು ಆತಂಕಗೊಂಡಿದ್ದಾರೆ. ಕೆಲವು ಖಾಸಗಿ ಶಾಲೆಗಳು 4ರಿಂದ 6 ವರ್ಷಗಳ ಮಕ್ಕಳಿಗೆ ದಿನಕ್ಕೆ ಐದು ತಾಸಿನವರೆಗೆ ಆನ್‌ಲೈನ್ ತರಗತಿಗಳನ್ನು ತೆಗೆದುಕೊಳ್ಳುತ್ತಿವೆ.

ಸಾರ್ವಜನಿಕ ಶಿಕ್ಷಣ ಇಲಾಖೆಯು 2020–21ನೇ ಶೈಕ್ಷಣಿಕ ವರ್ಷದಲ್ಲಿ ಪ್ರೊ.ಎಂ.ಕೆ. ಶ್ರೀಧರ್ ಸಮಿತಿಯು ನೀಡಿದ ವರದಿಯ ಆಧಾರದ ಮೇಲೆ ಆನ್‌ಲೈನ್ ತರಗತಿ ನಡೆಸುವ ಕುರಿತು ಮಾರ್ಗಸೂಚಿಗಳನ್ನು ಹೊರಡಿಸಿತ್ತು. ಈ ಮಾರ್ಗಸೂಚಿಗಳನ್ನು ಉಲ್ಲಂಘಿಸಿದರೆ ಕಠಿಣ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದೂ ಖಾಸಗಿ ಶಾಲೆಗಳಿಗೆ ಎಚ್ಚರಿಕೆ ನೀಡಿತ್ತು.

‘ಈವರೆಗೆ ಸ್ಪಷ್ಟ ಮಾರ್ಗಸೂಚಿ ಹೊರಡಿಸದ ಕಾರಣ ಖಾಸಗಿ ಶಾಲೆಗಳು ತಮಗೆ ತಿಳಿದಂತೆ ಆನ್‌ಲೈನ್ ತರಗತಿ ತೆಗೆದುಕೊಳ್ಳುತ್ತಿವೆ. ಮೊದಲನೇ ತರಗತಿಯ ವಿದ್ಯಾರ್ಥಿಗಳಿಗೇ ಬೆಳಿಗ್ಗೆ 8ರಿಂದ ಮಧ್ಯಾಹ್ನ 12ರವರೆಗೆ ನಿರಂತರವಾಗಿ ತರಗತಿಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಮಕ್ಕಳಿಗೆ ತುಂಬಾ ಹೊರೆಯಾಗುತ್ತಿದೆ’ ಎಂದು ಪೋಷಕ ಪ್ರಶಾಂತ್ ರಾವ್ ದೂರಿದರು.

‘ಮಕ್ಕಳ ಕಲಿಕೆಗೆ ಇದು ಅಗತ್ಯ ಎಂದು ಶಾಲೆಯವರು ಹೇಳುತ್ತಿದ್ದಾರೆ. ಆದರೆ, ಮಕ್ಕಳು ನಿರಂತರವಾಗಿ ಮೊಬೈಲ್ ಫೋನ್ ಅಥವಾ ಕಂಪ್ಯೂಟರ್ ಪರದೆ ನೋಡುತ್ತಿರುವುದರಿಂದ ಕಣ್ಣಿಗೆ ತೊಂದರೆಯಾಗುತ್ತಿದೆ. ವೃಥಾ ಕಣ್ಣೀರು ಬರುತ್ತಿದೆ. ಬೆನ್ನು ಮತ್ತು ತಲೆನೋವು ಎಂದು ಮಕ್ಕಳು ಹೇಳುತ್ತಿದ್ದಾರೆ’ ಎಂದು ಅವರು ಹೇಳಿದರು.

‘3ರಿಂದ 6 ವರ್ಷದ ಮಕ್ಕಳನ್ನು ಅಷ್ಟು ಬೇಗ ಸಜ್ಜುಗೊಳಿಸಿ, ಗಂಟೆಗಳ ಗಟ್ಟಲೇ ಕಂಪ್ಯೂಟರ್ ಮುಂದೆ ಕೂರಿಸುವುದು, ಕಲಿಸುವುದು ಉದ್ಯೋಗ ನಿರತ ಪೋಷಕರಿಗೆ ಸವಾಲೆನಿಸುತ್ತಿದೆ. ತೊಂದರೆಯೂ ಆಗುತ್ತಿದೆ’ ಎಂದು ಮತ್ತೊಬ್ಬ ಪೋಷಕಿ ರಿಶಿತಾ ರೈ ಹೇಳಿದರು.

‘ಇಲಾಖೆಯ ಉನ್ನತ ಅಧಿಕಾರಿಗಳೊಂದಿಗೆ ಈ ಕುರಿತು ಚರ್ಚಿಸುತ್ತೇವೆ. ಶ್ರೀಧರ್ ಸಮಿತಿಯ ಶಿಫಾರಸುಗಳು ಈ ವರ್ಷವೂ ಅನ್ವಯವಾಗುತ್ತವೆಯೇ ಎಂದು ತಿಳಿದುಕೊಳ್ಳುತ್ತೇವೆ. ಅದೇ ಶಿಫಾರಸುಗಳು ಈ ವರ್ಷವೂ ಅನ್ವಯವಾಗುತ್ತವೆ ಎಂದರೆ, ಕೂಡಲೇ ಮಾರ್ಗಸೂಚಿಗಳನ್ನು ಹೊರಡಿಸುತ್ತೇವೆ’ ಎಂದು ಇಲಾಖೆಯ ಅಧಿಕಾರಿಯೊಬ್ಬರು ಹೇಳಿದರು.

ಸುದ್ದಿ 2 ನಿಮಿಷ

ಹಂಪಿಗೆ ಪ್ಯಾಕೇಜ್ ಪ್ರವಾಸ

ಬೆಂಗಳೂರು: ಹಂಪಿ ಮತ್ತು ತುಂಗಭದ್ರಾ ಜಲಾಶಯ ವೀಕ್ಷಣೆಗೆ ಪ್ಯಾಕೇಜ್ ಪ್ರವಾಸವನ್ನು ಕೆಎಸ್‌ಆರ್‌ಟಿಸಿ ರೂಪಿಸಿದ್ದು, ಆ.6ರಿಂದ ಆರಂಭವಾಗಲಿದೆ.

ಬೆಂಗಳೂರಿನಿಂದ ಪ್ರತಿದಿನ ರಾತ್ರಿ 10 ಗಂಟೆಗೆ ಹೊರಡುವ ಹವಾನಿಯಂತ್ರಿತ ರಹಿತ ಸ್ಲೀಪರ್ ಬಸ್, ಬೆಳಗಿನ ಜಾವ 4.30ಕ್ಕೆ ಹೊಸಪೇಟೆ ತಲುಪಲಿದೆ. ವಿಶ್ರಾಂತಿ, ಉಪಾಹಾರದ ಬಳಿಕ ಹಂಪಿಗೆ ತೆರಳಿ ವಿಜಯ ವಿಠ್ಠಲ ದೇವಸ್ಥಾನ, ವಿರೂಪಾಕ್ಷ ಸ್ವಾಮಿ ದೇವಸ್ಥಾನ, ಸಾಸಿವೆಕಾಳು, ಕಡಲೆಕಾಳು ಗಣೇಶ, ಲಕ್ಷ್ಮಿ ನರಸಿಂಹ, ಬಡವಲಿಂಗ, ಅಶ್ವಶಾಲೆ, ಕಲ್ಯಾಣಿ, ಕಮಲ ಮಹಲ್, ಮಹಾನವಮಿ ದಿಬ್ಬ, ರಾಣಿಯರ ಈಜುಕೊಳ ವೀಕ್ಷಣೆ ಮಾಡಿಸಲಾಗುವುದು.

ಬಳಿಕ ತುಂಗಭದ್ರಾ ಜಲಾಶಯ, ಸಂಜೆ 7ಕ್ಕೆ ಸಂಗೀತ ಕಾರಂಜಿ ವೀಕ್ಷಣೆ ಮಾಡಿ ರಾತ್ರಿ 9ಕ್ಕೆ ಪ್ರಯಾಣ ಆರಂಭಿಸಿ ಬೆಳಿಗ್ಗೆ 4.30ಕ್ಕೆ ಬೆಂಗಳೂರಿಗೆ ಬಸ್ ತಲುಪಲಿದೆ. ವಯಸ್ಕರಿಗೆ ₹2,500 ಮತ್ತು ಮಕ್ಕಳಿಗೆ ₹2,300 ಪ್ರಯಾಣ ದರ ನಿಗದಿ ಮಾಡಲಾಗಿದೆ ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ಸಾಹಿತ್ಯದ ವಸ್ತುಸಂಗ್ರಹಾಲಯ ತೆರೆಯಿರಿ: ಲೀಲಾದೇವಿ ಸಲಹೆ



ಬೆಂಗಳೂರು: ‘ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಕನ್ನಡ ಕವಿಗಳ ಹಾಗೂ ಸಾಹಿತ್ಯಕ್ಕೆ ಸಂಬಂಧಿಸಿದ ವಸ್ತುಸಂಗ್ರಹಾಲಯವನ್ನು ಪ್ರಾರಂಭಿಸಬೇಕು’ ಎಂದು ಹಿರಿಯ ಲೇಖಕಿ ಲೀಲಾದೇವಿ ಆರ್.ಪ್ರಸಾದ್ ಸಲಹೆ ನೀಡಿದರು.

ಕನ್ನಡ ಸಾಹಿತ್ಯ ಪರಿಷತ್ತು ಮಂಗಳವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ‘ಪ್ರಾಚೀನ ಕವಿಗಳ ಮತ್ತು ವಚನಕಾರರ ಭಾವಚಿತ್ರ’ಗಳನ್ನು ಅನಾವರಣಗೊಳಿಸಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್,‘ಆದಿಕವಿ ಪಂಪನಿಂದ ಶಿಶುನಾಳ ಶರೀಫರವರೆಗಿನ ಪ್ರಾಚೀನ ಕವಿಗಳ ಮತ್ತು ವಚನಕಾರರ ಭಾವಚಿತ್ರಗಳು ಇಲ್ಲಿವೆ. ಇವುಗಳನ್ನು ವೀಕ್ಷಿಸಿದರೆ, ಕನ್ನಡ ಸಾಹಿತ್ಯ ಪರಂಪರೆಯ ಅಗಾಧತೆ ಮತ್ತು ಆಶಯಗಳ ಅರಿವಾಗುತ್ತದೆ’ ಎಂದು ಹೇಳಿದರು.



ಗುಂಡಿ ಬಿದ್ದ ರಸ್ತೆ ಶೆಟ್ಟಿಹಳ್ಳಿ–ಅಬ್ಬಿಗೆರೆ ಮುಖ್ಯರಸ್ತೆಯಲ್ಲಿ ಗುಂಡಿಗಳು ಬಿದ್ದಿರುವುದು – ಪ್ರಜಾವಾಣಿ ಚಿತ್ರ

ಆಶ್ರಯ ಕೊಟ್ಟಿದ್ದ ಗೆಳೆಯನ ಹೆಂಡತಿ ಜೊತೆ ಸಲುಗೆ

ಆಟೊ ಚಾಲಕನ ಹತ್ಯೆ; ಪತ್ನಿ ಬಂಧನ

ಬೆಂಗಳೂರು: ಕೆಂಪೇಗೌಡನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕಾರ್ತಿಕ್ (28) ಎಂಬುವರ ಹತ್ಯೆ ಸಂಬಂಧ, ಅವರ ಪತ್ನಿ ರಂಜಿತಾ ಹಾಗೂ ಸ್ನೇಹಿತ ಸಂಜೀವ್ ಅಲಿಯಾಸ್ ಸಂಜು (28) ಸೇರಿ ಮೂವರ ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

‘ಮಂಡ್ಯದ ಕಾರ್ತಿಕ್, ಆಟೊ ಚಾಲಕರಾಗಿದ್ದರು. ಪತ್ನಿ ರಂಜಿತಾ ಜೊತೆ ಬೃಂದಾವನನಗರದಲ್ಲಿ ವಾಸವಿದ್ದರು. ದಂಪತಿಗೆ ಮಗು ಇದೆ. ಜುಲೈ 29ರಂದು ಕಾರ್ತಿಕ್ ಅವರ ಕೊಲೆಯಾಗಿತ್ತು. ತನಿಖೆ ಕೈಗೊಂಡಾಗ ಪತ್ನಿ ಹಾಗೂ ಸ್ನೇಹಿತ ಆರೋಪಿ ಎಂಬುದು ತಿಳಿಯಿತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕೆ.ಆರ್. ಪೇಟೆಯ ಸಂಜೀವ್, ಕೆಲಸವಿಲ್ಲದೇ ಅಲೆದಾಡುತ್ತಿದ್ದ. ಆತನಿಗೆ ತಮ್ಮ ಮನೆಯಲ್ಲಿ ಆಶ್ರಯ ನೀಡಿದ್ದ ಕಾರ್ತಿಕ್, ತಮ್ಮ ಆಟೊವನ್ನು ಚಾಲನೆ ಮಾಡಲು ಕೊಟ್ಟಿದ್ದರು. ಹಗಲು ಹಾಗೂ ರಾತ್ರಿ ಪಾಳಿಯಲ್ಲಿ ಇಬ್ಬರೂ ಆಟೊ ಚಲಾಯಿಸುತ್ತಿದ್ದರು.’

‘ಕಾರ್ತಿಕ್ ಆಟೊ ತೆಗೆದುಕೊಂಡು ಹೊರಗೆ ಹೋದಾಗ ಆರೋಪಿ ಸಂಜೀವ್ ಮನೆಯಲ್ಲೇ ಇರುತ್ತಿದ್ದ. ಅದೇ ಸಂದರ್ಭದಲ್ಲೇ ಅವರ ಪತ್ನಿ ರಂಜಿತಾ ಜೊತೆ ಸಲುಗೆ ಬೆಳೆಸಿದ್ದ’ ಎಂದೂ ಮೂಲಗಳು ತಿಳಿಸಿವೆ.

ಪತ್ನಿ ಸಂಚಿನಂತೆ ಹತ್ಯೆ: ‘ತಮ್ಮಿಬ್ಬರ ಸಲುಗೆಗೆ ಅಡ್ಡಿಯಾಗುತ್ತಾರೆಂಬ ಕಾರಣಕ್ಕೆ ಕಾರ್ತಿಕ್ ಅವರನ್ನೇ ಹತ್ಯೆ ಮಾಡಲು ರಂಜಿತಾ ಸಂಚು ರೂಪಿಸಿದ್ದಳು. ಸಂಜೀವ್ ಹಾಗೂ ಸಂಬಂಧಿಯೂ ಆದ ಹಾಸನದ ಅರಕಲಗೂಡಿನ ಆರ್.ಆರ್.ಸುಬ್ರಹ್ಮಣ್ಯನ (20) ಸಹಾಯ ಕೋರಿದ್ದಳು’ ಎಂದೂ ಪೊಲೀಸ್ ಮೂಲಗಳು ಹೇಳಿವೆ.

‘ಮದ್ಯದ ಪಾರ್ಟಿ ಮಾಡುವ ನೆಪದಲ್ಲಿ ಕಾರ್ತಿಕ್ ಅವರನ್ನು ಜಿಂಕೆ ಉದ್ಯಾನ ಬಳಿ ಆರೋಪಿಗಳು ಕರೆದೊಯ್ದಿದ್ದರು. ಕಂಠಪೂರ್ತಿ ಮದ್ಯ ಕುಡಿಸಿದ್ದರು. ನಶೆ ಏರುತ್ತಿದ್ದಂತೆ ಅವರ ತಲೆಗೆ ಕಬ್ಬಿಣದ ರಾಡ್‌ನಿಂದ ಹೊಡೆದಿದ್ದರು. ದೇಹದ ಹಲವೆಡೆ ಚಾಕುವಿನಿಂದ ಇರಿದಿದ್ದರು. ತಲೆ ಮೇಲೆ ಕಲ್ಲು ಎತ್ತಿಹಾಕಿ ಹತ್ಯೆ ಮಾಡಿದ್ದರು. ಮೃತದೇಹವನ್ನು ಗೋಣಿ ಚೀಲದಲ್ಲಿ ತುಂಬಿ ಮೈಸೂರು ರಸ್ತೆಯ ನಿರ್ಜನ ಪ್ರದೇಶದಲ್ಲಿ ಎಸೆದು ಪರಾರಿಯಾಗಿದ್ದರು’ ಎಂದೂ ಮೂಲಗಳು ತಿಳಿಸಿವೆ.

ಸುಳಿವು ಕೊಟ್ಟ ಮೊಬೈಲ್ ಕರೆ

‘ಕಾರ್ತಿಕ್ ಕೊಲೆಯಾದ ಎರಡು ದಿನ ಬಿಟ್ಟು ಠಾಣೆಗೆ ಬಂದಿದ್ದ ಪತ್ನಿ ರಂಜಿತಾ, ತನ್ನ ಪತಿ ನಾಪತ್ತೆಯಾಗಿರುವುದಾಗಿ ದೂರು ನೀಡಿದ್ದಳು. ಕಥೆ ಕಟ್ಟಿ ಪೊಲೀಸರ ದಿಕ್ಕು ತಪ್ಪಿಸಲು ಯತ್ನಿಸಿದ್ದಳು’ ಎಂದೂ ಹಿರಿಯ ಅಧಿಕಾರಿಯೊಬ್ಬರು ಹೇಳಿದರು. ‘ಕಾರ್ತಿಕ್ ಮೊಬೈಲ್ ಕರೆಗಳನ್ನು ಪರಿಶೀಲಿಸಿದಾಗ, ಕೊಲೆ ನಡೆಯುವುದಕ್ಕೂ ಮುನ್ನ ಆರೋಪಿ ಸಂಜೀವ್ ಜೊತೆ ಮಾತನಾಡಿದ್ದು ಗೊತ್ತಾಗಿತ್ತು. ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೊಲೆ ರಹಸ್ಯ ಬಯಲಾಯಿತು. ನಂತರವೇ ರಂಜಿತಾ ಹಾಗೂ ಸುಬ್ರಹ್ಮಣ್ಯ ಸಹ ಸಿಕ್ಕಿಬಿದ್ದರು’ ಎಂದೂ ತಿಳಿಸಿದರು.

‘ಅಪರಾಧಗಳಲ್ಲಿ ಭಾಗಿಯಾಗಬೇಡಿ’

ಪ್ರಜಾವಾಣಿ ವಾರ್ತೆ

ನೆಲಮಂಗಲ: ‘ಹಿಂದೆ ಮಾಡಿರುವ ಅಪರಾಧಗಳನ್ನು ಮುಂದುವರಿಸಬೇಡಿ. ಒಳ್ಳೆಯ ನಾಳೆಗಳಿಗೆ ಸರಿಯಾದ ಮಾರ್ಗದಲ್ಲಿ ನಡೆಯಿರಿ. ನಿಮ್ಮ ಕುಟುಂಬದ ಕಡೆ ಗಮನ ಕೊಡಿ’ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೋನ ವಂಶಿ ಕೃಷ್ಣ ರೌಡಿಗಳಿಗೆ ಕಿವಿಮಾತು ಹೇಳಿದರು.

ನೆಲಮಂಗಲದ ಅಂಬೇಡ್ಕರ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ರೌಡಿಗಳ ಪರೇಡ್‌ನಲ್ಲಿ ಅವರು ಮಾತನಾಡಿದರು.

‘ಇದನ್ನು ರೌಡಿ ಪರೇಡ್ ಅಂದುಕೊಳ್ಳಬೇಡಿ. ಬದಲಾಗಿ ಮನಪರಿವರ್ತನೆಗೆ ಆಪ್ತ ಸಮಾಲೋಚನೆ ಎಂದು ಭಾವಿಸಿ. ಪೊಲೀಸರಿಗೆ ನಿಮ್ಮ ಸರಿಯಾದ ಮೊಬೈಲ್ ಸಂಖ್ಯೆ, ಮನೆಯ ವಿಳಾಸ ನೀಡಬೇಕು. ಕರೆದಾಗ ಬರಬೇಕು, ನ್ಯಾಯಾಲಯಗಳಿಗೆ ತಪ್ಪದೇ ಹಾಜರಾಗಬೇಕು. ಯಾವುದೇ ಅಪರಾಧಗಳಲ್ಲಿ ಭಾಗಿಯಾಗಬಾರದು’ ಎಂದು ಎಚ್ಚರಿಕೆ ನೀಡಿದರು.

‘ಠಾಣಾ ವ್ಯಾಪ್ತಿಗಳಲ್ಲಿ ಒಟ್ಟು 354 ರೌಡಿಗಳಿದ್ದು, ಅದರಲ್ಲಿ ಪ್ರಮುಖವಾದ 112 ರೌಡಿಗಳನ್ನು ಪರೇಡ್‌ಗೆ ಕರೆಸಲಾಗಿದೆ’ ಎಂದರು.



ಕೋನ ವಂಶಿ ಕೃಷ್ಣ ಅವರು ರೌಡಿಗಳಿಂದ ವಿವರಣೆ ಪಡೆದರು. ಇನ್‌ಸ್ಪೆಕ್ಟರ್ ಎ.ವಿ. ಕುಮಾರ್ ಹಾಗೂ ಸಿಬ್ಬಂದಿ ಇದ್ದರು.

ವರ್ಷದಿಂದ ಸಂಬಳವಿಲ್ಲದೆ ಪೌರಕಾರ್ಮಿಕ ಆತ್ಮಹತ್ಯೆ



ರಂಗ

ನಂಜನಗೂಡು: ತಾಲ್ಲೂಕಿನ ಕಳಲೆಯ ಗ್ರಾಮ ಪಂಚಾಯಿತಿ ಕಚೇರಿಯ ಪೌರಕಾರ್ಮಿಕ ರಂಗ (45) ಬುಧವಾರ ಫ್ಯಾನ್‌ಗೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅವರಿಗೆ ಒಂದು ವರ್ಷದಿಂದ ಸಂಬಳ ಕೊಟ್ಟಿರಲಿಲ್ಲ. ಅಧಿಕಾರಿಗಳಿಗೆ ಮನವಿ ಮಾಡಿದ್ದರೂ ಪ್ರಯೋಜನವಾಗಿರಲಿಲ್ಲ. ಜೀವನ ನಿರ್ವಹಣೆಗಾಗಿ ಸಾಲ ಮಾಡಿಕೊಂಡಿದ್ದರು. ಮಧ್ಯಾಹ್ನ ಸಿಬ್ಬಂದಿ ಊಟಕ್ಕೆ ತೆರಳಿದ್ದ ವೇಳೆ ನೇಣು ಹಾಕಿಕೊಂಡಿದ್ದಾರೆ ಎನ್ನಲಾಗಿದೆ. ಅವರಿಗೆ ಪತ್ನಿ ಹಾಗೂ ಮೂವರು ಪುತ್ರಿಯರಿದ್ದಾರೆ. ಗ್ರಾಮಾಂತರ ಪೊಲೀಸ್ ಠಾಣೆ ಪಿಎಸ್‌ಐ ರಾಮ್ ಕುಮಾರ್ ಭೇಟಿ ನೀಡಿ ಪರಿಶೀಲಿಸಿದರು.

ಆನೆಗಳ ದಾಳಿಯಿಂದ ಇಬ್ಬರು ಸಾವು

ರಾಮನಗರ: ಜಿಲ್ಲೆಯಲ್ಲಿ ಬುಧವಾರ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಆನೆ ದಾಳಿಯಿಂದ ಇಬ್ಬರು ಮೃತಪಟ್ಟಿದ್ದಾರೆ.

ಮಾಗಡಿ ತಾಲ್ಲೂಕಿನ ಆಗಲಕೋಟೆ ಹ್ಯಾಂಡ್ ಪೋಸ್ಟ್ ಬಳಿ ಬೆಳಿಗ್ಗೆ ಆನೆಗಳ ಹಿಂಡು ಕಾಣಿಸಿಕೊಂಡಿತ್ತು. ಇದನ್ನು ಕಾಣಲು ಹೋಗಿದ್ದ ದೋಣಗುಪ್ಪೆ ನಿವಾಸಿ ಗಂಗಾಧರ್ (46) ಗಜರಾಜನ ತುಳಿತಕ್ಕೆ ಸಿಕ್ಕು ಮೃತಪಟ್ಟರು.

ಮತ್ತೊಂದು ಪ್ರಕರಣದಲ್ಲಿ ಕನಕಪುರ ತಾಲ್ಲೂಕಿನ ಕೋಡಿಹಳ್ಳಿ ಸಮೀಪದ ಚಿಕ್ಕಪೇಟೆಹಳ್ಳಿಯಲ್ಲಿ ಜಮೀನಿಗೆ ಹೋಗಿದ್ದ ರೈತ ರುದ್ರೇಗೌಡ (55) ಎಂಬುವರು ಆನೆ ದಾಳಿಗೆ ಒಳಗಾಗಿ ಮೃತಪಟ್ಟರು. ಕಾವೇರಿ ವನ್ಯಜೀವಿ ಧಾಮಕ್ಕೆ ಹೊಂದಿಕೊಂಡಂತೆ ಈ ಗ್ರಾಮವಿದ್ದು, ಮುಂಜಾನೆ ರೈತ ಜಮೀನಿಗೆ ತೆರಳಿದ್ದ ವೇಳೆ ಆನೆ ದಾಳಿ ನಡೆಸಿತು.

ಕೆಎಸ್‌ಆರ್‌ಟಿಸಿಗೆ ಬಿಎಸ್–6 ಚಾಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಎಸ್–6 ವಾಹನದ ಕಾರ್ಯಕ್ಷಮತೆ ಅಧ್ಯಯನ ನಡೆಸಲು ಕೆಎಸ್‌ಆರ್‌ಟಿಸಿಗೆ ಟಾಟಾ ಮೋಟರ್ಸ್ ಉಚಿತವಾಗಿ ಚಾಸಿ ನೀಡಿದೆ.

₹27 ಲಕ್ಷ ಮೊತ್ತದ ಚಾಸಿ ಇದಾಗಿದ್ದು, 4 ಸಿಲಿಂಡರ್, 5 ಲೀಟರ್ 180 ಎಚ್‌ಪಿ ಎಂಜಿನ್ ಸಾಮರ್ಥ್ಯ ಹೊಂದಿದೆ. ಬಿಎಸ್–4 ವಾಹನಕ್ಕೆ ಹೋಲಿಸಿದರೆ ಹೆಚ್ಚು ಇಂಧನ ಕ್ಷಮತೆ ಹೊಂದಿದೆ.

ಚಾಸಿ ಬಗ್ಗೆ ವಿವರಿಸಿದ ಟಾಟಾ ಮೋಟರ್ಸ್‌ನ ಪ್ರಾದೇಶಿಕ ವ್ಯವಸ್ಥಾಪಕ ಅಜಯ್ ಗುಪ್ತ ಅವರು, ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ಅವರಿಗೆ ಹಸ್ತಾಂತರಿಸಿದರು.

ಈ ಚಾಸಿಗೆ ಕವಚವನ್ನು ಕೆಂಗೇರಿ ಪ್ರಾದೇಶಿಕ ಕಾರ್ಯಾಗಾರದಲ್ಲಿ ನಿರ್ಮಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದರು.



ಬಿಎಸ್–6 ವಾಹನದ ಚಾಸಿಯನ್ನು ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಸಿ. ಕಳಸದ ಪರಿಶೀಲಿಸಿದರು. ಟಾಟಾ ಮೋಟರ್ಸ್‌ನ ಪ್ರಾದೇಶಿಕ ವ್ಯವಸ್ಥಾಪಕ ಅಜಯ್ ಗುಪ್ತ, ಕೆಎಸ್‌ಆರ್‌ಟಿಸಿ ನಿರ್ದೇಶಕ(ಸಿಬ್ಬಂದಿ ಮತ್ತು ಪರಿಸರ) ಟಿ. ವೆಂಕಟೇಶ್, ಮುಖ್ಯ ಯಾಂತ್ರಿಕ ವ್ಯವಸ್ಥಾಪಕ ಕೆ. ರಾಮಮೂರ್ತಿ, ಎನ್.ಕೆ. ಬಸವರಾಜು ಇದ್ದರು

ಮೂರು ಪ್ರತ್ಯೇಕ ಕೊಲೆ ಪ್ರಕರಣ: ಆರೋಪಿಗಳ ಬಂಧನ

ಸುಪಾರಿ ಹಂತಕರು ಪೊಲೀಸ್ ಬಲೆಗೆ

ಪ್ರಜಾವಾಣಿ ವಾರ್ತೆ

ಆನೇಕಲ್: ಸುಪಾರಿ ಕೊಲೆಯಲ್ಲಿ ಭಾಗಿಗಳಾಗಿದ್ದ ಆರು ಮಂದಿ ಆರೋಪಿಗಳನ್ನು ಬಂಧಿಸುವಲ್ಲಿ ತಾಲ್ಲೂಕಿನ ಅತ್ತಿಬೆಲೆ ಪೊಲೀಸರು ಯಶಸ್ವಿಯಾಗಿದ್ದಾರೆ ಎಂದು ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಕೆ. ವಂಶಿಕೃಷ್ಣ ತಿಳಿಸಿದರು.

ತಾಲ್ಲೂಕಿನ ಬಿದರಗುಪ್ಪೆ ಸೋಮಶೇಖರ್ (52) ಎಂಬುವವರು ಗೂಡ್ಸ್ ಟೆಂಪೊ ಚಾಲಕರಾಗಿ ಕೆಲಸ ಮಾಡುತ್ತಿದ್ದು ಭೂ ವಿವಾದಕ್ಕೆ ಸಂಬಂಧಿಸಿದಂತೆ ಇದೇ ಗ್ರಾಮದ ಸತ್ಯನಾರಾಯಣ ಎಂಬುವವರ ಮಧ್ಯೆ ಸುಮಾರು 15 ವರ್ಷಗಳಿಂದ ವ್ಯಾಜ್ಯ ನಡೆಯುತ್ತಿತ್ತು. ನ್ಯಾಯಾಲಯದಲ್ಲಿ ಸೋಮಶೇಖರ್ ಪರ ತೀರ್ಪು ಬಂದ ಹಿನ್ನೆಲೆಯಲ್ಲಿ ಸತ್ಯನಾರಾಯಣ, ಸೋಮಶೇಖರ್ ಅವರನ್ನು ಕೊಲೆ ಮಾಡಲು ಮಾಲೂರಿನ ಅರ್ಚಕ ಲಕ್ಷ್ಮೀನಾರಾಯಣ ಅವರಿಗೆ ₹1.5ಲಕ್ಷ ಸುಪಾರಿ ನೀಡಿದ್ದರು.

ಶಾಂತರಾಜು, ಸಂತೋಷ್, ನಂದೀಶ್ ಎಂಬುವವರು ಅಂಬರಿಷ್ ಮತ್ತು ಸುಬ್ರಮಣಿ ಜತೆಗೂಡಿ ಸೋಮಶೇಖರ ಅವರನ್ನು ಕೊಲೆ ಮಾಡಲು ಸಂಚು ರೂಪಿಸಿದ್ದರು. ಜುಲೈ 2ರಂದು ಸೋಮಶೇಖರ್ ತಾಲ್ಲೂಕಿನ ಬಳಗಾರನಹಳ್ಳಿ ಬಳಿ ಟೆಂಪೊ ಓಡಿಸುತ್ತಿದ್ದಾಗ ಸುಪಾರಿ ಹಂತಕರು ಅಡ್ಡಗಟ್ಟಿ ಚಾಕುವಿನಿಂದ ತಿವಿದು ಹತ್ಯೆ ಮಾಡಿದ್ದರು.

ಆರೋಪಿಗಳ ಪತ್ತೆಗೆ ಅತ್ತಿಬೆಲೆ ಸರ್ಕಲ್ ಇನ್‌ಸ್ಪೆಕ್ಟರ್ ಕೆ.ವಿಶ್ವನಾಥ್ ಮತ್ತು ಪಿಎಸ್‌ಐ ಮುರಳಿ ನೇತೃತ್ವದಲ್ಲಿ ತಂಡ ರಚಿಸಲಾಗಿತ್ತು. ತಂಡ ಕಾರ್ಯಾಚರಣೆ ನಡೆಸಿ ಆರೋಪಿಗಳಾದ ಅಂಬರಿಷ್ (35), ಸತ್ಯನಾರಾಯಣ (52), ಶಾಂತರಾಜು(40), ಲಕ್ಷ್ಮೀನಾರಾಯಣ (52), ಸುಬ್ರಮಣಿ (50), ಸಂತೋಷ್ (39) ಮತ್ತು ನಂದೀಶ್(40) ಸೇರಿದಂತೆ 7 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ ಎಂದು ಪತ್ರಿಕಾಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಮತ್ತೊಂದು ಪ್ರತ್ಯೇಕ ಪ್ರಕರಣದಲ್ಲಿ ಹೆಬ್ಬಗೋಡಿ ಪೊಲೀಸ್ ಠಾಣೆಯ ಶಿಕಾರಿಪಾಳ್ಯದಲ್ಲಿ ಹಣಕ್ಕಾಗಿ ಬಾಲಕನನ್ನು ಕೊಲೆ ಮಾಡಿದ ಆರೋಪದಡಿ ಛತ್ತೀಸಗಡ ಮೂಲದ ಮಹಮದ್ (26), ಮಹಮದ್ ನವೀದ್ (19), ಮಹಮದ್ ನೌಷದ್ (29), ಎಂ.ಡಿ. ಸಿರಾಜ್ (24) ಎಂಬವರನ್ನು ಸರ್ಕಲ್ ಇನ್‌ಸ್ಪೆಕ್ಟರ್ ಗೌತಮ್ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿಬಂಧಿಸಿದೆ.

ಡಿವೈಎಸ್ಪಿ ಎಂ.ಮಲ್ಲೇಶ್, ಸರ್ಕಲ್ ಇನ್‌ಸ್ಪೆಕ್ಟರ್‌ಗಳಾದ ಕೆ.ವಿಶ್ವನಾಥ್, ಗೌತಮ್, ರಾಘವೇಂದ್ರ ಇಮ್ರಾಪುರ್ ಇದ್ದರು.



ಆನೇಕಲ್ ತಾಲ್ಲೂಕಿನ ಹೆಬ್ಬಗೋಡಿಯಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಕೆ.ವಂಶಿಕೃಷ್ಣ ಮಾತನಾಡಿದರು. ಡಿವೈಎಸ್ಪಿ ಎಂ.ಮಲ್ಲೇಶ್ ಇತರರು ಇದ್ದರು

ಅಪರಾಧ ಸುದ್ದಿ

ಅತ್ಯಾಚಾರ ಎಸಗಿ ಮಹಿಳೆ ಕೊಲೆ

ಜಿಗಣಿ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಮಹಿಳೆಯನ್ನು ಕೊಲೆ ಮಾಡಿ ಕೆರೆಗೆ ಬಿಸಾಡಿದ್ದ ನಾಲ್ಕು ಮಂದಿ ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ. ಪಶ್ಚಿಮ ಬಂಗಾಳ ಮೂಲದ ಮುಚ್ಚಾಷೇಕ್ ಎಂಬ ಆರೋಪಿ ಸುಪ್ರಿಯಾ ಸೇನ್ ಎಂಬ ವಿವಾಹಿತ ಮಹಿಳೆಯೊಂದಿಗೆ ಪ್ರೀತಿಯ ನಾಟಕವಾಡಿ ಬೆಂಗಳೂರಿಗೆ ಕರೆತಂದು ವೇಶ್ಯಾವಾಟಿಕೆ ದಂದೆಗೆ ದೂಡಿದ್ದ. ಜಿಗಣಿ ಸಮೀಪದ ಮಾಸ್ತೇನಹಳ್ಳಿಯಲ್ಲಿ ಇವರು ವಾಸವಾಗಿದ್ದರು.

ಈ ಸಂದರ್ಭದಲ್ಲಿ ಅಸ್ಸಾಂ ಮೂಲದ ರಾಜುಸುನಾರ್ (36), ಲಾಲ್‌ಬಹದ್ದೂರ್ ಛತ್ರಿ (52), ಅಶೋಕ್ (27) ಎಂಬ ಆರೋಪಿಗಳು ಸುಪ್ರಿಯಾ ಸೇನ್ ಅವರನ್ನು ಲೈಂಗಿಕ ಕ್ರಿಯೆಗೆ ಆಹ್ವಾನಿಸಿ ಅತ್ಯಾಚಾರ ಎಸಗಿದ್ದರು. ನಂತರ ವೇಲ್‌ನಿಂದ ಬಿಗಿದು ಕೊಲೆ ಮಾಡಿ ಹೆನ್ನಾಗರ ಕೆರೆಯಲ್ಲಿ ಬಿಸಾಕಿದ್ದರು. ಸಾಮಾಜಿಕ ಜಾಲತಾಣ ಮತ್ತು ಎನ್‌ಜಿಒಗಳ ಮೂಲಕ ಮಹಿಳೆ ವಿವರ ಪತ್ತೆ ಹಚ್ಚಿದ ಇನ್‌ಸ್ಪೆಕ್ಟರ್ ಬಿ.ಕೆ.ಶೇಖರ್ ಮತ್ತು ಪಿಎಸ್‌ಐ ಶಿವಲಿಂಗಯ್ಯ ನೇತೃತ್ವದ ಪೊಲೀಸ್ ಸಿಬ್ಬಂದಿ, ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದಾರೆ.

ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಶಾಸಕ ಕೃಷ್ಣಬೈರೇಗೌಡ

ಹುಣಸಮಾರನಹಳ್ಳಿ ಕೆರೆ: ವನಮಹೋತ್ಸವ

ಪ್ರಜಾವಾಣಿ ವಾರ್ತೆ

ಯಲಹಂಕ: ಹುಣಸಮಾರನಹಳ್ಳಿ ಕೆರೆಯನ್ನು ಸಾರ್ವಜನಿಕರಿಗೆ ಸಮರ್ಪಣೆ ಮಾಡುವ ಹಾಗೂ ವನಮಹೋತ್ಸವ ಕಾರ್ಯಕ್ರಮಕ್ಕೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ’ಈ ಹಿಂದೆ ಈ ಜಾಗದಲ್ಲಿ ಅನುಪಯುಕ್ತ ಗಿಡಗಳು ಮತ್ತು ಪೊದೆಗಳು ಬೆಳೆದುಕೊಂಡು ಹಳ್ಳಕೊಳ್ಳಗಳಿಂದ ಆವರಿಸಿಕೊಂಡು ಪಾಳುಬಿದ್ದ ಪ್ರದೇಶವಾಗಿತ್ತು. ನಂತರ ಕೆರೆ ಅಂಗಳದ ಜಾಗವನ್ನು ಸಮತಟ್ಟುಮಾಡಿ ಕಳೆ ಹಾಗೂ ಮುಳ್ಳುಗಿಡಗಳನ್ನು ತೆರವುಗೊಳಿಸಿ, ಸಣ್ಣನೀರಾವರಿ ಇಲಾಖೆಯಿಂದ ₹30 ಲಕ್ಷ ವೆಚ್ಚದಲ್ಲಿ ಹಲವು ವರ್ಷಗಳಿಂದ ಅಭಿವೃದ್ಧಿಪಡಿಸಲಾಗಿದೆ. ಈಗ ಕೆರೆಯ ಸ್ವರೂಪ ಬದಲಾಗಿ ಒಂದು ಹಂತಕ್ಕೆ ಬಂದಿರುವುದರಿಂದ ಸಾಂಕೇತಿಕವಾಗಿ ಸಾರ್ವಜನಿಕರಿಗೆ ಸಮರ್ಪಣೆ ಮಾಡಲಾಗಿದೆ‘ ಎಂದು ತಿಳಿಸಿದರು.

’ಕೆರೆಯ ಸುತ್ತಲೂ ನಡಿಗೆ ಪಥ ನಿರ್ಮಿಸಲಾಗಿದ್ದು, ಮಿನಿ ಉದ್ಯಾನ ಅಭಿವೃದ್ಧಿಪಡಿಸಿ, ಗಿಡಗಳನ್ನು ನೆಡಬೇಕೆಂದು ಐಟಿಸಿ ಕಂಪನಿಯವರಿಗೆ ಮನವಿ ಮಾಡಲಾಗಿತ್ತು. ಅದರಂತೆ ಅವರು ತಕ್ಷಣ ಸಿಎಸ್‌ಆರ್ ಅನುದಾನದಲ್ಲಿ ₹25 ಲಕ್ಷ ಹಣವನ್ನು ಮಂಜೂರು ಮಾಡಿ ಕೆಲಸವನ್ನೂ ಆರಂಭಿಸಿದರು. ಅಲ್ಲದೆ ಸುಮಾರು 900 ಗಿಡಗಳನ್ನು ನೆಟ್ಟು, ನಿರ್ವಹಣೆಯ ಜವಾಬ್ದಾರಿಯನ್ನೂ ವಹಿಸಿಕೊಂಡಿರುವುದು ಶ್ಲಾಘನೀಯ ಕಾರ್ಯ‘ ಎಂದರು.

ಚಾಲನೆ: ಇದಕ್ಕೂ ಮುನ್ನ ಭಾರತಿ ನಗರದಲ್ಲಿ ಕೊಲಂಬಿಯಾ ಏಷ್ಯಾ ಆಸ್ಪತ್ರೆಯ ಸಹಯೋಗದೊಂದಿಗೆ ಉಚಿತವಾಗಿ ಲಸಿಕೆ ನೀಡುವ ಕಾರ್ಯಕ್ರಮಕ್ಕೆ ಕೃಷ್ಣಬೈರೇಗೌಡ ಚಾಲನೆ ನೀಡಿದರು.

ಐಟಿಸಿ ಕಂಪನಿಯ ಪ್ರಧಾನ ವ್ಯವಸ್ಥಾಪಕ ಜೆ.ಪಿ.ನಾಯರ್, ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಸಜಿತಾ ಅಶೋಕನ್, ತಾಲ್ಲೂಕು ಪಂಚಾಯಿತಿ ಮಾಜಿ ಉಪಾಧ್ಯಕ್ಷೆ ಸುಜಾತ ಶ್ರೀನಿವಾಸ್ ಇದ್ದರು.



ಶಾಸಕ ಕೃಷ್ಣಬೈರೇಗೌಡ, ಹುಣಸಮಾರನಹಳ್ಳಿ ಕೆರೆ ಅಂಗಳದಲ್ಲಿ ಸಸಿ ನೆಟ್ಟರು. ಕಾಂಗ್ರೆಸ್ ಮುಖಂಡರಾದ ಕೆ.ಅಶೋಕನ್, ಎಂ.ಜಯಗೋಪಾಲಗೌಡ, ಕುದುರೆಗೆರೆ ಕೃಷ್ಣಮೂರ್ತಿ, ಗ್ರಾಮಪಂಚಾಯಿತಿ ಮಾಜಿ ಅಧ್ಯಕ್ಷರಾದ ಎಚ್.ಪಿ.ನಾರಾಯಣಸ್ವಾಮಿ, ಹರೀಶ್ ಕುಮಾರ್, ದಯಾನಂದ್, ಲಕ್ಷ್ಮೀಪತಿ, ಎನ್.ಕೆ.ಮಹೇಶ್ ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.



ರಾಜಕಾಲುವೆಯ ನೀರು ಹೊಲಕ್ಕೆ ಹರಿದಿರುವುದು

ರಾಜಕಾಲುವೆ ಒತ್ತುವರಿ: ಬೆಳೆ ಹಾನಿ

ಹೆಸರಘಟ್ಟ: ಸೀರೆಸಂದ್ರ ಗ್ರಾಮದಲ್ಲಿ ರಾಜಕಾಲುವೆ ಒತ್ತುವರಿಯಾಗಿದ್ದು ಮಳೆಗಾಲದಲ್ಲಿ ರಾಗಿ ಹೊಲಕ್ಕೆ ನೀರು ನುಗ್ಗಿ ಬೆಳೆ ಹಾಳಾಗುತ್ತಿದೆ ಎಂದು ಗ್ರಾಮಸ್ಥರು ದೂರಿದ್ದಾರೆ.

’ಸರ್ವೆ ನಂ 57/1ರಲ್ಲಿ ರಾಜಕಾಲುವೆ ಹಾದು ಹೋಗುತ್ತದೆ. ರಾಜಕಾಲುವೆಯನ್ನು ಪ್ರಭಾವಿಯೊಬ್ಬರು ಒತ್ತುವರಿ ಮಾಡಿಕೊಂಡಿದ್ದಾರೆ. ಇದರಿಂದ ರಾಜಕಾಲುವೆಯ ನೀರು ದಲಿತರ ಹೊಲಗದ್ದೆಗೆ ಹರಿದು ರಾಗಿ ಬೆಳೆಯನ್ನು ಹಾಳುಗೆಡವುತ್ತಿದೆ. ಒಂದು ದಶಕದಿಂದ ರಾಗಿ ಬೆಳೆ ಸರಿಯಾಗಿ ಕೈಗೆ ಸಿಗದೇ ದಲಿತರು ಪರದಾಡುವಂತೆ ಅಗಿದೆ. ಆದರೆ, ಅಧಿಕಾರಿಗಳು ಯಾವುದೇ ಕ್ರಮ ತೆಗೆದುಕೊಳ್ಳುತ್ತಿಲ್ಲ‘ ಎನ್ನುತ್ತಾರೆ ಗ್ರಾಮದ ನಿವಾಸಿ ಎಸ್.ಎ.ರವಿಕುಮಾರ್ ಅವರು.

’2017-18ರಲ್ಲಿ ಯಲಹಂಕ ತಹಶೀಲ್ದಾರ್ ಅವರಿಗೆ ಈ ಬಗ್ಗೆ ಮನವಿ ನೀಡಲಾಗಿತ್ತು. ಆಗ ಸರ್ವೆ ಅಧಿಕಾರಿಗಳು ಬಂದು ರಾಜಕಾಲುವೆಯನ್ನು ಅಳೆದು ಹೋದರು. ರಾಜಕಾಲುವೆ ಒತ್ತುವರಿಯಾಗಿರುವುದು ಖಚಿತಪಡಿಸಿಕೊಂಡರು. ರಾಜಕಾಲುವೆ ಒತ್ತುವರಿ ತೆರವುಗೊಳಿಸುವುದಾಗಿ ರೈತರಿಗೆ ಭರವಸೆ ನೀಡಿ ಹೋದರು. ಆದರೆ, ರಾಜಕಾಲುವೆ ಒತ್ತುವರಿ ತೆರವುಗೊಳಿಸಲಿಲ್ಲ‘ ಎಂದು ಬ್ಯಾತ ಗ್ರಾಮದ ನಿವಾಸಿ ಧೀರೆಂದ್ರ ಸ್ವಾಮಿ ಬೇಸರ ವ್ಯಕ್ತಪಡಿಸಿದರು.

’30 ಹೆಕ್ಟೇರ್ ಪ್ರದೇಶದಲ್ಲಿ ರಾಗಿ ಬೆಳೆಯಲಾಗುತ್ತಿತ್ತು. ಆದರೆ, ನೀರು ಹೊಲಗದ್ದೆಗಳಿಗೆ ನುಗ್ಗುವುದರಿಂದ ಹತ್ತು ಹೆಕ್ಟೇರ್ ಪ್ರದೇಶದಲ್ಲಿ ಮಾತ್ರ ರಾಗಿಯನ್ನು ಬೆಳೆಯುತ್ತಿದ್ದೇವೆ. ಸಾಲ ಮಾಡಿ ಕೃಷಿ ಮಾಡಿದರೂ ಬೆಳೆ ಕೈಗೆ ಸಿಗುತ್ತಿಲ್ಲ‘ ಎಂದು ರೈತ ನರಸಿಂಹಯ್ಯ ದುಃಖ ತೊಡಿಕೊಂಡರು.

ಯಲಹಂಕ ತಹಶೀಲ್ದಾರ್ ನರಸಿಂಹಮೂರ್ತಿ ಪ್ರತಿಕ್ರಿಯಿಸಿ, ’ಈ ಬಗ್ಗೆ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುವೆ‘ ಎಂದರು.

ಅಡುಗೆ ಮನೆ ಸಾಮಗ್ರಿಗಳಲ್ಲಿ ಡ್ರಗ್ಸ್ ಸಾಗಣೆ ಪತ್ತೆ

ಬೆಂಗಳೂರು: ಅಡುಗೆ ಮನೆ ಸಾಮಗ್ರಿಗಳಲ್ಲಿ ಬಚ್ಚಿಟ್ಟು ಆಸ್ಟ್ರೇಲಿಯಾಗೆ ಸಾಗಿಸುತ್ತಿದ್ದ ಮಾದಕ ವಸ್ತುವನ್ನು (ಡ್ರಗ್ಸ್) ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕದ (ಎನ್‌ಸಿಬಿ) ಅಧಿಕಾರಿಗಳು ಪತ್ತೆ ಮಾಡಿದ್ದು, ಈ ಸಂಬಂಧ ಇಬ್ಬರನ್ನು ವಶಕ್ಕೆ ಪಡೆದಿದ್ದಾರೆ.

‘ತಮಿಳುನಾಡಿನಿಂದ ಬೆಂಗಳೂರು ಮೂಲಕ ಆಸ್ಟ್ರೇಲಿಯಾಗೆ ಪಾರ್ಸೆಲ್ ಕಳುಹಿಸಲಾಗುತ್ತಿತ್ತು. ಅದರಲ್ಲಿ ಆ್ಯಂಫೆಟಮೈನ್ ಡ್ರಗ್ಸ್ ಇರುವ ಮಾಹಿತಿ ಸಿಕ್ಕಿತ್ತು. ಕಾರ್ಯಾಚರಣೆ ನಡೆಸಿ 2 ಕೆ.ಜಿ 512 ಗ್ರಾಂ ಆ್ಯಂಫೆಟಮೈನ್ ಜಪ್ತಿ ಮಾಡಲಾಗಿದೆ’ ಎಂದು ಎನ್‌ಸಿಬಿ ಬೆಂಗಳೂರು ವಲಯ ನಿರ್ದೇಶಕ ಅಮಿತ್ ಘಾವಟೆ ಹೇಳಿದರು.

‘ಡ್ರಗ್ಸ್ ಪತ್ತೆ ಬಗ್ಗೆ ಆಸ್ಟ್ರೇಲಿಯಾದ ಅಧಿಕಾರಿಗಳಿಗೂ ಮಾಹಿತಿ ನೀಡಲಾಗಿತ್ತು. ಅಲ್ಲಿಯೂ 1 ಕೆ.ಜಿ ಡ್ರಗ್ಸ್ ಜಪ್ತಿ ಆಗಿದೆ. ಪಾರ್ಸೆಲ್ ವಿಳಾಸ ಆಧರಿಸಿ ತಮಿಳುನಾಡಿನ ತಾಹೀರ್ ಹಾಗೂ ಆರ್. ಮೀರಾನ್ ಎಂಬುವರನ್ನು ವಶಕ್ಕೆ ಪಡೆಯಲಾಗಿದೆ’ ಎಂದೂ ತಿಳಿಸಿದರು.

‘ಅಡುಗೆ ಮನೆಯಲ್ಲಿ ಬಳಸುವ ಸಾಮಗ್ರಿಗಳಲ್ಲಿ ಡ್ರಗ್ಸ್ ಬಚ್ಚಿಡುತ್ತಿದ್ದ ಆರೋಪಿಗಳು, ಅದನ್ನೇ ಪಾರ್ಸೆಲ್ ಮೂಲಕ ಆಸ್ಟ್ರೇಲಿಯಾಗೆ ಕಳುಹಿಸುತ್ತಿದ್ದರು. ಪಾರ್ಸೆಲ್ ಸಿಕ್ಕ ಸಂದರ್ಭದಲ್ಲಿ ಸಾಮಗ್ರಿಗಳನ್ನು ಒಡೆದು ನೋಡಿದಾಗಲೇ ಡ್ರಗ್ಸ್ ಸಿಕ್ಕಿತು’ ಎಂದೂ ಹೇಳಿದರು.



ಅಡುಗೆಮನೆಯ ಸಾಮಗ್ರಿಗಳು ಹಾಗೂ ಜಪ್ತಿ ಮಾಡಲಾದ ಡ್ರಗ್ಸ್

ಪ್ರತಿಕಾಯ ಪತ್ತೆಗಾಗಿ 2 ಸಾವಿರ ಮಂದಿಯ ರಕ್ತದ ದ್ರವ ವಿಶ್ಲೇಷಿಸಲಿದೆ ಬಿಬಿಎಂಪಿ

ರೋಗನಿರೋಧಕ ಶಕ್ತಿ ಅಧ್ಯಯನಕ್ಕೆ ಸೆರೊ ಸಮೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ನಿವಾಸಿಗಳಲ್ಲಿ ಎಷ್ಟು ಪ್ರಮಾಣದಲ್ಲಿ ರೋಗ ನಿರೋಧಕ ಶಕ್ತಿ ಬೆಳೆದಿದೆ ಎಂಬುದನ್ನು ಪತ್ತೆಹಚ್ಚಲು ಸೆರೊ ಸಮೀಕ್ಷೆ ನಡೆಸಲು ಬಿಬಿಎಂಪಿ ನಿರ್ಧರಿಸಿದೆ.

ಲಸಿಕೆ ಪಡೆದವರಲ್ಲಿ ಹಾಗೂ ಲಸಿಕೆ ಪಡೆಯದವರಲ್ಲಿ ಕೊರೊನಾ ವೈರಾಣುವಿನ ವಿರುದ್ಧ ಎಷ್ಟರಮಟ್ಟಿದೆ ಪ್ರತಿಕಾಯಗಳು ಸೃಷ್ಟಿಯಾಗಿವೆ ಎಂಬುದನ್ನು ಪತ್ತೆ ಹಚ್ಚಲು ನೆರವಾಗುವ ಈ ಸಮೀಕ್ಷೆಗೆ ಬಿಬಿಎಂಪಿ ಆಯುಕ್ತ ಗೌರವ್ ಗುಪ್ತ ಬುಧವಾರ ಚಾಲನೆ ನೀಡಿದರು.

ಸೆರೊ ಸಮೀಕ್ಷೆಯಡಿ ನಗರದ 2 ಸಾವಿರ ನಿವಾಸಿಗಳ ರಕ್ತದ ದ್ರವ ಸಂಗ್ರಹಿಸಿ ಪ್ರಯೋಗಾಲಯದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗುತ್ತದೆ.

ಸಮೀಕ್ಷೆಗೆ ಒಳಪಡಿಸಲಾಗುವವರನ್ನು 18 ವರ್ಷದೊಳಗಿನವರು, 18 ರಿಂದ 45 ವರ್ಷಗಳ ಒಳಗಿನವರು ಹಾಗೂ 45 ವರ್ಷ ಮೇಲಿನವರು ಎಂದು ಮೂರು ಗುಂಪುಗಳನ್ನಾಗಿ ವರ್ಗೀಕರಿಸಲಾಗುತ್ತದೆ.

2 ಸಾವಿರ ಮಂದಿಯಲ್ಲಿ 18 ವರ್ಷಗಳ ಒಳಗಿನ ಶೇ 30ರಷ್ಟು ಮಂದಿ, 18 ವರ್ಷಗಳಿಂದ 45 ವರ್ಷಗಳ ಒಳಗಿನವರು ಶೇ 50ರಷ್ಟು ಮಂದಿ ಹಾಗೂ 45 ವರ್ಷ ಮೇಲ್ಪಟ್ಟ ಶೇ 20ರಷ್ಟು ಮಂದಿ ಇರುತ್ತಾರೆ. ಲಸಿಕೆ ಪಡೆದ ಹಾಗೂ ಲಸಿಕೆ ಪಡೆಯದ ತಲಾ 1 ಸಾವಿರ ಮಂದಿ ಸಮೀಕ್ಷೆಗೆ ಒಳಗಾಗಲಿದ್ದಾರೆ. ಅವರ ರಕ್ತದ ದ್ರವ (ಸೀರಂ) ಸಂಗ್ರಹಿಸಿ ಅವರಲ್ಲಿ ಎಷ್ಟು ಪ್ರಮಾಣದಲ್ಲಿ ಪ್ರತಿಕಾಯಗಳು ಪತ್ತೆಯಾಗಿವೆ ಎಂಬುದನ್ನು ಪರೀಕ್ಷೆ ಮಾಡಲಾಗುತ್ತದೆ.

ಆಯಾ ವಲಯದ ಸಾಂಕ್ರಾಮಿಕ ರೋಗಶಾಸ್ತ್ರಜ್ಞರು, ಆರೋಗ್ಯಾಧಿಕಾರಿಗಳು ಮತ್ತು ಆರೋಗ್ಯ ವೈದ್ಯಾಧಿಕಾರಿಗಳು ಪರಸ್ಪರ ಸಮಾಲೋಚನೆ ನಡೆಸಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಟ್ಟದಲ್ಲಿ ತಂಡಗಳನ್ನು ರಚಿಸಲಿದ್ದಾರೆ. ಈ ತಂಡ ಸೆರೊ ಸಮೀಕ್ಷೆ ಕೈಗೊಳ್ಳಲಿದೆ. ಈ ಸಲುವಾಗಿ ಪಾಲಿಕೆಯ ಕಿರಿಯ ಆರೋಗ್ಯ ಸಹಾಯಕಿಯರು, ಆಶಾ ಕಾರ್ಯಕರ್ತೆಯರು ಮತ್ತು ಪ್ರಯೋಗಾಲಯ ತಂತ್ರಜ್ಞರ ಕಾರ್ಯಪಡೆಗಳನ್ನು ರಚಿಸ ಲಾಗಿದೆ. ಈ ತಂಡ ಗಳ ಸದಸ್ಯರು ಮನೆ-ಮನೆಗೆ ತೆರಳಿ ಗುರುತಿಸುವ ವ್ಯಕ್ತಿಗಳಿಂದ ರಕ್ತದ ಮಾದರಿ ಮತ್ತು ಗಂಟಲಿನ ದ್ರವ ಸಂಗ್ರಹಿಸಲಾಗುತ್ತದೆ.

ಪಾಲಿಕೆಯ ಆಯಾ ವಲಯ ವ್ಯಾಪ್ತಿಯಲ್ಲಿ ಇಂತಿಷ್ಟು ಮಂದಿಗೆ ಸಮೀಕ್ಷೆ ನಡೆಸಬೇಕೆಂದು ಗುರಿ ಗೊತ್ತುಪಡಿಸಲಾಗಿದೆ. ವಾರದೊಳಗೆ ಸೆರೊ ಸಮೀಕ್ಷೆಯನ್ನು ಪೂರ್ಣಗೊಳಿಸುವಂತೆ ಮುಖ್ಯ ಆಯುಕ್ತರು ಸೂಚಿಸಿದ್ದಾರೆ.

ವಿಶೇಷ ಆಯುಕ್ತ (ಆರೋಗ್ಯ) ರಂದೀಪ್, ಮುಖ್ಯ ಆರೋಗ್ಯಾಧಿಕಾರಿ ಡಾ.ಬಿ.ಕೆ.ವಿಜಯೇಂದ್ರ, ಮುಖ್ಯ ಆರೋಗ್ಯಾಧಿಕಾರಿ (ಕ್ಲಿನಿಕಲ್) ಡಾ.ನಿರ್ಮಲಾ ಬುಗ್ಗಿ ಉಪಸ್ಥಿತರಿದ್ದರು.



ಸೆರೊ ಸಮೀಕ್ಷೆ ಬಗ್ಗೆ ಗೌರವ್ ಗುಪ್ತ ಅವರು ಆರೋಗ್ಯಾಧಿಕಾರಿಗಳಿಗೆ ಸಲಹೆ ನೀಡಿದರು. ಮುಖ್ಯ ಆರೋಗ್ಯಾಧಿಕಾರಿ (ಕ್ಲಿನಿಕಲ್) ಡಾ.ನಿರ್ಮಲಾ ಬುಗ್ಗಿ, ಮುಖ್ಯ ಆರೋಗ್ಯಾಧಿಕಾರಿ (ಸಾರ್ವಜನಿಕ ಆರೋಗ್ಯ) ಡಾ.ವಿಜಯೇಂದ್ರ, ವಿಶೇಷ ಆಯುಕ್ತ (ಆರೋಗ್ಯ) ರಂದೀಪ್ ಹಾಗೂ ಆರೋಗ್ಯ ಅಧಿಕಾರಿಗಳು ಇದ್ದಾರೆ

‘ಸೋಂಕು ನಿಯಂತ್ರಣಕ್ಕೆ ನೆರವಾಗಲಿದೆ ಸಮೀಕ್ಷೆ’

‘ರೋಗ ತರುವ ವೈರಾಣುವಿಗೆ ಪ್ರತಿರೋಧ ತೋರಿಸಲು ಎಷ್ಟರ ಮಟ್ಟಿಗೆ ದೇಹವು ಸಜ್ಜಾಗಿದೆ, ಪ್ರತಿಕಾಯಗಳ ತೀವ್ರತೆ ಎಷ್ಟಿದೆ ಎಂಬುದು ಈ ಸಮೀಕ್ಷೆಯಿಂದ ತಿಳಿಯುತ್ತದೆ. ಇದರಲ್ಲಿ ಎಷ್ಟು ಜನರಿಗೆ ಸೋಂಕು ಬಂದಿದೆ, ಎಷ್ಟು ಜನರಿಗೆ ಸೋಂಕು ತಗುಲಿಲ್ಲ, ಎಷ್ಟು ಜನರ ದೇಹದಲ್ಲಿ ರೋಗ ನಿರೋಧಕ ಶಕ್ತಿ ಉತ್ಪತ್ತಿಯಾಗಿದೆ ಎನ್ನುವ ಅಂಶಗಳನ್ನೂ ವಿಶ್ಲೇಷಿಸಲಾಗುತ್ತದೆ. ಈ ಸಮೀಕ್ಷೆಯ ವರದಿ ಆಧರಿಸಿ ಮುಂದಿನ ದಿನಗಳಲ್ಲಿ ಸೋಂಕು ಹರಡದಂತೆ ತಡೆಯುವ ಕುರಿತು ನಿಯಮಗಳನ್ನು ರೂಪಿಸಲಾಗುತ್ತದೆ’ ಎಂದು ಬಿಬಿಎಂಪಿ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.


ಚೇತರಿಸಿಕೊಂಡವರಿಗೆ ಟಿಬಿ ಪರೀಕ್ಷೆ

ಕೋವಿಡ್‌ನಿಂದ ಚೇತರಿಸಿಕೊಂಡವರಿಗೆ ಕ್ಷಯರೋಗ (ಟಿಬಿ) ಕಾಣಿಸಿಕೊಳ್ಳಲಿದೆಯೇ ಎನ್ನುವುದರ ಬಗ್ಗೆ ಅಧ್ಯಯನ ನಡೆಸಲು ಮುಂದಾಗಿರುವ ಆರೋಗ್ಯ ಇಲಾಖೆ, ಇದೇ 16ರಿಂದ 31ರವರೆಗೆ ಟಿಬಿ ತಪಾಸಣೆ ಅಭಿಯಾನ ಹಮ್ಮಿಕೊಂಡಿದೆ.

‘ಕೊರೊನಾ ಸೋಂಕಿತರು ಗುಣಮುಖರಾದ ಬಳಿಕ ಕ್ಷಯ ರೋಗ ಕಾಣಿಸಿಕೊಳ್ಳುತ್ತಿದೆ’ ಎಂಬ ವದಂತಿಗಳು ಹರಿದಾಡಿದ್ದವು. ಹೀಗಾಗಿ, ರಾಜ್ಯದಾದ್ಯಂತ 15 ದಿನಗಳ ಅವಧಿಯಲ್ಲಿ ತಪಾಸಣೆ ನಡೆಸಿ, ಲಕ್ಷಣಗಳು ಗೋಚರಿಸಿದವರಿಗೆ ಪರೀಕ್ಷೆ ನಡೆಸಲಾಗುತ್ತದೆ.

‘ಕೊರೊನಾ ಮತ್ತು ಕ್ಷಯ ರೋಗಿಗಳಲ್ಲಿ ಕಾಣಿಸಿಕೊಳ್ಳುವ ಲಕ್ಷಣಗಳಲ್ಲಿ ಸಾಮ್ಯತೆಯಿದೆ. ಆದ್ದರಿಂದ ಕೋವಿಡ್‌ನಿಂದ ಚೇತರಿಸಿಕೊಂಡವರಿಗೆ ಪರೀಕ್ಷೆ ಮಾಡಲಾಗುತ್ತದೆ. ಮೂರು ವಾರಗಳಿಂದ ನಿರಂತರ ಕೆಮ್ಮು, ಎರಡು ವಾರಗಳಿಂದ ನಿರಂತರ ಜ್ವರ, ಕೆಮ್ಮಿದಾಗ ರಕ್ತ ಕಾಣಿಸಿಕೊಳ್ಳುವಿಕೆ ಹಾಗೂ ತೂಕ ಇಳಿಕೆಯಾಗುವಿಕೆ ಲಕ್ಷಣಗಳು ಇರುವವರ ಗಂಟಲ ದ್ರವದ ಮಾದರಿ ಸಂಗ್ರಹಿಸಲಾಗುತ್ತದೆ. ಬಳಿಕ ಹತ್ತಿರದ ಪ್ರಾಥಮಿಕ ಅಥವಾ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು, ಹೆಚ್ಚಿನ ತಪಾಸಣೆ ನಡೆಸಲಾಗುತ್ತದೆ’ ಎಂದು ಇಲಾಖೆಯ ಜಂಟಿ ನಿರ್ದೇಶಕ ಡಾ. ರಮೇಶ್ ರೆಡ್ಡಿ ತಿಳಿಸಿದರು.

‘ಕ್ಷಯ ರೋಗ ತಗಲಿರುವುದು ಖಚಿತಪಟ್ಟಲ್ಲಿ ಉಚಿತ ಚಿಕಿತ್ಸೆ ನೀಡಲಾಗುವುದು. ಈ ತಪಾಸಣೆ ಕಾರ್ಯಕ್ಕೆ ಆರೋಗ್ಯ ಕಾರ್ಯಕರ್ತರು, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರನ್ನು ಬಳಸಿಕೊಳ್ಳಲಾಗುತ್ತದೆ. ಅವರು ಮನೆ ಮನೆಗೆ ಭೇಟಿ ನೀಡಿ, ಕೋವಿಡ್‌ನಿಂದ ಗುಣಮುಖರಾದವರ ಆರೋಗ್ಯದ ಮಾಹಿತಿ ಸಂಗ್ರಹಿಸುತ್ತಾರೆ’ ಎಂದು ಹೇಳಿದರು.



ಕೊರೊನಾ ಸೋಂಕು ಉಲ್ಬಣ ನಿಷೇಧಾಜ್ಞೆ ಮುಂದುವರಿಕೆ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕು ಕ್ರಮೇಣ ಹೆಚ್ಚುತ್ತಿದ್ದು, ಅದರ ತಡೆಗಾಗಿ ನಗರದಲ್ಲಿ ಜಾರಿಗೊಳಿಸಲಾಗಿದ್ದ ನಿಷೇಧಾಜ್ಞೆಯನ್ನು ಆಗಸ್ಟ್ 16ರವರೆಗೆ ಮುಂದುವರಿಸಲಾಗಿದೆ.

ಈ ಬಗ್ಗೆ ಪೊಲೀಸ್ ಕಮಿಷನರ್ ಕಮಲ್ ಪಂತ್ ಬುಧವಾರ ಆದೇಶ ಹೊರಡಿಸಿದ್ದಾರೆ.

‘ಸಾರ್ವಜನಿಕ ಸ್ಥಳಗಳಲ್ಲಿ ನಾಲ್ಕು ಹಾಗೂ ಅದಕ್ಕಿಂತ ಹೆಚ್ಚು ಜನ ಗುಂಪು ಸೇರಬಾರದು. ಬಸ್ ನಿಲ್ದಾಣ, ಮೆಟ್ರೊ, ರೈಲ್ವೆ ನಿಲ್ದಾಣ ಹಾಗೂ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಬಳಿ ಅಂತರವನ್ನು ಕಾಯ್ದುಕೊಳ್ಳಬೇಕು’ ಎಂದೂ ಆದೇಶದಲ್ಲಿ ಉಲ್ಲೇಖಿಸಲಾಗಿದೆ.

‘ಕೊರೊನಾ ಸೋಂಕು ತಡೆಗಾಗಿ ರೂಪಿಸಿರುವ ನಿಯಮಗಳನ್ನು ಸಾರ್ವಜನಿಕರು ಪಾಲಿಸಬೇಕು. ಉಲ್ಲಂಘನೆ ಮಾಡಿದರೆ ರಾಷ್ಟ್ರೀಯ ವಿಪತ್ತು ನಿರ್ವಹಣೆ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಳ್ಳಲಾಗುವುದು’ ಎಂದೂ ಕಮಲ್ ಪಂತ್ ಆದೇಶದಲ್ಲಿ ಎಚ್ಚರಿಕೆ ನೀಡಿದ್ದಾರೆ.





ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಲ್ಲಿ ಬುಧವಾರ ಬಿಬಿಎಂಪಿ ಆರೋಗ್ಯ ಸಿಬ್ಬಂದಿ ಪ್ರಯಾಣಿಕರ ಕೋವಿಡ್ ಆರ್‌ಟಿ–ಪಿಸಿಆರ್ ಪರೀಕ್ಷೆಯ ವರದಿಯನ್ನು ಪರಿಶೀಲಿಸಿದರು – ಪ್ರಜಾವಾಣಿ ಚಿತ್ರ

ಮಳಿಗೆಗಳಲ್ಲಿ ಪಾಲನೆ ಆಗದ ನಿಯಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಬಹುತೇಕ ವ್ಯಾಪಾರ ಮಳಿಗೆಗಳಲ್ಲಿ ಕೋವಿಡ್ ನಿಯಂತ್ರಣ ಕ್ರಮಗಳು ಕಟ್ಟುನಿಟ್ಟಾಗಿ ಪಾಲನೆ ಆಗದ ಬಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅಸಮಾಧಾನ ವ್ಯಕ್ತಪಡಿಸಿದರು.

ವರ್ತಕರ ಸಂಘಟನೆಗಳ ಪ್ರತಿನಿಧಿಗಳ ಜೊತೆ ಅವರು ಬುಧವಾರ ಸಭೆ ನಡೆಸಿದ ಅವರು ಕೋವಿಡ್ ನಿಯಂತ್ರಣಕ್ಕೆ ಸಹಕರಿಸದಿದ್ದರೆ ದಂಡ ವಿಧಿಸುವುದು ಅನಿವಾರ್ಯ ಎಂದು ಎಚ್ಚರಿಕೆಯನ್ನೂ ನೀಡಿದರು.

‘ವರ್ತಕರ ಜೀವನೋಪಾಯಕ್ಕೆ ಸಮಸ್ಯೆ ಆಗಬಾರದೆಂದು ಸರ್ಕಾರ ಲಾಕ್‌ಡೌನ್ ಸಡಿಲಗೊಳಿಸಿ ವ್ಯಾಪಾರ ವಹಿವಾಟುಗಳಿಗೆ ಅನುಕೂಲ ಮಾಡಿಕೊಟ್ಟಿದೆ. ಆದರೆ, ಸಾಕಷ್ಟು ಪ್ರದೇಶಗಳಲ್ಲಿ ಕೋವಿಡ್ ನಿಯಮಗಳನ್ನು ಪಾಲಿಸುತ್ತಿಲ್ಲ. ತಮ್ಮ ಮಳಿಗೆಗಳಲ್ಲಿ ಕೋವಿಡ್ ನಿಯಂತ್ರಣ ನಿಯಮಗಳು ಕಡ್ಡಾಯವಾಗಿ ಪಾಲನೆ ಆಗುವಂತೆ ನೋಡಿಕೊಳ್ಳುವುದು ಆಯಾ ವರ್ತಕರ ಹೊಣೆ’ ಎಂದು ನೆನಪಿಸಿದರು.

‘ಕೋವಿಡ್ ನಿಯಗಳನ್ನು ಪಾಲಿಸದಿದ್ದರೆ ಬಿಬಿಎಂಪಿಯ ಮಾರ್ಷಲ್‌ಗಳು, ಗೃಹರಕ್ಷಕ ಸಿಬ್ಬಂದಿ ಹಾಗೂ ಪೊಲೀಸ್ ಅಧಿಕಾರಿಗಳು ಮುಲಾಜಿಲ್ಲದೇ ದಂಡ ವಿಧಿಸಲಿದ್ದಾರೆ’ ಎಂದು ಎಚ್ಚರಿಕೆ ನೀಡಿದರು.

‘ಮಳಿಗೆಗೆ ಬರುವ ಗ್ರಾಹಕರು ಹಾಗೂ ಕೆಲಸ ಮಾಡುವ ಸಿಬ್ಬಂದಿ ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ಪರಸ್ಪರ ಅಂತರ ಕಾಯ್ದುಕೊಳ್ಳಬೇಕು. ಮಳಿಗೆಯಲ್ಲಿ ಉಚಿತ ಬಳಕೆಗೆ ಸ್ಯಾನಿಟೈಸರ್ ಇಟ್ಟಿರಬೇಕು’ ಎಂದು ಸೂಚಿಸಿದರು.

‘ಮಳಿಗೆಗಳ ಸಿಬ್ಬಂದಿಗೆ ಎಲ್ಲರೂ ಲಸಿಕೆ ಹಾಕಿಸಬೇಕು. ಅವರಿಗೆ ಆಗಾಗ ಕೋವಿಡ್ ಪರೀಕ್ಷೆ ಮಾಡಿಸಬೇಕು. ಅವರಲ್ಲಿ ಯಾರಿಗಾದರೂ ಸೋಂಕಿನ ಲಕ್ಷಣಗಳಿದ್ದರೆ ಕೂಡಲೇ ಪ್ರತ್ಯೇಕ ವಾಸಕ್ಕೆ ಒಳಪಡಿಸಿ, ತಕ್ಷಣವೇ ಕೋವಿಡ್ ಪರೀಕ್ಷೆ ಮಾಡಿಸಬೇಕು’ ಎಂದು ಸಲಹೆ ನೀಡಿದರು.

ಸಭೆಯಲ್ಲಿ ವಿಶೇಷ ಆಯುಕ್ತ (ಆರೋಗ್ಯ) ಡಿ.ರಂದೀಪ್, ಮುಖ್ಯ ಆರೋಗ್ಯಾಧಿಕಾರಿ ಡಾ. ವಿಜಯೇಂದ್ರ ಹಾಗೂ ಇತರರು ಉಪಸ್ಥಿತರಿದ್ದರು.

ನೆರೆರಾಜ್ಯದ ಪ್ರಯಾಣಿಕರಲ್ಲಿ ಕಾಣಿಸದ ಕೋವಿಡ್

ಬಿಬಿಎಂಪಿಯು ಕೇರಳ ಹಾಗೂ ಮಹಾರಾಷ್ಟ್ರದಿಂದ ನಗರಕ್ಕೆ ಬಂದಿರುವ 504 ಮಂದಿಯನ್ನು ಕೋವಿಡ್ ಪರೀಕ್ಷೆಗೆ ಬುಧವಾರ ಒಳಪಡಿಸಿದೆ. ಇವರಲ್ಲಿ ಯಾರಿಗೂ ಕೋವಿಡ್ ಪತ್ತೆಯಾಗಿಲ್ಲ.

‘ಮಹಾರಾಷ್ಟ್ರದಿಂದ ಬಂದ 270 ಮಂದಿ ಹಾಗೂ ಕೇರಳದಿಂದ ಬಂದ 234 ಮಂದಿ 72 ಗಂಟೆಗಳಿಂದ ಈಚೆಗೆ ಕೋವಿಡ್ ಪರೀಕ್ಷೆ ನಡೆಸಿದ ವರದಿಯನ್ನು ತಮ್ಮೊಂದಿಗೆ ತಂದಿರಲಿಲ್ಲ. ಅವರನ್ನು ಬಿಬಿಎಂಪಿಯ ವಿಶೇಷ ತಂಡಗಳು ಆರ್‌ಟಿಪಿಸಿಆರ್ ಪರೀಕ್ಷೆಗೆ ಒಳಪಡಿಸಿದ್ದು, ಯಾರೂ ಸೋಂಕು ಹೊಂದಿರಲಿಲ್ಲ’ ಎಂದು ಬಿಬಿಎಂಪಿ ವಿಶೇಷ ಆಯುಕ್ತ ಡಿ.ರಂದೀಪ್ ‘ಪ್ರಜಾವಾಣಿ’ಗೆ ತಿಳಿಸಿದರು.

ಕೇರಳದಿಂದ ನಗರಕ್ಕೆ ಬಂದಿದ್ದ 43 ಮಂದಿ ಆರ್‌ಟಿಪಿಸಿಆರ್ ಪರೀಕ್ಷಾ ವರದಿಯನ್ನು ತಮ್ಮೊಂದಿಗೆ ತಂದಿದ್ದರು. ಅವರನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಿಲ್ಲ.

ನಗರದ ರೈಲ್ವೆ ನಿಲ್ದಾಣಗಳು, ವಿಮಾನ ನಿಲ್ದಾಣ ಹಾಗೂ ಅಂತರರಾಜ್ಯಗಳ ನಡುವೆ ಸಂಚರಿಸುವ ಬಸ್‌ಗಳು ಬಂದು ನಿಲ್ಲುವ ಬಸ್ ನಿಲ್ದಾಣಗಳಲ್ಲಿ ಬಿಬಿಎಂಪಿ ತಪಾಸಣಾ ತಂಡಗಳನ್ನು ನಿಯೋಜಿಸಿದೆ. ಕೇರಳ ಹಾಗೂ ಮಹಾರಾಷ್ಟ್ರಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದ್ದು, ಅಲ್ಲಿಂದ ಬರುವ ಪ್ರಯಾಣಿಕರ ಮೇಲೆ ಬಿಬಿಎಂಪಿಯ ತಂಡಗಳು ವಿಶೇಷ ನಿಗಾ ಇಟ್ಟಿವೆ.



ನಗರದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲ್ವೆ ನಿಲ್ದಾಣದಲ್ಲಿ ಆರೋಗ್ಯ ಸಿಬ್ಬಂದಿ ಪ್ರಯಾಣಿಕರಿಗೆ ಬುಧವಾರ ಕೋವಿಡ್ ಪರೀಕ್ಷೆ ನಡೆಸಿದರು – ಪ್ರಜಾವಾಣಿ ಚಿತ್ರ

ಅಪಾರ್ಟ್‌ಮೆಂಟ್ ನಿವಾಸಿಗಳ ಸಂಘಗಳ ಜೊತೆಗೆ ಸಭೆ

ಸೋಂಕು ಹರಡುವಿಕೆ ತಡೆಯಲು ಸಹಕರಿಸಿ: ಬಿಬಿಎಂಪಿ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೋವಿಡ್ ಪರೀಕ್ಷೆಗೆ ಒಳಗಾದವರಲ್ಲಿ ಸೋಂಕು ಪತ್ತೆ ದರ ಶೇ 1ಕ್ಕಿಂತಲೂ ಕಡಿಮೆ ಇದೆ. ಪ್ರತಿನಿತ್ಯ ಸರಿಸುಮಾರು 400 ಪ್ರಕರಣಗಳು ಕಂಡುಬರುತ್ತಿವೆ. ಇವುಗಳಲ್ಲಿ ಹೆಚ್ಚಿನವು ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲೇ ಕಾಣಿಸಿಕೊಳ್ಳುತ್ತಿದ್ದು, ಇದನ್ನು ಬಿಬಿಎಂಪಿ ಗಂಭೀರವಾಗಿ ಪರಿಗಣಿಸಿದೆ.

ಅಪಾರ್ಟ್‌ಮೆಂಟ್ ಸಮುಚ್ಚಯಗಳ ನಿವಾಸಿಗಳಲ್ಲಿ ಯಾರಿಗಾದರೂ ಸೋಂಕು ಹರಡದಂತೆ ತಡೆಯಲು ಏನೆಲ್ಲ ಕ್ರಮ ಕೈಗೊಳ್ಳಬೇಕು ಎಂಬ ಬಗ್ಗೆ ಚರ್ಚಿಸಲು ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘಗಳ ಪ್ರತಿನಿಧಿಗಳ ಜೊತೆ ವರ್ಚುವಲ್ ರೂಪದಲ್ಲಿ ಬುಧವಾರ ಸಭೆ ನಡೆಸಿದರು.

‘ಪಕ್ಕದ ರಾಜ್ಯಗಳಾದ ಕೇರಳ ಹಾಗೂ ಮಹಾರಾಷ್ಟ್ರಗಳಲ್ಲಿ ಕೋವಿಡ್ ಮತ್ತೆ ಹೆಚ್ಚಳವಾಗುತ್ತಿದೆ. ಅಲ್ಲಿಂದ ಬರುವ ಪ್ರವಾಸಿಗರ ಮೂಲಕ ನಮ್ಮ ನಗರದಲ್ಲೂ ಕೋವಿಡ್ ಸೋಂಕು ಹೆಚ್ಚಾಗುವ ಸಾಧ್ಯತೆಯಿದೆ. ಆದ್ದರಿಂದ ಎಲ್ಲಾ ಅಪಾರ್ಟ್‌ಮೆಂಟ್ ಸಮುಚ್ಚಯಗಳಲ್ಲಿ ಕೋವಿಡ್ ನಿಯಂತ್ರಣ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು’ ಎಂದು ಮುಖ್ಯ ಆಯುಕ್ತರು ಸೂಚಿಸಿದರು.

‘ಕೋವಿಡ್ ಪ್ರಕರಣಗಳು ಪತ್ತೆಯಾದರೂ ಆತಂಕಕ್ಕೆ ಒಳಗಾಗಬೇಡಿ. ಸೋಂಕು ಇತರರಿಗೆ ಹರಡದಂತೆ ಎಚ್ಚರ ವಹಿಸಬೇಕು. ಕೋವಿಡ್ ಸೋಂಕು ದೃಢಪಟ್ಟವರ ಪ್ರತ್ಯೇಕ ವಾಸಕ್ಕೆ ಕ್ರಮಕೈಗೊಳ್ಳಬೇಕು. ಅವರ ಜೊತೆಗೆ ನೇರ ಹಾಗೂ ಪರೋಕ್ಷವಾಗಿ ಸಂಪರ್ಕಕ್ಕೆ ಬಂದವರು ಹಾಗೂ ಅವರ ಮನೆಯ ಅಕ್ಕ-ಪಕ್ಕದ ಮನೆಯವರು ಕೋವಿಡ್ ಪರೀಕ್ಷೆಗೆ ಒಳಗಾಗುವಂತೆ ನೋಡಿಕೊಳ್ಳಿ. ಪರೀಕ್ಷೆ ಫಲಿತಾಂಶ ಬರುವವರೆಗೂ ಅವರು ಕೂಡಾ ಪ್ರತ್ಯೇಕವಾಸದಲ್ಲಿರಲಿ’ ಎಂದು ಅವರು ಸಲಹೆ ನೀಡಿದರು.

‘ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ ಔತಣಕೂಟ ಮತ್ತಿತರ ಸಮಾರಂಭಗಳನ್ನು ನಡೆಸದಿದ್ದರೆ ಒಳ್ಳೆಯದು. ಒಂದು ವೇಳೆ ನಡೆಸುವುದಾದರೂ ಅಂತಹ ಕಾರ್ಯಕ್ರಮಗಳಲ್ಲಿ ಕೋವಿಡ್ ನಿಯಂತ್ರಣ ನಿಯಮಗಳ ಉಲ್ಲಂಘನೆ ಆಗದಂತೆ ಆರ್‌ಡಬ್ಲ್ಯುಎಗಳು ಕ್ರಮಕೈಗೊಳ್ಳಬೇಕು. ತೀರಾ ಅನಿವಾರ್ಯವಾದರೆ ಮಾತ್ರ ಇಂತಹ ಕಾರ್ಯಕ್ರಮಗಳಲ್ಲಿ ಭಾಗಿಯಾಗಬೇಕು. ನಿಗದಿತ ಮಿತಿಗಿಂತ ಹೆಚ್ಚು ಮಂದಿ ಭಾಗವಹಿಸಲು ಅವಕಾಶ ಕಲ್ಪಿಸಬಾರದು. ಅಂತರ ಕಾಯ್ದುಕೊಳ್ಳುವುದು ಹಾಗೂ ಮಾಸ್ಕ್ ಧರಿಸುವ ಬಗ್ಗೆ ಅಸಡ್ಡೆ ವಹಿಸಬಾರದು. ಎಲ್ಲರೂ ಬಳಸುವ ಸಾಮಾನ್ಯ ಜಾಗಗಳಲ್ಲಿ, ವ್ಯಾಯಾಮ ಕೇಂದ್ರಗಳಲ್ಲಿ ಹೆಚ್ಚಿನ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಸೂಚನೆ ನೀಡಿದರು.

ವಿಶೇಷ ಆಯುಕ್ತ (ಆರೋಗ್ಯ) ಡಿ. ರಂದೀಪ್, ‘ಆರ್‌ಡಬ್ಲ್ಯುಎಗಳು ಅಪಾರ್ಟ್‌ಮೆಂಟ್ ಸಮುಚ್ಚಯಗಳ ನಿವಾಸಿಗಳ ನಡುವೆ ಸಮನ್ವಯ ಕಾಪಾಡಬೇಕು. ಕೋವಿಡ್ ನಿಯಂತ್ರಣ ಕ್ರಮಗಳ ಬಗ್ಗೆ ಜಾಗೃತಿ ಮೂಡಿಸಬೇಕು’ ಎಂದು ಅವರು ಕಿವಿಮಾತು ಹೇಳಿದರು.

ಮುಖ್ಯಾಂಶಗಳು
- ವರ್ಚುವಲ್ ಸಭೆ ನಡೆಸಿದ ಬಿಬಿಎಂಪಿ ಮುಖ್ಯ ಆಯುಕ್ತ
- ಕೋವಿಡ್ ನಿಯಮಗಳ ಕಡ್ಡಾಯ ಪಾಲನೆಗೆ ಸೂಚನೆ
- ಔತಣಕೂಟ ಇತರ ಸಮಾರಂಭ ಬೇಡ–ಸಲಹೆ
- ವ್ಯಾಯಾಮ ಕೇಂದ್ರಗಳಲ್ಲಿ ಜಾಗೃತಿ ವಹಿಸಲು ಸೂಚನೆ

₹ 3 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

ಯಲಹಂಕ: ರಾಜ್ಯದ ಕೆಲವು ಜಿಲ್ಲೆಗಳಲ್ಲಿ ಉಂಟಾಗಿರುವ ಪ್ರವಾಹ ಹಾಗೂ ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿದ್ದು ಜನರು ಸಂಕಷ್ಟ ಎದುರಿಸುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಬಿಜೆಪಿ ನಾಯಕರು ಪರಿಹಾರ ಮತ್ತು ನಿಯಂತ್ರಣ ಕಾರ್ಯಗಳನ್ನು ಕೈಗೊಳ್ಳುವುದನ್ನು ಬಿಟ್ಟು ಅಧಿಕಾರಕ್ಕಾಗಿ ಕಚ್ಚಾಟ ನಡೆಸುತ್ತಿದ್ದಾರೆ ಎಂದು ಶಾಸಕ ಕೃಷ್ಣಬೈರೇಗೌಡ ವಾಗ್ದಾಳಿ ನಡೆಸಿದರು.

ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ದ್ವಾರಕಾನಗರದಲ್ಲಿ ₹ 3 ಕೋಟಿ ವೆಚ್ಚದಲ್ಲಿ ಕೈಗೆತ್ತಿಕೊಂಡಿರುವ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಚಾಲನೆನೀಡಿ ಮಾತನಾಡಿದ ಅವರು, ‘ಉತ್ತರ ಕರ್ನಾಟಕ ಭಾಗದಲ್ಲಿ ಪ್ರವಾಹದಿಂದ ಬೆಳೆಗಳಿಗೆ ಹಾನಿಯಾಗಿ ರೈತರು ಆಸ್ತಿ-ಪಾಸ್ತಿಗಳನ್ನು ಕಳೆದುಕೊಂಡು ನಷ್ಟ ಅನುಭವಿಸಿದ್ದಾರೆ. ಮತ್ತೊಂದೆಡೆ ಕೆಲವು ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣಗಳು ಹೆಚ್ಚಾಗುತ್ತಿದ್ದು, ತಜ್ಞರು 3ನೇ ಅಲೆಯ ಕಳವಳ ವ್ಯಕ್ತಪಡಿಸಿದ್ದಾರೆ. ಇಂತಹ ಗಂಭೀರ ಸಮಸ್ಯೆಗಳನ್ನು ಪರಿಹರಿಸಬೇಕಾದ ಬಿಜೆಪಿ ಶಾಸಕರು ಸಚಿವ ಸ್ಥಾನದ ಲಾಬಿಯಲ್ಲಿ ತೊಡಗಿರುವುದು ವಿಪರ್ಯಾಸ’ ಎಂದು ಅವರು ದೂರಿದರು.

‘ರಾಜ್ಯದಲ್ಲಿ ಇಷ್ಟೆಲ್ಲಾ ಸಮಸ್ಯೆಗಳಿದ್ದರೂ ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ವಾರದಲ್ಲಿ 5 ದಿನಗಳ ಕಾಲ ದೆಹಲಿಯಲ್ಲಿ ಸಮಯ ಕಳೆದಿದ್ದಾರೆ. ಜನರ ಸಾವು- ನೋವಿಗಿಂತಲೂ ಬಿಜೆಪಿಗೆ ಅಧಿಕಾರವೇ ಮುಖ್ಯ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ ಎಂದರು.

ಚಾಲನೆ: ವಾರ್ಡ್ ಸಂಖ್ಯೆ-5ರ ವ್ಯಾಪ್ತಿಯ ವಿನಾಯಕನಗರ ಮತ್ತು ದ್ವಾರಕಾನಗರದಲ್ಲಿ ಕಾವೇರಿ ಕೊಳವೆಮಾರ್ಗ ಅಳವಡಿಸುವ ಕಾಮಗಾರಿ ಕೈಗೊಂಡಿದ್ದ ಹಿನ್ನೆಲೆಯಲ್ಲಿ ಹಾಳಾಗಿದ್ದ ರಸ್ತೆಗಳನ್ನು ₹50 ಲಕ್ಷ ವೆಚ್ಚದಲ್ಲಿ ಮತ್ತೆ ಮರು ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಮುಂದಿನ ದಿನಗಳಲ್ಲಿ ₹ 2 ಕೋಟಿ ವೆಚ್ಚದಲ್ಲಿ ಉಳಿದಿರುವ ಕಾಮಗಾರಿಗಳನ್ನು ಆರಂಭಿಸಲಾಗುವುದು ಎಂದು ಕೃಷ್ಣಬೈರೇಗೌಡ ತಿಳಿಸಿದರು.



ದ್ವಾರಕಾನಗರದ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೃಷ್ಣಬೈರೇಗೌಡ ಚಾಲನೆ ನೀಡಿದರು. ಕಾಂಗ್ರೆಸ್ ಮುಖಂಡರಾದ ಎಚ್‌.ಎ.ಶಿವಕುಮಾರ್, ಮೋಹನ್ ರಾಜು, ಮುನಿರಾಜು, ರಾಜಣ್ಣ, ಅಪ್ಪಿಯಣ್ಣ, ರಾಜೀವಪ್ಪ, ಗೋವಿಂದರಾಜು, ಮುನಿನಾಗಣ್ಣ, ಮಂಜುಳ, ಪಂಕಜ ಉಪಸ್ಥಿತರಿದ್ದರು.

ನೆರೆ ಸಂತ್ರಸ್ತರಿಗೆ ಪರಿಹಾರ ಸಾಮಗ್ರಿ ವಿತರಣೆ

ಪ್ರಜಾವಾಣಿ ವಾರ್ತೆ

ಯಲಹಂಕ: ಬ್ಯಾಟರಾಯನಪುರ ವ್ಯಾಪ್ತಿಯ ಜಕ್ಕೂರಿನಲ್ಲಿರುವ ಭಾರತ್ ಸೇವಾಶ್ರಮ ಸಂಘವು ಬೆಳಗಾವಿ ಜಿಲ್ಲೆಯ ನೆರೆ ಸಂತ್ರಸ್ತರಿಗೆ ಪರಿಹಾರ ಸಾಮಗ್ರಿಗಳನ್ನು ವಿತರಿಸಿದೆ.

ಸಂಘದ ಜಕ್ಕೂರು ಶಾಖೆಯ ಮುಖ್ಯಸ್ಥ ಶಿವಪ್ರೇಮಾನಂದ ಸ್ವಾಮೀಜಿ, ‘ಬೆಳಗಾವಿಯ ನೆರೆ ಸಂತ್ರಸ್ತರಿಗೆ ಐಟಿಸಿ, ಬ್ರಿಟಾನಿಯ, ಎವರೆಡಿ ಕಂಪನಿಗಳು ಹಾಗೂ ಬೆಂಗಳೂರಿನಲ್ಲಿ ನೆಲೆಸಿರುವ ಬೆಂಗಾಲಿ ಭಾಷಿಕರು ದೇಣಿಗೆ ನೀಡಿದ್ದರು. ಅಕ್ಕಿ, ಹಾಲು, ಬಿಸ್ಕೆಟ್, ನೀರಿನ ಬಾಟಲಿ, ಬೆಡ್‌ಶೀಟ್ ಸೇರಿದಂತೆ ಇತರ ಪರಿಹಾರ ಸಾಮಗ್ರಿಗಳನ್ನು ಬೆಳಗಾವಿ ಜಿಲ್ಲೆಯ ನೆರೆಪೀಡಿತ ಗ್ರಾಮಗಳಿಗೆ ತೆರಳಿ ಅಲ್ಲಿನ ಸಂತ್ರಸ್ತರಿಗೆ ವಿತರಿಸಲಾಯಿತು’ ಎಂದು ಹೇಳಿದರು.

ಸಾಮಗ್ರಿಗಳ ವಿತರಣೆಯಲ್ಲಿ ಹೈದರಾಬಾದ್ ಹಾಗೂ ತಿರುವನಂತಪುರ ಶಾಖೆಗಳ ಮುನಿಶ್ವರಾನಂದ ಸ್ವಾಮೀಜಿ ಹಾಗೂ ಬ್ರಹ್ಮಚಾರಿ ಸುಖದೇವಾನಂದ ಸ್ವಾಮೀಜಿ ಸೇರಿದಂತೆ ಇತರರು ಭಾಗವಹಿಸಿದ್ದರು.

ಆರೋಗ್ಯ ಇಲಾಖೆಯಿಂದ ಸ್ತನ್ಯಪಾನ ಸಪ್ತಾಹ

ಎದೆ ಹಾಲಿನ ಬಗ್ಗೆ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ತನ್ಯಪಾನ ಸಪ್ತಾಹವನ್ನು ಹಮ್ಮಿಕೊಂಡಿರುವ ಆರೋಗ್ಯ ಇಲಾಖೆ, ‘ಸಾಂಕ್ರಾಮಿಕ ರೋಗದ ವಿರುದ್ಧ ಹೋರಾಡಲು ತಾಯಿಯ ಎದೆಹಾಲು ಸಹಕಾರಿ. ಇದರಿಂದ ರೋಗನಿರೋಧಕ ಶಕ್ತಿ ಮಗುವಿನಲ್ಲಿ ಹೆಚ್ಚಳವಾಗಲಿದೆ’ ಎಂದು ತಿಳಿಸಿದೆ.

ಈ ಸಪ್ತಾಹದ ಅಂಗವಾಗಿ ಇಲಾಖೆಯು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ‘ತಾಯಿಯ ಎದೆಹಾಲಿನಲ್ಲಿ ಮಗುವಿನ ಬೆಳವಣಿಗೆಗೆ ಬೇಕಾದ ಪೌಷ್ಟಿಕತೆ, ಖನಿಜಾಂಶ ಮತ್ತು ಹೇರಳವಾದ ನೀರಿನ ಅಂಶಗಳು ಅಡಕವಾಗಿವೆ. ಮಗುವಿಗೆ ಇದು ಮೊದಲ ಲಸಿಕೆಯಾಗಲಿದೆ. ಮೊದಲ ಮೂರು ದಿನದ ಹಾಲಿನಲ್ಲಿ ಹೆಚ್ಚು ರೋಗ ನಿರೋಧಕಗಳಿರಲಿದ್ದು, ಮಗುವಿಗೆ ರೋಗ ಪ್ರತಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ಅದೇ ರೀತಿ, ಸೋಂಕುಗಳಿಂದ ರಕ್ಷಣೆ ನೀಡುತ್ತದೆ. ಜನಿಸಿದ ಒಂದು ಗಂಟೆಯೊಳಗೆ ಹಾಲುಣಿಸಲು ಪ್ರಾರಂಭಿಸಿ, ಆರು ತಿಂಗಳವರೆಗೆ ಎದೆಹಾಲನ್ನು ಮಾತ್ರ ನೀಡಬೇಕು’ ಎಂದು ತಿಳಿಸಲಾಗಿದೆ.

‘ಸ್ತನ್ಯಪಾನದಿಂದ ಶಿಶು ಮರಣ ತಪ್ಪಿಸಲು ಸಾಧ್ಯವಾಗುತ್ತದೆ. ತಾಯಿಯ ಎದೆಹಾಲಿನಷ್ಟು ಪೋಷಕಾಂಶ ಭರಿತ ಆಹಾರ ಭೂಮಿಯ ಮೇಲೆ ಇಲ್ಲ. ಇದನ್ನು ಕೃತಕವಾಗಿ ಸೃಷ್ಟಿಸಲು ಸಾಧ್ಯವಿಲ್ಲ. ಮಗುವಿಗೆ ನೀಡುವ ಚುಚ್ಚುಮದ್ದಿಗಿಂತ ಇದು ಹೆಚ್ಚು ಶಕ್ತಿಶಾಲಿಯಾಗಿದೆ’ ಎಂದು ಹೇಳಲಾಗಿದೆ.

ಸುರಕ್ಷತೆಗೆ ಆದ್ಯತೆ ನೀಡಿ

‘ಕೋವಿಡ್ ಪೀಡಿತ ತಾಯಂದಿರು ಸ್ತನ್ಯಪಾನ ಮಾಡಿಸಿದಲ್ಲಿ ಮಗುವಿಗೆ ಕೊರೊನಾ ಸೋಂಕು ಹರಡಲಿದೆ ಎಂಬುದಕ್ಕೆ ಯಾವುದೇ ಪುರಾವೆಯಿಲ್ಲ ಹಾಗಾಗಿ, ಸೂಕ್ತ ಮುನ್ನೆಚ್ಚರಿಕೆಯೊಂದಿಗೆ ತಾಯಂದಿರು ನವಜಾತ ಶಿಶುಗಳಿಗೆ ಸ್ತನ್ಯಪಾನ ಮಾಡಿಸಬೇಕು. ಸೋಂಕಿತ ಮಹಿಳೆ ಮಗುವನ್ನು ಸ್ಪರ್ಶಿಸುವ ಮೊದಲು ಸ್ವಚ್ಛತೆಯನ್ನು ಖಚಿತಪಡಿಸಿ ಕೊಳ್ಳಬೇಕು. ಕಡ್ಡಾಯ ವಾಗಿ ಮುಖ ಗವಸನ್ನು ಧರಿಸಿರಬೇಕು’ ಎಂದು ಸೂಚಿಸಲಾಗಿದೆ.

‘ಮಗುವನ್ನು ಎತ್ತಿಕೊಳ್ಳುವ ಮೊದಲು ಕೈಗಳನ್ನು ಸೋಪಿನ ನೀರಿನಲ್ಲಿ ಸ್ವಚ್ಛವಾಗಿ ತೊಳೆದುಕೊಳ್ಳಬೇಕು. ಅದೇ ರೀತಿ, ವಾಸವಿರುವ ಕೊಠಡಿಯಲ್ಲಿನ ಬಟ್ಟೆಗಳು ಹಾಗೂ ನೆಲವನ್ನು ಕೂಡ ಸೋಂಕು ನಿವಾರಕದಿಂದ ಸ್ವಚ್ಛಪಡಿಸಬೇಕು. ಆಗ ಮಾತ್ರ ತಾಯಿಯು ಮಗುವಿಗೆ ಎದೆ ಹಾಲನ್ನು ನೀಡ ಬಹುದು. ತಾಯಿ ಹಾಗೂ ಶಿಶು ಒಂದೇ ಕೊಠಡಿಯನ್ನು ಹಂಚಿಕೊಳ್ಳಬಹುದು’ ಎಂದು ತಿಳಿಸಲಾಗಿದೆ.

‘ಕಸ ನಿರ್ವಹಣೆಗೆ ವಾರ್ಷಿಕ ₹900 ತೆರಿಗೆ’

ಪ್ರಜಾವಾಣಿ ವಾರ್ತೆ

ಕೆಂಗೇರಿ: ‘ಕಸ ವೈಜ್ಞಾನಿಕ ನಿರ್ವಹಣೆಗಾಗಿ ಸೂಲಿಕೆರೆ ಪಂಚಾಯಿತಿ ವ್ಯಾಪ್ತಿಯ ಪ್ರತಿ ಮನೆಗೂ ಪ್ರಸಕ್ತ ಸಾಲಿನಿಂದ ₹ 900 ವಾರ್ಷಿಕ ತೆರಿಗೆ ನಿಗದಿಪಡಿಸಲಾಗಿದೆ’ ಎಂದು ಸೂಲಿಕೆರೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ನಾಗರಾಜ್ ತಿಳಿಸಿದರು.

ಸೂಲಿಕೆರೆ ಸರ್ಕಾರಿ ಶಾಲೆಯ ಆವರಣದಲ್ಲಿ ನಡೆದ ಗ್ರಾಮಸಭೆಯಲ್ಲಿ ಅವರು ಮಾತನಾಡಿದರು.

‘ಅಡುಗೆ ಕೋಣೆಯ ಸಂಖ್ಯೆ ಆಧರಿಸಿ ದರ ನಿಗದಿ ಮಾಡಲಾಗುತ್ತಿದೆ. ಗ್ರಾಮೀಣ ಭಾಗಗಳಿಗೂ ಗುಣಮಟ್ಟದ ಮೂಲಸೌಕರ್ಯ ಒದಗಿಸಲು ಘನ ತ್ಯಾಜ್ಯದ ವೈಜ್ಞಾನಿಕ ನಿರ್ವಹಣೆಯ ಅಗತ್ಯವಿದೆ. ಇದಕ್ಕಾಗಿ ₹35 ಲಕ್ಷ ಮೊತ್ತದ ಕ್ರಿಯಾ ಯೋಜನೆ ರೂಪಿಸಲಾಗಿದೆ. ಈ ಹಣವನ್ನು ಬಳಕೆದಾರರಿಂದ ಪಡೆಯಲು ತೆರಿಗೆ ಸಂಗ್ರಹಕ್ಕೆ ಕ್ರಮ ವಹಿಸಲಾಗಿದೆ’ ಎಂದರು.

‘ನೀರಿನ ದರ ಹಾಗೂ ಕಟ್ಟಡ ತೆರಿಗೆಯನ್ನೂ ಪರಿಷ್ಕರಿಸಲಾಗಿದೆ. ನಾಗರಿಕರು ಸಹಕಾರ ನೀಡುವ ಮೂಲಕ ಅಭಿವೃದ್ಧಿಗೆ ಸಹಕರಿಸಬೇಕು’ ಎಂದು ಮನವಿ ಮಾಡಿದರು.

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿ ನಾಗವೇಣಿ, ‘ಕೋವಿಡ್ ಮೂರನೇ ಅಲೆಯ ಸೂಚನೆ ಇದೆ. ಸೂಲಿಕೆರೆ ವ್ಯಾಪ್ತಿಯಲ್ಲಿ ಶೇ 80ರಷ್ಟು ಮಂದಿ ಲಸಿಕೆ ಪಡೆದಿದ್ದಾರೆ. ಉಳಿದವರೂ ಶೀಘ್ರವಾಗಿ ಲಸಿಕೆ ಹಾಕಿಸಿಕೊಳ್ಳಿ’ ಎಂದರು.

‘ಕೊಮ್ಮಘಟ್ಟ ಕೆರೆಗೆ ಸುತ್ತಮುತ್ತಲ ಬಡಾವಣೆಗಳ ಕೊಳಚೆ ನೀರು ಸೇರುತ್ತಿದೆ. ವರ್ಷ ಕಳೆದರೂ ವೃದ್ಧಾಪ್ಯ ವೇತನ, ವಿಧವಾ ವೇತನ ಖಾತೆಗೆ ಜಮಾ ಆಗುತ್ತಿಲ್ಲ. ಪಶುವೈದ್ಯರು ಗ್ರಾಮಗಳತ್ತ ಸುಳಿಯುತ್ತಲೇ ಇಲ್ಲ. ದನಕರುಗಳಿಗೆ ಅನಾರೋಗ್ಯ ಉಂಟಾದರೆ ಏನು ಮಾಡಬೇಕು’ ಎಂದು ಗ್ರಾಮಸ್ಥರು ದೂರಿದರು.

ಸಭೆಯಲ್ಲಿ 25 ಮಂದಿ ಫಲಾನುಭವಿಗಳಿಗೆ ಭಾಗ್ಯಲಕ್ಷ್ಮೀ ಬಾಂಡ್, ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತರಿಗೆ ಪ್ರೋತ್ಸಾಹಧನ ವಿತರಿಸಲಾಯಿತು.



ಗ್ರಾಮಸಭೆಯಲ್ಲಿ ಆಶಾ ಕಾರ್ಯಕರ್ತೆಯರಿಗೆ ಪ್ರೋತ್ಸಾಹಧನ ವಿತರಿಸಲಾಯಿತು. ವೈದ್ಯೆ ಉಮಾ, ಪಿಡಿಒ ನಾಗರಾಜ್, ಸೂಲಿಕೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷೆ ದಾಕ್ಷಾಯಿಣಿ, ಮೋಹನ್ ಕುಮಾರ್, ವಿಜಯ್ ಕುಮಾರ್ ಹಾಗೂ ಇದ್ದಾರೆ.



ಬೊಮ್ಮಾಯಿ ಸಂಪುಟ

ರಾಜಭವನದ ಗಾಜಿನಮನೆಯಲ್ಲಿ ಬುಧವಾರ ಪ್ರಮಾಣವಚನ ಸ್ವೀಕರಿಸಿದ ನೂತನ ಸಚಿವರು ರಾಜ್ಯಪಾಲ ಥಾವರಚಂದ್ ಗೆಹಲೋತ್ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರೊಂದಿಗೆ -ಪ್ರಜಾವಾಣಿ ಚಿತ್ರ

ಮುನೇನಕೊಪ್ಪ ಎರಡನೇ ಬಾರಿ ಪ್ರಮಾಣ!

ಬೆಂಗಳೂರು: ಶಂಕರ ಪಾಟೀಲ ಮುನೇನಕೊಪ್ಪ ಅವರು ಎರಡು ಬಾರಿ ಪ್ರಮಾಣ ವಚನ ಸ್ವೀಕರಿಸಿದ ಘಟನೆ ನಡೆದಿದೆ.

ಸಚಿವ ಸಂಪುಟ ರಚನೆಯ ಸಂದರ್ಭದಲ್ಲಿ ಶಾಸಕ ಶಂಕರ ಪಾಟೀಲ ಮುನೇನಕೊಪ್ಪ ಅವರು ಸಚಿವರಾಗಿ ಅಧಿಕಾರಪದ ಮತ್ತು ಗೋಪ್ಯತಾ ಪ್ರಮಾಣವನ್ನು ಪ್ರತ್ಯೇಕವಾಗಿ ಸ್ವೀಕರಿಸುವ ಬದಲು ಅಧಿಕಾರ ಪದದ ಪ್ರತಿಜ್ಞಾ ವಿಧಿಯನ್ನು ಎರಡು ಬಾರಿ ಸ್ವೀಕರಿಸಿದ್ದರು. ಇದನ್ನು ಗಮನಿಸಿ ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಅವರು, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್ ಅವರ ಸಮ್ಮುಖದಲ್ಲಿ ಬುಧವಾರ ಸಂಜೆ ಮತ್ತೊಮ್ಮೆ ಪ್ರಮಾಣ ವಚನ ಬೋಧಿಸಿದರು.

ಬಿಸಿಲು–ಮಳೆ ಸಿಂಚನದ ಮಧ್ಯೆ ಸಚಿವರ ಪ್ರಮಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯಲ್ಲಿ ಬೆಳಗ್ಗಿನಿಂದ ಸಂಜೆಯವರೆಗೂ ತುಸು ಬಿಸಿಲು, ಮೋಡ ಮತ್ತು ತುಂತುರು ಮಳೆಯ ಸಿಂಚನದ ಆಟ. ಮತ್ತೊಂದೆಡೆ ಬಿಜೆಪಿ ಸರ್ಕಾರದ ನೂತನ ಸಚಿವರ ಪ್ರಮಾಣ ಸ್ವೀಕಾರ ಸಮಾರಂಭಕ್ಕೆ ಮುನ್ನ ಮತ್ತು ಬಳಿಕ ಆ ಪಕ್ಷದಲ್ಲೂ 'ಮೋಡ ಕವಿದ' ವಾತಾವರಣವೇ ಇತ್ತು. ಸಚಿವ ಸ್ಥಾನ ಸಿಕ್ಕವರು ಸಂತಸದಲ್ಲಿ ತೇಲಾಡಿದರೆ, ಸಿಗದವರು ಗುಡುಗಿದರು, ಇನ್ನು ಕೆಲವರು ಗದ್ಗದಿತರಾಗಿ ಕಣ್ಣೀರು ಹಾಕಿದರು.

ಪ್ರಮಾಣ ಸ್ವೀಕಾರ ಕಾರ್ಯಕ್ರಮಕ್ಕೆಂದು ರಾಜಭವನದ ಸುಂದರ ಗಾಜಿನ ಮನೆಯನ್ನು ಬಗೆ–ಬಗೆಯ ಹೂವುಗಳಿಂದ ಅಲಂಕರಿಸಲಾಗಿತ್ತು. ಸಂಪುಟದಲ್ಲಿ ಸ್ಥಾನ ಗಿಟ್ಟಿಸಿದವರು ನಗು ಮೊಗದಿಂದ ಗರಿಗರಿ ಬಟ್ಟೆ ತೊಟ್ಟು ರಾಜಭವನಕ್ಕೆ ಅಡಿ ಇಟ್ಟರೆ, ಸ್ಥಾನ ಸಿಗದವರು ಅತ್ತ ಸುಳಿಯಲೇ ಇಲ್ಲ. ಬದಲಿಗೆ ಮಾಧ್ಯಮಗಳ ಮುಂದೆ ತಮಗೆ ಘೋರ ಅನ್ಯಾಯವಾಗಿದೆ ಎಂದು ಅಳಲು ತೋಡಿಕೊಂಡರು. ಇನ್ನು ಕೆಲವು ಶಾಸಕರ ಬೆಂಬಲಿಗರು ಪ್ರತಿಭಟನೆ ಮೂಲಕ ಆಕ್ರೋಶ ಹೊರ ಹಾಕಿದರು.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಮಧ್ಯಾಹ್ನ 2.15 ಕ್ಕೆ ಸರಿಯಾಗಿ ನೂತನ ಸದಸ್ಯರಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಸುಮಾರು 75 ನಿಮಿಷಗಳ ಕಾಲ ನಡೆದ ಪ್ರಮಾಣ ವಚನ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಕಲಬುರ್ಗಿ ಸಂಸದ ಡಾ. ಉಮೇಶ ಜಾಧವ್ ಮತ್ತಿತರರು ಇದ್ದರು. 29 ಶಾಸಕರ ಸೇರ್ಪಡೆಯೊಂದಿಗೆ ಬೊಮ್ಮಾಯಿ ನೇತೃತ್ವದ ಸಂಪುಟ ಬಲ 30 ಕ್ಕೇರಿದಂತಾಗಿದೆ.



ಲಂಬಾಣಿ ಸಮುದಾಯದ ಸಾಂಪ್ರದಾಯಿಕ ಉಡುಗೆ ತೊಟ್ಟಿದ್ದ ಪ್ರಭು ಚವ್ಹಾಣ್ –ಪ್ರಜಾವಾಣಿ ಚಿತ್ರ

ರಂಗು ರಂಗಾಗಿ ಬಂದ ಶಾಸಕರು: ಸಚಿವರಾಗಿ ಪ್ರಮಾಣ ಸ್ವೀಕರಿಸಲು ಬಂದ ಬಹುತೇಕ ಶಾಸಕರ ಕೊರಳನ್ನು ಕೇಸರಿ ಶಾಲುಗಳು ಅಲಂಕರಿಸಿದ್ದರೆ, ಕೆಲವರು ಕೇಸರಿ ಬಣ್ಣದ ಓವರ್ ಕೋಟ್ ಮತ್ತು ಅಂಗಿ ತೊಟ್ಟು ಸಿದ್ಧಾಂತದ ಬಣ್ಣಕ್ಕೆ ನಿಷ್ಠೆಯನ್ನು ಪ್ರದರ್ಶಿಸಿದರು. ಪ್ರಭು ಚವ್ಹಾಣ್ ಅವರು ಲಂಬಾಣಿ ಸಮುದಾಯದ ಸಾಂಪ್ರದಾಯಿಕ ಉಡುಗೆ ತೊಟ್ಟು ವಿಭಿನ್ನವಾಗಿ ಕಾಣಿಸಿಕೊಂಡರು. ಮಾಧ್ಯಮಗಳ ಮುಂದೆ ಅವರು ಗೋಮಾತೆಯ ನಾಮ ಜಪಿಸುತ್ತಿದ್ದುದು ಕಂಡು ಬಂದಿತು. ಶಶಿಕಲಾ ಜೊಲ್ಲೆ ಸಂಪುಟ ಸೇರಿದ ಏಕೈಕ ಮಹಿಳೆ.



ಕೆ. ಗೋಪಾಲಯ್ಯ, ಕೆ.ಎಸ್‌. ಈಶ್ವರಪ್ಪ ಅವರು ಮಾಜಿ ಮುಖ್ಯಮಂತ್ರಿ ಬಿ.ಎಸ್‌. ಯಡ್ಡಿಯೂರಪ್ಪ ಅವರೊಂದಿಗೆ ಸಮಾಲೋಚನೆ ನಡೆಸಿದರು.



ಡಾ.ಕೆ.ಸುಧಾಕರ್ ಅವರ ಬೆಂಬಲಿಗರ ಹರ್ಷೋದ್ಗಾರ



ಕರಾವಳಿ ಭಾಗದ ಸಚಿವರಾದ ಕೋಟ ಶ್ರೀನಿವಾಸ ಪೂಜಾರಿ, ಎಸ್‌. ಅಂಗಾರ ಹಾಗು ಸುನಿಲ್ ಕುಮಾರ್ ಸಂತಸದ ಕ್ಷಣ

'ದೇವರು, ರೈತರು, ಜನರ ಹೆಸರಲ್ಲಿ...'

ಮುರುಗೇಶ ನಿರಾಣಿ ಮತ್ತು ಶಂಕರ ಪಾಟೀಲ ಮುನೇನಕೊಪ್ಪ ಅವರು ದೇವರ ಹೆಸರಿನ ಜೊತೆಗೆ ರೈತರ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸಿದರೆ, ಬಿ.ಸಿ. ಪಾಟೀಲ ಅವರು, ರೈತರು ಮತ್ತು ಜಗಜ್ಯೋತಿ ಬಸವೇಶ್ವರರ ಹೆಸರಿನಲ್ಲಿ, ಪ್ರಭು ಚವ್ಹಾಣ ಅವರು ಗೋಮಾತೆ ಮತ್ತು ಸಂತ ಸೇವಾಲಾಲ್ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸಿದರು.

ಶಿವರಾಂ ಹೆಬ್ಬಾರ್ ಮತ್ತು ಶಶಿಕಲಾ ಜೊಲ್ಲೆ ಅವರು ದೇವರು ಮತ್ತು ಕ್ಷೇತ್ರದ ಜನರ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸಿದರು. ಆನಂದಸಿಂಗ್ ಅವರು ವಿಜಯನಗರದ ಪಂಪಾ ವಿರೂಪಾಕ್ಷ ಮತ್ತು ತಾಯಿ ಭುವನೇಶ್ವರಿ ಹೆಸರಿನಲ್ಲಿ, ಉಳಿದ ಸಚಿವರು ದೇವರ ಹೆಸರಿನಲ್ಲಿ ಪ್ರಮಾಣ ಸ್ವೀಕರಿಸಿದರು.

ಯಡಿಯೂರಪ್ಪ ಕೇಂದ್ರ ಬಿಂದು: ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ತಮ್ಮ ಪುತ್ರ ಬಿ.ವೈ.ವಿಜಯೇಂದ್ರ ಜತೆ ರಾಜಭವನಕ್ಕೆ ಬಂದರು. ಸಚಿವ ಸ್ಥಾನ ಗಿಟ್ಟಿಸಿದವರಲ್ಲಿ ಬಹುತೇಕರು ಅವರ ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆದರು.

ಯಡಿಯೂರಪ್ಪ ಆಸನದಲ್ಲಿ ಕುಳಿತುಕೊಳ್ಳಲು ಹೋಗುತ್ತಿದ್ದಂತೆ ಕೆ.ಎಸ್.ಈಶ್ವರಪ್ಪ ಅವರು ಮಾತನಾಡಿಸಲು ಹೋದರು. ಆದರೆ ಯಡಿಯೂರಪ್ಪ ಕೈಯಿಂದ ಸರಿಸಿ ಮಾತನಾಡದೇ ಮುಂದೆ ಹೋದರು. ಆದರೂ ಪ್ರಯತ್ನ ಬಿಡದ ಈಶ್ವರಪ್ಪ ತಮ್ಮ ಹಳೇ ಗೆಳೆಯ ಕುಳಿತಲ್ಲಿ ಹೋಗಿ ನಗುತ್ತಾ ಮಾತನಾಡಿಸಿ ಕೈ ಮುಗಿದರು. ಕಳೆದ ಸರ್ಕಾರದ ಅವಧಿಯಲ್ಲಿ ಇವರಿಬ್ಬರು ಪರಸ್ಪರ ಮಾತನಾಡುವುದನ್ನೇ ಬಿಟ್ಟಿದ್ದರು.

ಬೊಮ್ಮಾಯಿ ಕಾಲಿಗೆ ಬಿದ್ದ ಮುನಿರತ್ನ: ವಲಸಿಗರಾಗಿ ಬಿಜೆಪಿಗೆ ಬಂದ ಮುನಿರತ್ನ ಅವರು ಮುಖ್ಯಮಂತ್ರಿಯವರ ಕಾಲು ಮುಟ್ಟಿ ನಮಸ್ಕರಿಸಿದರು. ಪ್ರಮಾಣವಚನ ಸ್ವೀಕರಿಸಿದ ಬಳಿಕ ಬೊಮ್ಮಾಯಿಯಿಂದ ಹೂ ಗುಚ್ಛ ಪಡೆದ ಅವರು ನಂತರ ಕಾಲು ಮುಟ್ಟಿ ನಮಸ್ಕರಿಸದರು.

ಶಶಿಕಲಾ ಸ್ಥಾನ ಗಿಟ್ಟಿಸಿದ್ದು ಹೇಗೆ?



ಶಶಿಕಲಾ ಜೊಲ್ಲೆ

ಬೆಂಗಳೂರು: ಭಾರಿ ಪೈಪೋಟಿಯ ಮಧ್ಯೆಯೂ ಮಾಜಿ ಸಚಿವೆ ಶಶಿಕಲಾ ಜೊಲ್ಲೆ ಅವರು ಮತ್ತೊಮ್ಮೆ ಸಂಪುಟದಲ್ಲಿ ಸ್ಥಾನ ಪಡೆದಿರುವುದು, ಪಕ್ಷದಲ್ಲಿ ಬಹುತೇಕ ನಾಯಕರ ಹುಬ್ಬೇರುವಂತೆ ಮಾಡಿದೆ.

ಶಶಿಕಲಾ ಹೆಸರನ್ನು ಪಟ್ಟು ಹಿಡಿದು ಸಚಿವ ಸ್ಥಾನದ ಪಟ್ಟಿಗೆ ಕೊನೆ ಗಳಿಗೆಯಲ್ಲಿ ಸೇರಿಸುವಲ್ಲಿ ಪಕ್ಷದ ರಾಷ್ಟ್ರೀಯ ಸಂಘಟನಾ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಅವರ ಪಾತ್ರ ಮಹತ್ವದ್ದು ಎಂದು ಮೂಲಗಳು ತಿಳಿಸಿವೆ.

ಮಂಗಳವಾರ ರಾತ್ರಿಯವರೆಗೂ ಗೊಲ್ಲ ಸಮುದಾಯಕ್ಕೆ ಸೇರಿದ ಪೂರ್ಣಿಮಾ ಶ್ರೀನಿವಾಸ್ ಅವರ ಹೆಸರೇ ಆಖೈರುಗೊಂಡು ಪಟ್ಟಿಯಲ್ಲಿತ್ತು. ಆದರೆ, ಕೆಲವು ದಿನಗಳಿಂದ ದೆಹಲಿಯಲ್ಲಿ ಬೀಡು ಬಿಟ್ಟಿದ್ದ ಜೊಲ್ಲೆ, ಬುಧವಾರ ಬೆಳಿಗ್ಗೆ 10 ಗಂಟೆಯ ವೇಳೆಗೆ ಪಟ್ಟಿಗೆ ತಮ್ಮ ಹೆಸರು ಸೇರಿಸಿದ್ದು ಖಚಿತಗೊಂಡ ಬಳಿಕವೇ ಬೆಳಿಗ್ಗೆ 11.15 ರ ವಿಮಾನದಲ್ಲಿ ದೆಹಲಿಯಿಂದ ಬೆಂಗಳೂರಿನತ್ತ ದೌಡಾಯಿಸಿದರು. ಹೀಗಾಗಿ ಅವರು ಪ್ರಮಾಣ ವಚನಕ್ಕೆ ಅರ್ಧ ಗಂಟೆ ತಡವಾಗಿ ಬಂದರು. ಅವರಿಗಾಗಿ ಬೆಂಗಳೂರು ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದಿಂದ ರಾಜಭವನದವರೆಗೆ ಎಲ್ಲ ರಸ್ತೆಗಳಲ್ಲಿ ವಾಹನಗಳ ಸಂಚಾರ ತಡೆ (ಜಿರೋ ಟ್ರಾಫಿಕ್) ಹಿಡಿಯಲಾಗಿತ್ತು.

'ಶಶಿಕಲಾ ಅವರ ಹೆಸರು ಸೇರಿಸುವಲ್ಲಿ ಅಂತಿಮ ಕ್ಷಣದವರೆಗೂ ಶ್ರಮ ವಹಿಸಿದ್ದು ಖುದ್ದು ಸಂತೋಷ್ ಅವರೇ. ಸಚಿವರಾಗಿ ಕಳಪೆ ನಿರ್ವಹಣೆ ಮತ್ತು ಮೊಟ್ಟೆ ಖರೀದಿ ಟೆಂಡರ್‌ನಲ್ಲಿ ಕಮಿಷನ್‌ಗೆ ಬೇಡಿಕೆ ಇಟ್ಟ ಆರೋಪದ ಪ್ರಕರಣ ಬಯಲಿಗೆ ಬಂದ ಬಳಿಕ, ಶಶಿಕಲಾ ಅವರು ಹೆಸರು ಪರಿಶೀಲನೆಯಲ್ಲಿ ಇರಲೇ ಇಲ್ಲ. ಪೂರ್ಣಿಮಾ ಅವರಿಗೆ ಸಚಿವ ಸ್ಥಾನ ನೀಡಿ ಗೊಲ್ಲ ಸಮುದಾಯಕ್ಕೆ ಪ್ರಾತಿನಿಧ್ಯ ನೀಡುವ ಲೆಕ್ಕಾಚಾರ ಇತ್ತು' ಎಂದು ಬಿಜೆಪಿ ಮೂಲಗಳು ತಿಳಿಸಿವೆ.

'ಪಕ್ಷದಲ್ಲಿ ಕುಟುಂಬ ರಾಜಕಾರಣ ಪ್ರೋತ್ಸಾಹಿಸುವುದಿಲ್ಲ ಎಂದು ಹೇಳುತ್ತಲೇ ಒಂದೇ ಮನೆಯ ಇಬ್ಬರಿಗೆ ಅಧಿಕಾರ ನೀಡಲಾಗಿದೆ' ಎಂಬ ಚರ್ಚೆಯೂ ಪಕ್ಷದ ವಲಯದಲ್ಲಿ ಶುರುವಾಗಿದೆ.

ಕೋವಿಡ್, ನೆರೆ ವೀಕ್ಷಣೆ: ನೂತನ ಸಚಿವರಿಗೆ ಹೊಣೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ನಿರ್ವಹಣೆ ಮತ್ತು ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾರ್ಯಗಳನ್ನು ತ್ವರಿತವಾಗಿ ಕೈಗೊಳ್ಳಲು ನೂತನ ಸಚಿವರಿಗೆ ಜಿಲ್ಲೆಗಳ ಉಸ್ತುವಾರಿಯನ್ನು ಹಂಚಿಕೆ ಮಾಡಿ ಆದೇಶ ಹೊರಡಿಸಲಾಗಿದೆ.

ನೂತನ ಸಚಿವರ ಜೊತೆ ನಡೆಸಿದ ಮೊದಲ ಸಂಪುಟ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನದಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರಿಗೆ ಉಸ್ತುವಾರಿ ಜಿಲ್ಲೆಗಳನ್ನು ಹಂಚಿಕೆ ಮಾಡಿದ್ದಾರೆ.

ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಬೆಂಗಳೂರು ನಗರ ಜಿಲ್ಲೆ ಅವರ ಬಳಿಯೇ ಇತ್ತು. ಅದನ್ನೀಗ, ಅಶೋಕ ಅವರಿಗೆ ವಹಿಸಲಾಗಿದೆ.

ಗೃಹ ಸಚಿವರಾಗಿದ್ದಾಗ ಬೊಮ್ಮಾಯಿ ಅವರ ಮೇಲಿದ್ದ ಹಾವೇರಿ ಜಿಲ್ಲೆಯ ಹೊಣೆಯನ್ನು ಬಿ.ಸಿ. ಪಾಟೀಲರಿಗೆ, ಉಡುಪಿ ಜಿಲ್ಲೆ ಜವಾಬ್ದಾರಿಯನ್ನು ವಿ. ಸುನೀಲ್ ಕುಮಾರ್ ಅವರಿಗೆ ನೀಡಲಾಗಿದೆ.

ಯಾರಿಗೆ ಯಾವ ಜಿಲ್ಲೆ

ಸಚಿವರು	ಜಿಲ್ಲೆ
ಗೋವಿಂದ ಎಂ. ಕಾರಜೋಳ	ಬೆಳಗಾವಿ
ಕೆ.ಎಸ್. ಈಶ್ವರಪ್ಪ	ಶಿವಮೊಗ್ಗ
ಆರ್. ಅಶೋಕ	ಬೆಂಗಳೂರು ನಗರ
ಬಿ. ಶ್ರೀರಾಮುಲು	ಚಿತ್ರದುರ್ಗ
ವಿ. ಸೋಮಣ್ಣ	ರಾಯಚೂರು
ಉಮೇಶ ಕತ್ತಿ	ಬಾಗಲಕೋಟೆ
ಎಸ್. ಅಂಗಾರ	ದಕ್ಷಿಣ ಕನ್ನಡ
ಜೆ.ಸಿ. ಮಾಧುಸ್ವಾಮಿ	ತುಮಕೂರು
ಆರಗ ಜ್ಞಾನೇಂದ್ರ	ಚಿಕ್ಕಮಗಳೂರು
ಡಾ.ಸಿ.ಎನ್. ಅಶ್ವತ್ಥನಾರಾಯಣ	ರಾಮನಗರ
ಸಿ.ಸಿ. ಪಾಟೀಲ	ಗದಗ
ಆನಂದ ಸಿಂಗ್	ಬಳ್ಳಾರಿ, ವಿಜಯನಗರ
ಕೋಟ ಶ್ರೀನಿವಾಸ ಪೂಜಾರಿ	ಕೊಡಗು
ಪ್ರಭು ಚವ್ಹಾಣ್	ಬೀದರ್
ಮುರುಗೇಶ ಆರ್. ನಿರಾಣಿ	ಕಲಬುರ್ಗಿ
ಶಿವರಾಮ ಹೆಬ್ಬಾರ್	ಉತ್ತರ ಕನ್ನಡ
ಎಸ್.ಟಿ. ಸೋಮಶೇಖರ್	ಮೈಸೂರು, ಚಾಮರಾಜನಗರ
ಬಿ.ಸಿ. ಪಾಟೀಲ	ಹಾವೇರಿ
ಬಿ.ಎ. ಬಸವರಾಜ್	ದಾವಣಗೆರೆ
ಡಾ.ಕೆ. ಸುಧಾಕರ್	ಚಿಕ್ಕಬಳ್ಳಾಪುರ
ಕೆ. ಗೋಪಾಲಯ್ಯ	ಹಾಸನ
ಶಶಿಕಲಾ ಜೊಲ್ಲೆ	ವಿಜಯಪುರ
ಎಂಟಿಬಿ ನಾಗರಾಜ್	ಬೆಂಗಳೂರು ಗ್ರಾಮಾಂತರ
ಕೆ.ಸಿ. ನಾರಾಯಣಗೌಡ	ಮಂಡ್ಯ
ಬಿ.ಸಿ. ನಾಗೇಶ್	ಯಾದಗಿರಿ
ವಿ. ಸುನೀಲ್ ಕುಮಾರ್	ಉಡುಪಿ
ಹಾಲಪ್ಪ ಆಚಾರ್	ಕೊಪ್ಪಳ
ಶಂಕರ ಪಾಟೀಲ ಮುನೇನಕೊಪ್ಪ	ಧಾರವಾಡ
ಮುನಿರತ್ನ	ಕೋಲಾರ

ಪರಿಶಿಷ್ಟ ಪಂಗಡಕ್ಕೆ ಪ್ರತ್ಯೇಕ ಸಚಿವಾಲಯ

ಒಂದನೇ ಪುಟದಿಂದ...

'ಪರಿಶಿಷ್ಟ ಪಂಗಡಗಳ ಯೋಜನೆ (ಎಸ್‌ಟಿಪಿ) ಅಡಿಯಲ್ಲಿ ಮೀಸಲಿಟ್ಟ ಅನುದಾನವನ್ನು ಬೇರೆ ಬೇರೆ ಇಲಾಖೆಗಳಿಗೆ ನೀಡಲಾಗುತ್ತಿದೆ. ಯೋಜನೆಗಳಿಗೆ ತ್ವರಿತವಾಗಿ ಅನುಮತಿ ನೀಡಲು ಮತ್ತು ಸಮಗ್ರ ಮೇಲುಸ್ತುವಾರಿಗೆ ಎಸ್‌ಟಿ ಕಲ್ಯಾಣ ಸಚಿವಾಲಯ ಸ್ಥಾಪಿಸಬೇಕು ಎನ್ನುವುದು ಬಹಳ ವರ್ಷಗಳ ಹಿಂದಿನ ಬೇಡಿಕೆ' ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

ಮಹಿಳಾ ಅಭಿವೃದ್ಧಿಗೆ ಸಮಿತಿ: ಬಜೆಟ್‌ನಲ್ಲಿ ಮಹಿಳೆಯರು ಮತ್ತು ಮಕ್ಕಳ ಸಬಲೀಕರಣಕ್ಕೆ ಪ್ರತ್ಯೇಕ ಅನುದಾನ ಮೀಸಲಿಡಲಾಗಿದ್ದು, ಆ ಕಾರ್ಯಕ್ರಮಗಳನ್ನು ಬೇರೆ ಬೇರೆ ಇಲಾಖೆಗಳ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಆದರೆ, ಆ ಯೋಜನೆಗಳ ಸಮನ್ವಯ ನಡೆಯುತ್ತಿಲ್ಲ. ಹೀಗಾಗಿ, ಅವುಗಳ ಮೇಲುಸ್ತುವಾರಿಗೆ ಮುಖ್ಯಮಂತ್ರಿ ನೇತೃತ್ವದಲ್ಲಿ ಸಮಿತಿ (ಮಿಷನ್) ರಚಿಸಲು ತೀರ್ಮಾನಿಸಲಾಗಿದೆ' ಎಂದರು.

ಸಂಪುಟದಲ್ಲಿ ವಲಸಿಗರದ್ದೇ ಪ್ರಾಬಲ್ಯ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರದಲ್ಲಿ, ಪಕ್ಷದ ಮೂಲ ಕಾರ್ಯಕರ್ತರಾಗಿ ಬೆಳೆದು ಬಂದವರಿಗಿಂತಲೂ ಹೊರಗಿನಿಂದ ಬಂದ 'ವಲಸಿಗ'ರೇ ಹೆಚ್ಚಿನ ಸಂಖ್ಯೆಯಲ್ಲಿ ಸಚಿವ ಸ್ಥಾನ ಪಡೆದಿದ್ದಾರೆ. ಮುಖ್ಯಮಂತ್ರಿಯೂ ಸೇರಿದಂತೆ 16 ಮಂದಿ ವಲಸಿಗರಿದ್ದಾರೆ!

ಮೂಲದಿಂದ ಬಿಜೆಪಿಯಲ್ಲೇ ಬೆಳೆದಿರುವ ಕೆ.ಎಸ್.ಈಶ್ವರಪ್ಪ, ಆರ್. ಅಶೋಕ, ಎಸ್. ಅಂಗಾರ, ಆರಗ ಜ್ಞಾನೇಂದ್ರ, ಡಾ.ಸಿ.ಎನ್. ಅಶ್ವತ್ಥನಾರಾಯಣ ಸಿ.ಸಿ. ಪಾಟೀಲ, ಕೋಟ ಶ್ರೀನಿವಾಸ ಪೂಜಾರಿ, ಪ್ರಭು ಚವ್ಹಾಣ್, ಮುರುಗೇಶ್ ಆರ್. ನಿರಾಣಿ, ಶಶಿಕಲಾ ಜೊಲ್ಲೆ, ಬಿ.ಸಿ. ನಾಗೇಶ್, ವಿ. ಸುನೀಲ್ ಕುಮಾರ್, ಹಾಲಪ್ಪ ಆಚಾರ್ ಮತ್ತು ಶಂಕರ ಪಾಟೀಲ್ ಮುನೇನಕೊಪ್ಪ ಅವರಿಗೆ ಸಂಪುಟದಲ್ಲಿ ಅವಕಾಶ ದೊರಕಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರಾದ ಗೋವಿಂದ ಕಾರಜೋಳ, ವಿ. ಸೋಮಣ್ಣ, ಉಮೇಶ್ ಕತ್ತಿ ದಶಕದ ಹಿಂದೆ ಜನತಾ-ಪರಿವಾರದಿಂದ ಬಿಜೆಪಿಗೆ ಬಂದವರು. ಜೆ.ಸಿ. ಮಾಧುಸ್ವಾಮಿ ಕೆಲವು ವರ್ಷಗಳ ಈಚೆಗಷ್ಟೇ ಬಿಜೆಪಿ ಸೇರಿದವರು. ಬಿ. ಶ್ರೀರಾಮುಲು ಮತ್ತು ಆನಂದ್ ಸಿಂಗ್ ಮೂಲದಲ್ಲಿ ಬಿಜೆಪಿಯವರೇ ಆದರೂ, ಒಮ್ಮೆ ಪಕ್ಷದಿಂದ ಹೊರಹೋಗಿ ಮತ್ತೆ ವಾಪಸ್ ಬಂದಿರುವವರು.

ಎಸ್.ಟಿ. ಸೋಮಶೇಖರ್, ಶಿವರಾಂ ಹೆಬ್ಬಾರ್, ಬಿ.ಸಿ. ಪಾಟೀಲ, ಬೈರತಿ ಬಸವರಾಜ, ಡಾ.ಕೆ. ಸುಧಾಕರ್, ಕೆ. ಗೋಪಾಲಯ್ಯ, ಎಂ.ಟಿ.ಬಿ. ನಾಗರಾಜು, ಕೆ.ಸಿ. ನಾರಾಯಣ ಗೌಡ ಮತ್ತು ಮುನಿರತ್ನ 2019ರಲ್ಲಿ 'ಆಪರೇಷನ್ ಕಮಲ'ದ ಮೂಲಕ ಕಾಂಗ್ರೆಸ್ ಹಾಗೂ ಜೆಡಿಎಸ್ ತೊರೆದು ಬಿಜೆಪಿ ಸೇರಿದವರು.

ಬಿಎಸ್‌ವೈ ಮನವೊಲಿಸಿದ ಜೆ.ಪಿ.ನಡ್ಡಾ



ಯಡಿಯೂರಪ್ಪ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸಂಪುಟದಲ್ಲಿ ತಮ್ಮ ಪುತ್ರ ಬಿ.ವೈ. ವಿಜಯೇಂದ್ರ ಅವರಿಗೆ ಸ್ಥಾನ ಸಿಗದ ಕಾರಣ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬುಧವಾರ ಕೊಂಚ ಸಮಯ ಬೇಸರ-ಗೊಂಡಿದ್ದರು.

ಮಂಗಳವಾರ ರಾತ್ರಿ ಬಹಳ ಹೊತ್ತಿನವರೆಗೆ ಬಸವರಾಜ ಬೊಮ್ಮಾಯಿ ಮೂಲಕ ತಮ್ಮ ಪುತ್ರನ ಪರವಾಗಿ ಒತ್ತಡ ಹೇರಿದ್ದ ಯಡಿಯೂರಪ್ಪ ಅವರು, ಬುಧವಾರ ಹೊರಬಿದ್ದ ಪಟ್ಟಿಯಲ್ಲಿ ಪುತ್ರನ ಹೆಸರು ಕಾಣಿಸಿಕೊಳ್ಳದ ಕಾರಣಕ್ಕೆ ಅಸಮಾಧಾನಗೊಂಡಿದ್ದರು.

ಯಡಿಯೂರಪ್ಪ ದುಡುಕಿನ ನಿರ್ಧಾರ ತೆಗೆದುಕೊಂಡು ಪಕ್ಷಕ್ಕೆ ಘಾಸಿ ಮಾಡಿದರೆ ಕಷ್ಟವಾಗಬಹುದು ಎಂಬ ಕಾರಣಕ್ಕೆ ಪಕ್ಷದ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಯಡಿಯೂರಪ್ಪ ಜತೆಗೆ ದೂರವಾಣಿ ಮೂಲಕ ಮಾತನಾಡಿ ಸಮಾಧಾನಗೊಳಿಸಿದರು. 'ಮುಂದಿನ ದಿನಗಳಲ್ಲಿ ವಿಜಯೇಂದ್ರ ಅವರಿಗೆ ಅವಕಾಶ ನೀಡಲಾಗುವುದು. ಈಗ ತಾಳ್ಮೆವಹಿಸಿ' ಎಂದು ಹೇಳಿದ್ದಾಗಿ ಮೂಲಗಳು ತಿಳಿಸಿವೆ.

ಯಡಿಯೂರಪ್ಪ ನೆರಳಿನಿಂದ ಹೊರಬಂದು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಬೇಕು ಎಂಬ ಸೂಚನೆಯನ್ನೂ ವರಿಷ್ಠರು ಮುಖ್ಯಮಂತ್ರಿ ಬೊಮ್ಮಾಯಿ ಅವರಿಗೆ ನೀಡಿದ್ದಾರೆ. ಅವರ ನಿರ್ದೇಶನದ ಅನ್ವಯ ಬೊಮ್ಮಾಯಿ ಬೆಳಿಗ್ಗೆ ದೆಹಲಿಯಿಂದ ಮರಳಿದ ಬಳಿಕ ನೇರವಾಗಿ ಯಡಿಯೂರಪ್ಪ ಅವರ ಮನೆಗೆ ಹೋಗದೇ ವಿಧಾನಸೌಧಕ್ಕೆ ತೆರಳಿದರು. ಹಿಂದೆಲ್ಲ ಯಾವುದೇ ಕೆಲಸಕ್ಕೂ ಮೊದಲು ಬೊಮ್ಮಾಯಿ ಅವರು ಯಡಿಯೂರಪ್ಪ ಅವರ ಮನೆಗೆ ಭೇಟಿ ನೀಡುತ್ತಿದ್ದರು.

ಸಚಿವರ ಪಟ್ಟಿ ಬಿಡುಗಡೆ ಆದ ಬಳಿಕ ಮತ್ತು ಪ್ರಮಾಣ ವಚನ ಸ್ವೀಕಾರಕ್ಕೆ ಮೊದಲು ಕೆಲವು ಹಿರಿಯ ಶಾಸಕರ ಜತೆ ಬೊಮ್ಮಾಯಿ ಅವರು ಯಡಿಯೂರಪ್ಪ ಅವರನ್ನು ಭೇಟಿ ಮಾಡಿದರು.

ಬಿಜೆಪಿ ಶಾಸಕ ಆನಂದ ಮಾಮನಿ ಹೇಳಿಕೆ

'ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಪಕ್ಷದ ಹಿರಿಯರೊಂದಿಗೆ ಮಾತುಕತೆಗೆ ಮಾಮನಿ ನಿರ್ಧಾರ

'ರಾಜೀನಾಮೆ ಹೇಳಿಕೆಗೆ ಬದ್ಧ: ಚರ್ಚಿಸಿ ತೀರ್ಮಾನ'



ಬೆಳಗಾವಿ: 'ಸಚಿವ ಸ್ಥಾನ ಸಿಗದಿದ್ದರೆ ವಿಧಾನಸಭೆ ಉಪಾಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡುವುದಾಗಿ ನೀಡಿರುವ ಹೇಳಿಕೆಗೆ ಈಗಲೂ ಬದ್ಧನಿದ್ದೇನೆ' ಎಂದು ಸವದತ್ತಿ–ಯಲ್ಲಮ್ಮ ಕ್ಷೇತ್ರದ ಬಿಜೆಪಿ ಶಾಸಕ ಆನಂದ ಮಾಮನಿ ತಿಳಿಸಿದರು.

'ಪ್ರಜಾವಾಣಿ' ಜೊತೆ ಬುಧವಾರ ಮಾತನಾಡಿದಅವರು, '2008ರಿಂದ ಸತತವಾಗಿ ಮೂರು ಬಾರಿ ಗೆದ್ದು ಶಾಸಕನಾಗಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದೇನೆ. ಜನರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳನ್ನು ತಲುಪಿಸಲು ಶ್ರಮಿಸಿದ್ದೇನೆ. ಪಕ್ಷಕ್ಕಾಗಿ ದುಡಿದಿದ್ದೇನೆ. ಈ ಬಾರಿ ಸಚಿವ ಸ್ಥಾನ ನೀಡಬೇಕು ಎನ್ನುವುದು ನನ್ನ ಒತ್ತಾಯವಾಗಿತ್ತು. ಕ್ಷೇತ್ರದ ಜನರ ಬಯಕೆಯೂ ಅದೇ ಆಗಿತ್ತು. ಆದರೆ, ಮನ್ನಣೆ ದೊರೆತಿಲ್ಲದಿರುವುದು ಬೇಸರ ತರಿಸಿದೆ' ಎಂದು ತಿಳಿಸಿದರು. 'ಪಕ್ಷದ ಹಿರಿಯ ಮುಖಂಡರೊಂದಿಗೆ ಚರ್ಚಿಸಿ, ಬಳಿಕ ಕ್ಷೇತ್ರದ ಮತದಾರರು, ಕಾರ್ಯಕರ್ತರ ಜೊತೆ ಚರ್ಚಿಸಿ ಮುಂದಿನ ನಿರ್ಧಾರ ಕೈಗೊಳ್ಳುತ್ತೇನೆ' ಎಂದು ಸ್ಪಷ್ಟಪಡಿಸಿದರು.

ಹಳಬರಿಗೇ ಮಣೆ: ಬೊಮ್ಮಾಯಿಗೆ ಪೂರ್ಣ ಹೊಣೆ

ಒಂದನೇ ಪುಟದಿಂದ...

ಒಕ್ಕಲಿಗರೂ ತಾವೂ ಕಮ್ಮಿ ಇಲ್ಲ ಎಂಬಂತೆ 7 ಸ್ಥಾನ ಗಿಟ್ಟಿಸಿದ್ದಾರೆ. ಜನಸಂಖ್ಯಾ ಬಾಹುಳ್ಯದಲ್ಲಿ ಕಡಿಮೆ ಇರುವ ಬ್ರಾಹ್ಮಣ ಸಮುದಾಯದ ಇಬ್ಬರಿಗೆ ಸಚಿವ ಸ್ಥಾನ ಸಿಕ್ಕಿದ್ದರೆ, ಈಗಾಗಲೇ ವಿಶ್ವೇಶ್ವರ ಹೆಗಡೆ ಕಾಗೇರಿ ಸಭಾಧ್ಯಕ್ಷರಾಗಿದ್ದಾರೆ. ಹೀಗಾಗಿ, ಸಚಿವ ಸ್ಥಾನದ ಗೌರವ ಒಂದೇ ಸಮುದಾಯದ ಮೂವರಿಗೆ ಲಭಿಸಿದಂತಾಗಿದೆ. ಕುರುಬ ಸಮುದಾಯ–ಈಡಿಗ ಸಮುದಾಯಗಳು ನಂತರದ ಪ್ರಾತಿನಿಧ್ಯ ಪಡೆದಿವೆ. ಅನೇಕ ತಳಸಮುದಾಯ-ಗಳು, ಅಲಕ್ಷಿತ ಸಮುದಾಯಗಳು ಈ ಬಾರಿಯೂ ಕಡೆಗಣನೆಗೆ ಗುರಿಯಾಗಿರುವುದು ಢಾಳಾಗಿ ಕಾಣಿಸುತ್ತದೆ.

ವಲಸಿಗರಿಗೆ ಮಣೆ: ಸಚಿವ ಸಂಪುಟ ವಿಸ್ತರಣೆ ವೇಳೆ ವಲಸಿಗರಿಗೆ ಹೆಚ್ಚಿನ ಆದ್ಯತೆಯೇ ಸಿಕ್ಕಿದೆ. ಹಿಂದಿನ ಸರ್ಕಾರದಲ್ಲಿ ಸಚಿವರಾಗಿದ್ದ ವಲಸಿಗರ ಪೈಕಿ ಶೇ 50 ಮಂದಿಗಷ್ಟೇ ಮತ್ತೆ ಸಚಿವ ಸ್ಥಾನ ಸಿಗಬಹುದು ಎಂಬ ಅಂದಾಜಿತ್ತು. ಆದರೆ, ಶ್ರೀಮಂತ ಪಾಟೀಲ, ಆರ್. ಶಂಕರ್ ಸ್ಥಾನ ಕಳೆದುಕೊಂಡಿದ್ದರೆ ಮುನಿರತ್ನ ಹೊಸ ಸೇರ್ಪಡೆಯಾಗಿದ್ದಾರೆ. ಮಹಾರಾಷ್ಟ್ರ, ರಾಜಸ್ಥಾನದಲ್ಲಿ ಸರ್ಕಾರ ಕೈವಶ ಮಾಡಿಕೊಳ್ಳುವ ಅಂದಾಜಿನಲ್ಲಿ ಬಿಜೆಪಿ ವರಿಷ್ಠರಿದ್ದಾರೆ. ಇಲ್ಲಿ ಸಚಿವ ಸ್ಥಾನ ತಪ್ಪಿಸಿದರೆ ಅಲ್ಲಿ ತಮ್ಮ ಕಾರ್ಯತಂತ್ರಕ್ಕೆ ಹಿನ್ನಡೆಯಾದೀತು ಎಂಬ ಕಾರಣಕ್ಕೆ ಇಷ್ಟವಿಲ್ಲದೇ ಇದ್ದರೂ ಕೆಲವರನ್ನು ಮುಂದುವರಿಸಲು ತೀರ್ಮಾನಿಸಿದರು ಎಂಬ ಮಾತುಗಳೂ ಇವೆ.

ಬೊಮ್ಮಾಯಿ ಅವರೂ ಸೇರಿದಂತೆ ಅನ್ಯ ಪಕ್ಷಗಳಿಂದ ಬಂದವರೇ ಸಚಿವ ಸಂಪುಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ-ದ್ದಾರೆ. ಸಂಘ ಪರಿವಾರದ ಚಿಂತನೆ, ಕಠೋರ ಹಿಂದುತ್ವ ಪ್ರತಿಪಾದನೆ ಮಾಡುವವರಿಗೆ ಸಂಪುಟ ರಚನೆಯ ವೇಳೆ ಹೆಚ್ಚಿನ ಆದ್ಯತೆ ಸಿಗಲಿದೆ ಎಂದು ಹೇಳಲಾಗಿತ್ತು. ಒಟ್ಟು ಸಂಖ್ಯೆಯನ್ನು ಗಮನಿಸಿದರೆ ಕೆ.ಎಸ್. ಈಶ್ವರಪ್ಪ, ವಿ. ಸುನಿಲ್ ಕುಮಾರ್, ಕೋಟ ಶ್ರೀನಿವಾಸ ಪೂಜಾರಿ, ಎಸ್. ಅಂಗಾರ, ಬಿ.ಸಿ. ನಾಗೇಶ್ ಅವರಂತಹ ಕೆಲವೇ ನಿಷ್ಠರಿಗೆ ಈ ಬಾರಿ ಪಕ್ಷ ಮಣೆ ಹಾಕಿದೆ.

ಹಿಂದಿನ ಸಾಲಿಗೆ 'ಹೊಸ ತಲೆಮಾರು'


ಎರಡು ವರ್ಷಗಳ ಹಿಂದೆ ಯಡಿಯೂರಪ್ಪ ನೇತೃತ್ವದ ಸಂಪುಟ ರಚನೆಯಾದಾಗ ಹೊಸ ತಲೆಮಾರಿಗೆ ನಾಯಕತ್ವ ನೀಡಬೇಕು ಎಂಬ ಕಾರಣಕ್ಕೆ ಇಬ್ಬರಿಗೆ ಉಪಮುಖ್ಯಮಂತ್ರಿ ಸ್ಥಾನ ನೀಡಿ, ಕಿರಿಯರಿಗೆ ಬಡ್ತಿ ನೀಡಲಾಗಿತ್ತು. ಯಡಿಯೂರಪ್ಪ ಜತೆಗೂ ಚರ್ಚಿಸದೇ ಗೋವಿಂದ ಕಾರಜೋಳ, ಸಿ.ಎನ್. ಅಶ್ವತ್ಥನಾರಾಯಣ, ಲಕ್ಷ್ಮಣ ಸವದಿ ಅವರನ್ನು ಉಪಮುಖ್ಯಮಂತ್ರಿ ಮಾಡಲಾಗಿತ್ತು.

ಬಿಜೆಪಿ ವರಿಷ್ಠರ ಈ ನಿಲುವಿನಿಂದಾಗಿ ಪಕ್ಷದಲ್ಲಿ ಹಿರಿಯರಾದ ಜಗದೀಶ ಶೆಟ್ಟರ್, ಕೆ.ಎಸ್. ಈಶ್ವರಪ್ಪ, ಆರ್. ಅಶೋಕ ಅವರೆಲ್ಲ ಕೆಳಹಂತಕ್ಕೆ ತಳ್ಳಲ್ಪಟ್ಟಿದ್ದರು. ಎರಡನೇ ತಲೆಮಾರಿನ ನಾಯಕತ್ವ ಬೆಳೆಸಲು ಈ ಕ್ರಮ ಎಂದು ಆ ಪಕ್ಷದ ವರಿಷ್ಠರು ಸಮರ್ಥನೆ ನೀಡಿದ್ದರು. ಆ ಪ್ರಯೋಗ ನಿರೀಕ್ಷಿತ ಫಲ ನೀಡದ ಕಾರಣಕ್ಕೆ ಈ ಬಾರಿ ಹಿರಿತನವನ್ನು ಆಧರಿಸಿಯೇ ಸಚಿವ ಸಂಪುಟದ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ. ಹೀಗಾಗಿ, ಸಂಪುಟದಿಂದ ಸವದಿ ಹೊರಹೋಗಿದ್ದರೆ, ಅಶ್ವತ್ಥನಾರಾಯಣ ಸಚಿವರ ಯಾದಿಯಲ್ಲಿ 10 ನೇ ಸ್ಥಾನಕ್ಕೆ ಹೋಗಿದ್ದಾರೆ. ಹಿರಿತನದ ಆಧಾರದಲ್ಲಿ ಕಾರಜೋಳ, ಈಶ್ವರಪ್ಪ, ಅಶೋಕ ಮೊದಲ ಮೂರು ಸ್ಥಾನಕ್ಕೆ ಬಂದಿದ್ದಾರೆ.


ಬಿಎಸ್‌ವೈ ಪರ–ವಿರೋಧಿಗಳಿಗೆ ಸಿಗದ ಮನ್ನಣೆ



ರೇಣುಕಾಚಾರ್ಯ



ಬಸನಗೌಡ ಪಾಟೀಲ ಯತ್ನಾಳ್



ಸಿ.ಪಿ. ಯೋಗೇಶ್ವರ್

ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿಯಾಗಿದ್ದಾಗ ಅವರ ಪರ ವಕಾಲತ್ತು ವಹಿಸುತ್ತಿದ್ದವರು ಹಾಗೂ ಅವರ ವಿರುದ್ಧ ಬೀದಿಯಲ್ಲಿ ಅಬ್ಬರಿಸುತ್ತಿದ್ದ ಇಬ್ಬಣಗಳನ್ನೂ ಸಂಪುಟ ರಚನೆಯ ವೇಳೆ ಖುಲ್ಲಂಖುಲ್ಲಾ ಹೊರಗಿಡಲಾಗಿದೆ.

'ಈಗಿರುವುದು ಮೂರು ಪಕ್ಷಗಳ ಸರ್ಕಾರ. ಪರೀಕ್ಷೆ ಬರೆದಿದ್ದೇವೆ; ಫಲಿತಾಂಶಕ್ಕೆ ಕಾಯುತ್ತಿದ್ದೇವೆ. ನನಗೆ ಉತ್ತಮ ಖಾತೆಯೇ ಸಿಗಲಿದೆ' ಎಂದು ಸ್ವಯಂ ಘೋಷಣೆ ಮಾಡಿಕೊಂಡಿದ್ದ ಸಿ.ಪಿ. ಯೋಗೇಶ್ವರ್ ಅವರನ್ನು ಸಂಪುಟದಿಂದ ಹೊರಗಿಡಲಾಗಿದೆ. 'ವಿಜಯೇಂದ್ರ ಹಿಡಿತದಲ್ಲಿರುವ ಈ ಸರ್ಕಾರದ ಭ್ರಷ್ಟಾಚಾರ ಮುಗಿಲು ಮುಟ್ಟಿದೆ; ಗಡ್ಡ ಬಿಟ್ಟಿದ್ದು ಯಾಕೆ ಎಂದು ಕೆಲವು ದಿನಗಳಲ್ಲೇ ಗೊತ್ತಾಗಲಿದೆ ' ಎಂದು ವಿರುದ್ಧ್ವನಿಯಲ್ಲಿ ಮಾತನಾಡುತ್ತಿದ್ದ ಬಸನಗೌಡ ಪಾಟೀಲ ಯತ್ನಾಳ, 'ನಾನೇ ಮುಖ್ಯಮಂತ್ರಿ' ಎಂದು ಓಡಾಡಿಕೊಂಡಿದ್ದ ಅರವಿಂದ ಬೆಲ್ಲದ, ಸರ್ಕಾರದ ವಿರುದ್ಧ ಗಟ್ಟಿ ಧ್ವನಿ ಮೊಳ-ಗಿಸುತ್ತಿದ್ದ ಎಚ್. ವಿಶ್ವನಾಥ್ ಅವರಿಗೆ ಹೊಸ ಸಂಪುಟದಲ್ಲಿ ಸ್ಥಾನ ಸಿಕ್ಕಿಲ್ಲ.

ಯಡಿಯೂರಪ್ಪ ವಿರುದ್ಧ ಕಿಡಿಕಾರುತ್ತಿದ್ದವರ ಮೇಲೆ ಹರಿಹಾಯುತ್ತಿದ್ದ ಎಂ.ಪಿ. ರೇಣುಕಾಚಾರ್ಯ, ರಾಜೂಗೌಡ, ಮಾಡಾಳ್ ವಿರೂಪಾಕ್ಷಪ್ಪ ಸೇರಿದಂತೆ ಯಾರಿಗೂ ಸಚಿವ ಸ್ಥಾನ ಸಿಕ್ಕಿಲ್ಲ.

ಇಂತಹದೇ ಖಾತೆ ಬೇಕು ಎಂಬ ಷರತ್ತು ಒಡ್ಡಿದ್ದ ಬಾಲಚಂದ್ರ ಜಾರಕಿಹೊಳಿ ಕೂಡ ಸಚಿವ ಸ್ಥಾನ ಕಳೆದುಕೊಂಡಿದ್ದಾರೆ. ಬಿಜೆಪಿ ಸರ್ಕಾರ ರಚನೆಯಲ್ಲಿ ಪ್ರಮುಖ ಪಾತ್ರವಹಿಸಿದ್ದ ಜಾರಕಿಹೊಳಿ ಕುಟುಂಬ ಈ ಬಾರಿ ಮಹತ್ವದ ಖಾತೆಯೇ ಬೇಕು ಎಂದು ಪಟ್ಟು ಹಿಡಿದಿತ್ತು. ಬಾಲಚಂದ್ರ ಅವರನ್ನು ಸೇರಿಸಿಕೊಳ್ಳದೇ ಇರುವ ಮೂಲಕ, ಅಂತಹ ಹಟಕ್ಕೆಲ್ಲ ಮಣಿಯುವುದಿಲ್ಲ ಎಂಬ ಸಂದೇಶವನ್ನು ಬಿಜೆಪಿ ವರಿಷ್ಠರು ರವಾನಿಸಿದ್ದಾರೆ.

ವಿರೋಧ ಪಕ್ಷಗಳ ಮೇಲೆ ಗೂಬೆ ಕೂರಿಸುವ ಕೆಲಸ: ವಿಪಕ್ಷಗಳ ಆರೋಪ ● ಪೆಗಾಸಸ್ ಕುರಿತು ಚರ್ಚೆಗೆ ಆಗ್ರಹ

ಕಲಾಪ ಸ್ಥಗಿತಕ್ಕೆ ಸರ್ಕಾರವೇ ಕಾರಣ

ನವದೆಹಲಿ (ಪಿಟಿಐ): 'ಸಂಸತ್ತಿನ ಉಭಯ ಸದನಗಳಲ್ಲಿ ಕಲಾಪ ನಡೆಯದೇ ಇರುವುದಕ್ಕೆ ಸರ್ಕಾರವೇ ಸಂಪೂರ್ಣ ಕಾರಣ. ಆದರೆ ವಿರೋಧ ಪಕ್ಷಗಳೇ ಇದಕ್ಕೆ ಕಾರಣ ಎಂದು ಸರ್ಕಾರ ಸುಳ್ಳು ಪ್ರಚಾರ ನಡೆಸುತ್ತಿದೆ' ಎಂದು 14 ವಿರೋಧ ಪಕ್ಷಗಳು ಆರೋಪಿಸಿವೆ.

ಈ ಸಂಬಂಧ ಸಂಸತ್ತಿನ ಉಭಯ ಸದನಗಳ ಸದಸ್ಯರಾಗಿರುವ 14 ವಿರೋಧ ಪಕ್ಷಗಳ 18 ಸಂಸದರು ಬುಧವಾರ ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ. 'ಪೆಗಾಸಸ್ ಗೂಢಚರ್ಯೆ ಮತ್ತು ಕೃಷಿ ಕಾಯ್ದೆಗಳ ಸಂಬಂಧ ರೈತರು ನಡೆಸುತ್ತಿರುವ ಪ್ರತಿಭಟನೆ ಕುರಿತು ಚರ್ಚೆ ನಡೆಸಬೇಕು ಎಂಬ ವಿರೋಧ ಪಕ್ಷಗಳ ಬೇಡಿಕೆಗೆ ಮಾನ್ಯತೆ ನೀಡಬೇಕು' ಎಂದು ಸಂಸತ್ತಿನ ಉಭಯ ಸದನಗಳಲ್ಲೂ ವಿರೋಧ ಪಕ್ಷಗಳು ಆಗ್ರಹಿಸಿವೆ.

'ಉಭಯ ಸದನಗಳಲ್ಲಿ ಚರ್ಚೆ ನಡೆಸಬೇಕು ಎಂಬ ವಿರೋಧ ಪಕ್ಷಗಳ ಬೇಡಿಕೆಗೆ ಕಿವುಡಾಗಿರುವ, ಬೇಡಿಕೆಯನ್ನು ನಿರಾಕರಿಸುತ್ತಿರುವ ಈ ಅಹಂಕಾರಿ ಸರ್ಕಾರವೇ ಕಲಾಪ ನಡೆಯದೇ ಇರುವುದಕ್ಕೆ ಏಕೈಕ ಕಾರಣ. ಆದರೆ ಈ ಬೇಡಿಕೆ ಇಡುತ್ತಿರುವ ವಿರೋಧ ಪಕ್ಷಗಳ ಒಗ್ಗಟ್ಟೇ ಕಲಾಪ ನಡೆಯದೇ ಇರಲು ಕಾರಣ ಎಂದು ಸರ್ಕಾರ ಸುಳ್ಳು ಪ್ರಚಾರಕ್ಕೆ ಚಾಲನೆ ನೀಡಿದೆ'' ಎಂದು ವಿರೋಧ ಪಕ್ಷಗಳು ಆರೋಪಿಸಿವೆ.

'ಪೆಗಾಸಸ್ ಗೂಢಚರ್ಯೆಯು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ವಿಚಾರ. ಹೀಗಾಗಿ ಸಂಸತ್ತಿನ ಉಭಯ ಸದನಗಳಲ್ಲೂ ಚರ್ಚೆ ನಡೆಸಬೇಕು ಎಂಬ ವಿರೋಧ ಪಕ್ಷಗಳ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ' ಎಂದು ಜಂಟಿ ಹೇಳಿಕೆಯಲ್ಲಿ ಒತ್ತಾಯಿಸಲಾಗಿದೆ.

'ಪೆಗಾಸಸ್ ಚರ್ಚೆಯ ನಂತರ, ಕೃಷಿ ಕಾಯ್ದೆಗಳ ಬಗ್ಗೆಯೂ ಚರ್ಚೆ ನಡೆಸಬೇಕು. ಈ ಕಾಯ್ದೆಗಳ ವಿರುದ್ಧ ರೈತರು ಪ್ರತಿಭಟನೆ ನಡೆಸುತ್ತಲೇ ಇದ್ದಾರೆ. ಹೀಗಾಗಿ ಈ ಬಗ್ಗೆಯೂ ಚರ್ಚೆ ನಡೆಯಬೇಕಿದೆ' ಎಂದು ವಿರೋಧ ಪಕ್ಷಗಳು ಒತ್ತಾಯಿಸಿವೆ.

ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಕಾಂಗ್ರೆಸ್‌ನ ಮಲ್ಲಿಕಾರ್ಜುನ ಖರ್ಗೆ. ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ಡಿಎಂಕೆಯ ಟಿ.ಆರ್.ಬಾಲು ಮತ್ತು ತಿರುಚ್ಚಿ ಶಿವಾ, ಕಾಂಗ್ರೆಸ್‌ನ ಆನಂದ್ ಶರ್ಮಾ, ಸಮಾಜವಾದಿ ಪಕ್ಷದ ರಾಮಗೋಪಾಲ್ ಯಾದವ್. ಟಿಎಂಸಿಯ ಡೆರೆಕ್ ಒಬ್ರಿಯಾನ್ ಮತ್ತು ಕಲ್ಯಾಣ್ ಬ್ಯಾನರ್ಜಿ, ಶಿವಸೇನಾದ ಸಂಜಯ್ ರಾವುತ್ ಮತ್ತು ವಿನಾಯಕ್ ರಾವುತ್ ಈ ಜಂಟಿ ಹೇಳಿಕೆಗೆ ಸಹಿ ಮಾಡಿದ್ದಾರೆ.

ಆರ್‌ಜೆಡಿಯ ಮನೋಜ್ ಝಾ, ಸಿಪಿಎಂನ ಎಲಮರಂ ಕರೀಂ, ಸಿಪಿಐನ ಬಿನೋಯ್ ವಿಶ್ವಂ, ಎಎಪಿಯ ಸುಶೀಲ್ ಗುಪ್ತಾ, ಮುಸ್ಲಿಂ ಲೀಗ್‌ನ ಮೊಹಮ್ಮದ್ ಬಶೀರ್, ನ್ಯಾಷನಲ್ ಕಾನ್ಫರೆನ್ಸ್‌ನ ಹಸ್ನೈನ್ ಮಸೂದಿ, ಆರ್‌ಎಸ್‌ಪಿಯ ಎನ್.ಕೆ.ಪ್ರೇಮಚಂದ್ರನ್ ಮತ್ತು ಎಲ್‌ಜೆಡಿಯ ಶ್ರೇಯಾಂಶ್ ಕುಮಾರ್ ಅವರೂ ಈ ಹೇಳಿಕೆಗೆ ಸಹಿ ಮಾಡಿದ್ದಾರೆ.

ಮುಖ್ಯಾಂಶಗಳು

- 14 ವಿರೋಧ ಪಕ್ಷಗಳ 18 ಸಂಸದರಿಂದ ಜಂಟಿ ಹೇಳಿಕೆ ಬಿಡುಗಡೆ
- ಉಭಯ ಸದನಗಳಲ್ಲಿ ಪೆಗಾಸಸ್, ರೈತರ ಪ್ರತಿಭಟನೆ ಚರ್ಚೆಗೆ ಆಗ್ರಹ
- ಚರ್ಚೆಗೆ ಒಪ್ಪದ ಸರ್ಕಾರದ ವಿರುದ್ಧ ಟೀಕೆ, ಆರೋಪ

ಸರ್ಕಾರವು ಸಂಸದೀಯ ಪ್ರಜಾಪ್ರಭುತ್ವವನ್ನು ಒಪ್ಪಿಕೊಳ್ಳಬೇಕು ಮತ್ತು ಚರ್ಚೆಗೆ ಸಮ್ಮತಿಸಬೇಕು ಎಂದು ವಿರೋಧ ಪಕ್ಷಗಳು ಮತ್ತೊಮ್ಮೆ ಒಟ್ಟಾಗಿ ಆಗ್ರಹಿಸುತ್ತವೆ

ವಿರೋಧ ಪಕ್ಷಗಳ ಜಂಟಿ ಒತ್ತಾಯ

56 ಇಂಚಿನ ಎದೆಯ ವ್ಯಕ್ತಿಗೆ ಸೋಲಿನ ವಾಸನೆ ಬಡಿದಿದೆ. ಹೀಗಾಗಿಯೇ ಟಿಎಂಸಿ ಸಂಸದರನ್ನು ಅಮಾನತು ಮಾಡಿದ್ದಾರೆ. ನಮ್ಮ ಧ್ವನಿ ಅಡಗಿಸಲು ಸಾಧ್ಯವಿಲ್ಲ

ಅಭಿಷೇಕ್ ಬ್ಯಾನರ್ಜಿ,
ಟಿಎಂಸಿ ಸಂಸದ



ಎಎಪಿ ಸಂಸದ ಸುಶೀಲ್ ಕುಮಾರ್ ಅವರು ಕೃಷಿ ಕಾಯ್ದೆಗಳ ವಿರುದ್ಧ ರಾಜ್ಯಸಭೆಯಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಟಿಎಂಸಿ ಸದಸ್ಯರ ಅಮಾನತು

ಪೆಗಾಸಸ್ ಗೂಢಚರ್ಯೆ ಕುರಿತು ಚರ್ಚೆ ನಡೆಸಬೇಕು ಎಂದು ರಾಜ್ಯಸಭೆಯಲ್ಲಿ ಫಲಕ ಹಿಡಿದು ಪ್ರತಿಭಟನೆ ನಡೆಸಿದ ಟಿಎಂಸಿಯ ಆರು ಸಂಸದರನ್ನು ದಿನದ ಮಟ್ಟಿಗೆ ಸದನದಿಂದ ಅಮಾನತು ಮಾಡಿ ಸಭಾಪತಿ ಎಂ.ವೆಂಕಯ್ಯ ನಾಯ್ಡು ಆದೇಶಿಸಿದರು.

ಈ ಕ್ರಮಕ್ಕೆ ವಿರೋಧ ಪಕ್ಷಗಳು ತೀವ್ರ ಆಕ್ಷೇಪ ವ್ಯಕ್ತಪಡಿಸಿವೆ.

ಅಮಾನತಾದ ಸದಸ್ಯರನ್ನು ಹೊರಗೆ ಕಳುಹಿಸುವಾಗ ಅವರು ಮತ್ತೆ ಪ್ರತಿಭಟನೆ ನಡೆಸಿದರು. ಜತೆಗೆ ಪ್ರತಿಭಟನಾ ಗೀತೆಗಳನ್ನು ಹಾಡಿದರು. ಈ ವೇಳೆ ಸದಸ್ಯರೊಬ್ಬರು ರಾಜ್ಯಸಭೆಯ ಲಾಬಿಯ ಬಾಗಿಲೊಂದರ ಗಾಜನ್ನು ಒಡೆದಿದ್ದಾರೆ. ಒಡೆದ ಗಾಜಿನಿಂದ ಮಹಿಳಾ ಭದ್ರತಾ ಸಿಬ್ಬಂದಿಯೊಬ್ಬರಿಗೆ ಗಾಯಗಳಾಗಿವೆ ಎಂದು ರಾಜ್ಯಸಭಾ ಕಾರ್ಯಾಲಯವು ಹೇಳಿದೆ. ಈ ಸಂಬಂಧ ವರದಿ ಸಿದ್ಧಪಡಿಸಿದ್ದು, ಕ್ರಮ ತೆಗೆದುಕೊಳ್ಳಲಾಗುತ್ತದೆ ಎಂದು ಮೂಲಗಳು ಹೇಳಿವೆ.

ಸಿಎಎಗೆ ತಿದ್ದುಪಡಿ ಇಲ್ಲ: ಕೇಂದ್ರ

'ಪೌರತ್ವ ತಿದ್ದುಪಡಿ ಕಾಯ್ದೆ ಅಡಿ ಭಾರತದ ಪೌರತ್ವ ಪಡೆಯಲು ಅರ್ಹರಾಗಿರುವ ಧಾರ್ಮಿಕ ಅಲ್ಪಸಂಖ್ಯಾತರ ಪಟ್ಟಿಗೆ ಯಾವುದೇ ತಿದ್ದುಪಡಿ ಮಾಡುವುದಿಲ್ಲ. ಹೊಸದಾಗಿ ಬೇರೆ ಅಲ್ಪಸಂಖ್ಯಾತ ಧರ್ಮವನ್ನು ಈ ಪಟ್ಟಿಗೆ ಸೇರಿಸುವುದಿಲ್ಲ' ಎಂದು ಕೇಂದ್ರ ಸರ್ಕಾರವು ಹೇಳಿದೆ.

ಬಾಂಗ್ಲಾದೇಶ, ಪಾಕಿಸ್ತಾನ ಮತ್ತು ಅಫ್ಗಾನಿಸ್ತಾನದಲ್ಲಿ ಧಾರ್ಮಿಕ ಕಿರುಕುಳಕ್ಕೆ ಒಳಗಾದ ಹಿಂದೂ, ಸಿಖ್, ಜೈನ, ಬೌದ್ಧ, ಪಾರ್ಸಿ ಮತ್ತು ಕ್ರೈಸ್ತ ಧರ್ಮೀಯರಿಗೆ ಈ ಕಾಯ್ದೆ ಅಡಿ ಭಾರತದ ಪೌರತ್ವ ನೀಡಲಾಗುತ್ತದೆ.

'ಈ ಪಟ್ಟಿಗೆ ಹೊಸ ಧರ್ಮವನ್ನು ಸೇರಿಸುವ ಪ್ರಸ್ತಾವ ನಮ್ಮ ಮುಂದೆ ಇಲ್ಲ. ಈ ಕಾಯ್ದೆ ಅಡಿ ಅಧಿಸೂಚನೆ ಹೊರಡಿಸಿದ ನಂತರವಷ್ಟೇ ಅರ್ಹ ಫಲಾನುಭವಿಗಳಿಗೆ ಪೌರತ್ವ ನೀಡಲಾಗುತ್ತದೆ. ನಿಯಮಗಳನ್ನು ಸಿದ್ಧಪಡಿಸಲು 2022ರ ಜನವರಿ 9ರವರೆಗೆ ಸಮಯಾವಕಾಶ ಕೇಳಲಾಗಿದೆ' ಎಂದು ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಹೇಳಿದ್ದಾರೆ.

ಸದನದಲ್ಲಿ ನಡೆದದ್ದು...

- ಪೆಗಾಸಸ್ ಗೂಢಚರ್ಯೆ ಕುರಿತು ಚರ್ಚೆ ನಡೆಸಬೇಕು ಎಂದು ಸಂಸತ್ತಿನ ಉಭಯ ಸದನಗಳಲ್ಲಿ ವಿರೋಧ ಪಕ್ಷಗಳು ಪ್ರತಿಭಟನೆ ನಡೆಸಿದವು. ಹೀಗಾಗಿ ರಾಜ್ಯಸಭೆಯಲ್ಲಿ ಕಲಾಪವನ್ನು ನಾಲ್ಕು ಬಾರಿ ಮತ್ತು ಲೋಕಸಭೆಯಲ್ಲಿ ಕಲಾಪವನ್ನು 4 ಬಾರಿ ಮುಂದೂಡಲಾಯಿತು
- ವಿರೋಧ ಪಕ್ಷಗಳ ಪ್ರತಿಭಟನೆಯ ನಡುವೆಯೇ 'ತೆಂಗು ಅಭಿವೃದ್ಧಿ ಮಂಡಳಿ (ತಿದ್ದುಪಡಿ) ಮಸೂದೆ-2021'ಕ್ಕೆ ಲೋಕಸಭೆಯ ಅನುಮೋದನೆ ಪಡೆಯಲಾಯಿತು. ಯಾವುದೇ ಚರ್ಚೆ ಇಲ್ಲದೆ, ಧ್ವನಿ ಮತದ ಮೂಲಕ ಈ ಮಸೂದೆಯನ್ನು ಅಂಗೀಕರಿಸಲಾಯಿತು. ರಾಜ್ಯಸಭೆಯಲ್ಲಿ ಕಳೆದ ವಾರವೇ ಈ ಮಸೂದೆಗೆ ಅನುಮೋದನೆ ದೊರೆತಿದೆ
- ಭಾರತೀಯ ವಿಮಾನ ನಿಲ್ದಾಣಗಳ ಆರ್ಥಿಕ ನಿಯಂತ್ರಣ ಪ್ರಾಧಿಕಾರ (ತಿದ್ದುಪಡಿ) ಮಸೂದೆ-2021ಕ್ಕೆ ರಾಜ್ಯಸಭೆ ಅನುಮೋದನೆ ನೀಡಿತು. ಯಾವುದೇ ಚರ್ಚೆ ಇಲ್ಲದೆ ಮಸೂದೆಯನ್ನು ಅಂಗೀಕರಿಸಲಾಯಿತು. ಲೋಕಸಭೆಯಲ್ಲಿ ಈಗಾಗಲೇ ಅನುಮೋದನೆ ಸಿಕ್ಕಿದೆ
- ಠೇವಣಿದಾರರ ವಿಮೆ ಮತ್ತು ಸಾಲ ಖಾತರಿ ಕಾರ್ಪೊರೇಷನ್ (ತಿದ್ದುಪಡಿ) ಮಸೂದೆ-2021ಗೆ ರಾಜ್ಯಸಭೆ ಅನುಮೋದನೆ ನೀಡಿದೆ

ಜಲಮಂಡಳಿ ಮುಖ್ಯ ಎಂಜಿನಿಯರ್ ಜಿ.ಎಂ. ನಾಗರಾಜ ಎಸಿಬಿ ಬಲೆಗೆ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಕೊಪ್ಪಳದ ಯಶಸ್ವಿ ಟೌನ್‌ಶಿಪ್‌ನ ಕುಡಿಯುವ ನೀರು ಮತ್ತು ಒಳಚರಂಡಿ ಕಾರ್ಯಕ್ಕೆ ಸಂಬಂಧಿಸಿದ ಅನುಮತಿ ನೀಡಲು ₹2 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟು, ₹ 1.5 ಲಕ್ಷ ಪಡೆಯುತ್ತಿದ್ದ ಕರ್ನಾಟಕ ನಗರದ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವಿಭಾಗೀಯ ಕಚೇರಿಯ ಮುಖ್ಯ ಎಂಜಿನಿಯರ್ ಜಿ.ಎಂ. ನಾಗರಾಜ ಅವರನ್ನು ಬಂಧಿಸಲಾಗಿದೆ ಎಂದು ಭ್ರಷ್ಟಾಚಾರ ನಿಗ್ರಹ ದಳದವರು ತಿಳಿಸಿದ್ದಾರೆ.

'ಯಶಸ್ವಿ ಟೌನ್‌ಶಿಪ್ ವ್ಯವಸ್ಥಾಪಕ ನಿರ್ದೇಶಕ ಅಣ್ಣಾಸಾಹೇಬ ಪಾಟೀಲ ಅವರು ಕೊಪ್ಪಳದಲ್ಲಿರುವ ಟೌನ್‌ಶಿಪ್‌ನಲ್ಲಿನ ಮಂಡಳಿಯ ಕಾಮಗಾರಿಗಳಿಗೆ ಅನುಮೋದನೆ ಕೋರಿ ಮಂಡಳಿಗೆ ಅರ್ಜಿ ಸಲ್ಲಿಸಿದ್ದರು. ಹಲವು ದಿನಗಳಿಂದ ಅರ್ಜಿ ವಿಲೇವಾರಿ ಮಾಡದ ನಾಗರಾಜ ಅವರು ₹ 2 ಲಕ್ಷ ಲಂಚ ನೀಡಿದರೆ ಅನುಮೋದನೆ ನೀಡುವುದಾಗಿ ತಿಳಿಸಿದ್ದರು. ಇದರಿಂದ ಬೇಸತ್ತ ಅಣ್ಣಾಸಾಹೇಬ ಅವರು ದೂರು ನೀಡಿದ್ದರು' ಎಂದು ಎಸಿಬಿಯವರು ತಿಳಿಸಿದ್ದಾರೆ.

'ಎಸಿಬಿ ಎಸ್‌ಪಿ ಮಹೇಶ ಮೇಘಣ್ಣವರ ನೇತೃತ್ವದಲ್ಲಿ ದಾಳಿ ನಡೆಸಿ, ನಾಗರಾಜ ಅವರು ತಮ್ಮ ಕಚೇರಿಯಲ್ಲಿ ಲಂಚದ ಹಣ ಪಡೆಯುತ್ತಿದ್ದ ವೇಳೆ ಅವರನ್ನು ಬಂಧಿಸಿದೆವು. ಅವರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ' ಎಂದು ಎಸಿಬಿ ಡಿವೈಎಸ್ಪಿ ವೀರೇಶ ಕರಡಿಗುಡ್ಡ ತಿಳಿಸಿದರು.

'ಸಮಗ್ರ ಶಿಕ್ಷಣ ಯೋಜನೆ': 5 ವರ್ಷ ಮುಂದುವರಿಕೆ

ನವದೆಹಲಿ (ಪಿಟಿಐ): 'ಸಮಗ್ರ ಶಿಕ್ಷಣ ಯೋಜನೆ'ಯನ್ನು ಮತ್ತೆ ಐದು ವರ್ಷಗಳ ಅವಧಿಗೆ ಮುಂದುವರಿಸುವುದಕ್ಕೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿತು.

'ಈ ಯೋಜನೆ ಕಳೆದ ಏಪ್ರಿಲ್ 1ರಿಂದ 2026ರ ಮಾರ್ಚ್ 31ರ ವರೆಗೆ ಜಾರಿಯಲ್ಲಿರುವುದು. ಯೋಜನೆಯನ್ನು 'ಸಮಗ್ರ ಶಿಕ್ಷಣ ಯೋಜನೆ-2' ಎಂಬುದಾಗಿ ಕರೆಯಲಾಗುವುದು' ಎಂದು ಸಚಿವರಾದ ಧರ್ಮೇಂದ್ರ ಪ್ರಧಾನ್ ಹಾಗೂ ಅನುರಾಗ್ ಠಾಕೂರ್ ತಿಳಿಸಿದರು.

ದೇಶದಲ್ಲಿರುವ ಸರ್ಕಾರಿ ಮತ್ತು ಅನುದಾನಿತ ಒಟ್ಟು 11.60 ಲಕ್ಷ ಶಾಲೆಗಳು, 57 ಲಕ್ಷ ಶಿಕ್ಷಕರು ಹಾಗೂ 15.6 ಕೋಟಿ ವಿದ್ಯಾರ್ಥಿಗಳು ಯೋಜನೆಯ ಲಾಭ ಪಡೆಯಲಿದ್ದು, ಉತ್ತಮ ಶಿಕ್ಷಣ ಹಾಗೂ ಕೌಶಲ ಅಭಿವೃದ್ಧಿ ಗುರಿ ಹೊಂದಿದೆ ಎಂದು ಶಿಕ್ಷಣ ಸಚಿವಾಲಯ ಟ್ವಿಟರ್‌ನಲ್ಲಿ ತಿಳಿಸಿದೆ.

ಒಬಿಸಿ ಪಟ್ಟಿ: ರಾಜ್ಯಗಳಿಗೆ ಅಧಿಕಾರ ನೀಡಲು ಸಿದ್ಧತೆ

ನವದೆಹಲಿ (ಪಿಟಿಐ): 'ತಮ್ಮದೇ ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಪಟ್ಟಿಯನ್ನು ಸಿದ್ಧಪಡಿಸುವ ಅಧಿಕಾರವನ್ನು ರಾಜ್ಯಗಳಿಗೆ ನೀಡುವ ಸಂವಿಧಾನ ತಿದ್ದುಪಡಿ ಮಸೂದೆಗೆ ಕೇಂದ್ರ ಸಚಿವ ಸಂಪುಟ ಅನುಮೋದನೆ ನೀಡಿದೆ' ಎಂದು ಮೂಲಗಳು ಹೇಳಿವೆ.

ಈ ಮಸೂದೆಯನ್ನು ಈಗ ನಡೆಯುತ್ತಿರುವ ಅಧಿವೇಶನದಲ್ಲಿ ಮಂಡಿಸಲಾಗುವುದು ಎಂದು ಮೂಲಗಳು ಹೇಳಿವೆ.

2018ರಲ್ಲಿ ಸಂವಿಧಾನದ 102ನೇ ತಿದ್ದುಪಡಿ ಮೂಲಕ ರಾಜ್ಯಗಳ ಅಧಿಕಾರಕ್ಕೆ ತರಲಾಗಿದ್ದ ಬದಲಾವಣೆಯನ್ನು ತೆಗೆದುಹಾಕುವ ಸಲುವಾಗಿ ಈ ತಿದ್ದುಪಡಿ ತರಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

'ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ ಶಿಕ್ಷಣ ಮತ್ತು ನೇಮಕಾತಿಯಲ್ಲಿ ಮೀಸಲಾತಿ ನೀಡುವ ರಾಜ್ಯ ಸರ್ಕಾರಗಳ ಅಧಿಕಾರವನ್ನು ಸಂವಿಧಾನದ 102ನೇ ತಿದ್ದುಪಡಿಯು ಕಸಿದುಕೊಳ್ಳುತ್ತದೆ' ಎಂಬ ತನ್ನ ತೀರ್ಪನ್ನು ಸುಪ್ರೀಂ ಕೋರ್ಟ್‌ನ ಐವರು ಸದಸ್ಯರ ಪೀಠವು ಮೇ 5ರಂದು ಎತ್ತಿಹಿಡಿದಿತ್ತು.

ಸಂಸತ್ತಿನ ಉಭಯ ಸದನಗಳಲ್ಲೂ ಈ ಬಗ್ಗೆ ಚರ್ಚೆಯಾಗಿತ್ತು. ಒಬಿಸಿಗಳನ್ನು ಗುರುತಿಸುವ ಮತ್ತು ಒಬಿಸಿ ಪಟ್ಟಿ ಸಿದ್ಧಪಡಿಸುವ ರಾಜ್ಯ ಸರ್ಕಾರಗಳ ಅಧಿಕಾರವನ್ನು ಕಸಿದುಕೊಳ್ಳುವ ಮೂಲಕ ಕೇಂದ್ರ ಸರ್ಕಾರವು ಒಕ್ಕೂಟ ವ್ಯವಸ್ಥೆಗೆ ಧಕ್ಕೆ ತಂದಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದವು. ರಾಜ್ಯ ಸರ್ಕಾರಗಳ ಅಧಿಕಾರವನ್ನು ಕಾಪಾಡಲು ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಸರ್ಕಾರವು ಹೇಳಿತ್ತು. ಈಗ ಆ ತಿದ್ದುಪಡಿಗೆ ತಿದ್ದುಪಡಿ ತರಲು ಸರ್ಕಾರವು ಸಿದ್ಧತೆ ನಡೆಸಿದೆ ಎಂದು ಮೂಲಗಳು ಹೇಳಿವೆ.

ನೈರುತ್ಯ ದೆಹಲಿಯಲ್ಲಿ ಪ್ರಕರಣ: ಸಂತ್ರಸ್ತೆ ಕುಟುಂಬಕ್ಕೆ ₹ 10 ಲಕ್ಷ ಪರಿಹಾರ

ಬಾಲಕಿ ಸಾವು: ಮ್ಯಾಜಿಸ್ಟೀರಿಯಲ್ ತನಿಖೆ

ನವದೆಹಲಿ: ನೈರುತ್ಯ ದೆಹಲಿಯಲ್ಲಿ ನಡೆದ ಒಂಬತ್ತು ವರ್ಷದ ಪರಿಶಿಷ್ಟ ಜಾತಿಗೆ ಸೇರಿದ ಬಾಲಕಿಯ ಮೇಲಿನ ಅತ್ಯಾಚಾರ ಮತ್ತು ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಮ್ಯಾಜಿಸ್ಟೀರಿಯಲ್ ತನಿಖೆಗೆ ಆದೇಶಿಸಿರುವ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು, ಸಂತ್ರಸ್ತೆಯ ಕುಟುಂಬಕ್ಕೆ ₹10 ಲಕ್ಷ ಪರಿಹಾರವನ್ನೂ ಘೋಷಿಸಿದ್ದಾರೆ.

ಇಲ್ಲಿನ ಹಳೆಯ ನಂಗಲ್ ಪ್ರದೇಶದಲ್ಲಿರುವ ಮೃತ ಬಾಲಕಿಯ ಕುಟುಂಬದವರನ್ನು ಬುಧವಾರ ಭೇಟಿ ಮಾಡಿದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕೇಜ್ರಿವಾಲ್, 'ಇದೊಂದು ದುರದೃಷ್ಟಕರ ಸಂಗತಿ. ನಮ್ಮ ಸರ್ಕಾರ ಬಾಲಕಿಯ ಕುಟುಂಬಕ್ಕೆ ₹10 ಲಕ್ಷ ಪರಿಹಾರ ನೀಡುತ್ತಿದ್ದು, ಈ ಪ್ರಕರಣದ ತನಿಖೆಗೆ ಆದೇಶಿಸುತ್ತಿದೆ' ಎಂದು ಹೇಳಿದರು.

ಘಟನೆಯ ಹಿನ್ನೆಲೆ : ನೈರುತ್ಯ ದೆಹಲಿಯ ಹಳೇ ನಂಗಾಲ್ ಪ್ರದೇಶದಲ್ಲಿರುವ ಚಿತಾಗಾರದ ಎದುರು ಬಾಡಿಗೆ ಮನೆಯೊಂದರಲ್ಲಿ ಸಂತ್ರಸ್ತ ಬಾಲಕಿ ತನ್ನ ಪೋಷಕರೊಂದಿಗೆ ವಾಸವಿದ್ದಳು. ಭಾನುವಾರ ಸಂಜೆ 5 ಗಂಟೆ ವೇಳೆಯಲ್ಲಿ ಈ ಬಾಲಕಿ, 'ನಾನು ಚಿತಾಗಾರದ ಕೂಲರ್‌ನಿಂದ ನೀರು ತರಲು ಹೋಗುತ್ತಿದ್ದೇನೆ' ಎಂದು ತನ್ನ ತಾಯಿಗೆ ತಿಳಿಸಿ ಹೋಗಿದ್ದಳು ಎಂದು ಪೋಷಕರು ತಿಳಿಸಿದ್ದಾರೆ.

ಸಂಜೆ 6 ಗಂಟೆ ಸುಮಾರಿಗೆ ಚಿತಾಗಾರದ ಪೂಜಾರಿ ರಾಧೆ ಶ್ಯಾಮ್ ಮತ್ತು ಒಂದಿಬ್ಬರು (ಬಾಲಕಿಯ ತಾಯಿಗೆ ಪರಿಚಯತರು), ಬಾಲಕಿಯ ತಾಯಿಯನ್ನು ಕರೆದು, 'ನಿಮ್ಮ ಮಗಳು ವಿದ್ಯುತ್ ಶಾಕ್ ಹೊಡೆದು ಸಾವನ್ನಪ್ಪಿದ್ದಾಳೆ. ಆಕೆಯ ಮೃತದೇಹ ಇಲ್ಲಿದೆ' ಎಂದು ಹೇಳಿ ಬಾಲಕಿಯ ಶವ ತೋರಿಸಿದರು.


ನೈರುತ್ಯ ದೆಹಲಿಯಲ್ಲಿರುವ ಸಂತ್ರಸ್ತ ಬಾಲಕಿಯ ಪೋಷಕರನ್ನು ಬುಧವಾರ ಭೇಟಿಯಾಗಿ ಸಾಂತ್ವನ ಹೇಳಿದ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ —ಪಿಟಿಐ ಚಿತ್ರ

'ವಿಷಯವನ್ನು ಪೊಲೀಸರಿಗೆ ತಿಳಿಸಿದರೆ ತೊಂದರೆಯಾಗುತ್ತದೆ. ಆದ್ದರಿಂದ, ಈ ಶವವನ್ನು ಸುಡುವುದೇ ಉತ್ತಮ' ಎಂದು ಹೇಳಿ, ಶವವನ್ನು ಮರಣೋತ್ತರ ಪರೀಕ್ಷೆ ಮಾಡದಂತೆ ತಡೆದರು ಎಂದು ಹೇಳಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಚಿತಾಗಾರದ ಪೂಜಾರಿ ಮತ್ತು ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ. ಇವರ ವಿರುದ್ಧ ಕೊಲೆ ಮತ್ತು ಅತ್ಯಾಚಾರ ಪ್ರಕರಣ ದಾಖಲಿಸಲಾಗಿದೆ. ದೆಹಲಿ ಮಹಿಳಾ ಆಯೋಗವು ಈ ಕುರಿತು ತನಿಖೆ ಆರಂಭಿಸಿದೆ.

ಸಂತ್ರಸ್ತೆ ಕುಟುಂಬಸ್ಥರನ್ನು ಭೇಟಿಯಾದ ರಾಹುಲ್: ಪ್ರಕರಣ ಸಂಬಂಧ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಂತ್ರಸ್ತ ಕುಟುಂಬಸ್ಥರನ್ನು ದೆಹಲಿಯಲ್ಲಿ ಬುಧವಾರ ಭೇಟಿಯಾಗಿ ಧೈರ್ಯ ತುಂಬಿದರು.

'ಆಕೆಯ ಪೋಷಕರ ಕಣ್ಣೀರು ಒಂದೇ ಒಂದು ವಿಷಯವನ್ನು ಹೇಳುತ್ತಿದೆ. ಆಕೆ ಈ ದೇಶದ ಮಗಳು. ನ್ಯಾಯಕ್ಕೆ ಅರ್ಹಳಾಗಿದ್ದಾಳೆ. ಆದ್ದರಿಂದ ನ್ಯಾಯ ಒದಗಿಸುವ ನಿಟ್ಟಿನಲ್ಲಿ ಆಕೆಯ ಕುಟುಂಬದ ಪರ ನಿಲ್ಲುತ್ತೇನೆ' ಎಂದು ರಾಹುಲ್ ಟ್ವೀಟ್ ಮಾಡಿದ್ದಾರೆ.

ಹೊಸ ಟಿಯಾಗೊ ಎನ್‌ಆರ್‌ಜಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟಾಟಾ ಮೋಟರ್ಸ್ ಕಂಪನಿಯು ದೇಶದ ಮಾರುಕಟ್ಟೆಗೆ ಬುಧವಾರ ಹೊಸ 'ಟಿಯಾಗೊ ಎನ್‌ಆರ್‌ಜಿ' ಹ್ಯಾಚ್‌ಬ್ಯಾಕ್ ಬಿಡುಗಡೆ ಮಾಡಿದೆ. ಇದರ ಎಕ್ಸ್‌ಷೋರೂಂ ಬೆಲೆ ₹ 6.57 ಲಕ್ಷದಿಂದ ಆರಂಭವಾಗುತ್ತದೆ.

ಸುರಕ್ಷತೆ ವಿಚಾರದಲ್ಲಿ 'ಜಿಎನ್‌ಸಿಎಪಿ'ಯಿಂದ '4 ಸ್ಟಾರ್' ರೇಟಿಂಗ್ ಪಡೆದಿರುವ ಈ ಕಾರು ಫಾರೆಸ್ಟಾ ಗ್ರೀನ್, ಫೈರ್ ರೆಡ್, ಸ್ನೋ ವೈಟ್ ಮತ್ತು ಕ್ಲೌಡಿ ಗ್ರೇ ಬಣ್ಣಗಳಲ್ಲಿ ಲಭ್ಯವಿದೆ. ಬುಧವಾರದಿಂದಲೇ ಎಲ್ಲಾ ಷೋರೂಂಗಳಲ್ಲಿಯೂ ಖರೀದಿಗೆ ಲಭ್ಯವಿದೆ ಎಂದು ಕಂಪನಿಯು ತಿಳಿಸಿದೆ.


ಟಾಟಾ ಟಿಯಾಗೊ ಎನ್‌ಆರ್‌ಜಿ

ವರ್ಚುವಲ್ ವೇದಿಕೆಯ ಮೂಲಕ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಕಂಪನಿಯ ಮಾರಾಟ ಮತ್ತು ಮಾರುಕಟ್ಟೆ ವಿಭಾಗದ ಉಪಾಧ್ಯಕ್ಷ ರಾಜನ್ ಅಂಬಾ, 'ಇದು ಬಲಿಷ್ಠವಾಗಿರುವುದಷ್ಟೇ ಅಲ್ಲದೆ ಒಳಗಾಂಗಣದಲ್ಲಿ ಹಲವು ಹೊಸ ವೈಶಿಷ್ಟ್ಯಗಳನ್ನು ಒಳಗೊಂಡಿದೆ. ನಗರ ಮತ್ತು ಒರಟಾದ ರಸ್ತೆಗಳಲ್ಲಿ ಚಲಾಯಿಸಲು ಸುಲಭ ಆಗುವಂತೆ ರೂಪಿಸಲಾಗಿದೆ. ಗ್ರಾಹಕರು ಹೊಸ ಟಿಯಾಗೊ ಎನ್‌ಆರ್‌ಜಿಯನ್ನು ಇಷ್ಟಪಡುವ ವಿಶ್ವಾಸವಿದೆ' ಎಂದು ಹೇಳಿದರು.

1.2 ಲೀಟರ್ ರಿವೊಟ್ರಾನ್ ಪೆಟ್ರೋಲ್ ಎಂಜಿನ್ ಹೊಂದಿದ್ದು, ಮ್ಯಾನುಯಲ್ ಮತ್ತು ಎಎಂಟಿ ಆಯ್ಕೆಗಳಲ್ಲಿ ಈ ಕಾರು ಲಭ್ಯವಿದೆ. ಪುಷ್ ಸ್ಟಾರ್ಟ್ ಬಟನ್, ರಿಯರ್ ಪಾರ್ಕಿಂಗ್ ಸೆನ್ಸರ್, ಆಟೊಫೋಲ್ಡ್ ಒಆರ್‌ವಿಎಂ ಸೇರಿದಂತೆ ಹಲವು ವೈಶಿಷ್ಟ್ಯಗಳನ್ನು ಒಳಗೊಂಡಿದೆ ಎಂದು ಕಂಪನಿಯು ತಿಳಿಸಿದೆ.

ವೊಡಾಫೋನ್ ಐಡಿಯಾ: ಸ್ಥಾನ ತ್ಯಜಿಸಿದ ಬಿರ್ಲಾ

ನವದೆಹಲಿ (ಪಿಟಿಐ): ವೊಡಾಫೋನ್ ಐಡಿಯಾ ಕಂಪನಿಯ ಕಾರ್ಯನಿರ್ವಾಹಕೇತರ ಅಧ್ಯಕ್ಷ ಮತ್ತು ಕಾರ್ಯನಿರ್ವಾಹಕೇತರ ನಿರ್ದೇಶಕ ಸ್ಥಾನಗಳನ್ನು ಕುಮಾರಮಂಗಲಂ ಬಿರ್ಲಾ ಅವರು ತ್ಯಜಿಸಿದ್ದಾರೆ ಎಂದು ಕಂಪನಿಯು ಬುಧವಾರ ತಿಳಿಸಿದೆ.

ಆದಿತ್ಯ ಬಿರ್ಲಾ ಸಮೂಹದಿಂದ ನಾಮನಿರ್ದೇಶನ ಆಗಿರುವ ಹಿಮಾಂಶು ಕಪಾನಿಯಾ ಅವರನ್ನು ಕಂಪನಿಯ ಕಾರ್ಯನಿರ್ವಾಹಕೇತರ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ ಎಂದು ವೊಡಾಫೋನ್ ಐಡಿಯಾ ಲಿಮಿಟೆಡ್ (ವಿಐಎಲ್) ಮಾಹಿತಿ ನೀಡಿದೆ.

ಎಸ್‌ಬಿಐ ಲಾಭ ಶೇ 55 ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಭಾರತೀಯ ಸ್ಟೇಟ್ ಬ್ಯಾಂಕ್‌ನ (ಎಸ್‌ಬಿಐ) ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್-ಜೂನ್ ಅವಧಿಯಲ್ಲಿ ಶೇಕಡ 55ರಷ್ಟು ಹೆಚ್ಚಾಗಿದ್ದು, ₹ 6,504 ಕೋಟಿಗೆ ತಲುಪಿದೆ. ಸುಸ್ತಿ ಸಾಲದಲ್ಲಿ ಇಳಿಕೆ ಆಗಿರುವುದೇ ಇದಕ್ಕೆ ಕಾರಣ ಎಂದು ಬ್ಯಾಂಕ್ ತಿಳಿಸಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್‌ನ ನಿವ್ವಳ ಲಾಭವು ₹ 4,189 ಕೋಟಿ ಇತ್ತು. ಬ್ಯಾಂಕ್‌ನ ಒಟ್ಟಾರೆ ವರಮಾನವು ₹ 74,457 ಕೋಟಿಯಿಂದ ₹ 77,347 ಕೋಟಿಗೆ ಏರಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಬಡ್ಡಿ ವರಮಾನವು ₹ 66,500 ಕೋಟಿಯಿಂದ ₹ 65,564 ಕೋಟಿಗೆ ಇಳಿಕೆ ಆಗಿದೆ.

ಒಟ್ಟಾರೆ ಮುಂಗಡದಲ್ಲಿ ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣವು 5.44ರಿಂದ 5.32ಕ್ಕೆ ಇಳಿಕೆ ಆಗಿದೆ. ಅದೇ ರೀತಿ ನಿವ್ವಳ ಎನ್‌ಪಿಎ ಶೇ 1.8ರಿಂದ ಶೇ 1.7ಕ್ಕೆ ಇಳಿಕೆ ಕಂಡಿದೆ. ಹೀಗಾಗಿ, ಸುಸ್ತಿ ಸಾಲದ ಮೊತ್ತವು ₹ 9,420 ಕೋಟಿಯಿಂದ ₹ 5,029 ಕೋಟಿಗೆ ಇಳಿಕೆ ಆಗಿದೆ ಎಂದು ಬ್ಯಾಂಕ್ ಹೇಳಿದೆ.

ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟವನ್ನು ಭರಿಸಲು ತೆಗೆದಿರಿಸುವ ಮೊತ್ತದ ಪ್ರಮಾಣ ಕೂಡ ತಗ್ಗಿದೆ ಎಂದು ಅದು ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಸಿಬಿಐ ಮಾಜಿ ನಿರ್ದೇಶಕ ವಿರುದ್ಧ ಕ್ರಮಕ್ಕೆ ಶಿಫಾರಸು

ನವದೆಹಲಿ (ಪಿಟಿಐ): ಅಧಿಕಾರ ದುರ್ಬಳಕೆ ಮತ್ತು ಸೇವಾ ನಿಯಮಗಳನ್ನು ಉಲ್ಲಂಘಿಸಿದ ಆರೋಪದ ಹಿನ್ನೆಲೆಯಲ್ಲಿ ಸಿಬಿಐ ಮಾಜಿ ನಿರ್ದೇಶಕ ಅಲೋಕ್ ವರ್ಮಾ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ಕೇಂದ್ರ ಗೃಹ ಸಚಿವಾಲಯ ಶಿಫಾರಸು ಮಾಡಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಈ ಕುರಿತು ಕೇಂದ್ರ ಗೃಹ ಸಚಿವಾಲಯವು ಸಿಬ್ಬಂದಿ ಮತ್ತು ತರಬೇತಿ ಇಲಾಖೆಗೆ(ಡಿಒಪಿಟಿ) ಪತ್ರ ಬರೆದಿದ್ದು, ಅಲೋಕ್ ವರ್ಮಾ ವಿರುದ್ಧ ಅಗತ್ಯ ಶಿಸ್ತು ಕ್ರಮಕೈಗೊಳ್ಳುವಂತೆ ಸೂಚಿಸಿದೆ' ಎಂದು ಅವರು ಹೇಳಿದ್ದಾರೆ.

ಡಿಒಪಿಟಿ ಇಲಾಖೆಯು ಗೃಹ ಸಚಿವಾಲಯದ ಈ ಶಿಫಾರಸನ್ನು ಐಪಿಎಸ್ ಅಧಿಕಾರಿಗಳ ನೇಮಕಾತಿ ಸಂಸ್ಥೆಯಾದ ಕೇಂದ್ರ ಲೋಕಸೇವಾ ಆಯೋಗಕ್ಕೆ (ಯುಪಿಎಸ್‌ಸಿ) ರವಾನಿಸಿದೆ ಎಂದು ಹೇಳಿದ್ದಾರೆ.

ಒಂದೊಮ್ಮೆ ಗೃಹ ಸಚಿವಾಲಯದ ಈ ಕ್ರಮ ಅನುಮೋದನೆಗೊಂಡರೆ, ವರ್ಮಾ ಅವರ ಪಿಂಚಣಿ ಮತ್ತು ನಿವೃತ್ತಿಯ ನಂತರ ದೊರೆಯುವ ಸೌಲಭ್ಯಗಳನ್ನು ತಾತ್ಕಾಲಿಕ ಅಥವಾ ಶಾಶ್ವತವಾಗಿ ಸರ್ಕಾರ ಮುಟ್ಟುಗೋಲು ಹಾಕಿಕೊಳ್ಳುವ ಸಾಧ್ಯತೆ ಇದೆ.

ವರ್ಮಾ, 2018ರಲ್ಲಿ ಸಿಬಿಐನಲ್ಲಿ ನಿರ್ದೇಶಕರಾಗಿದ್ದ ವೇಳೆ ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಗುಜರಾತ್-ಕೇಡರ್ ಐಪಿಎಸ್ ಅಧಿಕಾರಿ ರಾಕೇಶ್ ಅಸ್ತಾನಾ ಅವರೊಂದಿಗೆ ಸಂಘರ್ಷ ನಡೆದಿತ್ತು.

ಇರಿತದಿಂದ ಪೊಲೀಸ್ ಅಧಿಕಾರಿ ಸಾವು, ಶಂಕಿತನ ಹತ್ಯೆ

ವಾಷಿಂಗ್ಟನ್ (ಪಿಟಿಐ): ಅಮೆರಿಕದ ಸೇನಾ ಪ್ರಧಾನ ಕಚೇರಿಯಾಗಿರುವ ಪೆಂಟಗನ್ ಕಟ್ಟಡದ ಹೊರಗಡೆ ಸಂಭವಿಸಿದ ಹಿಂಸಾಚಾರದಲ್ಲಿ ಪೊಲೀಸ್ ಅಧಿಕಾರಿಯೊಬ್ಬರನ್ನು ಇರಿದು ಕೊಲ್ಲಲಾಗಿದ್ದು, ಶಂಕಿತ ಕೊಲೆ ಆರೋಪಿಯನ್ನು ಗುಂಡಿಟ್ಟು ಕೊಲ್ಲಲಾಗಿದೆ.

ಪೆಂಟಗನ್ ಹೊರಭಾಗದ ಬಸ್ ಪ್ಲಾಟ್‌ಫಾರಂನಲ್ಲಿ ಈ ಘಟನೆ ನಡೆದಿದ್ದು, ಸದ್ಯ ಪೆಂಟಗನ್ ಅನ್ನು ಲಾಕ್‌ಡೌನ್‌ಗೆ ಒಳಪಡಿಸಲಾಗಿದೆ. ಈ ಬಗ್ಗೆ ಹಿರಿಯ ಅಧಿಕಾರಿಗಳು ಸ್ಪಷ್ಟ ಮಾಹಿತಿ ನೀಡಿಲ್ಲ.


'ಹಳೆಯ ನೋಟು ಖರೀದಿ ಆಮಿಷಕ್ಕೆ ಒಳಗಾಗದಿರಿ'

ಮುಂಬೈ (ಪಿಟಿಐ): ಕಮಿಷನ್ ಆಧಾರದ ಮೇಲೆ ಹಳೆಯ ನೋಟುಗಳು ಮತ್ತು ನಾಣ್ಯಗಳನ್ನು ಖರೀದಿಸುವ ಅಥವಾ ಮಾರಾಟ ಮಾಡುವ ಅನಧಿಕೃತ ಸಂಸ್ಥೆಗಳ ಮೋಸದ ಕೊಡುಗೆಗಳಿಗೆ ಬಲಿಯಾಗದಂತೆ ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸಾರ್ವಜನಿಕರಿಗೆ ಬುಧವಾರ ಎಚ್ಚರಿಕೆ ನೀಡಿದೆ.

ಆನ್‌ಲೈನ್ ಮತ್ತು ಆಫ್‌ಲೈನ್ ವೇದಿಕೆಗಳ ಮೂಲಕ ಹಳೆಯ ನೋಟು ಹಾಗೂ ನಾಣ್ಯಗಳ ಮಾರಾಟ, ಖರೀದಿಗೆ ಸಂಬಂಧಿಸಿದಂತೆ ಆರ್‌ಬಿಐನ ಹೆಸರು ಬಳಸಿಕೊಂಡು ಶುಲ್ಕ ಕೇಳುತ್ತಿರುವುದು ಗಮನಕ್ಕೆ ಬಂದಿದೆ. ಇಂಥವುಗಳ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಆರ್‌ಬಿಐ ಇಂತಹ ಯಾವುದೇ ವಿಷಯದಲ್ಲಿ ತೊಡಗಿಕೊಂಡಿಲ್ಲ ಹಾಗೂ ಯಾವುದೇ ರೀತಿಯ ಶುಲ್ಕ ಕೇಳುವುದಿಲ್ಲ ಎಂದು ಸ್ಪಷ್ಟಪಡಿಸಿದೆ. ಅಲ್ಲದೆ, ಈ ರೀತಿಯ ವಹಿವಾಟುಗಳಲ್ಲಿ ಆರ್‌ಬಿಐ ಪರವಾಗಿ ಶುಲ್ಕ ಅಥವಾ ಕಮಿಷನ್ ಸಂಗ್ರಹಿಸುವಂತೆ ಯಾವುದೇ ಸಂಘ, ಸಂಸ್ಥೆ, ವ್ಯಕ್ತಿಗೆ ಅಧಿಕಾರ ನೀಡಿಲ್ಲ ಎಂದೂ ಹೇಳಿದೆ.

ಷೇರುಪೇಟೆ ವಹಿವಾಟು 546



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	16,130
ಇಂದಿನ ಅಂತ್ಯ	16,258
▲	128
ದಿನದ ಗರಿಷ್ಠ	16,290

ವಿನಿಮಯ ದರ

$ ಡಾಲರ್	74.19
£ ಪೌಂಡ್	103.41
€ ಯೂರೊ	88
¥ ಯೆನ್ (100ಕ್ಕೆ)	68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹460
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹462

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1470 (1475)
ಸೋಯಾ (ರಿಫೈನ್ಡ್)	₹1400 (1390)
ಸೂರ್ಯಕಾಂತಿ (ರಿಫೈನ್ಡ್)	₹1477 (1470)
ಪಾಮೋಲಿನ್	₹1265 (1254)


54 ಸಾವಿರದ ಗಡಿ ದಾಟಿದ ಸೆನ್ಸೆಕ್ಸ್

ಕಾರ್ಪೊರೇಟ್ ಕಂಪನಿಗಳಿಂದ ನಿರೀಕ್ಷೆಗೆ ಮೀರಿದ ತ್ರೈಮಾಸಿಕ ಆರ್ಥಿಕ ಸಾಧನೆ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕವು ಬುಧವಾರದ ವಹಿವಾಟಿನಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿತು. ಇದೇ ಮೊದಲ ಬಾರಿಗೆ 54 ಸಾವಿರದ ಗಡಿ ದಾಟಿ ವಹಿವಾಟು ನಡೆಸಿತು.

ಜಾಗತಿಕ ಷೇರುಪೇಟೆಗಳ ಸಕಾರಾತ್ಮಕ ಚಲನೆ ಮತ್ತು ಕಾರ್ಪೊರೇಟ್ ಕಂಪನಿಗಳ ನಿರೀಕ್ಷೆಗೂ ಮೀರಿದ ಹಣಕಾಸು ಸಾಧನೆಯು ಷೇರುಪೇಟೆಯಲ್ಲಿ ಸೂಚ್ಯಂಕದ ಓಟಕ್ಕೆ ಕಾರಣವಾಯಿತು ಎಂದು ತಜ್ಞರು ಹೇಳಿದ್ದಾರೆ.

ಎಸ್‌ಬಿಐನ ನಿವ್ವಳ ಲಾಭವು ಶೇ 55ರಷ್ಟು ಏರಿಕೆ ಕಂಡ ವರದಿ ಬಿಡುಗಡೆ ಆದ ಬಳಿಕ ಬ್ಯಾಂಕಿಂಗ್ ಮತ್ತು ಹಣಕಾಸು ವಲಯದ ಷೇರುಗಳು ಭಾರಿ ಪ್ರಮಾಣದಲ್ಲಿ ಖರೀದಿ ವಹಿವಾಟಿಗೆ ಒಳಗಾದವು.



ಬಿಎಸ್‌ಇ ಸೆನ್ಸೆಕ್ಸ್ 546 ಅಂಶ ಏರಿಕೆ ಕಂಡು ದಾಖಲೆಯ 54,369 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು. ವಹಿವಾಟಿನ ಒಂದು ಹಂತದಲ್ಲಿ ಸಾರ್ವಕಾಲಿಕ ಗರಿಷ್ಠ ಮಟ್ಟವಾದ 54,465 ಅಂಶಗಳಿಗೂ ಏರಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 128 ಅಂಶ ಹೆಚ್ಚಾಗಿ ಗರಿಷ್ಠ ಮಟ್ಟವಾದ 16,246 ಅಂಶಗಳಿಗೆ ತಲುಪಿತು.

ಸೆನ್ಸೆಕ್ಸ್‌ನಲ್ಲಿ ಎಚ್‌ಡಿಎಫ್‌ಸಿ ಷೇರು ಶೇಕಡ 4.77ರಷ್ಟು ಗರಿಷ್ಠ ಗಳಿಕೆ ಕಂಡಿತು. ಕೋಟಕ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್, ಎಸ್‌ಬಿಐ, ಎಚ್‌ಡಿಎಫ್‌ಸಿ ಬ್ಯಾಂಕ್ ಮತ್ತು ಎಕ್ಸಿಸ್ ಬ್ಯಾಂಕ್ ಷೇರುಗಳು ಸಹ ಗಳಿಕೆ ಕಂಡುಕೊಂಡಿವೆ.

ಮುಖ್ಯಾಂಶಗಳು

- ಈ ವರ್ಷದಲ್ಲಿ ಸೆನ್ಸೆಕ್ಸ್ ಇದುವರೆಗೆ 6,618 ಅಂಶ ಏರಿಕೆ
- ರೂಪಾಯಿ ಮೌಲ್ಯ 9 ಪೈಸೆ ಹೆಚ್ಚಳ
- ಬ್ಯಾಂಕಿಂಗ್, ಹಣಕಾಸು ವಲಯದ ಷೇರುಗಳ ಗಳಿಕೆ

ಪ್ರಮುಖ ಹಣಕಾಸು ಕಂಪನಿಗಳ ಉತ್ತಮ ಗಳಿಕೆಯಿಂದಾಗಿ ದೇಶಿ ಷೇರುಪೇಟೆಗಳ ಏರುಮುಖ ಚಲನೆಯು ಮುಂದುವರಿಯಿತು ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ಯೋಜನಾ ಮುಖ್ಯಸ್ಥ ವಿನೋದ್ ಮೋದಿ ಹೇಳಿದ್ದಾರೆ.

ಬಿಎಸ್‌ಇನಲ್ಲಿ ಬ್ಯಾಂಕಿಂಗ್, ಹಣಕಾಸು ಮತ್ತು ಇಂಧನ ವಲಯಗಳ ಸೂಚ್ಯಂಕಗಳು ಶೇ 2.60ರವರೆಗೆ ಏರಿಕೆ ಕಂಡಿವೆ. ಬಿಎಸ್‌ಇ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಶೇ 1.06ರವರೆಗೂ ಇಳಿಕೆ ಕಂಡಿವೆ.

ರೂಪಾಯಿ ಮೌಲ್ಯ ಹೆಚ್ಚಳ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 9 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 74.19ರಂತೆ ವಿನಿಮಯಗೊಂಡಿತು. ಐದು ವಾರಗಳ ಗರಿಷ್ಠ ಮಟ್ಟ ಇದಾಗಿದೆ.

ನಕಾರಾತ್ಮಕ ಮಟ್ಟದಲ್ಲಿ ಸೇವಾ ವಲಯ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯವು ಸತತ ಮೂರನೇ ತಿಂಗಳಿನಲ್ಲಿಯೂ ನಕಾರಾತ್ಮಕ ಹಾದಿಯಲ್ಲಿಯೇ ಉಳಿದಿದೆ ಎಂದು ಐಎಚ್‌ಎಸ್ ಮಾರ್ಕಿಟ್ ಇಂಡಿಯಾ ಸಂಸ್ಥೆ ಹೇಳಿದೆ.

ಕೋವಿಡ್ ಸಾಂಕ್ರಾಮಿಕವನ್ನು ನಿಯಂತ್ರಿಸಲು ಸ್ಥಳೀಯವಾಗಿ ನಿರ್ಬಂಧಗಳನ್ನು ಜಾರಿಗೊಳಿಸಿದ್ದರಿಂದ ಜುಲೈನಲ್ಲಿಯೂ ಸೇವಾ ವಲಯದ ಚಟುವಟಿಕೆಗಳು ಇಳಿಕೆ ಕಂಡಿವೆ ಎಂದು ಅದು ತಿಳಿಸಿದೆ.

ಸೇವಾ ವಲಯದ ಚಟುವಟಿಕೆಗಳನ್ನು ಸೂಚಿಸುವ ಸೂಚ್ಯಂಕವು ಜೂನ್‌ನಲ್ಲಿ 41.2 ರಷ್ಟಿತ್ತು. ಇದಕ್ಕೆ ಹೋಲಿಸಿದರೆ ಜುಲೈನಲ್ಲಿ ಸೂಚ್ಯಂಕವು 45.4ಕ್ಕೆ ಏರಿಕೆ ಆಗಿದೆ. ಹೀಗಿದ್ದರೂ ಸೂಚ್ಯಂಕವು 50ಕ್ಕಿಂತ ಕೆಳಮಟ್ಟದಲ್ಲಿ ಇದ್ದರೆ ಅದನ್ನು ನಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ.

ಮುಂಬೈ ಧಾರಣೆ

ಶೇಂಗಾ 4-8-2021

ಜಾವಾ 70/80(ಹೊಸ)	10000-10050
ಜಾವಾ 80/90(ಹೊಸ)	9100-9150
ದಪ್ಪ ಮಧ್ಯಪ್ರದೇಶ(ಹೊಸ)	9600-9700
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1480 (1485)
ಒಂದು ವಾರದ ಡೆಲಿವರಿ	1475 (1480)
ಸೋಯಾ ಕಚ್ಚಾ	1365 (1355)
ಪಾಮ್ ವಾರದ ಡೆಲಿವರಿ	1263 (1252)
ಸೂರ್ಯಕಾಂತಿ ಎಣ್ಣೆ ಕಚ್ಚಾ	1390 (1390)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
48,200 (47,900)
ಬೆಳ್ಳಿ ಕೆ.ಜಿ 68,700 (67,850)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ


ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	600-6500
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	380
ಅಡಿಕೆ	
ಬಂಟ್ವಾಳ	
ಕೋಕ	10000-22500
ಹೊಸತು	23500-45000
ಹಳತು	42500-52000
ಕುಮಟ	
ಚಿಪ್ಪು	32109-34569
ಕೋಕ	21569-32019
ಫ್ಯಾಕ್ಟರಿ	15099-19661
ಹಳೆಚಾಲಿ	43099-45079
ಹೊಸಚಾಲಿ	39089-41639
ಸಿದ್ದಾಪುರ	
ಬಿಳಿಗೋಟು	27689-35309
ಚಾಲಿ	37699-41277
ಕೋಕ	20699-33429
ಕೆಂಪುಗೋಟು	28789-30699
ರಾಶಿ	38499-41099
ತಟ್ಟಿಬೆಟ್ಟೆ	33249-33899
ಶಿರಸಿ	
ಬೆಟ್ಟೆ	32899-39699
ಬಿಳಿಗೋಟು	23919-36878
ಚಾಲಿ	37099-41928
ರಾಶಿ	38719-42199
ಶಿವಮೊಗ್ಗ (ಎಪಿಎಂಸಿ)	
ಗೊಬರಲು	18000-35399
ರಾಶಿ	37899-42629
ಚನ್ನಗಿರಿ ತುಮ್ಕೋಸ್	
ರಾಶಿ	41359-42799
ಬೆಟ್ಟೆ	36629-34629
ರಾಮನಗರ ರೇಷ್ಮೆಗೂಡು	
ಮಿಶ್ರತಳಿ	232-478
ದ್ವಿತಳಿ	256-501

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ		ಹಾಸನ	
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13200	12500	12100	172.80ಸೆಂಟ್ಸ್
ಎಸಿ	5665	4800	4775	
ಆರ್‌ಪಿ	6000	5700	5950	ಲಂಡನ್
ಆರ್‌ಸಿ	3355	3300	3425	1753 ಡಾಲರ್ಸ್

ಯಾವುದೇ ಕಾರಣಕ್ಕೂ ಪುಸ್ತಕದಲ್ಲಿರುವ ಅಂಶಗಳ ಟಿಪ್ಪಣಿ ತಯಾರಿಸಲು ಹೋಗಬೇಡಿ. ಸಮಯ ಕಡಿಮೆ ಇರೋದರಿಂದ ಸಹಜವಾಗಿ ಕಷ್ಟವಾಗುವುದು, ಹೀಗಾಗಿ ಪುಸ್ತಕಗಳಲ್ಲಿಯೇ ಬೇರೆ ಬೇರೆ ಬಣ್ಣಗಳ ಹೈಲೈಟರ್ ಬಳಸಿ ಗುರುತು ಹಾಕಿಕೊಳ್ಳುತ್ತಾ ಹೋಗಿ ಮತ್ತು ಆಗಾಗ ಹೈಲೈಟ್ ಆದ ಭಾಗವನ್ನು ನೋಡಿಕೊಳ್ಳುತ್ತಾ ಪುನರಾವರ್ತಿಸಿ.

ಶಿಕ್ಷಕರ ಅರ್ಹತಾ ಪರೀಕ್ಷೆ- ಟಿಇಟಿ ಕಡಿಮೆ ಸಮಯದಲ್ಲಿ ತಯಾರಿ ಹೇಗೆ?



ಕೆ.ಎಚ್. ಮಂಜುನಾಥ್

ಸಾರ್ವಜನಿಕ ಶಿಕ್ಷಣ ಇಲಾಖೆಯು ಶಿಕ್ಷಕರ ನೇಮಕಾತಿಗೆ ಕನಿಷ್ಠ ಅರ್ಹತೆಯನ್ನು ಅಳವಡಿಸಿಕೊಳ್ಳಲು ಟಿಇಟಿ (ಶಿಕ್ಷಕರ ಅರ್ಹತಾ ಪರೀಕ್ಷೆ) ಯನ್ನು ನಡೆಸುತ್ತಿದೆ. ಕರ್ನಾಟಕದಲ್ಲಿ ಟಿಇಟಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಕೇಂದ್ರೀಕೃತ ದಾಖಲಾತಿ ಘಟಕ ನಡೆಸುತ್ತಿದ್ದು ಈ ವರ್ಷದ ಪರೀಕ್ಷೆ ಆಗಸ್ಟ್ 22ರಂದು ನಡೆಯಲಿದೆ. ಇಲ್ಲಿ ಎರಡು ಪ್ರತ್ಯೇಕ ಪರೀಕ್ಷೆಗಳು ಇರಲಿದ್ದು ಮೊದಲನೆಯದು 1ರಿಂದ 5ನೇ ತರಗತಿಯನ್ನು ತೆಗೆದುಕೊಳ್ಳುವ ಶಿಕ್ಷಕರಿಗಾದರೆ, ಎರಡನೆಯದು 6ರಿಂದ 8ನೇ ತರಗತಿಯ ತನಕ ಬೋಧಿಸುವ ಶಿಕ್ಷಕರಿಗೆ.

1ರಿಂದ 5ನೇ ತರಗತಿಯಲ್ಲಿ ಬೋಧಿಸಲು ಇಚ್ಛಿಸುವ ಶಿಕ್ಷಕರಿಗಾಗಿ ಟಿಇಟಿ ಪ್ರಶ್ನೆಪತ್ರಿಕೆಯಲ್ಲಿ ಇರುವ ವಿಷಯಗಳ ವಿವರಗಳು ಹೀಗಿವೆ.

ಇಲ್ಲಿ ಭಾಷೆ-1ಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳು ಬೋಧನಾ ಮಾಧ್ಯಮದ ಕೌಶಲವನ್ನು ಆಧರಿಸಿರುತ್ತವೆ. ಭಾಷೆ 2ಕ್ಕೆ ಸಂಬಂಧಿಸಿದಂತೆ ಪ್ರಶ್ನೆಗಳು ಆ ಭಾಷೆಯ ಮೂಲಭೂತ ಅಂಶಗಳು, ಸಂವಹನ ಮತ್ತು ವಿಷಯ ಗ್ರಹಿಕೆ ಸಾಮರ್ಥ್ಯವನ್ನು ಆಧರಿಸಿರುತ್ತವೆ.

ಶಿಶು ವಿಕಸನ ಹಾಗೂ ಬೋಧನಾ ಕ್ರಮವು 6ರಿಂದ 11 ವಯೋಮಾನದ ಮಕ್ಕಳ ಮನೋವಿಜ್ಞಾನ ಹಾಗೂ ಬೋಧನಾ ಮತ್ತು ಕಲಿಕೆಯ ಮೇಲೇ ಕೇಂದ್ರೀಕೃತವಾಗಿರುತ್ತದೆ. ವಿಭಿನ್ನ ಕಲಿಕೆಯ ಮಕ್ಕಳ ಅವಶ್ಯಕತೆ ಹಾಗೂ ಅವರ ಕಲಿಕೆಯ ಮಟ್ಟವನ್ನು ಸುಧಾರಿಸುವ ನಿಟ್ಟಿನಲ್ಲಿ ಶಿಕ್ಷಕರು ತಿಳಿದುಕೊಳ್ಳಬೇಕಾದ ಅಂಶಗಳ ಮೇಲೆ ಇರುತ್ತದೆ.

ಗಣಿತ ಮತ್ತು ಪರಿಸರ ಅಧ್ಯಯನಕ್ಕೆ ಸಂಬಂಧಿಸಿದ ಪ್ರಶ್ನೆಗಳು ಆ ವಿಷಯದ ಮೂಲ ಪರಿಕಲ್ಪನೆಗಳು, ಸಮಸ್ಯೆಯನ್ನು ಬಿಡಿಸುವ ಸಾಮರ್ಥ್ಯ ಮತ್ತು ಬೋಧನಾ ಶಾಸ್ತ್ರದ ಅರ್ಥೈಸಿಕೊಳ್ಳುವಿಕೆಯನ್ನು ಒಳಗೊಂಡಿರುತ್ತದೆ. ಈ ಪತ್ರಿಕೆಯಲ್ಲಿ ಬರುವ ಎಲ್ಲಾ ಪ್ರಶ್ನೆಗಳು ಎನ್‌ಸಿಇಆರ್‌ಟಿ ಅಥವಾ ರಾಜ್ಯಮಟ್ಟದ 1ರಿಂದ 8ನೇ ತರಗತಿಗೆ ಸಂಬಂಧಿಸಿದ ಪಠ್ಯವಸ್ತುವನ್ನು ಆಧರಿಸುತ್ತದೆ. ಆದರೆ ಪ್ರಶ್ನೆಗಳ ಕಠಿಣತೆಯು ಪ್ರೌಢ ಹಂತಕ್ಕೆ ಅಂದರೆ 10ನೇ ತರಗತಿಯವರೆಗೆ ಸೀಮಿತವಾಗಿರುತ್ತದೆ.

ಇದೇ ರೀತಿ 6 ರಿಂದ 8ನೇ ತರಗತಿಯಲ್ಲಿ ಬೋಧಿಸಲು ಇಚ್ಛಿಸುವ ಶಿಕ್ಷಕರಿಗಾಗಿ ಟಿಇಟಿ ಪ್ರಶ್ನೆಪತ್ರಿಕೆಯಲ್ಲಿ ಇರುವ ವಿಷಯಗಳು 1ರಿಂದ 5ನೇ ತರಗತಿಯಲ್ಲಿ ಬೋಧಿಸಲು ಇಚ್ಛಿಸುವ ಶಿಕ್ಷಕರಿಗೆ ಇರುವ ಮಾದರಿಯಲ್ಲೇ ಇರುತ್ತವೆ. ಆದರೆ 11- 14 ವರ್ಷ ವಯಸ್ಸಿನ ಮಕ್ಕಳ ಮನೋವಿಜ್ಞಾನ ಹಾಗೂ ಬೋಧನಾ ಮತ್ತು ಕಲಿಕೆಯ ಮೇಲೆ ಕೇಂದ್ರೀಕೃತವಾಗಿರುತ್ತದೆ. ಎಲ್ಲಾ ಪ್ರಶ್ನೆಗಳು ಎನ್‌ಸಿಇಆರ್‌ಟಿ ಅಥವಾ ರಾಜ್ಯಮಟ್ಟದ 6ರಿಂದ 10ನೇ ತರಗತಿಗೆ ಸಂಬಂಧಿಸಿದ ಪಠ್ಯವಸ್ತುವನ್ನು ಆಧರಿಸುತ್ತದೆ. ಪ್ರಶ್ನೆಗಳ ಕಠಿಣತೆಯು ಪಿಯುಸಿ ತರಗತಿಯವರೆಗೆ ಸೀಮಿತವಾಗಿರುತ್ತದೆ.

ಪತ್ರಿಕೆ-1 (1ರಿಂದ 5ನೇ ತರಗತಿ ಬೋಧಿಸಲ್ಪಡುವ ಶಿಕ್ಷಕರಿಗಾಗಿ) ಪರೀಕ್ಷಾ ಅವಧಿ: 2 ಗಂಟೆ 30 ನಿಮಿಷ

ರಚನೆ ಮತ್ತು ವಿಷಯ

ವಿಭಾಗ	ವಿಷಯ	ಪ್ರಶ್ನೆಗಳ ಸಂಖ್ಯೆ	ಒಟ್ಟು ಅಂಕಗಳು
1	ಭಾಷೆ- 1	30 ಬಹು ಆಯ್ಕೆ ಪ್ರಶ್ನೆ	30 ಅಂಕಗಳು
2	ಭಾಷೆ-2	30 ಬಹು ಆಯ್ಕೆ ಪ್ರಶ್ನೆ	30 ಅಂಕಗಳು
3	ಶಿಶು ವಿಕಸನ ಹಾಗೂ ಬೋಧನಾ ಕ್ರಮ	30 ಬಹು ಆಯ್ಕೆ ಪ್ರಶ್ನೆ	30 ಅಂಕಗಳು
4	ಗಣಿತ	30 ಬಹು ಆಯ್ಕೆ ಪ್ರಶ್ನೆ	30 ಅಂಕಗಳು
5	ಪರಿಸರ ಅಧ್ಯಯನ	30 ಬಹು ಆಯ್ಕೆ ಪ್ರಶ್ನೆ	30 ಅಂಕಗಳು
6	ಸಮಾಜ ಅಧ್ಯಯನ (ಗಣಿತ ಮತ್ತು ಪರಿಸರ ಅಧ್ಯಯನ ವಿಷಯಗಳ ಬದಲಾಗಿ ಅಂಧ ವಿದ್ಯಾರ್ಥಿಗಳಿಗೆ ಮಾತ್ರ)	60 ಬಹು ಆಯ್ಕೆ ಪ್ರಶ್ನೆ	60 ಅಂಕಗಳು
	ಒಟ್ಟು	150 ಬಹು ಆಯ್ಕೆ ಪ್ರಶ್ನೆಗಳು	150 ಅಂಕಗಳು

ಪತ್ರಿಕೆ-2 (6ರಿಂದ 8ನೇ ತರಗತಿ ಬೋಧಸಲ್ಪಡುವ ಶಿಕ್ಷಕರಿಗಾಗಿ) ಪರೀಕ್ಷಾ ಅವಧಿ: 2 ಗಂಟೆ 30 ನಿಮಿಷ

ರಚನೆ ಮತ್ತು ವಿಷಯ

ವಿಭಾಗ	ವಿಷಯ	ಪ್ರಶ್ನೆಗಳ ಸಂಖ್ಯೆ	ಒಟ್ಟು ಅಂಕಗಳು
1	ಭಾಷೆ-1 (ಕಡ್ಡಾಯ)	30 ಬಹು ಆಯ್ಕೆ ಪ್ರಶ್ನೆ	30 ಅಂಕಗಳು
2	ಭಾಷೆ-2 (ಕಡ್ಡಾಯ)	30 ಬಹು ಆಯ್ಕೆ ಪ್ರಶ್ನೆ	30 ಅಂಕಗಳು
3	ಶಿಶು ವಿಕಸನ ಹಾಗೂ ಬೋಧನಾ ಕ್ರಮ (ಕಡ್ಡಾಯ)	30 ಬಹು ಆಯ್ಕೆ ಪ್ರಶ್ನೆ	30 ಅಂಕಗಳು
4	ಗಣಿತ ಮತ್ತು ವಿಜ್ಞಾನ (ಗಣಿತ ಮತ್ತು ವಿಜ್ಞಾನ ಶಿಕ್ಷಕರಿಗಾಗಿ)	60 ಬಹು ಆಯ್ಕೆ ಪ್ರಶ್ನೆ	60 ಅಂಕಗಳು
5	ಸಮಾಜ ಪಾಠಗಳು/ಸಮಾಜ ವಿಜ್ಞಾನ (ಸಮಾಜ ವಿಜ್ಞಾನ ಶಿಕ್ಷಕರಿಗಾಗಿ)	60 ಬಹು ಆಯ್ಕೆ ಪ್ರಶ್ನೆ	60 ಅಂಕಗಳು
	ಒಟ್ಟು	150 ಬಹು ಆಯ್ಕೆ ಪ್ರಶ್ನೆಗಳು	150 ಅಂಕಗಳು

ಏನನ್ನು ಓದಬೇಕು?

ಇದಕ್ಕಾಗಿ ಹಳೆಯ ಪ್ರಶ್ನೆಪತ್ರಿಕೆಗಳನ್ನು ನೋಡಿಕೊಂಡರೆ ಅಂದಾಜು ಸಿಗುತ್ತದೆ.

- ಕನ್ನಡ ಭಾಷೆಗಾದರೆ (1) ಸ್ಪರ್ಧಾಕಲಿ- ಎನ್‌ಟಿಎಸ್‌ಇ ಮತ್ತು ಎನ್‌ಎಂಎಎಸ್ ಕೈಪಿಡಿ (ರಾಜ್ಯ ಸರ್ಕಾರದ ಪ್ರಕಟಣೆ) (2) ಕನ್ನಡ ವ್ಯಾಕರಣ ದರ್ಪಣ- ಕನ್ನಡ ಸಾಹಿತ್ಯ ಪರಿಷತ್ ಪ್ರಕಟಣೆ (3) ರಾಜ್ಯ ಡಿಎಸ್‌ಆರ್‌ಟಿಸಿ ಪ್ರಕಟಿಸಿದ 1ರಿಂದ ಪಿಯುಸಿವರೆಗಿನ ಕನ್ನಡ ಪುಸ್ತಕಗಳು.
- ಇಂಗ್ಲಿಷ್ ಭಾಷೆಗಾದರೆ ಕರ್ನಾಟಕ ಟೆಕ್ಸ್ಟ್‌ಬುಕ್ ಸೊಸೈಟಿ, ಎನ್‌ಸಿಇಆರ್‌ಟಿ ಮತ್ತು ಡಿಎಸ್‌ಇಆರ್‌ಟಿ ಪ್ರಕಟಿಸಿದ ಪುಸ್ತಕಗಳು
- ವಿಜ್ಞಾನ, ಗಣಿತ ಮತ್ತು ಸಮಾಜ ವಿಜ್ಞಾನಕ್ಕೆ ಕೂಡ ಇದೇ ರೀತಿಯ ಪುಸ್ತಕಗಳನ್ನು ಓದಬಹುದು.

ಸಲಹೆಗಳು

- ಪರೀಕ್ಷೆಯು ಇದೇ ತಿಂಗಳ 22ಕ್ಕೆ ಇರುವುದರಿಂದ ಸಹಜವಾಗಿಯೇ ಕಡಿಮೆ ದಿನಗಳಿವೆ, ಹ್ಯಾಗಪ್ಪ ತಯಾರಿ ನಡೆಸೋದು? ಎಂಬ ಪ್ರಶ್ನೆ ನಿಮ್ಮಲ್ಲಿ ಮೂಡುವುದು ಸಹಜ. ಅದಕ್ಕಾಗಿ ಹೆದರಬೇಕಾದ ಅಗತ್ಯವಿಲ್ಲ. ಮೇಲೆ ಹೇಳಿದ ಪುಸ್ತಕಗಳನ್ನು ಗಮನಿಸಿದರೆ ಅವು ನಿಮಗೆ ಹೊಸದೇನೂ ಅಲ್ಲ. ಈಗಾಗಲೇ ನಿಮ್ಮ ಹಿಂದಿನ ತರಗತಿಗಳಲ್ಲಿ (ಬಿಎ/ ಬಿಎಸ್‌ಸಿ/ ಡಿಇಡಿ/ ಬಿಇಡಿ ಅಥವಾ ಶಿಕ್ಷಣ ಡಿಪ್ಲೊಮಾದಲ್ಲಿ) ಓದಿರುವ ಪುಸ್ತಕಗಳೇ ಆಗಿವೆ. ಅಲ್ಲದೇ ನೀವು ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದರೆ ನೀವು ತರಗತಿಯನ್ನು ತೆಗೆದುಕೊಳ್ಳಲು ಇರುವ ಪಠ್ಯಪುಸ್ತಕವನ್ನು ಓದಿಯೇ ಇರುತ್ತಿರಿ. ಮೊದಲು ಈ ಹಿಂದೆ ನಡೆದ ಈ ತರಹದ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆಪತ್ರಿಕೆಯನ್ನು ತಿರುವಿಹಾಕಿ ಅದಾದ ನಂತರ ಪ್ರತಿಯೊಂದು ವಿಷಯದ ಪುಸ್ತಕಗಳನ್ನು ಪುನರಾವರ್ತನೆಯ ದೃಷ್ಟಿಯಿಂದ ಒಂದೊಂದೇ ಅಧ್ಯಾಯಗಳನ್ನು ತಿರುವಿ ಹಾಕುತ್ತಾ ಹೋಗಿ. ನೀವು ಈಗಾಗಲೇ ಹಲವು ಬಾರಿ ಆ ಎಲ್ಲಾ ಅಧ್ಯಾಯಗಳನ್ನು ಓದಿರುವುದರಿಂದ ಎಲ್ಲವೂ ನೆನಪಾಗುತ್ತಾ ಹೋಗುತ್ತದೆ. ಹೀಗಾಗಿ ಓದು ಬೇಗ ಮುಗಿಯುತ್ತದೆ ಹಾಗೂ ಪುನರಾವರ್ತನೆಯೂ ಆಗುತ್ತದೆ. ಪ್ರತಿ ದಿನ ಪರೀಕ್ಷೆ ಮುಗಿಯುವ ತನಕ ಕನಿಷ್ಠ 6-8 ಗಂಟೆಯನ್ನಾದರೂ ಓದಲು ಮೀಸಲಿಡಿ. ಅದರಲ್ಲಿ 1 ಗಂಟೆ ಬಹುಆಯ್ಕೆ ಪ್ರಶ್ನೆಗಳನ್ನು ಬಿಡಿಸಲು ಮೀಸಲಿಟ್ಟರೆ ಚೆನ್ನ.
- ಈ ಸಂದರ್ಭದಲ್ಲಿ, ಹೊಸ ವಿಷಯವನ್ನು ಕಲಿಯಲು ಹೆಚ್ಚು ಒತ್ತು ಕೊಡಬೇಡಿ. ಈಗಾಗಲೇ ಕಲಿತ ಎಲ್ಲಾ ವಿಷಯವನ್ನು ಗಟ್ಟಿ ಮಾಡಿಕೊಳ್ಳಲು ಹೆಚ್ಚಿನ ಪ್ರಯತ್ನ ಇರಲಿ. ಮರೆತಿರುವ ವಿಷಯಗಳು ಈ ಅಧ್ಯಯನದಲ್ಲಿ ನೆನಪಾಗುತ್ತವೆ.
- ಯೂಟ್ಯೂಬ್ ಚಾನೆಲ್‌ನಲ್ಲಿ ಇರುವ ವಿಡಿಯೊ ಪಾಠಗಳನ್ನು ಕೂಡಾ ಕೇಳಿಸಿಕೊಳ್ಳಬಹುದು. ಇದು ಕೂಡಾ ನಿಮ್ಮ ಅಧ್ಯಯನಕ್ಕೆ ಸಹಾಯ ಮಾಡಲಿದೆ.

ಶಿಕ್ಷಕರ ಅರ್ಹತಾ ಪರೀಕ್ಷೆ (ಟಿಇಟಿ)ಯು ಇದೇ ಆಗಸ್ಟ್ 22ರಂದು ನಡೆಯಲಿದೆ. ಸರಿಯಾಗಿ ಯೋಜನೆ ಮಾಡಿಕೊಂಡರೆ ಇಷ್ಟು ಕಡಿಮೆ ಸಮಯದಲ್ಲಿ ಸಿದ್ಧತೆ ನಡೆಸಿ, ಪರೀಕ್ಷೆಯಲ್ಲಿ ಯಶಸ್ವಿಯಾಗಬಹುದು.

(ಲೇಖಕ: ನಿರ್ದೇಶಕರು, ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ಕೇಂದ್ರ, ಬೆಂಗಳೂರು)

ಆರ್‌ಆರ್‌ಬಿ ಕ್ಲರ್ಕ್ ಪ್ರಿಲಿಮ್ಸ್ ಪರೀಕ್ಷಾ ಯಶಸ್ಸಿಗೆ ಸುಲಭ ಸೂತ್ರಗಳು

ಅರುಣ ಬ. ಚೂರಿ

ಐಬಿಪಿಎಸ್ ಆರ್‌ಆರ್‌ಬಿ ಕ್ಲರ್ಕ್ ಪ್ರಿಲಿಮ್ಸ್ ಪರೀಕ್ಷೆಯು ಇದೇ ತಿಂಗಳ 8 ಹಾಗೂ 15ರಂದು ನಿಗದಿಯಾಗಿದೆ. ಅಭ್ಯರ್ಥಿಗಳು ಈಗ ಮಾಡಬೇಕಿರುವುದು ಪುನರ್‌ಮನನ ಹಾಗೂ ಕನಿಷ್ಠ ದಿನಕ್ಕೊಂದು ಮಾದರಿ ಪ್ರಶ್ನೆಪತ್ರಿಕೆ ಅಥವಾ ಹಿಂದಿನ ವರ್ಷಗಳ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸುವುದು ಹಾಗೂ ಅವುಗಳ ವಿಶ್ಲೇಷಣೆ ನಡೆಸುವುದು.

ವರ್ಷದಿಂದ ವರ್ಷಕ್ಕೆ ಕಟ್-ಆಫ್ ಹೆಚ್ಚುತ್ತಿರುವುದಕ್ಕೆ ಆತ್ಮ ವಿಶ್ವಾಸ ಕಳೆದುಕೊಳ್ಳದಿರಿ: ಅಭ್ಯರ್ಥಿಗಳು ಪಠ್ಯಕ್ರಮ ಅವಲೋಕಿಸಿ ಅಭ್ಯಸಿಸಿದಾಗ 45 ನಿಮಿಷಗಳಲ್ಲಿ 80 ಪ್ರಶ್ನೆಗಳಿಗೆ ಉತ್ತರಿಸುವುದು ಅಸಾಧ್ಯವೇನಲ್ಲ. ಇದಕ್ಕೆ ಅವಶ್ಯಕವಾಗಿರುವುದು ಸೂಕ್ತ ತಯಾರಿ, ನಿಖರತೆ ಹಾಗೂ ವೇಗದ ಮೇಲೆ ನಿಮಗಿರುವ ಹಿಡಿತ. ಇವೆಲ್ಲವುಗಳು ದೊರಕುವುದು ಸೂಕ್ತ ಅಭ್ಯಾಸದಿಂದ ಮಾತ್ರ. ಹೀಗೆ ಹೆಚ್ಚು ಅಭ್ಯರ್ಥಿಗಳು ಹೆಚ್ಚು ಅಂಕ ಗಳಿಸಿದಾಗ ಸಾಮಾನ್ಯವಾಗಿ ಕಟ್ ಆಫ್ ಹೆಚ್ಚಾಗಲೇಬೇಕು. ಈಗ ನೀವು ವಿಮರ್ಶಿಸಬೇಕಾದದ್ದು, ಕಟ್ ಆಫ್ ಹೆಚ್ಚಾದುದರ ಬಗ್ಗೆ ಅಲ್ಲ, ಬದಲಾಗಿ ನೀಡಿದ ಅದೇ ಸಮಯ ಮತ್ತು ಅದೇ ಪ್ರಶ್ನೆಗಳಿಗೆ ನನ್ನಿಂದ ಏಕೆ ಅಷ್ಟು ಹೆಚ್ಚು ಅಂಕಗಳನ್ನು ಗಳಿಸಲು ಸಾಧ್ಯವಾಗಲಿಲ್ಲ ಎಂಬುದರ ಬಗ್ಗೆ ಅವಲೋಕನ.



ಹೆಚ್ಚು ಅಂಕ ಗಳಿಕೆಗೆ ಸೂತ್ರಗಳು

- ವಿದ್ಯಾರ್ಥಿಗಳು ಏಕಾಗ್ರತೆ ಹಾಗೂ ಆತ್ಮವಿಶ್ವಾಸದೊಂದಿಗೆ ಪರೀಕ್ಷೆಗೆ ಹಾಜರಾಗಿ.
- ನಿಮ್ಮದೇ ಸ್ವಂತ ಪರೀಕ್ಷಾ ಯೋಜನೆ ಅನುಸರಿಸಿ
- ಆರ್‌ಆರ್‌ಬಿ ಕ್ಲರ್ಕ್ ಪ್ರಿಲಿಮ್ಸ್ ಪರೀಕ್ಷೆಯಲ್ಲಿ ರೀಸನಿಂಗ್ ಹಾಗೂ ಕ್ವಾಂಟಿಟೇಟಿವ್ ಆಪ್ಟಿಟ್ಯೂಡ್ ಎರಡು ವಿಷಯಗಳಿಗೂ ಸೇರಿ ಉತ್ತರಿಸಲು 45 ನಿಮಿಷಗಳ ಕಾಲಾವಕಾಶವಿರುತ್ತದೆ. ಇದರಲ್ಲಿ ವಿದ್ಯಾರ್ಥಿಗಳು ತಮಗೆ ಅನುಕೂಲಕ್ಕೆ ತಕ್ಕಂತೆ ಪರಿಣತಿ ಇರದ ವಿಭಾಗಕ್ಕೆ ಹೆಚ್ಚು ಹಾಗೂ ಪರಿಣತಿ ಇರುವ ವಿಭಾಗಕ್ಕೆ ಕಡಿಮೆ ಸಮಯ ಮೀಸಲಿಟ್ಟು ಹೆಚ್ಚು ಅಂಕ ಗಳಿಸಲು ಪ್ರಯತ್ನಪಡಬೇಕು.
- ವಿದ್ಯಾರ್ಥಿಗಳು ಮೊದಲು ತಾವು ಹೆಚ್ಚು ಪರಿಣತಿ ಹೊಂದಿದ ವಿಷಯ ಆಯ್ಕೆ ಮಾಡಿಕೊಂಡು ಉತ್ತರಿಸಲು ಪ್ರಾರಂಭಿಸಿ. ಇದರಿಂದ ವೇಗವಾಗಿ, ನಿಖರತೆಯೊಂದಿಗೆ ಸುಲಭವಾದ ಪ್ರಶ್ನೆಗಳಿಗೆ ಉತ್ತರಿಸುತ್ತಾ ಹೋದಂತೆ ಆತ್ಮವಿಶ್ವಾಸ ಹೆಚ್ಚುತ್ತದೆ ಹಾಗೂ ಇದು ನಿಮಗೆ ಸುಲಭವಾದ ವಿಷಯವಾಗಿರುವುದರಿಂದ ಇದರಲ್ಲಿ ಆದಷ್ಟು ಸಮಯ ಉಳಿಸಿ ಹೆಚ್ಚು ಅಂಕ ಗಳಿಸಲು ಪ್ರಯತ್ನಿಸಿ.
- ಪ್ರಿಲಿಮ್ಸ್ ಪರೀಕ್ಷೆಯಲ್ಲಿ ಸಾಮಾನ್ಯವಾಗಿ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಲು ಸಾಧ್ಯ. ಆದರೆ ಕಾಲಾವಕಾಶವನ್ನು ಬಳಸಿಕೊಳ್ಳುವ ಚಾಕಚಕ್ಯತೆ ತಿಳಿದಿರಬೇಕು. ಹಾಗಾಗಿ ಮೊದಲು ಯಾವ ಟಾಪಿಕ್ ಪ್ರಶ್ನೆಗಳಿಗೆ ಉತ್ತರಿಸಬೇಕು, ನಂತರ ಯಾವ ಪ್ರಶ್ನೆಗಳಿಗೆ ಉತ್ತರಿಸಬೇಕು ಎಂಬುದರ ಕ್ರಮವನ್ನು ಅನುಸರಿಸಿ. ಹೆಚ್ಚು-ಹೆಚ್ಚು ಪ್ರಶ್ನೆಪತ್ರಿಕೆಗಳನ್ನು ಬಿಡಿಸಿದಾಗ ಇದನ್ನು ಅನುಸರಿಸುವುದು ಅತಿಸುಲಭ.
- ರೀಸನಿಂಗ್ ವಿಭಾಗದ ಪಜಲ್ ವಿಭಾಗಕ್ಕೆ ಬಂದರೆ ಪ್ರಿಲಿಮ್ಸ್ ಪರೀಕ್ಷೆಯಲ್ಲಿ ಸರಳವಾದ ಮೂರರಿಂದ ನಾಲ್ಕು ಪಜಲ್‌ಗಳಿರುತ್ತವೆ. ಇವುಗಳಿಗೆ ಉತ್ತರಿಸುವಾಗ ಸಾಧ್ಯತೆಗಳೊಂದಿಗೆ ಉತ್ತರಿಸುತ್ತಾ ಬನ್ನಿ. ಉದಾಹರಣೆಗೆ ಒಂದು ಪಜಲ್ ಉತ್ತರಿಸುವಾಗ ಎರಡರಿಂದ ಮೂರು ಸಾಧ್ಯತೆಗಳು ಬಂದಾಗ ಸರಿ ಉತ್ತರ ಕೊನೆಯ ಮೂರನೇ ಸಾಧ್ಯತೆಯಲ್ಲಿ ಇದ್ದರೆ ಒಂದಾದ ನಂತರ ಒಂದು ಸಾಧ್ಯತೆ ಪ್ರಯತ್ನಿಸುವಷ್ಟರಲ್ಲಿ ನಿಮ್ಮ ಸಾಕಷ್ಟು ಸಮಯ ವ್ಯರ್ಥವಾಗಿ ಹೋಗುತ್ತದೆ. ಬದಲಾಗಿ ನೀವು ಪಜಲ್ ಬಿಡಿಸುವಾಗ ಪರ್ಯಾಯವಾಗಿ ಎಲ್ಲ ಸಾಧ್ಯತೆಗಳೊಂದಿಗೆ ಬಿಡಿಸಿ. ಇದರಿಂದ ನೀವು ಸಮಯ ವ್ಯರ್ಥವಾಗುವುದನ್ನು ತಪ್ಪಿಸಬಹುದು.
- ಯಾವುದೇ ಪ್ರಶ್ನೆಗಳನ್ನು ಬಿಡಿಸುವಾಗ ಹಂತಗಳಿಗೆ ಅಂಕಗಳಿಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿ. ಹಾಗಾಗಿ ಉತ್ತರಿಸುವಾಗ ಪ್ರಶ್ನೆಯನ್ನು ಹಂತಹಂತವಾಗಿ ಬಿಡಿಸಿ ನಂತರ ಉತ್ತರಿಸುವ ಗೋಜಿಗೆ ಹೋಗದಿರಿ. ಬದಲಾಗಿ ಮೈಂಡ್ ಕ್ಯಾಲ್ಕುಲೇಷನ್ ಕ್ರಮವನ್ನು ಅನುಸರಿಸಿ ನೇರವಾಗಿಯೇ ಉತ್ತರವನ್ನು ಕಂಡುಕೊಳ್ಳಿ. ಏಕೆಂದರೆ ಇದರಲ್ಲಿ ಬಹುತೇಕ ಪ್ರಶ್ನೆಗಳು 'ವಿದೌಟ್ ಪೆನ್ ಅಂಡ್ ಪೇಪರ್' ಮಾದರಿಯ ಪ್ರಶ್ನೆಗಳಾಗಿರುತ್ತವೆ. ಹಾಗಾಗಿ ಇವುಗಳಿಗೂ ಸಹ ನೀವು ಹಂತಹಂತವಾಗಿ ಉತ್ತರಿಸುತ್ತಾ ಸಮಯ ವ್ಯರ್ಥ ಮಾಡದಿರಿ. ಅಲ್ಲದೇ ಕೆಲವು ಪ್ರಶ್ನೆಗಳಿಗೆ 'ಆಪ್ಷನ್ ಎಲಿಮಿನೇಷನ್' ಕ್ರಮ ಅನುಸರಿಸಿ ಸುಲಭವಾಗಿ ಉತ್ತರಿಸಬಹುದು. ಇದರಿಂದ ನಿಮ್ಮ ಬಹುತೇಕ ಸಮಯ ಉಳಿತಾಯವಾಗುತ್ತದೆ.
- ನಿಮಗೆ ತಿಳಿದಂತೆ ಪ್ರಿಲಿಮ್ಸ್ ಪರೀಕ್ಷೆಯು ಕೇವಲ ಅರ್ಹತಾ ಪರೀಕ್ಷೆ ಆಗಿರುತ್ತದೆ. ಕಾರಣ ಇದರಲ್ಲಿ ಸುಲಭವಾದ ಪ್ರಶ್ನೆಗಳಿರುತ್ತವೆ. ಹಾಗಾಗಿ ನೀವು ಪ್ರಿಲಿಮ್ಸ್ ಪರೀಕ್ಷೆ ಎದುರಿಸಲು ವೇಗ ಹಾಗೂ ನಿಖರತೆಯನ್ನು ಹೆಚ್ಚಿಸಿಕೊಳ್ಳಿ ಹಾಗೂ ಮೇನ್ಸ್ ಪರೀಕ್ಷೆಯನ್ನು ಎದುರಿಸಲು ಕಾನ್ಸೆಪ್ಟ್‌ಗಳ ಮೇಲೆ ಹಿಡಿತ ಸಾಧಿಸಿ. ಆಗ ಸುಲಭವಾಗಿ ನೀವು ಆರ್‌ಆರ್‌ಬಿ ಕ್ಲರ್ಕ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಬಹುದು
- ಇನ್ನು ಪ್ರಿಲಿಮ್ಸ್ ಅಥವಾ ಮೇನ್ಸ್ ಯಾವುದೇ ಪರೀಕ್ಷೆಯಾಗಿರಲಿ ಕನಿಷ್ಠ 1ರಿಂದ 40ರವರೆಗೆ ಸ್ಕ್ವೇರ್ ಹಾಗೂ ಕ್ಯೂಬ್, ಪ್ರೈಮ್ ನಂಬರ್ಸ್, ಡಿವಿಸಿಬಿಲ್ಟಿ ರೂಲ್ಸ್, ಪರ್ಸೆಂಟೇಜ್ ಟು ಫ್ರಾಕ್ಷನ್ & ಫ್ರಾಕ್ಷನ್ ಟು ಪರ್ಸೆಂಟೇಜ್, ಮೆನ್ಸುರೇಶನ್ ಸೂತ್ರಗಳು, ಅಲ್ಫಾಬೇಟ್ ನಂಬರ್ಸ್ ಮುಂತಾದ ಸೂತ್ರಗಳಿದ್ದು, ಸುಲಭವಾಗಿ ಯಶಸ್ಸು ಗಳಿಸಬಹುದು.

ಪ್ರಜಾವಾಣಿ ಉದ್ಯೋಗ ವಾರ್ತೆ

ರಾಜ್ಯ ಪೊಲೀಸ್ ಮೀಸಲು ಪಡೆಯಲ್ಲಿ ಹುದ್ದೆಗಳು
ಕರ್ನಾಟಕ ರಾಜ್ಯ ಪೊಲೀಸ್ ಮೀಸಲು ಪಡೆಯಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು.
ಸ್ಥಳ: ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ.
ವಿದ್ಯಾರ್ಹತೆ: ಅರ್ಜಿ ಸಲ್ಲಿಸ ಬಯಸುವ ಅಭ್ಯರ್ಥಿಗಳು ಎಸ್ಸೆಸ್ಸೆಲ್ಸಿ ಅಥವಾ ತತ್ಸಮಾನ ಮುಗಿಸಿರಬೇಕು.
ವಯೋಮಿತಿ: ಕನಿಷ್ಠ 18 ವರ್ಷ (ಆಗಸ್ಟ್ 30, 2021ಕ್ಕೆ ಅನುಗುಣವಾಗುವಂತೆ). ಎಸ್‌ಸಿ/ ಎಸ್‌ಟಿ ಹಾಗೂ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ 35 ವರ್ಷ, ಇತರ ಅಭ್ಯರ್ಥಿಗಳಿಗೆ 30 ವರ್ಷ ಗರಿಷ್ಠ ವಯೋಮಾನ.
ಅರ್ಜಿ ಶುಲ್ಕ: ಸಾಮಾನ್ಯ ಹಾಗೂ ಒಬಿಸಿ ವರ್ಗದ ಅಭ್ಯರ್ಥಿಗಳಿಗೆ ₹ 250 ಮತ್ತು ಎಸ್‌ಟಿ/ ಎಸ್‌ಸಿ ಅಭ್ಯರ್ಥಿಗಳಿಗೆ ₹ 100
ಆಯ್ಕೆ ಪ್ರಕ್ರಿಯೆ: ಸಹಿಷ್ಣುತೆ ಪರೀಕ್ಷೆ ಹಾಗೂ ದೇಹದಾರ್ಢ್ಯತೆ ಪರೀಕ್ಷೆ
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: ಆಗಸ್ಟ್ 30, 2021
ಹೆಚ್ಚಿನ ಮಾಹಿತಿಗೆ: http://ksrpfoll21.ksponline.co.in/

ಪೊಲೀಸ್ ಕಾನ್‌ಸ್ಟೇಬಲ್ ನೇಮಕಾತಿ ಪರೀಕ್ಷೆಯ ಮಾದರಿ ಪ್ರಶ್ನೆಗಳು

ಭಾಗ- 36

481. 'ಹುಳುಕಡ್ಡಿ' ರೋಗ ಯಾವುದರಿಂದ ಉಂಟಾಗುತ್ತದೆ?
ಎ) ಬ್ಯಾಕ್ಟೀರಿಯಾ ಬಿ) ವೈರಸ್
ಸಿ) ಹುಳು ಡಿ) ಶಿಲೀಂಧ್ರ

482. ಸಸ್ಯ ಜೀವಕೋಶ ಮತ್ತು ಪ್ರಾಣಿ ಜೀವಕೋಶದ ನಡುವಿನ ಭಿನ್ನತೆಯನ್ನು ಕೆಳಕಂಡದ್ದರ ಇರುವಿಕೆಯಿಂದ ಗುರುತಿಸಲಾಗುತ್ತದೆ
ಎ) ಕೋಶಭಿತ್ತಿ
ಬಿ) ಕ್ಲೋರೋಪ್ಲಾಸ್ಟ್‌ಗಳು
ಸಿ) ಕೋಶಪೊರೆ
ಡಿ) ನ್ಯೂಕ್ಲಿಯಸ್

483. 'ಪೊಲೀಸ್ ಧ್ವಜ ದಿನಾಚರಣೆ'ಯನ್ನು ಯಾವಾಗ ಆಚರಿಸುತ್ತಾರೆ?
ಎ) ಜೂನ್ 5 ಬಿ) ಏಪ್ರಿಲ್ 2
ಸಿ) ಆಗಸ್ಟ್ 15 ಡಿ) ಜನವರಿ 26

484. ಗೊಮ್ಮಟೇಶ್ವರ ಮೂರ್ತಿ ಈ ಕೆಳಗಿನ ಯಾವ ಸ್ಥಳದಲ್ಲಿದೆ?
ಎ) ಕುಂದಾಪುರ ಬಿ) ಬಾದಾಮಿ
ಸಿ) ಬೇಲೂರು ಡಿ) ಧರ್ಮಸ್ಥಳ

485. 'ನಕ್ಸಲೀಯ ಚಳವಳಿ'ಯು ಈ ಕೆಳಕಂಡ ರಾಜ್ಯದ 'ನಕ್ಸಲ್ ಬಾರಿ' ಜಿಲ್ಲೆಯಲ್ಲಿ ಪ್ರಾರಂಭವಾಯಿತು
ಎ) ಆಂಧ್ರಪ್ರದೇಶ
ಬಿ) ಕೇರಳ
ಸಿ) ಜಾರ್ಖಂಡ್
ಡಿ) ಪಶ್ಚಿಮ ಬಂಗಾಳ

486. 'PAN' ಎಂಬ ಸಂಕ್ಷೇಪಾಕ್ಷರಗಳ ವಿಸ್ತೃತ ರೂಪ
ಎ) Permanent Account Number
ಬಿ) Peroxyacetyl Nitrate
ಸಿ) Personal Area Network
ಡಿ) ಮೇಲಿನ ಎಲ್ಲವೂ

487. ಭೂಕಂಪನದ ತೀವ್ರತೆಯ ವ್ಯಾಪ್ತಿಯನ್ನು ಈ ಕೆಳಕಂಡ ಅಳತೆಪಟ್ಟಿಯಿಂದ ಮಾಪನ ಮಾಡಲಾಗುತ್ತದೆ
ಎ) ರಿಕ್ಟರ್ ಬಿ) ಕೆಲ್ವಿನ್
ಸಿ) ಪಾಸ್ಕಲ್ ಡಿ) ನ್ಯೂಟನ್

488. ಕರ್ನಾಟಕದಲ್ಲಿ ಪೊಲೀಸ್ ಶ್ರೇಣಿಗಳ ಸರಿಯಾದ ಕ್ರಮವನ್ನು ಕಿರಿಯ ಶ್ರೇಣಿಯಿಂದ ಹಿರಿಯ ಶ್ರೇಣಿಯವರೆಗೆ ಜೋಡಿಸಿ.
ಎ) ಎಸ್ಪಿ- > ಐಜಿ- > ಡಿಐಜಿ- > ಎಡಿಜಿ
ಬಿ) ಎಸ್ಪಿ- > ಡಿಐಜಿ- > ಐಜಿ- > ಎಡಿಜಿ
ಸಿ) ಡಿಐಜಿ- > ಎಸ್ಪಿ- > ಐಜಿ- > ಎಡಿಜಿ
ಡಿ) ಎಸ್ಪಿ- > ಡಿಐಜಿ- > ಎಡಿಜಿ- > ಐಜಿ

489. 'ಫೆನ್ನಿ' ಎಂಬ ಮದ್ಯವನ್ನು ಯಾವುದರಿಂದ ತಯಾರಿಸಲಾಗುತ್ತದೆ?
ಎ) ದ್ರಾಕ್ಷಿ ಬಿ) ಸೇಬುಹಣ್ಣು
ಸಿ) ಗೇರುಹಣ್ಣು ಡಿ) ಖರ್ಜೂರ

490. ಈ ಕೆಳಗಿನ ಯಾವ ರೈಲು ನಿಲ್ದಾಣವು 'ಕೊಂಕಣ ರೈಲ್ವೆ'ಗೆ ಸೇರಿದೆ?
ಎ) ಮಂಗಳೂರು
ಬಿ) ಬೆಳಗಾವಿ
ಸಿ) ಲೋಂಡಾ
ಡಿ) ಕ್ಯಾಸಲ್ ರಾಕ್


(ಪ್ರಶ್ನೋತ್ತರ ಸಂಯೋಜನೆ: ಸ್ಲೇಟ್ ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೇಂದ್ರ, ಧಾರವಾಡ)

ಭಾಗ 35ರ ಉತ್ತರ: 466. ಡಿ, 467. ಡಿ, 468. ಬಿ, 469. ಡಿ, 470. ಬಿ, 471. ಎ, 472. ಎ, 473. ಎ, 474. ಎ, 475. ಬಿ, 476. ಡಿ, 477. ಬಿ, 478. ಬಿ, 479. ಎ, 480. ಎ

ಸಿಇಟಿ ದಿಕ್ಸೂಚಿ

Maths - Linear Inequalities, Permutations & Combinations

1. The shaded region in the figure is the solution set of the in equations



(1) $5x+4y\ge 20, x\le 6, y\ge 3, x\ge 0, y\ge 0$
(2) $5x+4y\le 20, x\le 6, y\le 3, x\ge 0, y\ge 0$
(3) $5x+4y\ge 20, x\le 6, y\le 3, x\ge 0, y\ge 0$
(4) $5x+4y\ge 20, x\ge 6, y\le 3, x\ge 0, y\ge 0$

2. $\int_{-3}^{3}\cot^{-1}x\,dx =$
(1) 0 (2) 3
(3) 3π (4) 6π

3. The digit in the unit's place of $7^{171}+(177)!$ is
(1) 3 (2) 2
(3) 1 (4) 0

4. The sum of all positive divisors of 242 except 1 and itself is
(1) 156 (2) 242
(3) 342 (4) 399

5. How many 5 digit telephone numbers can be constructed using the digits 0 to 9, if each number starts with 67 and no digit appears more than once?
(1) 336 (2) 337
(3) 335 (4) 338

6. The remainder obtained when $1!+2!+3!.....11!$ is divided by 12 is ______
(1) 9 (2) 8
(3) 7 (4) 6

7. If ${}^{n}C_{12}={}^{n}C_{8}$ then n is equal to
(1) 26 (2) 12
(3) 6 (4) 20

8. Everybody in a room shakes hands with everybody else. The total number of handshakes is 45. The total number of person in the room is
(1) 9 (2) 10
(3) 5 (4) 15

9. The number of ways in which 5 girls and 3 boys can be seated in a row so that no two boys are together is
(1) 14040 (2) 14440
(3) 14000 (4) 14400

10. If $|\vec{a}|=16, |\vec{b}|=4$, then $\sqrt{|\vec{a}\times\vec{b}|^2+|\vec{a}.\vec{b}|^2}=$
(1) 8 (2) 64
(3) 4 (4) 16

Answers

1. Answer: (3)
Sol: From the graph, inequalities are satisfied,
$5x+4y\ge 20$,
$x\le 6$
$y\le 3$
$x\ge 0$
$x\ge 0, y\ge 0$

2. Answer (3)
Hint: $\int_{-3}^{3}\cot^{-1}x\,dx=\int_{-3}^{3}\cot^{-1}x.1dx$
$=\left[\cot^{-1}x.x\right]_{-3}^{3}-\int_{-3}^{3}x\left(-\frac{1}{1+x^2}\right)dx$
$=3\cot^{-1}3-(-3)\cot^{-1}(-3)+\int_{-3}^{3}\left(\frac{x}{1+x^2}\right)dx$
$=3\cot^{-1}3+3(\pi-\cot^{-1}3)+\frac{1}{2}\left[\log\left[1+x^2\right]\right]_{-3}^{3}$
$=3\cot^{-1}3+3\pi-3\cot^{-1}3+\frac{1}{2}[\log 10-\log 10]=3\pi$

3. Answer (3)
Sol.: Given expression $(7)^{171}+(177)!$
We know that the cycle of 7 is 4, i.e., $(7)^3=1$ and in case of more the 4 number in factorial notation gives always 0 at unit place.
$\Rightarrow (7^3)^{57}+(177)!=1+0=1$

4. Answer (1)
Sol.: The number is 242.
$242=2\times 11\times 11(factors)$
The number of positive divisors except 1 and itself is = 2, 11, 22, 121
Sum of these numbers
$=2+11+22+121=156$

5. Answer (1)
Hint: 8_{P_3} ways

6. Answer (1)
Hint : $1+2+6=9$
And other terms are divisible by 12. Hence Rem = 9

7. Answer: (4)
Sol: If ${}^{n}C_{r}={}^{n}C_{s}$ then
$r=s$ (or) $r+s=n$
${}^{n}C_{r}={}^{n}C_{8}$
$\Rightarrow 12+8=n$
$\Rightarrow \boxed{n=20}$

8. Answer (2)
Solution:
Use $n_{C_r}\ n_{C_2}=45$

9. Answer (4)
Solution:
First ask to girls to be seated, in gaps or ends ask boys to be seated.
$5!.6_{C_3}.3!$

10. Answer (2)
Hint:
$\sqrt{|\vec{a}\times\vec{b}|^2+|\vec{a}.\vec{b}|^2}=\sqrt{|\vec{a}|^2|\vec{b}|^2}=|\vec{a}||\vec{b}|=(16)(4)=64$

(ಪ್ರಶ್ನೋತ್ತರ ಸಂಯೋಜನೆ: ಆಕಾಶ್ ಇನ್‌ಸ್ಟಿಟ್ಯೂಟ್, ಬೆಂಗಳೂರು)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ನಾವು ಏನನ್ನು ಮಾಡಲು ಅತಿಯಾಗಿ ಭಯಪಡುತ್ತೇವೆಯೋ ಅದು ಸಾಮಾನ್ಯವಾಗಿ ನಾವು ಅಗತ್ಯವಾಗಿ ಮಾಡಬೇಕಾದ ಕಾರ್ಯವೇ ಆಗಿರುತ್ತದೆ.

–ಟಿಮ್ ಫೆರ್ರಿಸ್

ಸಂಪುಟ ರಚನೆ: ಪ್ರಾದೇಶಿಕ ಅಸಮತೋಲನ, ಮಹಿಳೆಯರ ನಿರ್ಲಕ್ಷ್ಯ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಮ್ಮ ಸಂಪುಟಕ್ಕೆ 29 ಸಚಿವರನ್ನು ಸೇರಿಸಿಕೊಂಡಿದ್ದು ಎಲ್ಲರೂ ಬುಧವಾರ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಮುಖ್ಯಮಂತ್ರಿ ಸ್ಥಾನಕ್ಕೆ ಬಿ.ಎಸ್.ಯಡಿಯೂರಪ್ಪ ರಾಜೀನಾಮೆ ಸಲ್ಲಿಸಿದ ಬಳಿಕ ಉಂಟಾದ ರಾಜಕೀಯ ಗೊಂದಲದಿಂದ ಸಂಪುಟ ರಚನೆ ವಿಳಂಬವಾಗಬಹುದು ಎಂಬ ವಿಶ್ಲೇಷಣೆಗಳಿದ್ದವು. ಆದರೆ, ಆ ಕೆಲಸ ಕ್ಷಿಪ್ರವಾಗಿ ನಡೆದಿದೆ. ಕೊರೊನಾ ಮೂರನೇ ಅಲೆಯ ಆತಂಕ ಮತ್ತು ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಪ್ರವಾಹ ಪರಿಸ್ಥಿತಿ ಇರುವಾಗ ರಾಜ್ಯದಲ್ಲಿ ನಾಯಕತ್ವ ಬದಲಾವಣೆಗೆ ಮುಂದಾದ ಬಿಜೆಪಿ ವರಿಷ್ಠರ ನಡೆ ಬಗ್ಗೆ ಕೆಲವರಲ್ಲಿ ಅಸಮಾಧಾನ ಇದ್ದದ್ದು ಸುಳ್ಳಲ್ಲ. ಸಂಪುಟ ರಚನೆಗೆ ವಿಘ್ನಗಳು ಎದುರಾಗಿದ್ದಲ್ಲಿ ಅದು ಇನ್ನಷ್ಟು ಹೆಚ್ಚುತ್ತಿತ್ತು. ಆ ಕಸರತ್ತು ಬೇಗ ಮುಗಿದಿರುವುದರಿಂದ ಹೊಸ ಸರ್ಕಾರಕ್ಕೆ ಜನರ ಸಮಸ್ಯೆಗಳ ನಿವಾರಣೆಯತ್ತ ಗಮನಹರಿಸಲು ಅನುಕೂಲ ಆಗಲಿದೆ. ಬೊಮ್ಮಾಯಿ ಅವರ ಸಂಪುಟದಲ್ಲಿ ಹೊಸಬರಿಗೆ ಮತ್ತು ಯುವಜನರಿಗೆ ಹೆಚ್ಚು ಆದ್ಯತೆ ದೊರೆಯಲಿದೆ ಎಂಬ ನಿರೀಕ್ಷೆ ಇತ್ತು. ಅದು ಹುಸಿಯಾಗಿದೆ. ಯಡಿಯೂರಪ್ಪ ಅವರ ಸಂಪುಟದಲ್ಲಿದ್ದ ಹಿರಿಯರಾದ ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿ, ಎಸ್. ಸುರೇಶ್ ಕುಮಾರ್, ಅರವಿಂದ ಲಿಂಬಾವಳಿ ಸಹಿತ ಒಟ್ಟು ಏಳು ಮಂದಿಗೆ ಈಗಿನ ಸಂಪುಟದಲ್ಲಿ ಸ್ಥಾನ ಇಲ್ಲ. 29 ಸಚಿವರಲ್ಲಿ 23 ಮಂದಿ ಈ ಹಿಂದೆ ಯಡಿಯೂರಪ್ಪ ಅವರ ಸಂಪುಟದಲ್ಲಿ ಕಾರ್ಯನಿರ್ವಹಿಸಿದವರೇ ಆಗಿದ್ದಾರೆ. ಆರು ಮಂದಿಗೆ ಇದೇ ಮೊದಲ ಸಲ ಸಚಿವರಾಗುವ ಅವಕಾಶ ದೊರೆತಿದೆ. ಮತ್ತೊಬ್ಬ ಹಿರಿಯರಾದ ಕೆ.ಎಸ್. ಈಶ್ವರಪ್ಪ ಅವರಿಗೂ ಈ ಸಲ ಸಚಿವ ಸ್ಥಾನ ಕೈತಪ್ಪಬಹುದು ಎಂಬ ಸುದ್ದಿಗಳು ಮಾಧ್ಯಮಗಳಲ್ಲಿ ಹರಿದಾಡಿದ್ದವು. ಆದರೆ, ಅವರಿಗೆ ಪುನಃ ಅವಕಾಶ ಒಲಿದಿದೆ. 'ಆಪರೇಷನ್ ಕಮಲ'ದ ಮೂಲಕ ಕಾಂಗ್ರೆಸ್ ಮತ್ತು ಜೆಡಿಎಸ್‌ನಿಂದ ಬಿಜೆಪಿಗೆ ಬಂದವರ ಪೈಕಿ ಇಬ್ಬರು ಸಚಿವ ಸ್ಥಾನವನ್ನು ಕಳೆದುಕೊಂಡಿರುವುದು ಗಮನಾರ್ಹ. ಹೊಸ ಸಂಪುಟದಲ್ಲಿ ತಮ್ಮ ಮಗ ಬಿ.ವೈ. ವಿಜಯೇಂದ್ರ ಅವರಿಗೆ ಸ್ಥಾನ ದೊರಕಿಸಿಕೊಡಲು ಯಡಿಯೂರಪ್ಪ ನಡೆಸಿದರು ಎನ್ನಲಾದ ಯತ್ನ ಫಲಕಾರಿಯಾಗಿಲ್ಲ. ಯಡಿಯೂರಪ್ಪ ಅವರು ಅಧಿಕಾರದಲ್ಲಿದ್ದಾಗ ವಿಜಯೇಂದ್ರ ಅವರು ಆಡಳಿತದಲ್ಲಿ ಹಸ್ತಕ್ಷೇಪ ನಡೆಸುತ್ತಿದ್ದರು ಎಂಬ ಆರೋಪ ಇತ್ತು. ಆಡಳಿತ ಪಕ್ಷದ ಕೆಲವು ಶಾಸಕರೇ ಇಂತಹ ಆರೋಪ ಮಾಡಿದ್ದರು. ಮತ್ತೊಂದು ಅಧಿಕಾರ ಕೇಂದ್ರ ನೆಲೆಗೊಳ್ಳುವುದು ಬೇಡ ಎಂಬ ಮುನ್ನೆಚ್ಚರಿಕೆಯ ಕ್ರಮವಾಗಿ ಅವರ ಸೇರ್ಪಡೆಗೆ ವರಿಷ್ಠರು ಅನುಮತಿ ನಿರಾಕರಿಸಿರುವ ಸಾಧ್ಯತೆ ಇದೆ. ಅಷ್ಟರಮಟ್ಟಿಗೆ ಯಡಿಯೂರಪ್ಪ ಅವರಿಗೆ ಹಿನ್ನಡೆಯಾಗಿದೆ ಎನ್ನಲು ಅಡ್ಡಿಯಿಲ್ಲ. ಆದರೆ ತಮ್ಮ ನೇತೃತ್ವದ ಸರ್ಕಾರದ ವಿರುದ್ಧ ಬಹಿರಂಗವಾಗಿ ವಾಗ್ದಾಳಿ ನಡೆಸಿದ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ್, ಅರವಿಂದ ಬೆಲ್ಲದ ಮತ್ತು ಸಿ.ಪಿ. ಯೋಗೇಶ್ವರ್ ಅವರ ಸಂಪುಟ ಸೇರ್ಪಡೆ ಯತ್ನವನ್ನು ತಡೆಯುವಲ್ಲಿ ಯಡಿಯೂರಪ್ಪ ಯಶಸ್ವಿಯಾಗಿದ್ದಾರೆ ಎನ್ನಬಹುದು. ಕೋವಿಡ್ ಎರಡನೇ ಅಲೆಯನ್ನು ಪರಿಣಾಮಕಾರಿಯಾಗಿ ಎದುರಿಸಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗಿರಲಿಲ್ಲ. ಸಚಿವರ ನಡುವೆ ಹೊಂದಾಣಿಕೆ ಇಲ್ಲದೇ ಇದ್ದುದು ಅದಕ್ಕೆ ಒಂದು ಕಾರಣ. ಹೊಸ ಸಂಪುಟದಲ್ಲೂ ಹೆಚ್ಚಿನವರು ಅವರೇ ಇದ್ದಾರೆ. ಆದಕಾರಣ, ಆಡಳಿತದಲ್ಲಿ ದೊಡ್ಡ ಮಟ್ಟದಲ್ಲಿ ಬದಲಾವಣೆ ತರುವುದು, ಹೊಸ ಚೈತನ್ಯ ತುಂಬುವುದು ಮುಖ್ಯಮಂತ್ರಿಯವರಿಗೆ ಸವಾಲಿನ ಕೆಲಸವಾಗಬಹುದು. ಹೊಸ ನಿರೀಕ್ಷೆಗಳನ್ನು ಮೂಡಿಸಬಲ್ಲಂತಹ ತಂಡವನ್ನು ಹೊಂದುವ ಅವಕಾಶ ಇತ್ತು. ಆ ಸಾಧ್ಯತೆಯನ್ನು ಮುಖ್ಯಮಂತ್ರಿ ಮತ್ತು ಪಕ್ಷದ ವರಿಷ್ಠರು ಬಳಸಿಕೊಂಡಿಲ್ಲ. ಸಚಿವ ಸಂಪುಟ ರಚನೆಯ ಬೆನ್ನಲ್ಲೇ ಅಸಮಾಧಾನಗಳು ಕೂಡ ಹೊರಬಿದ್ದಿವೆ. ಅವಕಾಶವಂಚಿತ ಕೆಲವು ಶಾಸಕರ ಬೆಂಬಲಿಗರು ಕೆಲವೆಡೆ ಪ್ರತಿಭಟನೆ ನಡೆಸಿದ್ದಾರೆ. ಇದನ್ನು ಊಹಿಸಿಯೇ ಸಂಪುಟದಲ್ಲಿ ನಾಲ್ಕು ಸ್ಥಾನಗಳನ್ನು ಖಾಲಿ ಉಳಿಸಿಕೊಳ್ಳಲಾಗಿದೆ ಎನ್ನುವುದು ಸರ್ವವೇದ್ಯ. ಆಡಳಿತಕ್ಕೆ ಹೊರೆಯೆನಿಸಿದ್ದ ಉಪಮುಖ್ಯಮಂತ್ರಿ ಸ್ಥಾನಗಳನ್ನು ಕೈಬಿಟ್ಟಿರುವುದು ಸ್ವಾಗತಾರ್ಹ.



ಈಗಿನದ್ದು ಸಾಮಾನ್ಯ ಸ್ಥಿತಿ ಅಲ್ಲ. ಹಾಗಾಗಿ, ಜನರ ಸಂಕಷ್ಟದ ತೀವ್ರತೆ ತಗ್ಗಿಸಲು ಸರ್ಕಾರವು ಅತ್ಯಂತ ದಕ್ಷವಾಗಿ ಮತ್ತು ಚುರುಕಿನಿಂದ ಕೆಲಸ ಮಾಡಬೇಕಿದೆ

ಸಚಿವ ಸಂಪುಟ ರಚನೆಯಲ್ಲಿ ಪ್ರಾದೇಶಿಕ ಅಸಮತೋಲನ ಎದ್ದು ಕಾಣುವಂತಿದೆ. ಬೆಂಗಳೂರು ನಗರಕ್ಕೆ ಸಿಂಹಪಾಲು ಲಭಿಸಿದೆ. ಆರು ಜಿಲ್ಲೆಗಳಿಂದ ತಲಾ ಇಬ್ಬರು ಸಚಿವರಾಗಿದ್ದರೆ, 13 ಜಿಲ್ಲೆಗಳಿಗೆ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯವೇ ಸಿಕ್ಕಿಲ್ಲ. ಅದರಲ್ಲೂ ಉತ್ತರ ಕರ್ನಾಟಕದ ಕಲಬುರ್ಗಿ, ಬಳ್ಳಾರಿ, ವಿಜಯಪುರ, ರಾಯಚೂರು, ಯಾದಗಿರಿ ಜಿಲ್ಲೆಗಳನ್ನು ಸಂಪೂರ್ಣ ನಿರ್ಲಕ್ಷಿಸಲಾಗಿದೆ. ಚಾಮರಾಜನಗರ, ಮೈಸೂರು, ಕೊಡಗು, ಹಾಸನ ಜಿಲ್ಲೆಗೂ ಪ್ರಾತಿನಿಧ್ಯ ದೊರೆತಿಲ್ಲ. ರಾಜಕೀಯ ಅನಿವಾರ್ಯಗಳು ಏನೇ ಇದ್ದರೂ ಈ ರೀತಿಯ ಪ್ರಾದೇಶಿಕ ತಾರತಮ್ಯವು ಅಭಿವೃದ್ಧಿಯ ಅಸಮಾನತೆಗೆ ಕಾರಣವಾಗುವುದು ಸುಳ್ಳಲ್ಲ. ಮಹಿಳೆಯರ ಪ್ರಾತಿನಿಧ್ಯದ ವಿಷಯದಲ್ಲೂ ಇತ್ತೀಚೆಗೆ ನಿಸ್ಸೀಮ ನಿರ್ಲಕ್ಷ್ಯ ಎದ್ದು ಕಾಣುತ್ತಿದೆ. ಯಡಿಯೂರಪ್ಪ ನೇತೃತ್ವದ ಸರ್ಕಾರದಲ್ಲಿ ಸಚಿವೆ ಆಗಿದ್ದ ಶಶಿಕಲಾ ಜೊಲ್ಲೆ ಅವರಿಗೆ ಸ್ಥಾನ ಕೈತಪ್ಪಬಹುದು ಎಂಬ ವದಂತಿ ಇತ್ತು. ಅದು ನಿಜವಾಗಿಲ್ಲ. ಹೊಸ ಸಚಿವ ಸಂಪುಟದಲ್ಲಿ ಮಹಿಳಾ ಸಮುದಾಯವನ್ನು ಪ್ರತಿನಿಧಿಸುವ ಏಕೈಕ ಪ್ರತಿನಿಧಿ ಅವರು. ಇಸ್ಲಾಂ, ಕ್ರೈಸ್ತ, ಜೈನ ಮುಂತಾದ ಅಲ್ಪಸಂಖ್ಯಾತ ಧರ್ಮಗಳಿಗೆ ಪ್ರಾತಿನಿಧ್ಯ ಸಿಕ್ಕಿಲ್ಲ. ಜಾತಿಗಳ ಪ್ರಾತಿನಿಧ್ಯವನ್ನು ಗಮನಿಸಿದರೂ ಪ್ರಬಲ ಜಾತಿಗಳ ಪಾರಮ್ಯವೇ ಎದ್ದು ಕಾಣುತ್ತಿದೆ. ಕೋವಿಡ್ ಸಾಂಕ್ರಾಮಿಕ ಮತ್ತು ಪ್ರವಾಹದ ಕಾರಣದಿಂದ ರಾಜ್ಯದ ಜನರು ಸಂಕಷ್ಟಕ್ಕೆ ಒಳಗಾಗಿದ್ದಾರೆ. ಆರೋಗ್ಯ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ವಿವಿಧ ಸಮಸ್ಯೆಗಳಿವೆ. ಈಗಿನದ್ದು ಸಾಮಾನ್ಯ ಸ್ಥಿತಿ ಅಲ್ಲ. ಹಾಗಾಗಿ, ಜನರ ಸಂಕಷ್ಟದ ತೀವ್ರತೆ ತಗ್ಗಿಸಲು ಸರ್ಕಾರವು ಅತ್ಯಂತ ದಕ್ಷವಾಗಿ ಮತ್ತು ಚುರುಕಿನಿಂದ ಕೆಲಸ ಮಾಡಬೇಕಿದೆ. ನೆಲಕಚ್ಚಿರುವ ಆರ್ಥಿಕತೆಗೆ ಪುನಶ್ಚೇತನ ತುಂಬಿ, ಸಂಪನ್ಮೂಲ ಕ್ರೋಡೀಕರಣಕ್ಕೂ ಒತ್ತು ಕೊಡಬೇಕಿದೆ. ಖಾತೆ ಹಂಚಿಕೆಯ ಕೆಲಸವನ್ನು ಕ್ಷಿಪ್ರವಾಗಿ ಪೂರ್ಣಗೊಳಿಸಿ, ಸಚಿವರು ತಕ್ಷಣವೇ ಕಾರ್ಯಪ್ರವೃತ್ತರಾಗಲು ಮುಖ್ಯಮಂತ್ರಿ ಅನುವು ಮಾಡಿಕೊಡಬೇಕಿದೆ. ಎರಡು ವರ್ಷಗಳ ರಾಜಕೀಯ ಅಸ್ಥಿರತೆಯಿಂದ ಜಡಗೊಂಡಿರುವ ಆಡಳಿತ ವ್ಯವಸ್ಥೆಗೆ ಚುರುಕು ಮುಟ್ಟಿಸುವ ಕೆಲಸವು ತುರ್ತಾಗಿ ಆಗಬೇಕಿದೆ.

ದಿನದ ಟ್ವೀಟ್



ಕೂಡಲೇ ಪಾವತಿಯಾಗಲಿ

ಕಬ್ಬು ಬೆಳೆಗಾರರ ಬಾಕಿ ಪಾವತಿ ಮನವಿಗೆ ಸಂಬಂಧಿಸಿದ ಪ್ರಕರಣದಲ್ಲಿ ಕೇಂದ್ರ, ರಾಜ್ಯಗಳಿಗೆ ಸುಪ್ರೀಂ ಕೋರ್ಟ್ ನೋಟಿಸ್ ಜಾರಿ ಮಾಡಿದೆ. ರೈತರಿಗೆ ಉತ್ತರಪ್ರದೇಶದಲ್ಲಿ ₹ 7,500 ಕೋಟಿ ಮತ್ತು ಕರ್ನಾಟಕದಲ್ಲಿ ₹ 3,585 ಕೋಟಿ ಬಾಕಿ ಹಣ ಪಾವತಿಯಾಗಬೇಕಿದೆ ಎಂದು ಮನವಿ ತಿಳಿಸಿದೆ. ಭಾರತ ಸ್ವತಂತ್ರವಾಗಿದೆ, ಆದರೆ ಭಾರತದ ರೈತರ ವಿಷಯಕ್ಕೆ ಇದು ಅನ್ವಯಿಸದು. ನಾವು (ರೈತರು) ನಮ್ಮ ಜನಸಂಖ್ಯೆಯ ಶೇ 60ರಷ್ಟಿದ್ದೇವೆ.

ಸವಿತಾ ವಂಟಗೋಡಿ, ಲೇಖಕಿ

ಕಿಡಿನುಡಿ

ಅತ್ಯಾಚಾರಕ್ಕೊಳಗಾದ ಸಂತ್ರಸ್ತೆಯ ಗುರುತನ್ನು ಬಹಿರಂಗಪಡಿಸುವುದು ಕಾನೂನು ರೀತ್ಯಾ ಅಪರಾಧ. ಆದರೆ, ರಾಹುಲ್ ಗಾಂಧಿಯವರು ಸಂತ್ರಸ್ತೆಯ ಕುಟುಂಬದವರ ಫೋಟೊಗಳನ್ನು ಟ್ವಿಟರ್‌ನಲ್ಲಿ ಹಂಚಿಕೊಳ್ಳುವ ಮೂಲಕ ಲೈಂಗಿಕ ದೌರ್ಜನ್ಯದಿಂದ ಮಕ್ಕಳನ್ನು ರಕ್ಷಿಸುವ 'ಪೋಕ್ಸೊ' ಕಾಯ್ದೆಯನ್ನು ಉಲ್ಲಂಘಿಸಿದ್ದಾರೆ.



ಸಂಬಿತ್ ಪಾತ್ರ, ಬಿಜೆಪಿ ವಕ್ತಾರ

25 ವರ್ಷಗಳ ಹಿಂದೆ
ಸೋಮವಾರ, 5-8-1996

● **ಕಾಂಗ್ರೆಸ್ ನಾಯಕರ ದೂರವಾಣಿ ಕದ್ದಾಲಿಕೆ– ಪ್ರಧಾನಿ ನಿರಾಕರಣೆ**

ನವದೆಹಲಿ, ಆ. 4 (ಯುಎನ್ಐ)– ಮಾಜಿ ಪ್ರಧಾನಿ ಪಿ.ವಿ. ನರಸಿಂಹ ರಾವ್ ಸೇರಿದಂತೆ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರ ದೂರವಾಣಿ ಕರೆಗಳನ್ನು ಕದ್ದಾಲಿಸಲಾಗುತ್ತಿದೆ ಎಂಬ ಆರೋಪವನ್ನು ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಇಂದು ಇಲ್ಲಿ ನಿರಾಕರಿಸಿದರು.

ಈ ಕುರಿತು ಪತ್ರಿಕೆಗಳಲ್ಲಿ ಪ್ರಕಟವಾದ ವರದಿಯನ್ನು ಕಾಂಗ್ರೆಸ್ ಪಕ್ಷವು ಗಂಭೀರವಾಗಿ ಪರಿಗಣಿಸಿದ್ದು, ಹಿರಿಯ ನಾಯಕ ಹಾಗೂ ರಾವ್ ಅವರ ಅತ್ಯಂತ ನಿಕಟವರ್ತಿಯಾಗಿರುವ ಪ್ರಣವ್ ಮುಖರ್ಜಿ, ಮತಂಗ್ ಸಿಂಗ್, ಮಾಜಿ ಸಚಿವರಾದ ಎಸ್.ಬಿ. ಚವ್ಹಾಣ್ ಹಾಗೂ ಸುರೇಶ್ ಕಲ್ಮಾಡಿ ಅವರ ನಿಯೋಗ ಪ್ರಧಾನಿ ಅವರನ್ನು ಭೇಟಿ ಮಾಡಿ ಕದ್ದಾಲಿಕೆ ವಿವಾದ ಕುರಿತು ಚರ್ಚಿಸಿತು.

50 ವರ್ಷಗಳ ಹಿಂದೆ
ಗುರುವಾರ, 5-8-1971

● **ಸಾಮಾಜಿಕ-ಆರ್ಥಿಕ ಪ್ರಗತಿಗೆ ಒಡ್ಡಿದ ಅಡ್ಡಿ ನಿವಾರಿಸುವುದೇ ಸಂವಿಧಾನ ಮಸೂದೆ ಉದ್ದೇಶ**


ನವದೆಹಲಿ, ಆ. 4– ಗೋಲಕ್‌ನಾಥ್ ಮೊಕದ್ದಮೆಯಲ್ಲಿ ಸುಪ್ರೀಂ ಕೋರ್ಟು ನೀಡಿದ ತೀರ್ಪು ದೇಶದಲ್ಲಿನ ಸಾಮಾಜಿಕ–ಆರ್ಥಿಕ ಪ್ರಗತಿಗೆ ಭಾರಿ ಅಡಚಣೆಯುಂಟು ಮಾಡಿದೆ. ಕೇವಲ ಈ ಅಡಚಣೆಯನ್ನು ನಿವಾರಿಸುವುದೇ ಸಂವಿಧಾನದ (24ನೇ ತಿದ್ದುಪಡಿ) ಮಸೂದೆಯ ಉದ್ದೇಶ ಎಂದು ಕಾನೂನು ಸಚಿವ ಶ್ರೀ ಎಚ್.ಆರ್. ಗೋಖಲೆ ಅವರು ಇಂದು ಲೋಕಸಭೆಯಲ್ಲಿ ಹೇಳಿದರು.

● **ಕಾವೇರಿ: ಕೇಂದ್ರ ಸರ್ಕಾರದ ವಿರುದ್ಧ ತಮಿಳುನಾಡು ದಾವಾ**

ನವದೆಹಲಿ, ಆ. 4– ಕಾವೇರಿ ನದಿ ನೀರು ಕುರಿತು ತಮಿಳುನಾಡು ಸರ್ಕಾರವು ಇಂದು ಸುಪ್ರೀಂ ಕೋರ್ಟಿನಲ್ಲಿ ಮೊಕದ್ದಮೆ ಹೂಡಿ, ಕೇಂದ್ರ ಮತ್ತು ತಮಿಳುನಾಡು ಸರ್ಕಾರಗಳ ನಡುವೆ ಒಂದು 'ವಿವಾದ' ಎದ್ದಿದೆಯೆಂದು ಘೋಷಿಸುವಂತೆ ಕೋರಿತು.

ಆಧುನಿಕ ಅರ್ಥ ವ್ಯವಸ್ಥೆಯ ಪಾಲಿನ 'ತೈಲ'ವಾದ ಮಾಹಿತಿ ಮತ್ತು ಡೇಟಾಗೂ ಒಂದು ಮಿತಿ ಇದೆ

ಇಂಟರ್ನೆಟ್ ಮಾತ್ರ ನಂಬಿ ಬದುಕಲಾದೀತೇ?



ವಿಶ್ಲೇಷಣೆ

ಕ್ಯಾಪ್ಟನ್ ಜಿ.ಆರ್.ಗೋಪಿನಾಥ್

ಜೊಮ್ಯಾಟೊ ಕಂಪನಿಯ ಐಪಿಒ ಈಚೆಗೆ ಪೂರ್ಣಗೊಂಡಿದೆ. ಕಂಪನಿಯ ಮಾರುಕಟ್ಟೆ ಮೌಲ್ಯ ₹ 66 ಸಾವಿರ ಕೋಟಿ ಎಂಬ ಅಂದಾಜಿನ ನೆಲೆಯಲ್ಲಿ ಸರಿಸುಮಾರು ₹ 9 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲಾಗಿದೆ. ಇದನ್ನು ಕಂಡಾಗ, ದುಡ್ಡು ಗಿಡ–ಮರಗಳಲ್ಲಿ ಬೆಳೆಯುತ್ತದೆ ಎಂದು ನಂಬಬೇಕಾಗುತ್ತದೆ. ಟೊಮ್ಯಾಟೊ ಗಿಡದಲ್ಲಿ ಅಲ್ಲದಿದ್ದರೂ, ಜೊಮ್ಯಾಟೊ ಗಿಡದಲ್ಲಿ ದುಡ್ಡು ಬೆಳೆಯುತ್ತದೆ!

'ಮೌಲ್ಯ ಇರುವ ಎಲ್ಲವನ್ನೂ ಹಳ್ಳಿಗಳಲ್ಲಿ ಉತ್ಪಾದಿಸಲಾಗುತ್ತಿದೆ ಎಂದಾದರೆ, ಹಳ್ಳಿಗಳು ಬಡತನದಲ್ಲಿ ಇರುವುದು ಏಕೆ? ನಗರಗಳು ಶ್ರೀಮಂತಿಕೆಯಿಂದ ತುಂಬಿರುವುದು ಹೇಗೆ' ಎಂದು ಲಿಯೊ ಟಾಲ್‌ಸ್ಟಾಯ್ ತಮ್ಮ 'ವಾಟ್ ದೆನ್ ಮಸ್ಟ್ ವಿ ಡು' ಕೃತಿಯಲ್ಲಿ ಪ್ರಶ್ನಿಸಿದ್ದರು. ಈ ಪ್ರಶ್ನೆಗೆ ಇಂದಿಗೂ ಸ್ಪಷ್ಟ ಉತ್ತರ ಸಿಕ್ಕಿಲ್ಲ.

1980ರ ದಶಕದ ನನ್ನ ಜೀವನ ನೆನಪಾಗುತ್ತಿದೆ. ಆ ದಿನಗಳಲ್ಲಿ ರೈತನಾಗಿ ನಾನು ನನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು ಹೆಣಗುತ್ತಿದ್ದೆ. ಇಡೀ ದಿನ ಕೆಲಸ ಮಾಡುತ್ತಿದ್ದೆ ಆಗ. ಒಂದು ದಿನ ಬಾಳೆಗೊನೆಗಳನ್ನು ಕೊಯ್ದು, ಸೂರ್ಯೋದಯಕ್ಕೆ ಮುನ್ನವೇ ಅವುಗಳನ್ನು ನನ್ನ ಟ್ರ್ಯಾಕ್ಟರ್‌ಗೆ ಹೇರಿಕೊಂಡು ಹಾಸನದ ಸಂತೆಗೆ ಒಯ್ದೆ. ಸಂತೆಗೆ ಹೋಗುವ ಮುಖ್ಯ ರಸ್ತೆಯು ಬೇರೆ ರೈತರ ಟ್ರಕ್‌ಗಳು, ವಾಹನಗಳಿಂದಾಗಿ ಜಾಮ್ ಆಗಿತ್ತು. ಒಂದು ಕಿ.ಮೀ. ಮುಂದೆ ನಡೆದು ನೋಡಿದರೆ, ಅಲ್ಲಿ ರೈತರು ತಾವು ಬೆಳೆದ ಟೊಮ್ಯಾಟೊ ಮತ್ತು ಹಸಿಮೆಣಸಿನ ಕಾಯಿಗಳನ್ನು ರಸ್ತೆಯ ಮೇಲೆ ಚೆಲ್ಲಿದ್ದರು. ಬೆಳೆಗಳಿಗೆ ಬೆಲೆ ಕುಸಿದಿದೆ ಎಂದು ತಿಳಿದ ರೈತರು ಉದ್ರಿಕ್ತರಾಗಿದ್ದರು. ಅವರಿಗೆ ಸಿಗುತ್ತಿದ್ದ ಬೆಲೆಯು ಸಾಗಣೆ ವೆಚ್ಚಕ್ಕೂ ಸಾಲುತ್ತಿರಲಿಲ್ಲ. ಮಧ್ಯಾಹ್ನದ ಸುಮಾರಿಗೆ ಅಲ್ಲಿಂದ ತಪ್ಪಿಸಿಕೊಂಡು ನಾನು ಮನೆಗೆ ಮರಳಿದೆ. ಬಾಳೆಗೊನೆ ಮಾರಲಾಗದ ಕಾರಣ ಅವುಗಳನ್ನು ದನಗಳಿಗೆ ತಿನ್ನಿಸಿದೆ.

ಆ ಸಂದರ್ಭದಲ್ಲಿ ನಾನು ಒಂದು ಲಕ್ಷ ರೂಪಾಯಿ ಸಾಲ ಕೋರಿ ಬ್ಯಾಂಕ್‌ಗೆ ಸಲ್ಲಿಸಿದ್ದ ಅರ್ಜಿಯು ಮತ್ತೆ ಮತ್ತೆ ತಿರಸ್ಕೃತವಾಗುತ್ತಿತ್ತು. ಆದರೆ, ಎರಡು ದಶಕಗಳ ನಂತರದಲ್ಲಿ, ನನ್ನ ವಿಮಾನಯಾನ ಕಂಪನಿಗೆ ಬ್ಯಾಂಕೊಂದು ₹ 500 ಕೋಟಿ ಸಾಲವನ್ನು ತ್ವರಿತವಾಗಿ ಮಂಜೂರು ಮಾಡಿತ್ತು. ಆಗ ನನ್ನ ಕಂಪನಿಯು ಷೇರು ಪೇಟೆಯಲ್ಲಿ ನೋಂದಾಯಿತವಾಗಿತ್ತು, ಷೇರುಗಳಿಗೆ ಬಹಳ ಮೌಲ್ಯ ಇತ್ತು. ಇದು ಕೂಡ ನನಗೆ ಜೊಮ್ಯಾಟೊ ಐಪಿಒ ಕಾರಣದಿಂದಾಗಿ ನೆನಪಾಯಿತು. ಷೇರು ಮಾರುಕಟ್ಟೆಗಳ ಏರಿಳಿತವನ್ನು ನಿಯಂತ್ರಿಸುವ, ಪುರಾಣ ಪಾತ್ರಗಳಂತೆ ಬೆಳೆದಿರುವ ಗೂಳಿ–ಕರಡಿಯ ಪ್ರಭಾವಕ್ಕೆ ಒಳಗಾಗಿರುವ ನೋಡುಗನ ಕಣ್ಣಲ್ಲಿಯೇ ಎಲ್ಲದರ 'ಬೆಲೆ' ಅಡಗಿದೆ!

ಜಮೀನಿನ ಮಾಲೀಕತ್ವ ಹೊಂದಿರುವ, ಉಳುಮೆ–ಬಿತ್ತನೆ ಮಾಡಿ, ನಾವು ಉಣ್ಣಬಹುದಾದ ವಸ್ತುಗಳನ್ನು ಉತ್ಪಾದಿಸುವ ರೈತರು ಬಡತನದಲ್ಲಿ ಇರುವುದು ಏಕೆ? ಆ ವಸ್ತುಗಳನ್ನು ಮಾರಾಟ ಮಾಡುವ ವ್ಯಾಪಾರಿ, ಷೇರು ಹೂಡಿಕೆದಾರ ಮಾತ್ರ ಶ್ರೀಮಂತ ಆಗುವುದು ಹೇಗೆ? ಆಧುನಿಕ ಅರ್ಥ ವ್ಯವಸ್ಥೆಯ ವೈಚಿತ್ರ್ಯಗಳು ಈ ಹಳೆಯ ಪ್ರಶ್ನೆಯತ್ತ ನಮ್ಮನ್ನು ಒಯ್ಯುತ್ತವೆ. ದಿನಸಿ ಹಾಗೂ ಇತರ ವಸ್ತುಗಳನ್ನು ಗ್ರಾಹಕರಿಗೆ ಮಾರಾಟ ಮಾಡುವ ಬಹುರಾಷ್ಟ್ರೀಯ ಕಂಪನಿಗಳು, ಉಕ್ಕು ಉತ್ಪಾದಿಸುವವರು, ವಾಹನ ತಯಾರಿಸುವವರು, ಕಟ್ಟಡ, ಸೇತುವೆ, ಹಡಗು, ರೈಲು ಮಾರ್ಗ ನಿರ್ಮಿಸುವ ಕಂಪನಿಗಳು, ಹತ್ತಾರು ಕಡೆಗಳಲ್ಲಿ ಹೋಟೆಲ್‌ಗಳನ್ನು ಹೊಂದಿರುವ ಕಂಪನಿಗಳು ಈಗ ಇನ್ನೊಂದು ಬಗೆಯಲ್ಲಿ ಆಲೋಚಿಸಬಹುದು. ತಾವು ಇಷ್ಟೆಲ್ಲ ಕಷ್ಟದ ಕೆಲಸ ಮಾಡುತ್ತಿದ್ದರೂ, ಕಣ್ಣಿಗೆ ಕಾಣಿಸದ ಇಂಟರ್ನೆಟ್ ಮೂಲಕ ಸೇವೆ ಒದಗಿಸುವ ಅಮೆಜಾನ್, ಮೈಕ್ರೊಸಾಫ್ಟ್, ಟಿಸಿಎಸ್, ಇನ್ಫೊಸಿಸ್ ನಂತಹ ಕಂಪನಿಗಳು ಮಾರುಕಟ್ಟೆ ಬಂಡವಾಳದ ಲೆಕ್ಕಾಚಾರದಲ್ಲಿ ತಮಗಿಂತ ಬಹಳ ಮುಂದಿರುವುದು ಹೇಗೆ ಎಂದು ಅವು ಪ್ರಶ್ನಿಸಿಕೊಳ್ಳಬಹುದು. ದಶಕಗಳಿಂದ ನಿಧಾನಗತಿಯಲ್ಲಿ ಸಾಗುತ್ತಿರುವ ಹಲವು ಕಂಪನಿಗಳ ಮಾರುಕಟ್ಟೆ ಬಂಡವಾಳ ಮೌಲ್ಯಕ್ಕಿಂತಲೂ ಈಚೆಗೆ ಜನ್ಮತಾಳಿರುವ ಬೈಜುಸ್, ಜೊಮ್ಯಾಟೊ, ಪೇಟಿಎಂ ನಂತಹ ಕಂಪನಿಗಳು ಹೆಚ್ಚು ಮೌಲ್ಯಯುತವಾಗಿವೆ.

ಹತ್ತು ಹಲವು ವೈದ್ಯಕೀಯ ಕಾಲೇಜುಗಳು, ಎಂಜಿನಿಯರಿಂಗ್ ಕಾಲೇಜುಗಳನ್ನು, ಆಸ್ಪತ್ರೆಗಳನ್ನು, ದೇಶ ವಿದೇಶಗಳ ಪ್ರಮುಖ ನಗರಗಳ ಪ್ರಮುಖ ಸ್ಥಳಗಳಲ್ಲಿ ಎಕರೆಗಟ್ಟಲೆ ಜಮೀನು ಹೊಂದಿರುವ ಮಣಿಪಾಲ್ ಸಮೂಹವನ್ನು ಉದಾಹರಣೆಯಾಗಿ ಪರಿಗಣಿಸೋಣ. ಈ ಸಮೂಹದ ಬಳಿಯಲ್ಲಿ ಬೃಹತ್ ಪ್ರಮಾಣದ ಕಟ್ಟಡಗಳು, ಪ್ರಯೋಗಾಲಯಗಳು, ನೂರಾರು ಪ್ರೊಫೆಸರ್‌ಗಳ ಸಮೂಹ, ವೈದ್ಯರ ದಂಡು ಇವೆ. ಹೀಗಿದ್ದರೂ ಸಮೂಹದ ಮಾರುಕಟ್ಟೆ ಮೌಲ್ಯವು ಬೈಜುಸ್‌ನ ಮೌಲ್ಯಕ್ಕಿಂತ ಕಡಿಮೆ.

ತಾಜ್ ಮತ್ತು ಒಬೆರಾಯ್ ಹೋಟೆಲ್ಸ್ ಹಾಗೂ ಇತರ ಪಂಚತಾರಾ ಹೋಟೆಲ್‌ಗಳನ್ನು ಗಮನಿಸೋಣ. ಇವು ಅತ್ಯಂತ ಮೌಲ್ಯಯುತವಾದ ರಿಯಲ್ ಎಸ್ಟೇಟ್ ಆಸ್ತಿಯನ್ನು, ರುಚಿಕರ ಭೋಜನ ಉಣಬಡಿಸುವ ರೆಸ್ಟೊರೆಂಟ್‌ಗಳನ್ನು, ಸ್ಪಾ ಮತ್ತು ಸಲೂನ್‌ಗಳನ್ನು, ಮಹಾರಾಜರಿಗೆ ಸರಿಹೊಂದುವ ಈಜುಕೊಳಗಳನ್ನು ಹೊಂದಿವೆ. ಹೀಗಿದ್ದರೂ ಇವುಗಳ ಮಾರುಕಟ್ಟೆ ಮೌಲ್ಯವು ಜೊಮ್ಯಾಟೊಗಿಂತ ಕಡಿಮೆ. ಏನನ್ನೂ ಉತ್ಪಾದಿಸದ, ದೇಶದ ಸಹಸ್ರಾರು ರೆಸ್ಟೊರೆಂಟ್‌ಗಳಲ್ಲಿ ಸಿದ್ಧವಾದ ಆಹಾರವನ್ನು ಗ್ರಾಹಕರಿಗೆ ತಲುಪಿಸುವ ಕೆಲಸವನ್ನಷ್ಟೇ ಮಾಡುವ ಜೊಮ್ಯಾಟೊ ಮಾರುಕಟ್ಟೆ ಮೌಲ್ಯವು ಡಾಮಿನೊಸ್ ಪಿಜ್ಜಾದ ಮಾಲೀಕತ್ವ ಹೊಂದಿರುವ ಜ್ಯುಬಿಲೆಂಟ್ ಫುಡ್ ವರ್ಕ್ಸ್‌ನ ಮೌಲ್ಯಕ್ಕಿಂತ ದುಪ್ಪಟ್ಟು ಜಾಸ್ತಿ. ಷೇರು ಮಾರುಕಟ್ಟೆಗೆ ಬರಲು ಸಿದ್ಧವಾಗಿರುವ ಪೇಟಿಎಂನ ಮೌಲ್ಯವೂ ಭಾರಿ ಆಗಿಯೇ ಇದೆ. ಬೇರೆ ಕಂಪನಿಗಳು ಲಾಭ ತಂದುಕೊಡುತ್ತಿವೆ. ಆದರೆ, ಜೊಮ್ಯಾಟೊ ಮತ್ತು ಇತರ ಹಲವು ಯೂನಿಕಾರ್ನ್‌ಗಳು ಭಾರಿ ಮೌಲ್ಯ ಹೊಂದಿದ್ದರೂ ಲಾಭ ಕಾಣುತ್ತಿಲ್ಲ.

ಈಗ ಒಂಬತ್ತು ಸಾವಿರ ಕಾರುಗಳನ್ನು ಹೊಂದಿರುವ ಮೆರು ಕ್ಯಾಬ್ಸ್‌ನ ನೀರಜ್ ಗುಪ್ತಾ ಅವರನ್ನು ನಾನು ಭೇಟಿಯಾಗಿದ್ದೆ. ಈಗ ಓಲಾ ಮತ್ತು ಉಬರ್ ಕಂಪನಿಗಳು ಗುಪ್ತಾ ಅವರ ವಹಿವಾಟಿನ ಮಾದರಿಯನ್ನು ತಲೆಕೆಳಗಾಗಿಸಿವೆ. ಓಲಾ, ಉಬರ್ ಕಂಪನಿಗಳು ತಮ್ಮದೇ ಆದ ಆಸ್ತಿಯನ್ನು ಹೊಂದಿಲ್ಲ. ಅವು ತಮ್ಮ ಇಂಟರ್ನೆಟ್ ವೇದಿಕೆಯ ಮೂಲಕ ಗ್ರಾಹಕರ ಅಗತ್ಯಗಳಿಗೆ ತಕ್ಕಂತೆ ಟ್ಯಾಕ್ಸಿ ಸೇವೆ ಒದಗಿಸುತ್ತವೆ. ಇವುಗಳ ಮಾರುಕಟ್ಟೆ ಮೌಲ್ಯವೂ ದೊಡ್ಡದಾಗಿಯೇ ಇದೆ. ನಾನು ಇಂಟರ್ನೆಟ್ ಆಧಾರಿತ ಕಂಪನಿಗಳನ್ನು ದೂಷಿಸುತ್ತಿಲ್ಲ. ಇಂತಹ ಕಂಪನಿಗಳು ನಿಜಕ್ಕೂ ಅದ್ಭುತವಾದವು.

ಮಾಹಿತಿ ಮತ್ತು ಡೇಟಾ ಎಂಬುದು ಆಧುನಿಕ ಅರ್ಥ ವ್ಯವಸ್ಥೆಯ ಪಾಲಿಗೆ 'ತೈಲ'ವಿದ್ದಂತೆ ಎನ್ನಲಾಗುತ್ತಿದೆ. ಹೀಗಿದ್ದರೂ, ಇವುಗಳಿಗೆ ಮಿತಿ ಇದೆ. ಈ ಜಗತ್ತನ್ನು, ಜೀವನವನ್ನು ಭ್ರಮಾಲೋಕದಲ್ಲಿ ಸುತ್ತಿಡಲು ಆಗದು. ಮಾಹಿತಿಯನ್ನು ತಿನ್ನಲು ಆಗುವುದಿಲ್ಲ, ಇಂಟರ್ನೆಟ್ ಗುಳ್ಳೆಯ ಮೇಲೆ ಎಲ್ಲರೂ ಜೀವನ ಕಟ್ಟಿಕೊಳ್ಳಲು ಸಾಧ್ಯವಿಲ್ಲ. ನಮಗೆ ಆಹಾರ, ಬಟ್ಟೆ, ನೀರು, ಮನೆ, ಸಾರಿಗೆ, ವಿದ್ಯುತ್, ಆಸ್ಪತ್ರೆಗಳು, ಒಳ್ಳೆಯ ಕಾವ್ಯ, ಕಲೆ... ಎಲ್ಲವೂ ಬೇಕು. ರೆಸ್ಟೊರೆಂಟ್‌ಗಳೂ ಬೇಕು, ಪ್ರವಾಸವೂ ಬೇಕು. ಹಾಗಂತ, ಇಂಟರ್ನೆಟ್ಟಿನ ಬಂಜೆ ಜಗತ್ತು ನಿಮ್ಮನ್ನು ಶ್ರೀಮಂತರನ್ನಾಗಿಸಿದಷ್ಟು, ಇವು ನಿಮಗೆ ಸಿರಿವಂತಿಕೆ ತರಲಿಕ್ಕಿಲ್ಲ. ಆದರೆ, ಅಧೀರರಾಗುವುದು ಬೇಡ. ನೆಲದ ಜೊತೆ ಸಂಬಂಧ ಹೊಂದಿರುವ ನಿಜದ ಜಗತ್ತು ಕೂಡ ಸಂಪತ್ತು ಸೃಷ್ಟಿಸಿಕೊಡಬಲ್ಲದು. ನೀವು ನಿಮ್ಮ ಕೆಲಸವನ್ನು ಪ್ರೀತಿ, ಬದ್ಧತೆಯಿಂದ ಮಾಡಿದರೆ ಖುಷಿ ತಂದು ಕೊಡಬಲ್ಲದು.

ನನ್ನ ಪತ್ನಿ ಬೆಂಗಳೂರಿನ ಮಲ್ಲೇಶ್ವರದಲ್ಲಿ ನಡೆಸುವ 25 ವರ್ಷ ಹಳೆಯದಾದ, ಅಯ್ಯಂಗಾರ್ ಬೇಕರಿ ಬಗ್ಗೆ ಆಲೋಚನೆ ಹೊರಳುತ್ತದೆ. ನನ್ನ ಪತ್ನಿಯ ಸಂಪತ್ತು ಇಂಟರ್ನೆಟ್ ಕಂಪನಿಗಳ ಷೇರುಮೌಲ್ಯದಂತೆ ಹೆಚ್ಚಳವಾಗಿಲ್ಲ. ಹೀಗಿದ್ದರೂ, ಅವಳಿಗೆ ಸಂತೃಪ್ತಿ ಇದೆ. ಪ್ರತಿದಿನವೂ ಬ್ರೆಡ್, ಬನ್ ಮಾಡುವುದರಲ್ಲಿ ಅವಳಿಗೆ ಖುಷಿಯಿದೆ. ಇಂಥವರ ಸಂಖ್ಯೆ ದೇಶದಲ್ಲಿ ಅಗಣಿತ. ರೈತ, ಶಿಕ್ಷಕ, ವೈದ್ಯ, ಲೇಖಕ, ಪತ್ರಕರ್ತ, ಬಡಗಿ, ಕಲಾವಿದ, ಮೆಕ್ಯಾನಿಕ್, ವಣಿಕ... ಎಲ್ಲ ಸಮುದಾಯಗಳಲ್ಲೂ ಇಂತಹ ಸಂತೃಪ್ತರು ಇದ್ದಾರೆ. ಮನುಷ್ಯ ಇಂಟರ್ನೆಟ್ ಮಾತ್ರ ನಂಬಿ ಬದುಕಲಾಗದು.



ಚುರುಮುರಿ



ಮುಮ, ಉಮುಮ, ಸೂಮುಮ!

● ಆನಂದ

'**ಹೈಕಮಾಂಡ್** ಎಂದರೆ ಏನು?' ಎಂದು ಹೆಂಡತಿ ಕೇಳಿದಳು. 'ನೀನು ನನ್ನ ಮೇಲೆ ಹತೋಟಿ ಹೊಂದಿದ್ದರೆ ಆಗ ನೀನೇ ನನ್ನ ಹೈಕಮಾಂಡ್' ಎಂದು ವಿವರಿಸಿದೆ.

'ಛೆ! ಅದು ಐ ಕಮಾಂಡ್ ಆಗುತ್ತೇರಿ' ಎಂದಾಗ, 'ಈ ಕಮಾಂಡ್ ದೆಹಲೀಲಿ ಇರೋದ್ರಿಂದ ಅದು ಹೈಕಮಾಂಡ್ ಆಗುತ್ತೆ' ಎಂದೆ.

'ಈ ಉಪಮುಖ್ಯಮಂತ್ರಿ ಎಂದರೇನು? ಮಂತ್ರಿಗಿಂತ ಮೇಲೆ ಮುಖ್ಯಮಂತ್ರಿಗಿಂತ ಕೆಳಗೆ ತಾನೆ?'

'ಹೌದು. ಇಂದಿನ ಶಾಸಕನೇ ನಾಳಿನ ಮಂತ್ರಿ, ಇಂದಿನ ಮಂತ್ರಿಯೇ ನಾಳಿನ ಮುಖ್ಯಮಂತ್ರಿ' ಎಂದು ನಮ್ಮ ನಾಯಕರ ಸುಪ್ತಬಯಕೆಯ ಪರಿಚಯ ಮಾಡಿಸಿದೆ.

'ಮತ್ತೆ ಉಪಮುಖ್ಯಮಂತ್ರಿ?'

'ಎಲ್ಲರೂ ಮುಮ ಆಗುವುದಕ್ಕೆ ಸಾಧ್ಯವಿಲ್ಲ. ಹಾಗಾಗಿ ಉಮುಮನಾದರೂ ಆಗೋಣ ಎಂದು ಆಸೆಪಡ್ತಾರೆ' ಎಂದೆ.

'ಈ ಉಮುಮಗಳಿಗೆ ಏನಾದರೂ ಸ್ಪೆಷಲ್ ಗೌರವ, ಭತ್ಯೆ, ಅಧಿಕಾರ ಇದೆಯೇ? ಎಂದಳು.

'ನೊ ನೊ. ಅದೇ ಬಂಗಲೆ, ಅದೇ ಗೂಟದ ಕಾರು ಎಲ್ಲ ಮಂತ್ರಿ ತರಹಾನೇ' ಎಂದು ವಿವರಿಸಿದೆ. 'ಹಾಗಿದ್ದರೆ ಎಲ್ಲರನ್ನೂ ಉಮುಮ ಮಾಡಿಬಿಡಬಹುದಲ್ಲ. ಸಮಸ್ಯೆನೇ ಇರೊಲ್ಲ' ಎಂದಳು.

'ಮಾಡಬಹುದು, ಆದರೆ ಟ್ರಾಫಿಕ್ ಪೊಲೀಸ್‌ನೋರು ಖಂಡಿತ ಒಪ್ಪೊಲ್ಲ' ಎಂದಾಗ ಅವಳಿಗೆ ಅಚ್ಚರಿ.

'ಇದಾವ ಹೈಕಮಾಂಡ್ ರಿ? ಎಂದಳು.

'ನೋಡು ಪರಮೇಶ್ವರ್ ಉಮುಮ ಆಗಿದ್ದಾಗ ತಮಗೆ ಝೀರೊ ಟ್ರಾಫಿಕ್ ಇರಬೇಕು ಎಂದು ಒತ್ತಡ ತಂದು ಟ್ರಾಫಿಕ್ ಕಿರಿಕಿರಿ ಮಾಡ್ತಿದ್ದರಂತೆ. ಈಗ ಎಲ್ಲರೂ ಉಮುಮ ಆಗಿ, ನಮಗೂ ಪರಮೇಶ್ವರ್ ಸ್ಟೈಲ್‌ನಲ್ಲಿ ಝೀರೊ ಟ್ರಾಫಿಕ್ ಮಾಡಿ ಎಂದರೆ ಬೆಂಗಳೂರು ಟ್ರಾಫಿಕ್ ಗತಿ ಏನು? ಅದಕ್ಕೆ ಪೊಲೀಸಿನೋರು ಒಪ್ಪೊಲ್ಲ' ಎಂದೆ. 'ನಿಜ ನಿಜ' ಎಂದು ಒಪ್ಪಿದಳು.

'ಮತ್ತೆ ಸೂಮುಮ ಫ್ಯೂಚರ್ ಏನು? ಎಂದಾಗ ನನಗೆ ಅಚ್ಚರಿ. ಸೂಮುಮ? 'ಅದೇರಿ ಸೂಪರ್ ಮುಖ್ಯಮಂತ್ರಿ' ಎಂದಾಗ ಇವಳಿಗೆ ಪಾಲಿಟಿಕ್ಸ್ ಅರ್ಥ ಆಗೇಹೋಯ್ತು ಎನ್ನಿಸಿತು. ಆದರೆ ಅವಳ ಪ್ರಶ್ನೆಗೆ ಉತ್ತರ ನನ್ನ ಬಳಿ ಇರಲಿಲ್ಲ.

ಸಂಗತ

ಸಾಕುಪ್ರಾಣಿಯಿಂದ ಪರಿಸರ ಅವ್ಯವಸ್ಥೆ?

ಸಾಕುಪ್ರಾಣಿಗಳ ಸಂಖ್ಯೆ ಇದೇ ದರದಲ್ಲಿ ವರ್ಧಿಸುತ್ತ ಹೋದರೆ ಮನುಷ್ಯ ಗಂಭೀರವಾದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎನ್ನುತ್ತವೆ ಸಮೀಕ್ಷಾ ವರದಿಗಳು

● ಪ.ರಾಮಕೃಷ್ಣ ಶಾಸ್ತ್ರಿ

ಕಾಡಿನ ಅಂಚಿನಲ್ಲಿ ವಾಸವಾಗಿರುವ ಬಹುತೇಕ ಕುಟುಂಬಗಳು ಭಯದ ನೆರಳಿನಲ್ಲೇ ಕ್ಷಣಗಣನೆ ಮಾಡುವಂತಹ ದಿನಗಳಿವೆ. ಒಂದೆಡೆ, ಬೆಳೆಗಳಿಗೆ ಹಾನಿ ಮಾಡುವ ಆನೆ, ಫಸಲಿಗೆ ಕಂಟಕವಾಗುವ ಕೋತಿ, ಬಿತ್ತಿದ ಬೀಜವನ್ನು ಕಿತ್ತು ತೆಗೆದು ನುಂಗುವ ನವಿಲು, ಸಾಕುಪ್ರಾಣಿಗಳನ್ನು ಹೊತ್ತೊಯ್ಯುವ ಚಿರತೆ... ಹೀಗೆ ನಾಲ್ದೆಸೆಯಿಂದಲೂ ಮನುಷ್ಯನಿಗೆ ಅವುಗಳಿಂದ ಕಂಟಕ ಎದುರಾಗುತ್ತಲೇ ಇದ್ದರೆ, ಜೀವವೈವಿಧ್ಯ ಮತ್ತು ಪರಿಸರ ವ್ಯವಸ್ಥೆಯ ಜಾಗತಿಕ ಮೌಲ್ಯಮಾಪನ (ಐಪಿಬಿಇಎಸ್) ವರದಿ ಹೇಳುವುದು ಬೇರೆಯೇ.

ಕಾಡಿನ ಜೀವವೈವಿಧ್ಯವಿಲ್ಲದೆ ಹೋದರೆ 800 ಕೋಟಿಯಷ್ಟಿರುವ ಭೂಗ್ರಹ ವಾಸಿಗಳ ಆರೋಗ್ಯ, ಆಹಾರ, ಆರ್ಥಿಕ ಭದ್ರತೆಯ ಜೀವನೋಪಾಯದ ತಳಹದಿಯೇ ಕಳಚುತ್ತದೆ. ಕೊರೊನಾದಂತಹ ಮಾರಕ ವೈರಸ್ ಹರಡುವುದಕ್ಕೂ ಇಳಿಮುಖವಾಗುತ್ತಿರುವ ಜೀವವೈವಿಧ್ಯದ ಸಂಖ್ಯೆಯೂ ಒಂದು ಕಾರಣ ಎಂದು ಈ ವರದಿ ಸ್ಪಷ್ಟಪಡಿಸಿದೆ.

ಇದರ ಬೆನ್ನಲ್ಲೇ, ಸಾಕುಪ್ರಾಣಿಗಳ ಸಂಖ್ಯೆ ಭೂಮಿಯಲ್ಲಿ ಬೇಡ ಎನ್ನುವಷ್ಟು ಹೆಚ್ಚಾಗುತ್ತಿದೆ ಎಂದು ಹೇಳುತ್ತವೆ ಆಕ್ಸ್‌ಫರ್ಡ್ ಲಾಫೆಯೇಟ್ ಹ್ಯೂಮನ್ ಸೊಸೈಟಿ ಸಂಗ್ರಹಿಸಿದ ಅಂಕಿಅಂಶಗಳು. ಮನುಷ್ಯನ ಸಂಖ್ಯೆಯೇ ಪ್ರಕೃತಿಯ ಉದ್ದೇಶಕ್ಕಿಂತ ಸಾವಿರ ಪಟ್ಟು ಹೆಚ್ಚಾಗಿದೆ. ಕಳೆದ 40 ವರ್ಷಗಳಲ್ಲಿ ಸಸ್ತನಿ, ಪಕ್ಷಿ, ಸರೀಸೃಪ, ಮೀನುಗಳ ಸಂತತಿ ಶೇ 40ರಷ್ಟು ಕಡಿಮೆಯಾಗಿದೆ. ಹಸು, ನಾಯಿ, ಬೆಕ್ಕು, ಕುದುರೆ, ಒಂಟೆ, ಹಂದಿ, ಆಡು, ಕುರಿಯಂತಹ ಸಾಕುಪ್ರಾಣಿಗಳ ಸಂಖ್ಯೆ ಮನುಷ್ಯನಿಗೆ ಸಮಾನವಾಗಿದೆ. ಕಾಡುಪ್ರಾಣಿಗಳಿಗಿಂತ ಹೆಚ್ಚು ಭೂಮಿ, ಸಸ್ಯಮೂಲದ ಆಹಾರ ಮತ್ತು ನೀರನ್ನು ಬಳಸುವ ಸಾಕುಪ್ರಾಣಿಗಳ ಸಂಖ್ಯೆ ಇದೇ ದರದಲ್ಲಿ ವರ್ಧಿಸುತ್ತ ಹೋದರೆ ಮನುಷ್ಯ ಗಂಭೀರವಾದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಪ್ರಾಣಿಜನ್ಯವಾಗಿ ಬರುವ ಹಲವಾರು ಸಾಂಕ್ರಾಮಿಕ ಕಾಯಿಲೆಗಳಿಂದ ಕಂಗೆಡಬೇಕಾಗುತ್ತದೆ ಎಂದು ಸೊಸೈಟಿ ಎಚ್ಚರಿಸಿದೆ.

ಅಮೆರಿಕದ ನಗರಗಳನ್ನೇ ಪರಿಗಣಿಸಿದರೂ ಅಲ್ಲಿ ನಿಮಿಷಕ್ಕೆ 50ರಂತೆ ದಿನದಲ್ಲಿ 70 ಸಾವಿರ ನಾಯಿ ಮತ್ತು ಬೆಕ್ಕಿನಮರಿಗಳು ಹುಟ್ಟುತ್ತವೆ. ಹೆಚ್ಚಾದ ಮರಿಗಳನ್ನು ಮನೆಯವರು ಬೀದಿಯಲ್ಲಿ ಬಿಟ್ಟುಬರುತ್ತಾರೆ. ಹೀಗಾಗಿ, ದಿನಕ್ಕೆ 10 ಸಾವಿರ ಸಂಖ್ಯೆಯಲ್ಲಿ ಅವುಗಳಿಗೆ ದಯಾಮರಣ ನೀಡಲಾಗುತ್ತಿದೆ.

ಪ್ರಜೆಗಳು ಕೊಡುವ ತೆರಿಗೆಯ ಹಣದಲ್ಲಿ ಲಕ್ಷಾಂತರ ಡಾಲರ್ ಇದಕ್ಕಾಗಿ ಖರ್ಚಾಗುತ್ತದೆ ಎನ್ನುವ ಸ್ಥಳೀಯ ಆಡಳಿತಗಳು, ನಿಯಂತ್ರಣ ಮೀರಿ ಅವುಗಳ ಸಂಖ್ಯೆ ವೃದ್ಧಿಯಾದರೆ ಮುಂಬರುವ ದಿನಗಳಲ್ಲಿ ಅಮೆರಿಕ ಎದುರಿಸಬೇಕಾದ ಆಹಾರ ಮತ್ತು ಕುಡಿಯುವ ನೀರಿನ ಅಭಾವ ಅಲ್ಲದೆ ರೇಬಿಸ್ ಮುಂತಾದ ಹಾನಿಕಾರಕ ರೋಗಗಳಿಂದ ಉಂಟಾಗುವ ಹಾನಿ ಎಷ್ಟೆಂಬುದು ಅನೂಹ್ಯವಾಗಿದೆ ಎನ್ನುತ್ತವೆ.

ಸಿರಿಯಾದಲ್ಲಿ ಎರಡು ವರ್ಷಗಳ ಹಿಂದೆ ಸಂಖ್ಯೆ ಹೆಚ್ಚಾದ ಕಾರಣಕ್ಕೆ ಸಾವಿರಾರು ಒಂಟೆಗಳ ಮಾರಣಹೋಮ ನಡೆಯಿತು. ಹೈನುಗಾರಿಕೆಯಲ್ಲಿ ಅದ್ಭುತ ಸಾಧನೆ ಮಾಡಿರುವ ಇಸ್ರೇಲ್ ಗಂಡುಕರುಗಳನ್ನು ಅರೆಕ್ಷಣವೂ ಉಳಿಸುವುದಿಲ್ಲ. ಮೂರು ಕರುಗಳಾದ ಬಳಿಕ ಆಹಾರ ಮತ್ತು ನೀರು ಹೆಚ್ಚಾಗಿ ಬೇಕಾಗುತ್ತದೆಂಬ ಕಾರಣಕ್ಕೆ ಹಸುವಿನ ಸಾಕಾಣಿಕೆಯನ್ನೂ ಮುಂದುವರಿಸುವುದಿಲ್ಲ.

ವಿಶ್ವ ಪರಿಸರ ಸಮತೋಲನ ವ್ಯವಸ್ಥೆಯ ಬಗೆಗೆ ನಡೆದ ಸಮೀಕ್ಷೆಗಳು, ಪ್ರಾಣಿಗಳನ್ನು ಆಧರಿಸಿದ ಕೃಷಿ ಪದ್ಧತಿಯನ್ನು ಬದಲಿಸಿ ಶಾಶ್ವತ ಸಸ್ಯಗಳಿಂದ ಹೊಸ ಆಹಾರ ಪಡೆಯುವ ಕ್ರಮವನ್ನು ರೂಪಿಸಿಕೊಳ್ಳುವ ಅಗತ್ಯವಿದೆ ಎಂದು ಹೇಳುತ್ತವೆ.

ಅನೇಕ ದೇಶಗಳಲ್ಲಿ ಆಡುಗಳನ್ನು ಸಾಕುವುದು, ದೇಶದೊಳಗೆ ಅವುಗಳನ್ನು ತರುವುದು ಕೂಡ ಶಿಕ್ಷಾರ್ಹ ಅಪರಾಧ. ಆಡು, ಕುರಿಗಳಿಂದಾಗಿ ಸಂಪೂರ್ಣವಾಗಿ ಅಳಿದುಹೋದ ಸಸ್ಯವರ್ಗಗಳ ದೊಡ್ಡ ಪಟ್ಟಿಯನ್ನೇ ಅಲ್ಲಿ ಪ್ರದರ್ಶಿಸಲಾಗುತ್ತಿದೆ.



ನಿಸರ್ಗವೇ ಸಮತೋಲನ ಮಾಡುತ್ತಿರುವ ಅರಣ್ಯವಾಸಿ ಪ್ರಾಣಿಗಳ ಬದುಕನ್ನು ಕಸಿದುಕೊಂಡು ಅವುಗಳ ವಾಸದ ವ್ಯಾಪ್ತಿಯಲ್ಲಿ ಮನುಷ್ಯನು ಕೃಷಿ ಮಾಡುತ್ತಿದ್ದಾನೆ. ಜಾನುವಾರುಗಳ ಮೇವು ಬೆಳೆಯುತ್ತಿದ್ದಾನೆ. 1980- 2000ದ ಮಧ್ಯಾವಧಿಯಲ್ಲಿ ಆಗ್ನೇಯ ಏಷ್ಯಾದ ಉಷ್ಣವಲಯದ ಅರಣ್ಯಗಳಲ್ಲಿ ಲಕ್ಷಾಂತರ ಹೆಕ್ಟೇರ್ ಅರಣ್ಯದಲ್ಲಿ ತೋಟದ ಬೆಳೆಗಳ ಕೃಷಿ ಮತ್ತು ಪಶು ಸಂಗೋಪನೆ ಮಾಡಲಾಗಿದೆ ಎನ್ನುವ ವರದಿಯೂ ಇದೆ. ಇಷ್ಟು ವಿಸ್ತಾರವಾದ ಪ್ರದೇಶದಲ್ಲಿ ಬದುಕಿಕೊಂಡಿದ್ದ ನಾನಾ ಪ್ರಾಣಿಗಳ ಬದುಕಿನ ಪಥವನ್ನು ಮನುಷ್ಯ ತುಂಡರಿಸಿದರೆ ಆನೆಗಳು, ಚಿರತೆಗಳು ಊರಿಗೆ ನುಗ್ಗದೆ ಇನ್ನೇನಾದೀತು?

ಮನುಷ್ಯ ಬೆಳೆಯುವ ಒಂದು ಹಿಡಿ ಅಕ್ಕಿಗೆ ನಲವತ್ತು ಲೀಟರ್ ನೀರು ಬೇಕು. ಆದರೆ ಸಂಖ್ಯೆಗೆ ಸಿಗದಷ್ಟು ಜೀವಿಗಳ ಸಮೂಹಕ್ಕೆ ಯಾವ ರಸಗೊಬ್ಬರ, ಅಣೆಕಟ್ಟಿನ ನೀರನ್ನೂ ಬಯಸದೆ ನಿಸರ್ಗವು ಕಾಡಿನಲ್ಲಿ ಆಹಾರ ಕೊಡುತ್ತಿದೆ. ಆಹಾರ ಸರಪಣಿಯ ಮೂಲಕ ಜೀವಿಗಳ ಸಂಖ್ಯೆ ಹೆಚ್ಚಾಗದಂತೆ ಸಮತೋಲನ ಮಾಡುತ್ತಿದೆ. ಆದರೆ ಮನುಷ್ಯನು ಕೃಷಿಗಾಗಿ, ಆಹಾರಕ್ಕಾಗಿ, ಶೋಕಿಗಾಗಿ ಸಾಕುವ ವಿವಿಧ ಪ್ರಾಣಿಗಳೂ ನಿಸರ್ಗದ ಸಮತೋಲನಕ್ಕೆ ಒಳಪಡುವುದಿಲ್ಲ. ಬೀದಿಪಾಲಾಗಿ ಕಂಟಕ ತರುತ್ತಿವೆ.

ಭವಿಷ್ಯದಲ್ಲಿ ಆಹಾರಕ್ಕೆ, ನೀರಿಗೆ, ಆರೋಗ್ಯಕ್ಕೆ ಆತಂಕವಾಗಬಲ್ಲ ಸಾಕುಪ್ರಾಣಿಗಳು ನಿಸರ್ಗಕ್ಕೆ ಅನಿವಾರ್ಯವಲ್ಲ ಎನ್ನುವ ವೈಜ್ಞಾನಿಕ ವರದಿಗಳು, ಇಂತಹ ಶೋಕಿಗೆ ಮಿತಿಯಿರಲಿ ಎಂದು ಎಚ್ಚರಿಸುವ ಮಾತನ್ನು ಗಮನಿಸಬೇಕಾಗಿದೆ. ಮನೆಗೆ ಬೇಡವಾದ ನಾಯಿ, ಬೆಕ್ಕಿನಮರಿಗಳನ್ನು ಬೀದಿಪಾಲು ಮಾಡುವ ಪ್ರವೃತ್ತಿಗೂ ನಿಯಂತ್ರಣ ಅಗತ್ಯವಾಗಿದೆ.

ವಾಚಕರ ವಾಣಿ

ಬೆರಗುಗೊಳಿಸಿದ ಸಂಗತಿ

ಆನುವಂಶೀಯ ಕಾಯಿಲೆಯಿಂದ ಬಳಲುತ್ತಿದ್ದ ಒಂದು ವರ್ಷದ ಹೆಣ್ಣುಮಗುವಿನ ಚಿಕಿತ್ಸೆಗೆ ₹ 16 ಕೋಟಿ ಮೊತ್ತದ ಇಂಜೆಕ್ಷನ್ ನೀಡಿದರೂ ಮಗು ಮಾತ್ರ ಬದುಕುಳಿಯದ ಸುದ್ದಿ (ಪ್ರ.ವಾ., ಆ. 3) ಓದಿ ಕರುಳು ಹಿಚುಕಿದಂತಾಯಿತು. ಸಾಮಾಜಿಕ ಮಾಧ್ಯಮಗಳ ಮೂಲಕ ಸಹಾಯದ ಮಹಾಪೂರವೇ ಹರಿದು ಬಂದಿದ್ದರೂ ಕಷ್ಟಕ್ಕೆ ಮಿಡಿದವರ ನಿರೀಕ್ಷೆ ಹುಸಿಯಾದಂತಾಯಿತು.

ಇಲ್ಲಿ ಬೆರಗು ಮೂಡಿಸುವ ವಿಚಾರವೆಂದರೆ, ₹ 16 ಕೋಟಿ ಬೆಲೆಯ ಇಂಜೆಕ್ಷನ್ ಇರುವುದು ಸಾಧ್ಯವೇ ಎಂಬುದು. ಅಲ್ಲದೆ ಅಷ್ಟೊಂದು ದುಬಾರಿ ಬೆಲೆಯ ಇಂಜೆಕ್ಷನ್ ನೀಡಿದರೂ ಮಗು ಬದುಕುಳಿಯದಿರುವುದು ದುರಂತವೇ ಸರಿ. ಇದರ ಹೊಣೆಯನ್ನು ಯಾರ ಮೇಲೂ ಹೊರಿಸುವಂತಿಲ್ಲ. ನಿಸರ್ಗಶಕ್ತಿಯನ್ನು ಮೀರುವ ಶಕ್ತಿ ಯಾರಿಗೂ ಇಲ್ಲ ಎಂಬುದು ಮತ್ತೆ ಮತ್ತೆ ಸಾಬೀತಾಗುತ್ತಲೇ ಇರುತ್ತದೆ, ಅಷ್ಟೇ.

ಎಸ್.ಎಸ್ ಭಾವಿಕಟ್ಟಿ ರೇವೂರ, ಕಲಬುರ್ಗಿ

ಎಷ್ಟು ಬಾರಿ ಗ್ರಾಹಕರನ್ನು ಅರಿಯುವುದು?

ದೇಶದಲ್ಲಿ ಇಂದು ಯಾವುದೇ ಬ್ಯಾಂಕ್‌ಗೆ ಹೋದರೂ ಆಧಾರ್- ಪ್ಯಾನ್ ಕಾರ್ಡ್ ಇಲ್ಲದೆ ಖಾತೆ ತೆರೆಯುವುದಿಲ್ಲ. ಖಾತೆ ತೆರೆಯಲು ಇವು ಮೂಲ ದಾಖಲೆ ಎನಿಸಿವೆ. ಈ ಮೊದಲು ಇವು ಕಡ್ಡಾಯ ಇರಲಿಲ್ಲ. ಹತ್ತು- ಹದಿನೈದು ವರ್ಷಗಳ ಹಿಂದೆ ಯಾರು ಖಾತೆ ತೆರೆದಿದ್ದರೋ ಅಂಥವರಿಗೆ ಈ ದಾಖಲೆಗಳನ್ನು ಸಲ್ಲಿಸಲು ಸೂಚಿಸಲಾಗುತ್ತಿದೆ. ಆದ್ದರಿಂದ 'ನಿಮ್ಮ ಗ್ರಾಹಕರನ್ನು ತಿಳಿದುಕೊಳ್ಳಿ' ಸಂಕ್ಷಿಪ್ತದಲ್ಲಿ 'ಕೆವೈಸಿ' ಎಂಬ ವಿಧಾನವನ್ನು ಜಾರಿಗೆ ತರಲಾಯಿತು. ಇದು ಅನಿವಾರ್ಯ ಮತ್ತು ಸ್ವಾಗತಾರ್ಹ.

ಆದರೆ ವರ್ಷದಲ್ಲಿ ಮೂರು- ನಾಲ್ಕು ಬಾರಿ ಬಹುತೇಕ ಬ್ಯಾಂಕ್‌ಗಳು ತಮ್ಮದೇ ಬ್ಯಾಂಕಿನ ಹಳೆಯ ಮತ್ತು ಹೊಸ ಗ್ರಾಹಕರಿಗೂ ಆಧಾರ್- ಪ್ಯಾನ್ ಕಾರ್ಡ್ ಸಲ್ಲಿಸುವಂತೆ ಸೂಚಿಸುತ್ತವೆ. ಇಂಥ ಅವಕಾಶವನ್ನು ದುರುಪಯೋಗಪಡಿಸಿಕೊಳ್ಳುವ ದುರುಳರು ಬ್ಯಾಂಕ್ ಹೆಸರಿನಲ್ಲಿ ಕರೆ ಮಾಡಿ, ವಂಚನೆ ಮಾಡುತ್ತಿರುವುದನ್ನೂ ನಾವು ದಿನಂಪ್ರತಿ ನೋಡುತ್ತಿದ್ದೇವೆ. ಇಂದಿನದು ಡಿಜಿಟಲ್ ಯುಗ. ಈಗಲೂ ಪದೇ ಪದೇ ದಾಖಲೆ ಸಲ್ಲಿಸುವಂತೆ ಸೂಚಿಸುವುದಾದಲ್ಲಿ ಹಿಂದೆ ಪಡೆಯಲಾಗಿದ್ದ ದಾಖಲೆಗಳು ಎಲ್ಲಿ ಹೋಗುತ್ತವೆ?

ಈ ಕುರಿತು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಶಾಖಾ ಪ್ರಬಂಧಕರೊಬ್ಬರನ್ನು ವಿಚಾರಿಸಿದಾಗ, 'ನಮಗೂ ಇದೇ ತಲೆನೋವಾಗಿದೆ. ಪ್ರಧಾನ ಕಚೇರಿಯಿಂದ ಪುನರಪಿ ದಾಖಲೆ ಕೇಳುತ್ತಾರೆ. ಪ್ರತಿದಿನವೂ ಗ್ರಾಹಕರೊಂದಿಗೆ ಇದೇ ವಿಷಯವಾಗಿ ವಾಗ್ಯುದ್ಧಗಳಾಗುತ್ತಿವೆ' ಎಂದು ಅಸಹಾಯಕತೆ ವ್ಯಕ್ತಪಡಿಸಿದರು. ವರ್ಷಕ್ಕೆ ನಾಲ್ಕು ಬಾರಿ ಆಧಾರ್- ಪ್ಯಾನ್ ಕಾರ್ಡ್ ಸಂಖ್ಯೆ, ಮಾಹಿತಿ ಬದಲಾಗುತ್ತದೆಯೇ? ಈ ಬಗ್ಗೆ ಬ್ಯಾಂಕ್‌ಗಳು ಒಂದು ವ್ಯವಸ್ಥಿತ ಕ್ರಮವನ್ನು ಅಳವಡಿಸಿಕೊಂಡು ಗ್ರಾಹಕರಿಗೆ ಕಿರುಕುಳ ನೀಡುವುದನ್ನು ತಪ್ಪಿಸಬೇಕು.

ಚನ್ನು ಅ. ಹಿರೇಮಠ, ರಾಣೆಬೆನ್ನೂರು

ಅಯ್ಯೋ ಮರೆತೆ...

ಇಂಗ್ಲಿಷ್ ಪದಗಳ ಅತಿಯಾದ ಬಳಕೆಯಿಂದಾಗಿ ನೇಪಥ್ಯಕ್ಕೆ ಸರಿಯುತ್ತಿರುವ ಕೆಲವು ಕನ್ನಡ ಪದಗಳನ್ನು ಪಟ್ಟಿ ಮಾಡಿರುವ ಉಮೇಶ್ ಶಿವರಾಜು ಅವರು (ದಿನದ ಟ್ವೀಟ್, ಪ್ರ.ವಾ., ಆ. 4) ಇದನ್ನು ಕನ್ನಡಿಗರ ಜಾಣ ಮರೆವು ಎಂದು ಕರೆದಿದ್ದಾರೆ. ಓದಿ ಅಯ್ಯೋ ಎಂದು ಉದ್ಗಾರ ತೆಗೆಯುವಂತಾಯಿತು. ಅಯ್ಯೋ ಮರೆತೆ! ಈಗ Aiyo ಆಕ್ಸ್‌ಫರ್ಡ್ ಡಿಕ್ಷನರಿಯಲ್ಲಿ ಒಂದು ಇಂಗ್ಲಿಷ್ ಪದವಾಗಿ ಸೇರ್ಪಡೆಯಾಗಿದೆ!

ಡಾ. ಎಂ.ರವೀಂದ್ರ, ಬೆಂಗಳೂರು

ಆಗ ಇಲ್ಲದ ಪಟ್ಟು, ಈಗ ಮಾತ್ರ ರಟ್ಟು

ತಮ್ಮ ಮಗ ಬಿ.ವೈ.ವಿಜಯೇಂದ್ರ ಅವರಿಗೆ ಉಪಮುಖ್ಯಮಂತ್ರಿ ಸ್ಥಾನದ ಜೊತೆಗೆ ಆಯಕಟ್ಟಿನ ಖಾತೆಯೇ ಬೇಕೆಂದು ಬಿಜೆಪಿಯ ಬಿ.ಎಸ್. ಯಡಿಯೂರಪ್ಪ ಪಟ್ಟು ಹಾಕಿರುವುದಾಗಿ ವರದಿಯಾಗಿದೆ. ಇದು ನಿಜವೇ ಆಗಿದ್ದಲ್ಲಿ, ಈ ರೀತಿಯ ಪಟ್ಟು ಮತ್ತು ಬೆದರಿಕೆಗಳು ಅವರು ಅಧಿಕಾರದಲ್ಲಿದ್ದಾಗ ರಾಜ್ಯದ ಪಾಲಿನ ಜಿಎಸ್‌ಟಿ ಬಾಕಿ ಹಣ ಮತ್ತು ಬರ, ನೆರೆ ವಿಕೋಪಗಳ ಪರಿಹಾರ ಧನವನ್ನು ಕೇಂದ್ರದಿಂದ ತರುವ ವಿಷಯದಲ್ಲಿ ಏಕೆ ಇರಲಿಲ್ಲ? ಕುರ್ಚಿ ಉಳಿಸಿಕೊಳ್ಳಲು ಅವರು ಸೌಮ್ಯರಾಗಿ ಇದ್ದರೇ? ಪಟ್ಟು ಮತ್ತು ಬೆದರಿಕೆಗಳನ್ನು ಜನಹಿತಕ್ಕಾಗಿ ಬಳಸಬೇಕು. ಸ್ವಹಿತಕ್ಕಾಗಿ ಮಾಡುವುದು ಸ್ವಾರ್ಥ ಅನ್ನಿಸಿಕೊಳ್ಳುತ್ತದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಅದೆಷ್ಟು 'ಬಾಂಬ್'ಗಳು ಇವೆಯೋ?

ಮೇಘಸ್ಫೋಟವು ನಿಸರ್ಗದ ಜಲಬಾಂಬ್ ಆಗಿರುವ ಕುರಿತ ಟಿ.ಆರ್.ಅನಂತರಾಮು ಅವರ ಲೇಖನ (ಪ್ರ.ವಾ., ಆ. 3) ಪ್ರಕೃತಿಯ ಉಡಿಯಲ್ಲಿ ಇಂತಹ ಇನ್ನೂ ಅದೆಷ್ಟು 'ಬಾಂಬ್'ಗಳು ಇವೆಯೋ ಗೊತ್ತಿಲ್ಲ ಎಂಬುದನ್ನು ತೋರಿಸುತ್ತದೆ. ಭೂಮಿ ತನ್ನ ಸಮತೋಲನ ಕಾಪಾಡಿಕೊಳ್ಳಲು ಏನೆಲ್ಲ ಮಾಡುವುದೋ ಈ ಹುಲು ಮಾನವನಿಗೆ ಅದೆಲ್ಲಿ ಅರ್ಥವಾಗಬೇಕು? ಸಾಮಾನ್ಯರಾದ ನಾವು ಗುಡುಗು, ಸಿಡಿಲಿಗೇ ನಡುಗಿ ಹೋಗುತ್ತೇವೆ ಇಲ್ಲ ತತ್ತರಿಸುತ್ತೇವೆ. ಜ್ವಾಲಾಮುಖಿ, ಭೂಕಂಪ, ಸುನಾಮಿ, ಜಲಪ್ರಳಯ, ಚಂಡಮಾರುತದಂತಹವು ಎಷ್ಟು ಜೀವಿಗಳನ್ನು ನುಂಗಿವೆಯೊ? ಅದೆಷ್ಟು ಮನುಷ್ಯನಿರ್ಮಿತಿಗಳ ಸರ್ವನಾಶ ಮಾಡಿವೆಯೊ?

ಈ ಭೂಮಿಯ ವಿಕಾಸವನ್ನು ಅವಲೋಕಿಸಿದಾಗ, ಒಂದು ಹಂತದಲ್ಲಿದ್ದ ಜೀವವೈವಿಧ್ಯ ಮತ್ತೊಂದು ಹಂತದಲ್ಲಿ ಇಲ್ಲದಿರುವುದು ತಿಳಿಯುತ್ತದೆ. ದೈತ್ಯ ಡೈನೊಸಾರ್‌ಗಳು ಇಲ್ಲವಾದವು. ಇದು ಸಹಜ ಇರಬಹುದು. ಆದರೆ ಇಂತಹ ಅವಘಡವು ಜೀವಿಗಳ- ಮಾನವನ ಅಳಿವಿನ ಮುನ್ಸೂಚನೆಯೇ? ಭವಿಷ್ಯ ಹೇಗಿದೆಯೋ, ಏನಿದೆಯೋ ಗೊತ್ತಿಲ್ಲ. ಆದರೂ ಪ್ರಕೃತಿಯೊಂದಿಗೆ ಮಾನವನು ಪರಿಸರ ಸಂರಕ್ಷಣೆಯ ಮೂಲಕ ಸಮರಸದಿಂದ ಬಾಳಬೇಕಾದ ಜರೂರು ಇದೆ.

ಬಿ.ಆರ್.ಅಣ್ಣಾಸಾಗರ, ಸೇಡಂ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಜಮ್ಮು ಮತ್ತು ಕಾಶ್ಮೀರದ ವಿಶೇಷ ಸ್ಥಾನಮಾನ ರದ್ದತಿಗೆ ಎರಡು ವರ್ಷ

ಉಗ್ರವಾದವೇ ಈಗಲೂ ಸವಾಲು



ವಿಶೇಷ ಸ್ಥಾನಮಾನ ರದ್ದತಿಯ ಎರಡನೇ ವರ್ಷಾಚರಣೆ ಮುನ್ನಾದಿನವಾದ ಬುಧವಾರ, ಜಮ್ಮು ಕಾಶ್ಮೀರ ರಾಷ್ಟ್ರೀಯ ಹೆದ್ದಾರಿಯಲ್ಲಿ ಭದ್ರತಾ ಪಡೆಗಳ ಕಣ್ಗಾವಲು ಹೆಚ್ಚಿಸಲಾಗಿತ್ತು —ಪಿಟಿಐ ಚಿತ್ರ

ಕಾನೂನು ಮತ್ತು ಸುವ್ಯವಸ್ಥೆಗೆ ಸಂಬಂಧಿಸಿದ ಪ್ರಕರಣಗಳು

1,394
2017ರ ಆಗಸ್ಟ್‌ನಿಂದ 2019ರ ಜುಲೈವರೆಗೆ

382
2019ರ ಆಗಸ್ಟ್‌ನಿಂದ 2021ರ ಜುಲೈವರೆಗೆ

ನಾನು ತೀವ್ರ ನಿರಾಶೆಗೊಂಡಿದ್ದೇನೆ. ಆದರೆ ನಿಮಗೆ ಕಾಮನಬಿಲ್ಲು ಬೇಕಾದರೆ, ನೀವು ಮಳೆಯನ್ನು ಸಹಿಸಿಕೊಳ್ಳಬೇಕು. ಜನರಿಗಾಗಿ ನನ್ನ ಕೈಲಾದಷ್ಟು ಕೆಲಸ ಮಾಡುತ್ತಿದ್ದೇನೆ
ಒಮರ್ ಅಬ್ದುಲ್ಲಾ, ಎನ್‌ಸಿ ನಾಯಕ

ಜಮ್ಮು ಕಾಶ್ಮೀರವು ದೆಹಲಿ ಮತ್ತು ಭಾರತದ ಹೃದಯದಿಂದ (ದಿಲ್) ಹಿಂದೆಂದಿಗಿಂತಲೂ ದೂರದಲ್ಲಿದೆ. ಈ ದೂರ ಮತ್ತಷ್ಟು ಹೆಚ್ಚುತ್ತಿದೆ
ಎಂ.ವೈ.ತಾರಿಗಾಮಿ
ಗುಪ್ಕಾರ್ ವಕ್ತಾರ, ಸಿಪಿಎಂ ನಾಯಕ

• ಜುಲ್ಫಿಕರ್ ಮಜೀದ್

ಸಂವಿಧಾನದ 370ನೇ ವಿಧಿ ಅಡಿಯಲ್ಲಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಲಾಗಿದ್ದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿ ಎರಡು ವರ್ಷ (ಆ.5) ಪೂರ್ಣಗೊಂಡಿದೆ. ಗಡಿ ನಿಯಂತ್ರಣ ರೇಖೆಯಲ್ಲಿ ಉಗ್ರರ ಒಳನುಸುಳುವಿಕೆ ಮತ್ತು ಭಯೋತ್ಪಾದನಾ ಸಂಘಟನೆಗಳಿಗೆ ಸ್ಥಳೀಯರ ಸೇರ್ಪಡೆಯಲ್ಲಿ ಸ್ವಲ್ಪ ಕುಸಿತ ಕಂಡುಬಂದಿದ್ದರೂ, ಕಣಿವೆ ನಾಡಿನಲ್ಲಿ ಉಗ್ರವಾದ ಇನ್ನೂ ಒಂದು ಸವಾಲಾಗಿ ಉಳಿದಿದೆ.

ಅಧಿಕೃತ ಅಂಕಿ ಅಂಶಗಳ ಪ್ರಕಾರ, 163 ಸ್ಥಳೀಯ ಯುವಕರು 2020ರಲ್ಲಿ ಉಗ್ರಗಾಮಿ ಗುಂಪುಗಳಿಗೆ ಸೇರ್ಪಡೆಯಾಗಿದ್ದಾರೆ. ಈ ವರ್ಷದ ಮೊದಲ ಏಳು ತಿಂಗಳಲ್ಲಿ ಇಂತಹ 80ಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗಿವೆ. ಜನವರಿ 1ರಿಂದ ಜುಲೈ 31ರ ನಡುವಿನ ಅವಧಿಯಲ್ಲಿ ಭದ್ರತಾ ಪಡೆಗಳು 90 ಉಗ್ರರನ್ನು ಹತ್ಯೆಗೈದಿವೆ. ಈ ಪೈಕಿ ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆಗಳಾದ ಲಷ್ಕರ್-ಇ-ತಯಬಾ (ಎಲ್‌ಇಟಿ) ಮತ್ತು ಜೈಷ್ ಎ ಮೊಹಮ್ಮದ್ (ಜೆಇಎಂ) ಉಗ್ರ ಸಂಘಟನೆಗಳಿಗೆ ಸೇರಿದವರೇ ಹೆಚ್ಚು.

ಉನ್ನತ ಕಮಾಂಡರ್‌ಗಳನ್ನು ಕಳೆದುಕೊಂಡಿದ್ದರೂ, ಈ ಎರಡು ಭಯೋತ್ಪಾದಕ ಸಂಘಟನೆಗಳು ಕಣಿವೆಯಾದ್ಯಂತ ಭದ್ರತಾ ಪಡೆಗಳು ಮತ್ತು ನಾಗರಿಕರ ಮೇಲೆ ದಾಳಿ ನಡೆಸಲು ಶಕ್ತವಾಗಿವೆ. ಸ್ಥಳೀಯ ಹಿಜ್ಬುಲ್ ಮುಜಾಹಿದೀನ್ ಸಂಘಟನೆ ಈಗ ಮೂರನೇ ಸ್ಥಾನಕ್ಕೆ ಇಳಿದಿದೆ ಎಂದು ಮೂಲಗಳು ತಿಳಿಸಿವೆ.

370ನೇ ವಿಧಿಯ ಅಡಿಯಲ್ಲಿ ನೀಡಲಾಗಿದ್ದ ವಿಶೇಷ ಸ್ಥಾನ ರದ್ದುಗೊಳಿಸಿದ ನಂತರ ಕಾಶ್ಮೀರದಲ್ಲಿ ಎಲ್‌ಇಟಿ ಮತ್ತು ಜೆಇಎಂ ಎರಡು ಪ್ರಮುಖ ಭಯೋತ್ಪಾದಕ ಸಂಘಟನೆಗಳಾಗಿ ಗುರುತಿಸಿಕೊಂಡಿವೆ. ಪಾಕಿಸ್ತಾನವು ಕಾಶ್ಮೀರದ ಭಯೋತ್ಪಾದನೆಯಲ್ಲಿ ಭಾಗಿಯಾಗಿಲ್ಲ ಎಂದು ಬಿಂಬಿಸಲು ಈ ಸಂಘಟನೆಗಳು ಉದ್ದೇಶಪೂರ್ವಕವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸ್ಥಳೀಯರನ್ನು ನೇಮಿಸಿಕೊಳ್ಳುತ್ತಿವೆ. ಹೀಗೆ ಮಾಡುವುದರಿಂದ ಪಾಕಿಸ್ತಾನವು ಹಣಕಾಸು ಕಾರ್ಯಪಡೆಯ (ಎಫ್‌ಎಟಿಎಫ್) ಬೂದು ಪಟ್ಟಿಯಿಂದ ಹೊರಬರಲು ನೆರವಾಗುತ್ತದೆ ಎಂದು ಮೂಲಗಳು ತಿಳಿಸಿವೆ.



'ಜಮ್ಮು ಮತ್ತು ಕಾಶ್ಮೀರದಲ್ಲಿ ಒಟ್ಟು 10 ಸ್ಥಳೀಯರು ಮತ್ತು 34 ವಿದೇಶಿ ಭಯೋತ್ಪಾದಕರು ಸೇರಿದಂತೆ ಜೆಇಎಂ ಸಂಘಟನೆಯ 44 ಸದಸ್ಯರಿದ್ದಾರೆ. ಇಬ್ಬರು ವಿದೇಶಿಯರು ಮತ್ತು ಐವರು ಸ್ಥಳೀಯರು ಸೇರಿದಂತೆ ಏಳು ಜೆಇಎಂ ಭಯೋತ್ಪಾದಕರನ್ನು ಕೊಂದಿದ್ದೇವೆ. ಸಂಘಟನೆಯ ಮೊದಲ ಮತ್ತು ಎರಡನೇ ಶ್ರೇಣಿಯ ಉಗ್ರರನ್ನು ಇತ್ತೀಚೆಗೆ ಹತ್ಯೆ ಮಾಡಿದ್ದೇವೆ' ಎಂದು ಕಾಶ್ಮೀರ ಐಜಿಪಿ ವಿಜಯ್ ಕುಮಾರ್ ಹೇಳಿದ್ದಾರೆ.

ಈ ಮೊದಲು, ಜೆಇಎಂ ದಕ್ಷಿಣ ಕಾಶ್ಮೀರದ ಪುಲ್ವಾಮಾ-ಅವಂತಿಪೋರಾ-ಟ್ರಾಲ್ ವಲಯದ ಮೇಲೆ ಹೆಚ್ಚು ಗಮನಹರಿಸಿತ್ತು. ಈಗ ಜೆಇಎಂ ಮತ್ತು ಎಲ್‌ಇಟಿ ಎರಡೂ ಶ್ರೀನಗರದ ಮೇಲೆ ಹೆಚ್ಚು ಗಮನ ಹರಿಸುತ್ತಿದ್ದು, ಸ್ಥಳೀಯರನ್ನು ಹೆಚ್ಚಿನ ಸಂಖ್ಯೆಯಲ್ಲಿ ನೇಮಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ಪೊಲೀಸ್ ದಾಖಲೆಗಳ ಪ್ರಕಾರ, ಈ ವರ್ಷ ನಾಲ್ಕರಿಂದ ಐದು ಸ್ಥಳೀಯ ಯುವಕರನ್ನು ನೇಮಿಸಿಕೊಳ್ಳುವಲ್ಲಿ ಜೆಇಎಂ ಯಶಸ್ವಿಯಾಗಿದೆ.

2017-2019ರ ಅವಧಿಗೆ ಹೋಲಿಸಿದರೆ ಕಳೆದ ಎರಡು ವರ್ಷಗಳಲ್ಲಿ ನಾಗರಿಕರ ಹತ್ಯೆಗಳು ಕಡಿಮೆಯಾಗಿವೆ ಎಂದು ಅಧಿಕೃತ ಅಂಕಿ ಅಂಶಗಳು ತೋರಿಸುತ್ತವೆ. ಈ ಅವಧಿಯಲ್ಲಿ 135 ನಾಗರಿಕರು ಭಯೋತ್ಪಾದನೆ ಸಂಬಂಧಿತ ವಿಧ್ವಂಸಕ ಕೃತ್ಯಗಳಲ್ಲಿ ಜೀವ ಕಳೆದುಕೊಂಡಿದ್ದರು. ಆದರೆ, 2019ರ ಆಗಸ್ಟ್‌ನಿಂದ 2021ರ ಜುಲೈವರೆಗೆ 72 ಹತ್ಯೆಗಳು ವರದಿಯಾಗಿವೆ. ಹಿಮ ಕರಗಿದ ಹೊರತಾಗಿಯೂ, ಈ ವರ್ಷ ಕಾಶ್ಮೀರದ ಗಡಿ ನಿಯಂತ್ರಣ ರೇಖೆಯಲ್ಲಿ ಯಾವುದೇ ಒಳನುಸುಳುವಿಕೆ ಪ್ರಯತ್ನ ವರದಿಯಾಗಿಲ್ಲ. ಕಳೆದ ವರ್ಷವೂ ಒಳನುಸುಳುವಿಕೆ ಪ್ರಯತ್ನಗಳಲ್ಲಿ ಗಮನಾರ್ಹ ಇಳಿಕೆಯಾಗಿತ್ತು.

ಪರಿಣಾಮ ಬೀರುತ್ತಾ ತಾಲಿಬಾನ್?: 'ಕಾಬೂಲ್ ಅನ್ನು ತಾಲಿಬಾನ್ ಸಂಪೂರ್ಣ ಸ್ವಾಧೀನಪಡಿಸಿಕೊಳ್ಳುವ ಸಾಧ್ಯತೆಯ ಬಗ್ಗೆ ಭದ್ರತಾ ಸಂಸ್ಥೆಗಳು ಆತಂಕಗೊಂಡಿವೆ. ಇದು ಕಾಶ್ಮೀರದ ಭದ್ರತಾ ಪರಿಸ್ಥಿತಿಯ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ. ಅಫ್ಗಾನಿಸ್ತಾನದಲ್ಲಿ ಜೆಇಎಂ ಸಂಘಟನೆಯು ತಾಲಿಬಾನ್ ಜೊತೆ ಹೋರಾಡುತ್ತಿದೆ. ಅವರಲ್ಲಿ ಕೆಲವು ಉಗ್ರರು ಮುಂದಿನ ತಿಂಗಳುಗಳಲ್ಲಿ ಕಾಶ್ಮೀರಕ್ಕೆ ನುಸುಳುವ ಸಾಧ್ಯತೆಯಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ವಾರ್ಷಿಕೋತ್ಸವ: ಕಳೆದ ಎರಡು ವರ್ಷಗಳಲ್ಲಿ ಜಮ್ಮು ಮತ್ತು ಕಾಶ್ಮೀರದಲ್ಲಿ ಭಯೋತ್ಪಾದಕ ದಾಳಿ ಪ್ರಕರಣಗಳಲ್ಲಿ ಶೇ 40ರಷ್ಟು ಇಳಿಕೆಯಾಗಿದೆ ಎಂದು ಅಮೆರಿಕದಲ್ಲಿರುವ ಭಾರತೀಯ-ಅಮೆರಿಕನ್ ಸಮುದಾಯ ಹೇಳಿದೆ. ಕಾಶ್ಮೀರದ ವಿಶೇಷಾಧಿಕಾರ ರದ್ದುಗೊಂಡ ಎರಡನೇ ವಾರ್ಷಿಕೋತ್ಸವವನ್ನು ಸಮುದಾಯವು ಆಚರಿಸಿತು.

'ಪತ್ರ ನಕಲಿ'

ಹುರಿಯತ್ ನಾಯಕ ಸೈಯದ್ ಅಲಿ ಗಿಲಾನಿ ಅವರ ಹೆಸರಿನಲ್ಲಿ ಹೊರಡಿಸಲಾಗಿರುವ ಪತ್ರಿಕಾ ಪ್ರಕಟಣೆಯು ನಕಲಿ ಎಂದು ಜಮ್ಮು ಮತ್ತು ಕಾಶ್ಮೀರ ಪೊಲೀಸರು ಬುಧವಾರ ಹೇಳಿದ್ದಾರೆ. ಇದೇ 5 ಮತ್ತು 15ರಂದು ಕಾಶ್ಮೀರದಲ್ಲಿ ಮುಷ್ಕರಕ್ಕೆ ಕರೆ ನೀಡಲಾಗಿದೆ ಎಂಬ ಉಲ್ಲೇಖವು ಈ ಪ್ರಕಟಣೆಯಲ್ಲಿ ಇತ್ತು. ಗಿಲಾನಿ ಅವರ ಕುಟುಂಬದ ಮೂಲಗಳನ್ನು ಉಲ್ಲೇಖಿಸಿ ಪೊಲೀಸ್ ವಕ್ತಾರರು ಈ ಸ್ಪಷ್ಟನೆ ನೀಡಿದ್ದಾರೆ.

ವಿಶೇಷಾಧಿಕಾರ ರದ್ದತಿ ಬಳಿಕ...

2019, ಆ.3: ಭಾರತ–ಪಾಕಿಸ್ತಾನದ ಗಡಿಯಲ್ಲಿ ಭಯೋತ್ಪಾದಕರ ಕೃತ್ಯ ನಡೆಯುವ ಸಾಧ್ಯತೆಯಿದ್ದು, ಪ್ರವಾಸಿಗರು ಹಾಗೂ ವಿದ್ಯಾರ್ಥಿಗಳು ಕಾಶ್ಮೀರವನ್ನು ತೊರೆಯಬೇಕು ಎಂದು ಆದೇಶ; ಕಣಿವೆಗೆ ಗಲಭೆ ನಿಯಂತ್ರಿಸುವ ಬ್ಯಾರಿಕೇಡ್, ವಾಹನಗಳು, 45 ಸಾವಿರ ಸೈನಿಕರ ನಿಯೋಜನೆ

ಆ. 4: ಕಾಶ್ಮೀರದ ಪ್ರಮುಖ ರಾಜಕೀಯ ಪಕ್ಷಗಳ ನಾಯಕರಾದ ಮೆಹಬೂಬಾ ಮುಫ್ತಿ, ಒಮರ್ ಅಬ್ದುಲ್ಲಾ, ಸಜ್ಜದ್ ಲೋನ್ ಮೊದಲಾದವರಿಗೆ ಗೃಹಬಂಧನ; ನಿಷೇಧಾಜ್ಞೆ ಜಾರಿ; ಇಂಟರ್ನೆಟ್ ಹಾಗೂ ಮೊಬೈಲ್ ಸಂಪರ್ಕ ಕಡಿತ

ಆ.5: ಜಮ್ಮು ಮತ್ತು ಕಾಶ್ಮೀರಕ್ಕೆ ವಿಶೇಷ ಸ್ಥಾನಮಾನ ನೀಡುವ 370ನೇ ವಿಧಿಯ ನಿಬಂಧನೆಗಳನ್ನು ತೆಗೆದುಹಾಕುವ ನಿರ್ಣಯ ಸಂಸತ್ತಿನಲ್ಲಿ ಅಂಗೀಕಾರ. ಜಮ್ಮು ಕಾಶ್ಮೀರ ವಿಭಜನೆ. ಕೇಂದ್ರಾಡಳಿತ ಪ್ರದೇಶವಾಗಿ ಪರಿವರ್ತನೆ; ಕಾಶ್ಮೀರ ಸೇರಿ ದೇಶದಾದ್ಯಂತ ಪ್ರತಿಭಟನೆ

ಅ.14: ಕಾಶ್ಮೀರದ ಕೆಲವೆಡೆ ಮೊಬೈಲ್ ಫೋನ್ ಸೇವೆ ಹಂತಹಂತವಾಗಿ ಪುನರಾರಂಭ; ವ್ಯಾಪಾರ ಚಟುವಟಿಕೆ ಶುರು

ಅ. 23: ಪ್ರತಿಪಕ್ಷಗಳ ಬಹಿಷ್ಕಾರದ ನಡುವೆಯೇ ಸ್ಥಳೀಯ ಸಂಸ್ಥೆ ಚುನಾವಣೆ ನಿಗದಿ; ತಮ್ಮ ಪಕ್ಷಗಳ ನಾಯಕರು ಗೃಹಬಂಧನದಲ್ಲಿ ಇರುವಾಗ ಚುನಾವಣೆ ನಡೆಸುವುದು ಕಾನೂನಬಾಹಿರ ಎಂದು ಪ್ರತಿಪಾದಿಸಿದ ರಾಜಕೀಯ ಪಕ್ಷಗಳು

ಅ. 28: ವಿದೇಶಿ ಮಾಧ್ಯಮ ಪ್ರತಿನಿಧಿಗಳ ನಿಯೋಗದಿಂದ ಕಾಶ್ಮೀರ ಭೇಟಿ; ದೇಶದ ರಾಜಕೀಯ ಪಕ್ಷಗಳು ಮತ್ತು ಪತ್ರಕರ್ತರ ಭೇಟಿಗೆ ಅವಕಾಶ ನೀಡದ ಸರ್ಕಾರವು ವಿದೇಶಿ ನಿಯೋಗಕ್ಕೆ ಅವಕಾಶ ನೀಡಿದ್ದು ಏಕೆ ಎಂಬ ಪ್ರಶ್ನೆ

2020, ಜ.10: ಕಾಶ್ಮೀರದಲ್ಲಿ ಅನಿರ್ದಿಷ್ಟ ಅವಧಿಗೆ ಅಂತರ್ಜಾಲ ಸ್ಥಗಿತ ಕಾನೂನುಬಾಹಿರ ಎಂದ ಸುಪ್ರೀಂ ಕೋರ್ಟ್; ಬಂಧಿತ ನಾಲ್ವರು ರಾಜಕೀಯ ನಾಯಕರ ಬಿಡುಗಡೆಗೆ ಆದೇಶ

ಮಾ.13: ಎನ್‌ಸಿ ನಾಯಕ ಫಾರೂಕ್ ಅಬ್ದುಲ್ಲಾ ಬಿಡುಗಡೆ; ವಾರದ ಬಳಿಕ ಅವರ ಮಗ ಒಮರ್ ಅಬ್ದುಲ್ಲಾಗೆ ಗೃಹಬಂಧನದಿಂದ ಮುಕ್ತಿ; ಪ್ರಮುಖ ರಾಜಕೀಯ ಪಕ್ಷಗಳಿಂದ 'ಗುಪ್ಕಾರ್' ಎಂಬ ಮೈತ್ರಿಕೂಟ ರಚನೆ; ಕಾಶ್ಮೀರದ ವಿಶೇಷಾಧಿಕಾರ ಮರುಸ್ಥಾಪನೆಗೆ ಹೋರಾಡುವುದು ಪ್ರಮುಖ ಉದ್ದೇಶ

ಏ. 1: ಕನಿಷ್ಠ 15 ವರ್ಷದಿಂದ ವಾಸಿಸುತ್ತಿರುವ ವ್ಯಕ್ತಿ ಕಾಶ್ಮೀರದ ಕಾಯಂ ನಿವಾಸಿಯಾಗಲು ಅರ್ಹ ಎಂಬುದು ಸೇರಿದಂತೆ ಜಮ್ಮು ಮತ್ತು ಕಾಶ್ಮೀರಕ್ಕೆ ಹೊಸ ನಿಯಮ ಜಾರಿ

2021 ಜೂನ್ 23: ಜಮ್ಮು ಕಾಶ್ಮೀರದಲ್ಲಿ ರಾಜಕೀಯ ಪ್ರಕ್ರಿಯೆ ಚುರುಕುಗೊಳ್ಳುವ ಮುನ್ಸೂಚನೆ; ಕಾಶ್ಮೀರದ ರಾಜಕೀಯ ಪಕ್ಷಗಳ ಸಭೆ ಕರೆದ ಪ್ರಧಾನಿ; ಸರ್ವಪಕ್ಷ ಸಭೆಯಲ್ಲಿ ಭಾಗವಹಿಸಲು ಗುಪ್ಕಾರ್ ಕೂಟದ ಪಕ್ಷಗಳ ನಿರ್ಧಾರ. ಸರ್ಕಾರದ ಎದುರು ತಮ್ಮ ಬೇಡಿಕೆ ಮಂಡಿಸಲು ಸಿದ್ಧತೆ

ಜೂನ್ 24: ವಿಶೇಷಾಧಿಕಾರ ರದ್ದತಿ ಬಳಿಕ ಮೊದಲ ಬಾರಿಗೆ ಜಮ್ಮು ಕಾಶ್ಮೀರದ ಪ್ರಮುಖ 14 ರಾಜಕೀಯ ಪಕ್ಷಗಳ ಜೊತೆ ಪ್ರಧಾನಿ ನರೇಂದ್ರ ಮೋದಿ ಮಾತುಕತೆ. ವಿಶೇಷಾಧಿಕಾರ ಮರುಸ್ಥಾಪನೆಗೆ ಬಹುತೇಕ ಪಕ್ಷಗಳ ಒತ್ತಾಯ; ವಿಶೇಷ ಸ್ಥಾನಮಾನ ನೀಡಿದ ಬಳಿಕವೇ ವಿಧಾನಸಭೆ ಚುನಾವಣೆ ನಡೆಸುವಂತೆ ನ್ಯಾಷನಲ್ ಕಾನ್ಫರೆನ್ಸ್ ಸೇರಿದಂತೆ ವಿವಿಧ ಪಕ್ಷಗಳಿಂದ ಕೇಂದ್ರ ಸರ್ಕಾರಕ್ಕೆ ಒತ್ತಾಯ

ಜುಲೈ 6: ಕಾಶ್ಮೀರ ಕ್ಷೇತ್ರ ಮರುವಿಂಗಡಣಾ ಆಯೋಗದ ಎದುರು ಹಾಜರಾಗದಿರಲು ಪಿಡಿಪಿ ನಿರ್ಧಾರ; ಪಿಡಿಪಿ ಹೊರತುಪಡಿಸಿ ಉಳಿದ ರಾಜಕೀಯ ಪಕ್ಷಗಳಿಂದ ಆಯೋಗದ ಭೇಟಿಗೆ ತೀರ್ಮಾನ; 2011ರ ಜನಗಣತಿ ಪ್ರಕಾರವೇ ಕ್ಷೇತ್ರ ಮರುವಿಂಗಡಣೆ ಎಂದ ಆಯೋಗ

ಹೊಸ ಕಾಶ್ಮೀರ ಎಂಬುದು ಹಾಸ್ಯಾಸ್ಪದ: ಗುಪ್ಕಾರ್

ಬಿಜೆಪಿಯ ಹೊಸ ಕಾಶ್ಮೀರ ಘೋಷಣೆಯು ಈಗ ಜನರಿಗೆ ಹಾಸ್ಯಾಸ್ಪದವಾಗಿ ಕಾಣುತ್ತಿದೆ ಎಂದು ಜಮ್ಮು ಕಾಶ್ಮೀರದ ರಾಜಕೀಯ ಪಕ್ಷಗಳ ಒಕ್ಕೂಟ 'ಗುಪ್ಕಾರ್' ಅಭಿಪ್ರಾಯಪಟ್ಟಿದೆ. ಕೇಂದ್ರ ಸರ್ಕಾರವು 2019ರ ಆಗಸ್ಟ್ 5ರಂದು ತೆಗೆದುಕೊಂಡ ಜಮ್ಮು ಮತ್ತು ಕಾಶ್ಮೀರವನ್ನು ನಾಶ ಮಾಡುವ ನಿರ್ಧಾರದಿಂದ ಏನು ಸಾಧಿಸಲಾಯಿತು ಎಂದು ಜನರು ಪ್ರಶ್ನಿಸಲು ಪ್ರಾರಂಭಿಸಿದ್ದಾರೆ ಎಂದಿದೆ.

ಜಮ್ಮು ಮತ್ತು ಕಾಶ್ಮೀರದ ಜನರನ್ನು ಒಗ್ಗಟ್ಟಾಗಿ ನಿಲ್ಲುವಂತೆ ಮನವಿ ಮಾಡಿರುವ ಸಂಘಟನೆ, 'ನಾವು ಶರಣಾಗುವುದಿಲ್ಲ. ಆದರೆ ನಮ್ಮ ಹಕ್ಕುಗಳ ರಕ್ಷಣೆಗಾಗಿ ಶಾಂತಿಯುತ ಮತ್ತು ಕಾನೂನಾತ್ಮಕ ಹೋರಾಟ ಮುಂದುವರಿಸುತ್ತೇವೆ' ಎಂದಿದೆ.

'370ನೇ ವಿಧಿ ರದ್ದತಿಯು ಭಾರತದ ಸಂವಿಧಾನದ ಮೇಲಿನ ದಾಳಿ. ಈ ಕ್ರಮವು ಭಾರತದ ಒಕ್ಕೂಟದೊಂದಿಗಿನ ನಮ್ಮ ಸಂಬಂಧವನ್ನು ಹಾಳುಮಾಡಿದೆ. ಕಾಶ್ಮೀರದ ಸಂವಿಧಾನವನ್ನು ಕೆಡಹುವ ಮೂಲಕ, ಕೇಂದ್ರ ಸರ್ಕಾರವು ಸಂವಿಧಾನದ ಎಲ್ಲ ಮಿತಿಗಳನ್ನು ಮೀರಿದೆ' ಎಂದು ಗುಪ್ಕಾರ್ ವಕ್ತಾರ ಮತ್ತು ಸಿಪಿಎಂ ಹಿರಿಯ ನಾಯಕ ಎಂ.ವೈ.ತಾರಿಗಾಮಿ ಆರೋಪಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರ ನಾಯಕರ ಜತೆ ಪ್ರಧಾನಿ ಇತ್ತೀಚೆಗೆ ಮಾತುಕತೆ ನಡೆಸಿದ್ದನ್ನು ಹೊರತುಪಡಿಸಿದರೆ, ಕಣಿವೆ ಜನರ ಚೂರುಚೂರಾದ ಆತ್ಮ ವಿಶ್ವಾಸವನ್ನು ಪುನರ್ ನಿರ್ಮಿಸಲು ಅಗತ್ಯವಿರುವ ಯಾವುದೇ ಕ್ರಮವನ್ನು ತೆಗೆದುಕೊಳ್ಳಲಾಗಿಲ್ಲ ಎಂದು ತಾರಿಗಾಮಿ ದೂರಿದರು.

ಬಿಜೆಪಿಗೆ ₹785 ಕೋಟಿ ದೇಣಿಗೆ

ನವದೆಹಲಿ (ಪಿಟಿಐ): ಕಾಂಗ್ರೆಸ್, ಟಿಎಂಸಿ ಮತ್ತು ಎನ್‌ಸಿಪಿ ಸೇರಿ ಐದು ಪ್ರಮುಖ ಪಕ್ಷಗಳಿಗೆ ಸಂದಾಯವಾಗಿರುವ ದೇಣಿಗೆಗಿಂತ ಮೂರು ಪಟ್ಟು ಹೆಚ್ಚು ದೇಣಿಗೆ ಬಿಜೆಪಿಗೆ ಸಿಕ್ಕಿದೆ. ಬಿಜೆಪಿಗೆ ಒಟ್ಟು ₹785.77 ಕೋಟಿ ಸಂದಾಯವಾಗಿದೆ ಎಂದು ಸರ್ಕಾರೇತರ ಸಂಸ್ಥೆ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿಯು ಹೇಳಿದೆ.

ಚುನಾವಣಾ ಆಯೋಗಕ್ಕೆ ರಾಷ್ಟ್ರೀಯ ಪಕ್ಷಗಳು ಸಲ್ಲಿಸಿರುವ 2019–21ರ ಸಾಲಿನ ದೇಣಿಗೆ ವರದಿಯನ್ನು ಆಧರಿಸಿ, ₹20,000 ಮೇಲ್ಪಟ್ಟು ಸಲ್ಲಿಕೆಯಾಗಿರುವ ದೇಣಿಗೆಗಳನ್ನು ಗಮನದಲ್ಲಿರಿಸಿಕೊಂಡು ಈ ವರದಿಯನ್ನು ಎಡಿಆರ್ ತಯಾರಿಸಿದೆ. ಬಿಜೆಪಿಗೆ ₹ 785.77 ಕೋಟಿ ದೇಣಿಗೆ ಸಿಕ್ಕಿದ್ದರೆ, ಕಾಂಗ್ರೆಸ್, ಎನ್‌ಸಿಪಿ, ಸಿಪಿಐ, ಸಿಪಿಎಂ ಮತ್ತು ಟಿಎಂಸಿಗೆ ಒಟ್ಟಾಗಿ ₹228 ಕೋಟಿ ಸಲ್ಲಿಕೆ ಆಗಿದೆ.

ಬಿಜೆಪಿಯು 570 ದಾನಿಗಳು ನೀಡಿರುವ ಒಟ್ಟು ₹149.8 ಕೋಟಿ ಮೊತ್ತದ ದೇಣಿಗೆಯನ್ನು ಘೋಷಿಸಿದೆ. ತೃಣಮೂಲ ಕಾಂಗ್ರೆಸ್ 52 ದಾನಿಗಳಿಂದ ₹7.1 ಕೋಟಿ, ಕಾಂಗ್ರೆಸ್ 25 ದಾನಿಗಳಿಂದ ₹2.6 ಕೋಟಿ ಮತ್ತು ಎನ್‌ಸಿಪಿ ಇಬ್ಬರು ದಾನಿಗಳಿಂದ ₹3 ಕೋಟಿ ದೇಣಿಗೆ ಪಡೆದಿರುವುದಾಗಿ ಘೋಷಿಸಿವೆ. ₹20 ಸಾವಿರಕ್ಕಿಂತ ಕಡಿಮೆ ದೇಣಿಗೆಯ ವಿವರಗಳನ್ನು ಬಹಿರಂಗಪಡಿಸಬೇಕಿಲ್ಲ.

ಮೇಯರ್ ಮತ್ತು ಉಪ ಮೇಯರ್ ಇಬ್ಬರೂ ಬಿಜೆಪಿಯವರೇ ಆಗಿರುವ ಮಹಾರಾಷ್ಟ್ರದ ಅಮರಾವತಿ ಮಹಾನಗರ ಪಾಲಿಕೆಯಿಂದಲೂ ₹4.80 ಲಕ್ಷ ದೇಣಿಗೆಯನ್ನು ಬಿಜೆಪಿ ಪಡೆದಿದೆ. ಈ ದೇಣಿಗೆಗೆ ಸಂಬಂಧಪಟ್ಟಂತೆ ವಿಳಾಸ, ಬ್ಯಾಂಕ್ ಹೆಸರು, ಪ್ಯಾನ್ ಮಾಹಿತಿ ಸೇರಿ ಇತರ ಮಾಹಿತಿಗಳನ್ನು ಪಕ್ಷ ಒದಗಿಸಿಲ್ಲ. ಇಂಟರ್‌ನೆಟ್‌ನಲ್ಲಿ ಹುಡುಕಿದಾಗ ಈ ದೇಣಿಗೆಯು ಅಮರಾವತಿ ನಗರಪಾಲಿಕೆಯಿಂದ ಬಂದಿದೆ ಎಂದು ತಿಳಿದುಬಂದಿತು. ಒಂದು ರಾಜಕೀಯ ಪಕ್ಷ ಆಡಳಿತ ನಡೆಸುತ್ತಿರುವ ಸ್ಥಳೀಯ ಸಂಸ್ಥೆಯೊಂದು ಪಕ್ಷಕ್ಕೆ ದೇಣಿಗೆ ನೀಡಿರುವುದು ಕಾನೂನು ಪ್ರಕಾರವಾಗಿ ಎಷ್ಟು ಸರಿ ಎಂಬ ಪ್ರಶ್ನೆ ಎದ್ದಿವೆ ಎಂದು ಎಡಿಆರ್ ಹೇಳಿದೆ.



ರಾಮ ಮಂದಿರದ ಮಾದರಿ

ಚುನಾವಣೆಗೆ ಮೊದಲೇ ರಾಮ ಮಂದಿರಕ್ಕೆ ಪ್ರವೇಶ

ಲಖನೌ: ಅಯೋಧ್ಯೆಯಲ್ಲಿ ನಿರ್ಮಾಣ ಆಗುತ್ತಿರುವ ರಾಮ ಮಂದಿರಕ್ಕೆ 2023ರ ಡಿಸೆಂಬರ್‌ನಲ್ಲಿ ಭಕ್ತರ ಪ್ರವೇಶಕ್ಕೆ ಅವಕಾಶ ದೊರೆಯುವ ಸಾಧ್ಯತೆ ಇದೆ. ಅದಾಗಿ ಕೆಲವೇ ತಿಂಗಳಲ್ಲಿ ಅಂದರೆ, 2024ರ ಮೇಯ ಒಳಗೆ ಲೋಕಸಭೆಗೆ ಚುನಾವಣೆಯ ನಡೆಯಲಿದೆ.

2023ರ ಡಿಸೆಂಬರ್‌ನಲ್ಲಿ ದೇವಾಲಯದ ಗರ್ಭಗುಡಿ ನಿರ್ಮಾಣ ಪೂರ್ಣಗೊಳ್ಳಲಿದೆ. ಬಳಿಕ, ಭಕ್ತರಿಗೆ ಪ್ರವೇಶ ಕಲ್ಪಿಸಲಾಗುವುದು ಎಂದು ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್ ಹೇಳಿದೆ. ರಾಮ ಮಂದಿರ ನಿರ್ಮಾಣದ ಮೇಲ್ವಿಚಾರಣೆಯನ್ನು ಈ ಟ್ರಸ್ಟ್ ನೋಡಿಕೊಳ್ಳುತ್ತಿದೆ.

2023ರಲ್ಲಿ ಗರ್ಭಗುಡಿ ನಿರ್ಮಾಣವಾದರೂ ದೇವಾಲಯದ ಕಾಮಗಾರಿಯು 2025ರ ಕೊನೆಯ ಹೊತ್ತಿಗಷ್ಟೇ ಪೂರ್ಣಗೊಳ್ಳಬಹುದು. ಟ್ರಸ್ಟ್‌ನ ಸಭೆಯು ಕೆಲದಿನಗಳ ಹಿಂದೆ ನಡೆದಿದೆ. ಈ ಸಭೆಯಲ್ಲಿ 2023ರ ಗಡುವು ನಿಗದಿ ಮಾಡಲಾಗಿದೆ ಎಂದು ಟ್ರಸ್ಟ್‌ನ ಪದಾಧಿಕಾರಿಯೊಬ್ಬರು ಹೇಳಿದ್ದಾರೆ.

2024ರ ಲೋಕಸಭಾ ಚುನಾವಣೆಗೆ ಮುನ್ನವೇ ರಾಮ ಮಂದಿರ ನಿರ್ಮಾಣ ಆಗಬೇಕು ಎಂಬುದು ವಿಶ್ವ ಹಿಂದೂ ಪರಿಷತ್ ಮತ್ತು ಬಿಜೆಪಿಯ ಇಚ್ಛೆಯಾಗಿದೆ ಎಂದು ಮೂಲಗಳು ತಿಳಿಸಿವೆ. ಪ್ರಧಾನಿ ನರೇಂದ್ರ ಮೋದಿ ಅವರು ರಾಮ ಮಂದಿರ ನಿರ್ಮಾಣಕ್ಕೆ ಕಳೆದ ಆಗಸ್ಟ್ 5ರಂದು ಶಂಕುಸ್ಥಾಪನೆ ನೆರವೇರಿಸಿದ್ದರು.

2024ರ ಲೋಕಸಭಾ ಚುನಾವಣೆಯಲ್ಲಿ ಮೂರನೇ ಅವಧಿಗೆ ಪುನರಾಯ್ಕೆಗೊಳ್ಳಲು ಮೋದಿ ನೇತೃತ್ವದ ಸರ್ಕಾರವು ಬಯಸುತ್ತಿದೆ. ಹಾಗಾಗಿ, ಚುನಾವಣೆಗೆ ಮುನ್ನವೇ ದೇವಾಲಯಕ್ಕೆ ಭಕ್ತರಿಗೆ ಪ್ರವೇಶ ನೀಡುವ ಯೋಜನೆಯು ಮಹತ್ವ ಪಡೆದುಕೊಂಡಿದೆ.


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

'ದೆಹಲಿಯ ಕೀರ್ತಿನಗರ ಕೈಗಾರಿಕಾ ಪ್ರದೇಶದಲ್ಲಿ 10 ಹೊಸ ಕಸದಬುಟ್ಟಿಗಳನ್ನು ಅಳವಡಿಸಿರುವ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ಅಭಿನಂದನೆಗಳು' ಎಂಬ ಜಾಹೀರಾತು ಫಲಕ ಇರುವ ಚಿತ್ರವು ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. 'ಕಸದ ಬುಟ್ಟಿ ಅಳವಡಿಸಿದ್ದಕ್ಕೂ ಎಎಪಿ ಸರ್ಕಾರ ಜಾಹೀರಾತು ನೀಡುತ್ತಿದೆ. ಕಸದಬುಟ್ಟಿಗಿಂತ ಜಾಹೀರಾತಿಗೆ ಹೆಚ್ಚು ಖರ್ಚಾಗುತ್ತಿದೆ' ಎಂದು ಬಿಜೆಪಿಯ ಹಲವು ಕಾರ್ಯಕರ್ತರು ಸಾಮಾಜಿಕ ಜಾಲತಾಣಗಳಲ್ಲಿ ಟೀಕಿಸಿದ್ದಾರೆ. ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರ ಮಾಧ್ಯಮ ಸಲಹೆಗಾರ ಶಲಭಾ ಮಣಿ ತ್ರಿಪಾಠಿ, ಬಿಜೆಪಿ ಯುವ ಮೋರ್ಚಾ ರಾಷ್ಟ್ರೀಯ ಕಾರ್ಯದರ್ಶಿ ತಜಿಂದರ್ ಪಾಲ್ ಸಿಂಗ್ ಬಗ್ಗಾ ಮತ್ತು ದೆಹಲಿ ಬಿಜೆಪಿ ಐಟಿ ಘಟಕದ ಮುಖ್ಯಸ್ಥ ನವೀನ್ ಕುಮಾರ್ ಜಿಂದಾಲ್ ಅವರು ಈ ಚಿತ್ರವನ್ನು ಟ್ವೀಟ್ ಮಾಡಿದ್ದಾರೆ.

ಇದು ಸುಳ್ಳು ಸುದ್ದಿ ಎಂದು ದಿ ಲಾಜಿಕಲ್ ಇಂಡಿಯನ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ. 'ಕೋವಿಡ್‌ನಿಂದ ಮೃತಪಟ್ಟವರ ಕುಟುಂಬಗಳಿಗೆ ಆರ್ಥಿಕ ನೆರವು ನೀಡಿದ್ದರ ಬಗ್ಗೆ ದೆಹಲಿ ಮೆಟ್ರೊ ನಿಲ್ದಾಣಗಳಲ್ಲಿ ದೆಹಲಿ ಸರ್ಕಾರವು ಜಾಹೀರಾತು ಫಲಕದ ಮೂಲಕ ಜಾಹೀರಾತು ನೀಡಿದೆ. ಆ ಜಾಹೀರಾತಿನಲ್ಲಿರುವ ಅರವಿಂದ ಕೇಜ್ರಿವಾಲ್ ಅವರ ಚಿತ್ರವನ್ನು ಬಳಸಿಕೊಂಡು ಕಸದಬುಟ್ಟಿ ಅಳವಡಿಸಿದ್ದಕ್ಕೆ ಅಭಿನಂದನೆ ಸಲ್ಲಿಸುತ್ತಿರುವ ರೀತಿಯಲ್ಲಿ ಪಠ್ಯವನ್ನು ಬದಲಿಸಲಾಗಿದೆ. ಚಿತ್ರವನ್ನು ಸಂಪೂರ್ಣವಾಗಿ ತಿರುಚಿ, ಸುಳ್ಳು ಸುದ್ದಿ ಪ್ರಕಟಿಸಲಾಗಿದೆ. ಬಿಜೆಪಿಯ ತಜಿಂದರ್ ಪಾಲ್ ಸಿಂಗ್ ಬಗ್ಗಾ ಅವರು ಫೇಸ್‌ಬುಕ್‌ನಲ್ಲಿ ಪೋಸ್ಟ್ ಮಾಡಿದ್ದ ಈ ಸುಳ್ಳು ಸುದ್ದಿಯನ್ನು ಫೇಸ್‌ಬುಕ್ ತೆಗೆದುಹಾಕಿದೆ' ಎಂದು ದಿ ಲಾಜಿಕಲ್ ಇಂಡಿಯನ್ ವಿವರಿಸಿದೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ



ಬೊಮ್ಮನ ಆಕರ್ಷಣೆ

ಸುಂದರತೆಯೆನುವುದೇಂ? ಜನಕೆ ಮೈಮರೆಯಿಪಾ -|
ನಂದದೊಳಮರುಮವೇಂ ? ವಿಶ್ವ ಚೇತನದಾ ||
ಸ್ಪಂದನವೆ ಸೌಂದರ್ಯಮದುವೆ ಜೀವನ ಮೂಲ |
ಬಂಧುರತೆ ಬೊಮ್ಮನದು – ಮಂಕುತಿಮ್ಮ || 446 ||

ಪದ-ಅರ್ಥ: ಸುಂದರತೆಯೆನುವುದೇಂ = ಸುಂದರತೆ + ಎನುವುದು + ಏಂ(ಏನು), ಮೈಮರೆಯಿಪಾನಂದದೊಳಮರುಮವೇಂ = ಮೈ ಮರೆಯಿಪ (ಮೈ ಮರೆಸುವ) + ಆನಂದದ + ಒಳ-ಮರುಮವೇಂ(ಒಳ ಮರ್ಮವೇನು), ವಿಶ್ವಚೇತನ-ದಾಸ್ಪಂದನವೆ = ವಿಶ್ವಚೇತನದ + ಆಸ್ಪಂದನವೆ (ಮಿಡಿಯುವಿಕೆ), ಬಂಧುರತೆ = ಆಕರ್ಷಣೆ.

ವಾಚ್ಯಾರ್ಥ: ಸುಂದರತೆ ಎಂದರೇನು? ಜನರು ಮೈಮರೆಯುವಂತೆ ಮಾಡುವ ಆನಂದದ ಒಳಗುಟ್ಟು ಏನು? ವಿಶ್ವ ಚೈತನ್ಯದ ಮಿಡಿತವೇ ಸೌಂದರ್ಯ, ಅದೇ ಜೀವನದ ಮೂಲ. ಅದರ ಅಕರ್ಷಣೆ ಬ್ರಹ್ಮನದು.

ವಿವರಣೆ: ಸೌಂದರ್ಯ ಎಂದರೇನು? ಅದು ಇರುವುದೆಲ್ಲಿ? ಅದು ಭೌತಿಕವೇ ಅಥವಾ ಕೇವಲ ಕಲ್ಪನೆಯೇ? ಒಬ್ಬರಿಗೆ ಅತ್ಯಂತ ಸುಂದರವೆಂದು ಎನ್ನಿಸಿದ್ದು ಮತ್ತೊಬ್ಬರಿಗೆ ಅವಲಕ್ಷಣ ಎನ್ನಿಸೀತು. ನನ್ನ ಪರಿಚಯದ ಹುಡುಗನೊಬ್ಬ ಎರಡು ವರ್ಷ ಹುಡುಗಿಯೊಬ್ಬಳನ್ನು ಪ್ರೀತಿಸಿ ಮದುವೆಯಾದ. ಮದುವೆಗೆ ಹೋದವರಲ್ಲಿ ಬಹುತೇಕರು, 'ಅಯ್ಯೋ, ಆ ಹುಡುಗಿಯಲ್ಲಿ ಏನು ಕಂಡು ಮದುವೆಯಾದನೋ? ಹುಡುಗ ಅಷ್ಟು ಸುರದ್ರೂಪಿಯಾಗಿದ್ದಾನೆ. ಆದರೆ ಆಕೆಯನ್ನು ಯಾವುದೋ ಕಾಡಿನಿಂದ ಹಿಡಿದು ತಂದಂತಿದೆ' ಎಂದರು. ಆ ಹುಡುಗನಿಗೆ ಆಕೆ ರಂಭೆಯಂತೆ ಕಂಡಿರಬೇಕಲ್ಲವೆ? ಇಲ್ಲದಿದ್ದರೆ ಆಕೆಯನ್ನು ಯಾಕೆ ಪ್ರೀತಿಸಿ ಮದುವೆಯಾಗುತ್ತಿದ್ದ? ಅದಕ್ಕೇ ಆಂಗ್ಲ ಕವಿಯೊಬ್ಬ ಹೇಳುತ್ತಾನೆ, 'ಸೌಂದರ್ಯ, ನೋಡುವವರ ಕಣ್ಣಲ್ಲಿದೆ'.

ತಾವು ನಮ್ಮ ದೇಶದಲ್ಲಿ ಯಾವುದೇ ಬೆಟ್ಟದ ಅಥವಾ ಪರ್ವತದ ಶಿಖರ ಪ್ರದೇಶಕ್ಕೆ ಹೋದರೆ ಅಲ್ಲೊಂದು ದೇವಸ್ಥಾನ ಕಾಣುತ್ತದೆ. ಹೊರಗೆ ನಿಂತು ನೋಡಿದರೆ ಪ್ರಕೃತಿಯ ಉಕ್ಕುವ ಸೌಂದರ್ಯ ಹೃದಯ ತಟ್ಟುತ್ತದೆ. ಎಲ್ಲಿ ನೋಡಿದರೂ ಹಸಿರು, ಭೂಮಿಯ ಏರಿಳಿತ. ಅದು ಮೂಕನಿಸರ್ಗದ ವಾಗ್ವೈಭವ. ಅಲ್ಲಿ ಕಿವಿಗೆ ನಿರುದ್ಯೋಗ ಆದರೆ ಕಣ್ಣಿಗೆ ಪ್ರಿಯೋದ್ಯೋಗ. ಈ ದೃಷ್ಟಿ ಅದ್ಭುತಸೌಂದರ್ಯರಸದ ಆಕರಸ್ಥಾನ.

ಆ ಗುಡಿಯ ಒಳಗೆ ಕಾಲಿಟ್ಟರೆ, ಗೋಪುರದ, ನವರಂಗದ, ಶಿಲ್ಪಗಳ, ಮೂಲವಿಗ್ರಹದ ಸೌಂದರ್ಯ, ಮಂತ್ರಘೋಷ, ಹೂವು ಹಣ್ಣುಗಳ ರಾಶಿ, ಭಕ್ತಜನರ ಭಕ್ತಿಯ ಉದ್ಗಾರಗಳು ಇವೆಲ್ಲ ಮನಸ್ಸನ್ನು ಬೆರಗುಗೊಳಿಸುವ ಸೌಂದರ್ಯ. ಇದರ ಮೂಲ ಮನುಷ್ಯನ ಭಕ್ತಿಯ ಸೆಲೆ. ಈ ಎರಡೂ ತರಹದ ಸೌಂದರ್ಯದ ಸಂಗಮದಿಂದ ಹುಟ್ಟುವುದು ಮೂರನೇ ಸೌಂದರ್ಯ. ಅದು ಜೀವ-ದೈವದ ಸಮಾಗಮದ ಸೌಂದರ್ಯ. ಮನುಷ್ಯ ಜೀವ, ತನಗಿಂತ ಹಿರಿದಾದದ್ದು, ಉನ್ನತವಾದದ್ದು ಮತ್ತೊಂದಿದೆ ಎಂದು ಕೈ ಎತ್ತಿ ಪಾರ್ಥಿವ ಪ್ರಪಂಚದಿಂದ ಮೇಲೆ ನೆಗೆಯುತ್ತದೆ. ಈ ಶ್ರದ್ಧೆಯಿಂದ ಪ್ರೇರಿತವಾದ ಜೀವದ ಪ್ರಯತ್ನವೇ ಸೌಂದರ್ಯದ ಪೂರ್ಣಾನುಭವ.

ಸೌಂದರ್ಯದ ಮುಖ್ಯ ಕಾರ್ಯ ಜೀವೋತ್ಕರ್ಷ, ಅಹಂಭಾವವಿಲಯನ. ಆಗ ನೆಲೆನಿಲ್ಲುವುದು ವಿಶ್ವಚೇತನದ ಆಸ್ಪಂದನ. ಇದೆಲ್ಲಕ್ಕೂ ಮೂಲವಾಗಿರುವುದು ಭಗವತ್‌ಶಕ್ತಿಯ ಆಕರ್ಷಣೆ. ಅದಕ್ಕೇ ಸುಂದರವಾದದ್ದನ್ನು ಕಂಡಾಗ ಮೈಮರೆಯುತ್ತದೆ. ಮೈಮರೆಯದೆ, ದೇಹವನ್ನು ಮೀರಿದ ದಿವ್ಯಾನುಭವ ಕಷ್ಟಸಾಧ್ಯವಾದದ್ದು. ಇದೇ ಪರಮಾನಂದದ ಮರ್ಮ.

ದಿನ ಭವಿಷ್ಯ

ಗುರುವಾರ ಆಗಸ್ಟ್ 5, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಗ್ರೀಷ್ಮ ಋತು ಆಷಾಢ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಆಶ್ಲೇಷಾ ದ್ವಾದಶಿ ಗಂ. 23-19 (ಸಾ. 6-34) ಗುರುವಾರ ನಿತ್ಯ ನಕ್ಷತ್ರ ಆದ್ರೆ ಗಂ. 60-00 (ದಿನಪೂರ್ತಿ) ಹರ್ಷ ನಾಮ ಯೋಗ ಗಂ. 49-6 ತೈತಲ ಕರಣ ಗಂ. 23-19 ವಿಷ ಗಂ. 17-23 ಅಮೃತ ಗಂ. 43-30 : ರಾಹುಕಾಲ ಮ ಗಂ. 1-30 ರಿಂದ 3-00 ಗುಳಿಕ ಕಾಲ ಬೆ ಗಂ 9-00 ರಿಂದ 10-30 ಯಮಗಂಡ ಕಾಲ ಬೆ ಗಂ 6-00 ರಿಂದ 7-30 : ಸೂರ್ಯೋದಯ: 6-09 ಸೂರ್ಯಾಸ್ತ: 6-42 ಅದೃಷ್ಟ ಸಂಖ್ಯೆ 6, 7

ಮೇಷ: ಸಣ್ಣ ಕೈಗಾರಿಕೋದ್ಯಮಿಗಳಿಗೆ ಸರ್ಕಾರದಿಂದ ಸಹಾಯಧನ ದೊರಕಲಿದೆ. ಹೊಸ ಕೆಲಸಗಳಿಗೆ ಮಾಡುವ ಪ್ರಯತ್ನಕ್ಕೆ ಸ್ನೇಹಿತರಿಂದ ಸಹಾಯ ದೊರೆಯಲಿದೆ. ಯಂತ್ರೋಪಕರಣಗಳ ವ್ಯವಹಾರದಿಂದಾಗಿ ಉತ್ತಮ ಲಾಭ.

ವೃಷಭ: ಜಾಹೀರಾತುಗಳ ಮೂಲಕ ವಹಿವಾಟನ್ನು ಹೆಚ್ಚಿಸಿಕೊಳ್ಳಲಿದ್ದೀರಿ. ವಿದೇಶಿ ಉತ್ಪನ್ನಗಳ ಮಾರಾಟದಿಂದಾಗಿ ಹೇರಳ ಲಾಭ. ತಾಯಿಯ ಆರೋಗ್ಯಕ್ಕಾಗಿ ನುರಿತ ವೈದ್ಯರಲ್ಲಿ ಚಿಕಿತ್ಸೆ ಕೊಡಿಸುವುದು ಉತ್ತಮ.

ಮಿಥುನ: ಕೃಷಿಕರಿಗೆ ಬೆಳೆದ ಫಸಲಿಗೆ ಉತ್ತಮ ಬೆಲೆ ದೊರಕುವುದರಿಂದಾಗಿ ಕೃಷಿ ಕೆಲಸಗಳಲ್ಲಿ ಉತ್ಸಾಹ. ತೈಲ ಉತ್ಪನ್ನಗಳ ಮಾರಾಟಗಾರರಿಗೆ ಉತ್ತಮ ಲಾಭ. ಹೊಸ ವ್ಯಕ್ತಿಗಳ ಆಗಮನದಿಂದಾಗಿ ಮನೆಯಲ್ಲಿ ಸಂತಸ.

ಕರ್ಕಾಟಕ: ಉದ್ಯಮವನ್ನು ವಿಸ್ತರಿಸುವ ಸಲುವಾಗಿ ಸಿದ್ಧತೆ ನಡೆಸಲು ಸಕಾಲ. ನಿಮ್ಮ ಕಾರ್ಯಕ್ಷೇತ್ರವನ್ನು ವಿದೇಶಗಳಲ್ಲೂ ವಿಸ್ತರಿಸಲು ಅನುಮತಿಯನ್ನು ಪಡೆಯಲಿದ್ದೀರಿ. ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಮಕ್ಕಳ ವಿಶೇಷ ಸಾಧನೆ ಸಾಧ್ಯತೆ.

ಸಿಂಹ: ಪ್ರಭಾವಿ ವ್ಯಕ್ತಿಗಳೊಂದಿಗಿನ ಒಡನಾಟದಿಂದಾಗಿ ಹೆಚ್ಚಿನ ಸ್ಥಾನ ಪಡೆದುಕೊಳ್ಳಲಿದ್ದೀರಿ. ಸರ್ಕಾರದ ಉನ್ನತ ಹುದ್ದೆಗಳಲ್ಲಿ ಕೆಲಸಗಳನ್ನು ನಿರ್ವಹಿಸುವ ಅವಕಾಶ. ಶುಭಕಾರ್ಯ ನಡೆಸುವ ಬಗ್ಗೆ ಚಿಂತನೆ.

ಕನ್ಯಾ: ರಾಸಾಯನಿಕ ವಸ್ತುಗಳ ರಫ್ತು ವ್ಯಾಪಾರಗಳಿಂದ ಅಧಿಕ ವರಮಾನ. ಹೊಸ ಗೃಹನಿರ್ಮಾಣ ಕೆಲಸಗಳು ಶೀಘ್ರಗತಿಯಲ್ಲಿ ಸಾಗುವವು. ಸಮಾಧಾನಕರವಾಗಿ ಕೆಲಸಗಳನ್ನು ನಿರ್ವಹಿಸಲಿದ್ದೀರಿ.

ತುಲಾ: ಸರ್ಕಾರಿ ಕೆಲಸಗಳಲ್ಲಿರುವವರಿಗೆ ಬಡ್ತಿ ಅಥವಾ ಸ್ಥಳ ಬದಲಾವಣೆಯ ಸಾಧ್ಯತೆ. ಹೊಸ ನಿವೇಶನ ಖರೀದಿ ಅಥವಾ ಗೃಹನಿರ್ಮಾಣ ಕಾರ್ಯಗಳು ಚುರುಕುಗೊಳ್ಳಲಿವೆ. ಕಾರ್ಯಬಾಹುಳ್ಯದಿಂದಾಗಿ ಮಾನಸಿಕ ಒತ್ತಡ.

ವೃಶ್ಚಿಕ: ಕೈಗೊಂಡ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲಿದ್ದೀರಿ. ಹಿರಿಯರ ಪ್ರಶಂಸೆಗೆ ಪಾತ್ರರಾಗುವಿರಿ. ನವದಂಪತಿಗಳಿಗೆ ಸಂತಾನ ಭಾಗ್ಯ. ಆಪ್ತರೊಬ್ಬರಿಗೆ ಹಣಕಾಸಿನ ನೆರವು ನೀಡುವ ಸಾಧ್ಯತೆ.

ಧನು: ವಿವಿಧ ಮೂಲಗಳಿಂದ ಹೆಚ್ಚಿನ ಆದಾಯ. ವಾಹನ ಮಾರಾಟದಿಂದ ಉತ್ತಮ ಲಾಭ. ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸದ ಧಾವಂತದಿಂದಾಗಿ ಆರೋಗ್ಯದಲ್ಲಿ ವ್ಯತ್ಯಯ. ಸಮಾಧಾನ ಚಿತ್ತರಾಗಿ ವ್ಯವಹರಿಸಿ.

ಮಕರ: ಗುತ್ತಿಗೆ ವ್ಯವಹಾರ ನಡೆಸುತ್ತಿರುವವರಿಗೆ ಸರ್ಕಾರದ ಕಾಮಗಾರಿಗಳು ದೊರೆತು ಸಂತಸ. ಮಂಗಳ ಕಾರ್ಯಗಳಿಗಾಗಿ ಮಕ್ಕಳೊಂದಿಗೆ ಚರ್ಚಿಸುವ ಸಾಧ್ಯತೆ. ಬಾಕಿ ಇರುವ ಕೆಲಸಗಳನ್ನು ಪೂರ್ಣಗೊಳಿಸಲು ಸಕಾಲ.

ಕುಂಭ: ರಫ್ತು ಮಾರಾಟಗಾರರಿಗೆ ಉತ್ತಮ ವ್ಯವಹಾರ ಕುದುರುವುದರಿಂದ ಆದಾಯ ಹೆಚ್ಚಲಿದೆ. ಕಲಾವಿದರುಗಳಿಗೆ ಹೆಚ್ಚಿನ ಅವಕಾಶಗಳು ದೊರಕುವ ಸಾಧ್ಯತೆ. ಶುಭಕಾರ್ಯಗಳಿಗಾಗಿ ಹೆಚ್ಚಿನ ಓಡಾಟ.


ಮೀನ: ನೂಲು ತೆಗೆಯುವ, ಶೃಂಗಾರ ಸಾಮಗ್ರಿ ಹಾಗೂ ಔಷಧ ತಯಾರಕರುಗಳಿಗೆ ವಿಶೇಷ ಬೇಡಿಕೆಯಿಂದಾಗಿ ಉತ್ತಮ ಲಾಭ. ಸ್ವಂತ ಉದ್ಯಮ, ಫ್ಯಾಕ್ಟರಿಗಳನ್ನು ನಡೆಸುತ್ತಿರುವವರಿಗೆ ಉತ್ತಮ ಆದಾಯ.

ನಿಮ್ಮ ಜನ್ಮದಿನ 5-ಆಗಸ್ಟ್ ಇಂದು ಅತ್ಯಂತ ಶುಭದಾಯಕ. ಗುರುಕೃಪೆಗೆ ಪಾತ್ರರಾಗಲಿದ್ದೀರಿ. ಯಾವುದೇ ತೊಂದರೆಗಳು ಬಾಧಿಸುವ ಸಾಧ್ಯತೆ ಕಂಡುಬರುವುದಿಲ್ಲ. ನೀವು ಬಯಸಿದ ಸ್ವಂತ ಉದ್ದಿಮೆಯನ್ನು ಪ್ರಾರಂಭಿಸಲು ಸಕಾಲ. ನಡೆಸುವ ಕೆಲಸ ಕಾರ್ಯಗಳಲ್ಲಿ ಯಶಸ್ಸು. ಸಮಸ್ಯೆಗಳಿಗೆ ಸೂಕ್ತ ಪರಿಹಾರ ದೊರೆತು ನೆಮ್ಮದಿ.

ಪದಬಂಧ 4679 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಆಂದೋಲನವನ್ನು ಹೀಗೆನ್ನಿ (3)
4.ದ್ರವದಿಂದ ತುಂಬಿರುವುದು (4)
6.ಋಷಿಗಳು ಹಿಡಿದಿರುವ ನೀರಿನ ಪಾತ್ರೆ (4)
8.ನಯವಾಗಿ ಹೊಳೆವ ಅಕ್ಷಿ (3)
11.ಬಣ್ಣದ ದಾರದಿಂದ ಬಟ್ಟೆ ಮೇಲೆ ಮಾಡಿರುವ ಹೆಣಿಗೆ (3)
13.ಇದಿನ್ನೂ ಎಳೆಯ ಮಗು (4)
16.ಕೊಬ್ಬಿದ ಆನೆ (4)
17.ಲೀಲಾಜಾಲವಾಗಿ ನಡೆದ ಹರಾಜು (3)

ಮೇಲಿಂದ ಕೆಳಕ್ಕೆ
2.ವನದಲ್ಲಿ ಸಿಕ್ಕಿರುವ ಆದಾಯ (4)
3.ಬಡಗಣ ದಿಕ್ಕಿನಲ್ಲಿ ಕಾಣಿಸಿದ ರಾಡಿ (3)
5.ಕಿವಿಯಿಲ್ಲಿ ಉಲ್ಟಾ ಪಲ್ಟಾ ಆಗಿಬಿಟ್ಟಿದೆಯಲ್ಲಾ? (2)
7.ಜಿಪುಣನನ್ನು ಹೀಗೂ ಕರೆವರು (3)
9.ಪಾಪಿಗಳ ಲೋಕ (3)
10.ಜಗಳಕ್ಕೊಂದು ಪರ್ಯಾಯ ಪದ (3)
12.ಎಳ್ಳು ನೀರು ಬಿಡುವಿಕೆ (4)
14.ದವಸ ಧಾನ್ಯಗಳು ಸಮೃದ್ಧಿಯಾಗಿರುವ ಕಾಲ (3)
15.ಹೂವು ಇಲ್ಲಿದೆ (2)



4678ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಕ್ರಮಪ್ರವೇಶ 4.ವಸಾಹತು 5.ಗರ್ಗರ 7.ಪಂಡಿತ 9.ನದೀಜ 12.ರಿಪೇರಿ 13.ಬಾಲರವಿ 15.ಪ್ರವಾಸಿಮಂದಿರ
ಮೇಲಿಂದ ಕೆಳಕ್ಕೆ: 1.ಅಜಗರ 2.ಶವ 3.ಮಾತುಲ 6.ರಸಹೀನ 7.ಪಂಕಜ 8.ತರಕಾರಿ 10.ಹರಿಕಾರ 11.ಅಂಬಾರಿ 14.ವಿಪ್ರ

ಸುಡೊಕು 5065

		5	8				1	
2							7	
		4			2	8		6
3		6				5		9
	7			2			8	
8		1				3		7
4			6		1		9	
	3			9	5	7		8
6		8	2				5	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5064 ಸುಡೊಕು

3	9	8	2	7	5	4	6	1
2	7	6	4	3	1	8	9	5
1	4	5	6	8	9	7	3	2
4	6	3	9	1	7	5	2	8
9	5	2	3	4	8	1	7	6
8	1	7	5	2	6	3	4	9
5	3	4	8	6	2	9	1	7
7	2	9	1	5	4	6	8	3
6	8	1	7	9	3	2	5	4

ಮಕ್ಕಳ ಮಾರಾಟ ಪ್ರಕರಣ; ತಾಯಿ, ಮಗಳ ಬಂಧನ

ಮೈಸೂರು: ನಂಜನಗೂಡಿನಲ್ಲಿ ಇತ್ತೀಚೆಗೆ ನಡೆದಿದ್ದ ಮಗು ಮಾರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀಮತಿ (60) ಹಾಗೂ ಅವರ ಪುತ್ರಿ ಶ್ರೀಲಕ್ಷ್ಮೀ (31) ಅವರನ್ನು ಪೊಲೀಸರು ಬಂಧಿಸಿ, ಇಬ್ಬರು ಮಕ್ಕಳನ್ನು ರಕ್ಷಿಸಿದ್ದಾರೆ.

‘ಆರೋಪಿಗಳು ಜ್ಯೋತಿ ಅವರ 2 ತಿಂಗಳ ಗಂಡು ಮಗುವನ್ನು ಹೊಳೇ-ನರಸೀಪುರದ ಯಶೋದಮ್ಮ ಅವರಿಗೆ ₹ 4 ಲಕ್ಷಕ್ಕೆ ಮಾರಾಟ ಮಾಡಿರುವುದು ಖಚಿತವಾಗಿದೆ. ಮಂಜುಳಾ ಅವರ 8 ತಿಂಗಳ ಹೆಣ್ಣು ಮಗುವನ್ನು ಕೊಳ್ಳೇಗಾಲದ ಚೈತ್ರಾ ಅವರಿಗೆ ಮಾರಾಟ ಮಾಡಿದ್ದಾರೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್. ಚೇತನ್ ನಗರದಲ್ಲಿ ಬುಧವಾರ ಸುದ್ದಿ-ಗೋಷ್ಠಿಯಲ್ಲಿ ತಿಳಿಸಿದರು.

‘ಮಗು ಮಾರಾಟ ಮಾಡಿದ ಇಬ್ಬರ ಹೆರಿಗೆಯೂ ಮೈಸೂರಿನ ಎಸ್‌ಎಲ್ಇಎಸ್ ಆಸ್ಪತ್ರೆಯಲ್ಲೇ ನಡೆದಿದೆ. ಆಸ್ಪತ್ರೆಯ ಸಿಬ್ಬಂದಿಯನ್ನೂ ವಿಚಾರಣೆಗೆ ಒಳಪಡಿಸಲಾಗುವುದು’ ಎಂದರು.

ಬಡ ಮಹಿಳೆಯರನ್ನು ಪರಿಚ-ಯಿಸಿಕೊಳ್ಳುತ್ತಿದ್ದ ಆರೋಪಿಗಳು ಹಣದ ಆಸೆ ತೋರಿಸಿ ಮಗುವನ್ನು ಮಕ್ಕಳಿಲ್ಲದವರಿಗೆ ಮಾರಾಟ ಮಾಡಿ-ಸುತ್ತಿದ್ದರು. ಖರೀದಿದಾರರಿಂದ ಲಕ್ಷಾಂತರ ರೂಪಾಯಿ ಹಣ ಪಡೆದು, ಹೆತ್ತವರಿಗೆ ನೀಡದೇ ವಂಚಿಸುತ್ತಿದ್ದ-ರು. ಆರೋಪಿಗಳು ನಂಜನಗೂಡಿನಲ್ಲಿ ಶಿಶುವಿಹಾರವನ್ನು ನಡೆಸುತ್ತಿದ್ದು, ಆಟೊ ರಿಕ್ಷಾಗಳನ್ನು ಬಾಡಿಗೆಗೆ ಬಿಟ್ಟಿದ್ದಾರೆ. ಕೆಲವು ವರ್ಷಗಳ ಹಿಂದೆ ಇಲ್ಲಿ ನಡೆದಿದ್ದ ಮಕ್ಕಳ ಮಾರಾಟ ಪ್ರಕರಣ-ಗಳಿಗೂ ಈ ಪ್ರಕರಣಗಳಿಗೂ ಸಂಬಂಧ ಕಂಡುಬಂದಿಲ್ಲ’ ಎಂದರು.

ಕೋವಿಡ್ 19: ಒಂದು ದಿನದ ಅವಧಿಯಲ್ಲಿ 1.69 ಲಕ್ಷ ಮಾದರಿ ಪರೀಕ್ಷೆ

25 ಸಾವಿರ ಸಕ್ರಿಯ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 1,769 ಮಂದಿ ಕೋವಿಡ್ ಪೀಡಿತರಾಗಿರು-ವುದು ಬುಧವಾರ ದೃಢಪಟ್ಟಿದ್ದು, ಸಕ್ರಿಯ ಪ್ರಕರಣಗಳ ಸಂಖ್ಯೆ 25 ಸಾವಿರ (24,305) ಸಮೀಪಿಸಿದೆ.

ಎರಡು ವಾರದಿಂದ ಗುಣಮುಖರ ಸಂಖ್ಯೆಗಿಂತ ಹೊಸ ಪ್ರಕರಣಗಳು ಅಧಿಕ ಸಂಖ್ಯೆಯಲ್ಲಿ ವರದಿಯಾಗುತ್ತಿ-ವೆ. ಇದರಿಂದ ಸಕ್ರಿಯ ಪ್ರಕರಣಗಳು ಹೆಚ್ಚಳವಾಗಿವೆ. ಒಂದು ದಿನದ ಅವಧಿಯಲ್ಲಿ 1.69 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಶೇ 1.04ರಷ್ಟು ಸೋಂಕು ದೃಢ ಪ್ರಮಾಣ ವರದಿಯಾಗಿದೆ.

ರಾಜ್ಯದ 13 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 10 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಯಾದಗಿರಿ ಹಾಗೂ ಹಾವೇರಿಯಲ್ಲಿ ಹೊಸದಾಗಿ ಪ್ರಕರಣ ವರದಿಯಾಗಿಲ್ಲ. ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 350, ಮೈಸೂರಿನಲ್ಲಿ 143 ಹಾಗೂ ಕೊಡಗಿನಲ್ಲಿ 99 ಪ್ರಕರಣಗಳು ಪತ್ತೆಯಾಗಿವೆ.

ಬೆಂಗಳೂರಿನಲ್ಲಿ 411 ಹಾಗೂ ಉಡುಪಿಯಲ್ಲಿ 140 ಮಂದಿ ಸೋಂಕಿ-ತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 100ರ ಗಡಿಯೊಳಗೆ ವರದಿಯಾಗಿವೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 29.11 ಲಕ್ಷ ದಾಟಿದೆ. ಕೊರೊನಾ ಸೋಂಕಿತರಲ್ಲಿ 1,714 ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 28.50 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ 30 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. 13 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ದಕ್ಷಿಣ ಕನ್ನಡದಲ್ಲಿ 6, ಬೆಂಗಳೂರು ಹಾಗೂ ಮೈಸೂರಿನಲ್ಲಿ ತಲಾ 4, ಮಂಡ್ಯದಲ್ಲಿ 3, ವಿಜಯಪುರ, ಉಡುಪಿ, ಕೋಲಾರ ಹಾಗೂ ಹಾಸನದಲ್ಲಿ ತಲಾ ಇಬ್ಬರು ಸಾವಿಗೀ-ಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ.

ಮರಣ ಪ್ರಮಾಣ ದರವು ಶೇ 1.69ರಷ್ಟು ವರದಿಯಾಗಿದೆ. ಈವರೆಗೆ ಕೋವಿಡ್‌ನಿಂದ ಸಾವಿಗೀಡಾದವರ ಒಟ್ಟು ಸಂಖ್ಯೆ 36,680ಕ್ಕೆ ಏರಿಕೆಯಾಗಿದೆ.

ಕಪ್ಪು ಶಿಲೀಂಧ್ರ: 4 ದಿನಗಳಲ್ಲಿ 26 ಸಾವು

ಬೆಂಗಳೂರು: ರಾಜ್ಯದಲ್ಲಿ ಕಪ್ಪು ಶಿಲೀಂಧ್ರ ಸೋಂಕಿಗೆ ನಾಲ್ಕು ದಿನಗಳಲ್ಲಿ 26 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ.

ಇದೇ ಅವಧಿಯಲ್ಲಿ ಹೊಸದಾಗಿ 44 ಮಂದಿಗೆ ಈ ಸೋಂಕು ತಗಲಿರುವುದು ಖಚಿತಪಟ್ಟಿದೆ. ಇವರಲ್ಲಿ ಬಹುತೇಕರು ಕೋವಿಡ್‌ನಿಂದ ಚೇತರಿಸಿಕೊಂಡವರಾಗಿದ್ದಾರೆ. ರಾಜ್ಯದಲ್ಲಿ ಈವರೆಗೆ ಕಪ್ಪು ಶಿಲೀಂಧ್ರ ಸೋಂಕಿಗೆ ಒಳಗಾದವರ ಒಟ್ಟು ಸಂಖ್ಯೆ 3,713ಕ್ಕೆ ಏರಿಕೆಯಾಗಿದೆ. ಅವರಲ್ಲಿ 367 ಮಂದಿ ಸಾವಿಗೀಡಾಗಿದ್ದಾರೆ.

ರಾಜ್ಯದಲ್ಲಿ ಕಳೆದ ಮೇ ತಿಂಗಳಲ್ಲಿ ಕೋವಿಡ್‌ನಿಂದ ಚೇತರಿಸಿಕೊಂಡ ಕೆಲವರಲ್ಲಿ ಈ ಸೋಂಕು ಕಾಣಿಸಿಕೊಂಡಿತ್ತು. ಬಳಿಕ ಏರಿಕೆ ಕಂಡು, ತಿಂಗಳಿಗೆ ಸಾವಿರಕ್ಕೂ ಅಧಿಕ ಪ್ರಕರಣಗಳು ವರದಿಯಾಗಿದ್ದವು. ಜುಲೈ ತಿಂಗಳಲ್ಲಿ ಇದು ಇಳಿದಿತ್ತು. ವರದಿಯಾದ ಒಟ್ಟು ಪ್ರಕರಣಗಳಲ್ಲಿ ಶೇ 32ರಷ್ಟು ಪ್ರಕರಣಗಳು ಬೆಂಗಳೂರಿನಲ್ಲಿಯೇ ದೃಢಪಟ್ಟಿವೆ. 1,178 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ಅವರಲ್ಲಿ 112 ಮಂದಿ ಸಾವಿಗೀಡಾಗಿದ್ದಾರೆ.

‘ಕೋವಿಡ್ ನಿಯಂತ್ರಣ ಹಾಗೂ ಅನಿಯಂತ್ರಿತ ಸ್ಟೆರಾಯ್ಡ್ ಬಳಕೆಗೆ ಕಡಿವಾಣ ಹಾಕಿರುವುದರಿಂದ ಕಪ್ಪು ಶಿಲೀಂಧ್ರ ಸೋಂಕು ಪ್ರಕರಣಗಳು ಇಳಿಕೆ ಕಂಡಿವೆ. ಆದರೆ, ಸೋಂಕಿತರಲ್ಲಿ ಕೆಲವರು ತಡವಾಗಿ ಆಸ್ಪತ್ರೆಗೆ ಬರುತ್ತಿದ್ದಾರೆ. ಸೋಂಕು ಮಿದುಳಿಗೆ ಹರಡಿದಲ್ಲಿ ಉಳಿಸಿಕೊಳ್ಳುವುದು ಕಷ್ಟ. ಹಾಗಾಗಿ, ಲಕ್ಷಣಗಳು ಗೋಚರಿಸಿದ ಕೂಡಲೇ ಆಸ್ಪತ್ರೆಗೆ ತೆರಳಿ, ತಪಾಸಣೆ ಮಾಡಿಸಿಕೊಳ್ಳಬೇಕು. ಸದ್ಯ ಆಸ್ಪತ್ರೆಗಳಲ್ಲಿ ಹಾಸಿಗೆ ಹಾಗೂ ಔಷಧದ ಸಮಸ್ಯೆಯಿಲ್ಲ’ ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ವಾರಾಂತ್ಯದಲ್ಲಿ ಭಕ್ತರ ಪ್ರವೇಶ ನಿರ್ಬಂಧ

ಮಂಗಳೂರು: ಕೋವಿಡ್–19 ನಿಯಂತ್ರಣದ ಕ್ರಮವಾಗಿ, ವಾರಾಂತ್ಯದಲ್ಲಿ ಜಿಲ್ಲೆಯ ಪ್ರಮುಖ ಧಾರ್ಮಿಕ ಸ್ಥಳಗಳಿಗೆ ಭಕ್ತರ ಭೇಟಿಯನ್ನು ನಿರ್ಬಂಧಿಸಿ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಡಾ.ಕೆ.ವಿ. ರಾಜೇಂದ್ರ ಆದೇಶ ಹೊರಡಿಸಿದ್ದಾರೆ.

ಆ.5ರಿಂದ 15ರವರೆಗೆ ಕಟೀಲು ದುರ್ಗಾಪರಮೇಶ್ವರಿ ದೇವಸ್ಥಾನ, ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನಗಳಲ್ಲಿ ಬೆಳಿಗ್ಗೆ 7ರಿಂದ ಸಂಜೆ 7ರವರೆಗೆ ಕೇವಲ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿದೆ. ತೀರ್ಥ ಪ್ರಸಾದ, ಸೇವೆಗಳು, ಅನ್ನ ಸಂತರ್ಪಣೆಗಳಿಗೆ ಅವಕಾಶವಿಲ್ಲ. ವಾರಾಂತ್ಯದ ಶನಿವಾರ ಹಾಗೂ ಭಾನುವಾರ ಭಕ್ತರ ಪ್ರವೇಶವನ್ನು ಸಂಪೂರ್ಣ ನಿಷೇಧಿಸಲಾಗಿದೆ. ವಸತಿಗೃಹಗಳಲ್ಲಿ ತಂಗುವುದಾಗಲಿ, ದೇವರ ದರ್ಶನ-ಕ್ಕಾಗಲಿ ಅವಕಾಶವಿರುವುದಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ವಾರಾಂತ್ಯದಲ್ಲಿ ಎಲ್ಲಾ ರೀತಿಯ ಉತ್ಸವ, ಸೇವೆ, ತೀರ್ಥ ಪ್ರಸಾದ, ಮುಡಿ ಸೇವೆಗಳನ್ನು ನಿರ್ಬಂಧಿಸಲಾಗಿದ್ದು, ಅರ್ಚಕರು ಮಾತ್ರ ಸಾಂಪ್ರದಾಯಿಕ ಪೂಜೆ ಸಲ್ಲಿಸಬಹುದು. ಉಳಿದ ದಿನಗಳಲ್ಲಿ ವಸತಿಗೃಹ-ಗಳಲ್ಲಿ ತಂಗಲು ಬಯಸುವವರು 72 ಗಂಟೆಯೊಳಗಿನ ಆರ್‌ಟಿಪಿಸಿಆರ್ ನೆಗೆಟಿವ್ ವರದಿಯನ್ನು ಕಡ್ಡಾಯವಾಗಿ ಹೊಂದಿರಬೇಕು ಎಂದು ಸೂಚಿಸಿದ್ದಾರೆ.

ನೆಗೆಟಿವ್ ವರದಿ ಇಲ್ಲದೆ ಪ್ರವಾಸಿ ತಾಣಗಳಿಗೆ ಪ್ರವೇಶವಿಲ್ಲ

ಶಿವಮೊಗ್ಗ: ಜೋಗ ಜಲಪಾತ ಸೇರಿ ಜಿಲ್ಲೆಯ ಪ್ರವಾಸಿ ತಾಣಗಳಿಗೆ ತೆರಳುವ ಪ್ರವಾಸಿಗರು 72 ತಾಸುಗಳ ಒಳಗಿನ ಆರ್‌ಟಿ–ಪಿಸಿಆರ್ ಪರೀಕ್ಷೆಯ ಕೋವಿಡ್ ನೆಗೆಟಿವ್ ಪ್ರಮಾಣಪತ್ರ ಸಲ್ಲಿಸುವುದು ಕಡ್ಡಾಯ.

ಕೋವಿಡ್ ಮೂರನೇ ಅಲೆ ತಡೆಗೆ ಜಿಲ್ಲಾಡಳಿತ ಕಟ್ಟುನಿಟ್ಟಿನ ಕ್ರಮ ಕೈಗೊಂಡಿದ್ದು, ಆ. 5ರಿಂದಲೇ ನಿರ್ಬಂಧಗಳನ್ನು ಜಾರಿಗೊಳಿಸಲು ಜಿಲ್ಲಾಧಿಕಾರಿ ಕೆ.ಬಿ.ಶಿವಕುಮಾರ್ ಆದೇಶ ಹೊರಡಿಸಿದ್ದಾರೆ.

ಜೋಗ, ಆಗುಂಬೆ, ಸಕ್ರೆಬೈಲು, ಗಾಜನೂರು, ಭದ್ರಾ ಜಲಾಶಯ, ತ್ಯಾವರೆಕೊಪ್ಪ ಹುಲಿ ಮತ್ತು ಸಿಂಹಧಾಮ, ಅರಣ್ಯ, ಪ್ರಾಚ್ಯವಸ್ತು ಮತ್ತು ಪುರಾತತ್ವ ಇಲಾಖೆಗಳ ಪ್ರವಾಸಿ ತಾಣಗಳಿಗೆ ವಾರಾಂತ್ಯದಲ್ಲಿ ಅಧಿಕ ಪ್ರವಾಸಿಗರು ಭೇಟಿ ನೀಡಲು ಆರಂಭಿಸಿದ್ದರು. ಕೋವಿಡ್ ನಿಯಮಗಳನ್ನು ಪಾಲಿಸದೆ ಭಾರಿ ಸಂಖ್ಯೆಯ ಜನರು ಒಂದೆಡೆ ಸೇರುವುದನ್ನು ನಿಯಂತ್ರಿಸಲು ಕಠಿಣ ನಿಯಮಗಳು ಅನಿವಾರ್ಯ ಎಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದರು.

ಹೊರ ರಾಜ್ಯಗಳಿಂದ ಜಿಲ್ಲೆ ಪ್ರವೇಶಿಸುವ ಪ್ರಯಾಣಿಕರು ಎರಡು ಡೋಸ್ ಲಸಿಕೆ ಪಡೆದಿದ್ದರೂ ಕೋವಿಡ್ ನೆಗೆಟಿವ್ ವರದಿ ನೀಡಬೇಕಿದೆ. ಜಿಲ್ಲೆಯ ವಸತಿಗೃಹಗಳು, ಹೋಟೆಲ್, ಹೋಮ್‌ಸ್ಟೇ ಮತ್ತಿತರ ತಂಗು-ದಾಣಗಳಲ್ಲಿ ಉಳಿದುಕೊಳ್ಳಲೂ ಕೋವಿಡ್ ಪರೀಕ್ಷಾ ವರದಿ ಕಡ್ಡಾಯ ಮಾಡಲಾಗಿದೆ.

ತ್ವರಿತ ವರದಿಗೆ ಆಗ್ರಹ: ‘ಕೋವಿಡ್ ನಿಯಂತ್ರಿಸಲು ಜಿಲ್ಲಾಡಳಿತ ತೆಗೆದುಕೊಂಡ ಕ್ರಮಗಳು ಸ್ವಾಗತಾರ್ಹ. ಆದರೆ, ಆರ್‌ಟಿ–ಪಿಸಿಆರ್ ವರದಿ ನೀಡಲು ವಿಳಂಬವಾಗುತ್ತಿದೆ. ವರದಿ ಬರುವುದು ಮೂರು ದಿನಗಳಿಗಿಂತ ತಡವಾದರೆ 72 ತಾಸಿನ ಒಳಗಿನ ಪ್ರಮಾಣಪತ್ರ ಹಾಜರುಪಡಿಸುವುದು ಹೇಗೆ’ ಎಂದು ವಿವಿಧ ಸಂಘಟನೆಗಳು ಪ್ರಶ್ನಿಸಿವೆ.

ನಿರ್ಬಂಧ ಸಡಿಲಿಸಿದ ಕೇರಳ ಸರ್ಕಾರ

ತಿರುವನಂತಪುರ: ಕೋವಿಡ್–19 ನಿರ್ಬಂಧಗಳನ್ನು ಕೇರಳ ಸರ್ಕಾರ ಸಡಿಲಿಸಿದ್ದು, ಶನಿವಾರದ ಸಂಪೂರ್ಣ ಲಾಕ್‌ಡೌನ್ ಅನ್ನು ತೆರವುಗೊಳಿಸಿದೆ.

ಶನಿವಾರಗಳಂದು ಬೆಳಿಗ್ಗೆ 7 ಗಂಟೆಯಿಂದ ರಾತ್ರಿ 9ರ ವರೆಗೆ ಕಾರ್ಯಾಚರಿಸಲು ಅಂಗಡಿಗಳಿಗೆ ಅನುಮತಿ ನೀಡಲಾಗಿದೆ. ಈವರೆಗೆ ಕೇರಳದಲ್ಲಿ ವಾರಾಂತ್ಯ ಸಂಪೂರ್ಣ ಲಾಕ್‌ಡೌನ್ ಜಾರಿಯಲ್ಲಿತ್ತು. ಶನಿವಾರದ ನಿರ್ಬಂಧ ಸಡಿಲಿಸಿರುವುರಿಂದ ಭಾನುವಾರ ಮಾತ್ರ ಸಂಪೂರ್ಣ ಲಾಕ್‌ಡೌನ್ ಇರಲಿದೆ. ಆದಾಗ್ಯೂ ಆಗಸ್ಟ್ 15 ಮತ್ತು 22ರಂದು ಸ್ವಾತಂತ್ರ್ಯೋತ್ಸವ ಹಾಗೂ ಓಣಂ ಹಬ್ಬದ ಕಾರಣ ಲಾಕ್‌ಡೌನ್‌ನಿಂದ ವಿನಾಯಿತಿ ನೀಡಲಾಗಿದೆ ಎಂದು ಆರೋಗ್ಯ ಸಚಿವೆ ವೀಣಾ ಜಾರ್ಜ್ ವಿಧಾನಸಭೆಯಲ್ಲಿ ಬುಧವಾರ ಘೋಷಣೆ ಮಾಡಿದ್ದಾರೆ.

ಕರಾವಳಿ, ಮಲೆನಾಡಿನಲ್ಲಿ ಉತ್ತಮ ಮಳೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ, ಮಂಗಳೂರು: ಶಿವಮೊಗ್ಗ ಜಿಲ್ಲೆಯಲ್ಲಿ ಮಂಗಳವಾರ ರಾತ್ರಿ ಹಲವೆಡೆ ಉತ್ತಮ ಮಳೆಯಾಗಿದ್ದು, 57.61 ಮಿ.ಮೀ ಸರಾಸರಿ ಮಳೆಯಾಗಿದೆ.

ಹೊಸನಗರದಲ್ಲಿ 17.68 ಸೆಂ.ಮೀ ಮಳೆಯಾಗಿದ್ದು, ತೀರ್ಥಹಳ್ಳಿ-ಯಲ್ಲಿ 86.60 ಮಿ.ಮೀ, ಸೊರಬದಲ್ಲಿ 43.30 ಮಿ.ಮೀ, ಸಾಗರದಲ್ಲಿ 42.80 ಮಿ.ಮೀ, ಶಿಕಾರಿಪುರದಲ್ಲಿ 27.40 ಮಿ.ಮೀ, ಶಿವಮೊಗ್ಗದಲ್ಲಿ 16.40 ಮಿ.ಮೀ, ಭದ್ರಾವತಿಯಲ್ಲಿ 9.60.ಮಿ.ಮೀ ಮಳೆಯಾಗಿದೆ.

ಭದ್ರಾ ಜಲಾಶಯಕ್ಕೆ 8 ಸಾವಿರ ಕ್ಯುಸೆಕ್ ನೀರು ಹರಿದುಬರುತ್ತಿದ್ದು, ಜಲಾಶಯ ಭರ್ತಿಗೆ ಇನ್ನು 3 ಅಡಿ ಬಾಕಿ ಇದೆ.

ಲಿಂಗನಮಕ್ಕಿ ಜಲಾಶಯಕ್ಕೆ 32 ಸಾವಿರ ಕ್ಯುಸೆಕ್ ನೀರು ಹರಿದುಬ-ರುತ್ತಿದೆ. ಜಲಾಶಯ ಮಟ್ಟ 1,808 ಅಡಿಗೆ ತಲುಪಿದ್ದು, ಭರ್ತಿಗೆ ಇನ್ನು 11 ಅಡಿ ಬಾಕಿ ಇದೆ. ತುಂಗಾ ಜಲಾಶಯಕ್ಕೆ 16 ಸಾವಿರ ಕ್ಯುಸೆಕ್ ನೀರು ಹರಿದು ಬರುತ್ತಿದ್ದು, ಅಷ್ಟೇ ಪ್ರಮಾಣದ ನೀರನ್ನು ನದಿಗೆ ಬಿಡಲಾಗುತ್ತಿದೆ.

ಕರಾವಳಿ, ಕಾಫಿನಾಡಿನಲ್ಲಿ ಉತ್ತಮ ಮಳೆ: ಕರಾವಳಿ ಹಾಗೂ ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಬುಧವಾರ ಉತ್ತಮ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನಲ್ಲಿ ಗರಿಷ್ಠ 6.5 ಸೆಂ.ಮೀ. ಮಳೆಯಾಗಿದ್ದು, ಬಂಟ್ವಾಳ ತಾಲ್ಲೂಕಿನಲ್ಲಿ ಕನಿಷ್ಠ 2.5 ಸೆಂ.ಮೀ. ಮಳೆಯಾಗಿದೆ. ಜಿಲ್ಲೆಯಲ್ಲಿ ಮಳೆಯಿಂದಾಗಿ 4 ಮನೆಗಳಿಗೆ ಭಾಗಶಃ ಹಾನಿಯಾಗಿದೆ. 45 ವಿದ್ಯುತ್ ಕಂಬಗಳು ನೆಲಕ್ಕೆ ಉರುಳಿವೆ. ಉಡುಪಿ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದೆ.

ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ, ಎನ್‌.ಆರ್‌.ಪುರ, ಶೃಂಗೇರಿ ಭಾಗದಲ್ಲಿ ಬಿರುಸಾಗಿ ಮಳೆ ಸುರಿದಿದೆ. ನದಿ, ಹಳ್ಳಗಳಲ್ಲಿ ಹರಿವು ಜಾಸ್ತಿಯಾಗಿದೆ. ಕಡೂರು, ಅಜ್ಜಂಪುರ, ತರೀಕೆರೆ, ಕಳಸ ಭಾಗದಲ್ಲಿ ಸಾಧಾರಣ ಮಳೆಯಾಗಿದೆ.

ಕಮ್ಮರಡಿಯಲ್ಲಿ 14.2, ಕರೆಕಟ್ಟೆ-ಯಲ್ಲಿ 11.6, ಕಿಗ್ಗಾದಲ್ಲಿ 9.7 ಹಾಗೂ ಹರಿಪುರಪುರದಲ್ಲಿ 8.7 ಸೆಂ.ಮೀ ಮಳೆಯಾಗಿದೆ.

ಧಾರಾಕಾರ ಮಳೆ (ಮಡಿಕೇರಿ ವರದಿ): ಕೊಡಗು ಜಿಲ್ಲೆಯಾದ್ಯಂತ ಬುಧವಾರ ಧಾರಾಕಾರ ಮಳೆಯಾಗಿದ್ದು, ಹಾರಂಗಿ ಜಲಾಶಯದ ಒಳಹರಿವು ಮತ್ತೆ ಏರಿಕೆಯಾಗಿದೆ.

7 ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’

ಬೆಂಗಳೂರು: ರಾಜ್ಯದ ಕರಾವಳಿ ಹಾಗೂ ದಕ್ಷಿಣ ಒಳನಾಡಿನಲ್ಲಿ ಮುಂಗಾರು ಚುರುಕುಗೊಂಡಿರುವುದರಿಂದ ಆ.5ರಂದು ಈ ಭಾಗದ ಹಲವು ಜಿಲ್ಲೆಗಳಲ್ಲಿ ಭಾರಿ ಮಳೆಯಾಗುವ ಮುನ್ಸೂಚನೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಶಿವಮೊಗ್ಗ, ಕೊಡಗು, ಹಾಸನ, ಚಿಕ್ಕಮಗಳೂರು, ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಗುಡುಗು, ಸಿಡಿಲು ಸಹಿತ ಮಳೆಯಾಗುವ ಸಾಧ್ಯತೆ ಇರುವುದರಿಂದ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

‘ಕರಾವಳಿ ಜಿಲ್ಲೆಗಳಲ್ಲಿ ಆ.8ರವರೆಗೆ ಯೆಲ್ಲೊ ಅಲರ್ಟ್ ಮುಂದು-ವರಿಸಲಾಗಿದೆ. ಉಳಿದ ಜಿಲ್ಲೆಗಳಲ್ಲಿ ಸಾಧಾರಣ ಮಳೆಯಾಗಬಹುದು. ಒಳನಾಡಿನ ಜಿಲ್ಲೆಗಳಲ್ಲಿ ಇದೇ 8 ರವರೆಗೆ ಮಳೆಯ ಪ್ರಮಾಣ ಕಡಿಮೆ ಇರಲಿದೆ’ ಇದೆ ಎಂದೂ ಮಾಹಿತಿ ನೀಡಿದೆ.

ಮಳೆ–ಎಲ್ಲಿ, ಎಷ್ಟು?: ಉಡುಪಿ ಜಿಲ್ಲೆಯ ಸಿದ್ದಾಪುರ ಹಾಗೂ ಶಿವಮೊಗ್ಗ ಜಿಲ್ಲೆಯ ಆಗುಂಬೆಯಲ್ಲಿ ಬುಧವಾರ 15 ಸೆಂ.ಮೀ ಗರಿಷ್ಠ ಮಳೆಯಾಗಿದೆ. ತೀರ್ಥಹಳ್ಳಿ, ಭಟ್ಕಳ 9, ಸುಳ್ಯ, ಮೂಡುಬಿದರೆ, ಮಡಿಕೇರಿ 5, ಮಂಗಳೂರು, ಬೆಳ್ತಂಗಡಿ, ಕಾರವಾರ, ಸಾಗರ 4, ವಿರಾಜಪೇಟೆ, ಬಂಟ್ವಾಳ 3, ತರೀಕೆರೆ 2, ಧಾರವಾಡ, ಬೆಳಗಾವಿ, ಚಿತ್ರದುರ್ಗ, ಚಿಕ್ಕಬಳ್ಳಾಪುರದಲ್ಲಿ ತಲಾ 1 ಸೆಂ.ಮೀ ಮಳೆಯಾಗಿದೆ. ರಾಯಚೂರಿನಲ್ಲಿ 34 ಡಿಗ್ರಿ ಸೆಲ್ಸಿಯಸ್ ಗರಿಷ್ಠ ತಾಪಮಾನ ಹಾಗೂ ಹಾಸನದಲ್ಲಿ 16 ಡಿಗ್ರಿ ಸೆಲ್ಸಿಯಸ್ ಕನಿಷ್ಠ ತಾಪಮಾನ ದಾಖಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	115.50	7,105	5,340
ಹಾರಂಗಿ	2,859	2,856.55	6,619	3,136
ಕಬಿನಿ	2284.00	2,280.77	5,077	1,000
ಹೇಮಾವತಿ	2,922	2,919.42	6,457	5,650
ಲಿಂಗನಮಕ್ಕಿ	1,819	1,808.95	32,829	-
ಸೂಪಾ (ಮೀ)	564	552.80	16,615	4,242
ಮಾಣಿ	594	583.06	7,364	-
ತುಂಗಭದ್ರಾ	1,633	1,633	29,327	15,809
ಮಲಪ್ರಭಾ	2079.5	2,075.60	4,703	1,694
ಘಟಪ್ರಭಾ	2175	2,172.75	7,535	3,589
ಭದ್ರಾ	186	183.3	8,781	3,144
ಆಲಮಟ್ಟಿ (ಮೀ)	519.6	518.66	2,50508	1,61,852
ನಾರಾಯಣಪುರ (ಮೀ)	492.25	491.52	1,50,000	1,35,950

* ನೆಲಮಟ್ಟದಿಂದ

ಐಎಸ್ ಜೊತೆ ನಂಟಿನ ಶಂಕೆ: ಒಬ್ಬ ವಶಕ್ಕೆ

ಪ್ರಜಾವಾಣಿ ವಾರ್ತೆ

ಉಳ್ಳಾಲ: ಐಎಸ್ ಉಗ್ರರ ಜೊತೆ ನಂಟಿನ ಶಂಕೆಯ ಕಾರಣಕ್ಕೆ ಮಾಜಿ ಶಾಸಕ ಬಿ.ಎಂ. ಇದಿನಬ್ಬ ಅವರ ಮಗ ಬಿ.ಎಂ. ಬಾಷಾ ಮನೆಯ ಮೇಲೆ ಬುಧವಾರ ಎನ್‌ಐಎ ದಾಳಿ ನಡೆಸಿದೆ. ಹೆಚ್ಚಿನ ವಿಚಾರಣೆಗಾಗಿ ಬಾಷಾ ಅವರ ಪುತ್ರ, ಎಂಜಿನಿಯರ್ ಆಗಿರುವ ಉಮ್ಮರ್‌ನನ್ನು ಎನ್‌ಐಎ ವಶಕ್ಕೆ ಪಡೆದಿದೆ.



ಉಳ್ಳಾಲದಲ್ಲಿರುವ ಬಿ.ಎಂ. ಬಾಷಾ ಮನೆ ಮೇಲೆ ಬುಧವಾರ ಎನ್‌ಐಎ ಅಧಿಕಾರಿಗಳ ತಂಡ ದಾಳಿ ನಡೆಸಿತು.

ಮಧ್ಯಾಹ್ನದವರೆಗೂ ವಿಚಾರಣೆ ನಡೆಸಿದ ತಂಡ ಉಮ್ಮರ್‌ನನ್ನು ವಶಕ್ಕೆ ಪಡೆಯಿತು. ಮಧ್ಯಾಹ್ನ ನಂತರವೂ ಮನೆಯಲ್ಲಿ ತನಿಖೆ ಮುಂದುವರಿಸಿದ ತಂಡ, ಸಾಕ್ಷ್ಯಗಳ ಸಂಗ್ರಹ ಮಾಡಿ, ಸಂಜೆ 7.30ರ ಸುಮಾರಿಗೆ ವಾಪಸಾಗಿದೆ. ಇಬ್ಬರು ಮಹಿಳೆಯರು ಸೇರಿದಂತೆ ಒಟ್ಟು 24 ಅಧಿಕಾರಿಗಳು ಬೆಂಗಳೂರು, ದೆಹಲಿ ಹಾಗೂ ಕೊಚ್ಚಿಯಿಂದ ಬಂದಿದ್ದರು.

ಉಳ್ಳಾಲದ ಮಾಜಿ ಶಾಸಕ ಇದಿನಬ್ಬ ಕುಟುಂಬದ ಸದಸ್ಯರೊಬ್ಬ-ರು ಐಎಸ್ ಪರ ಒಲವು ಹೊಂದಿರುವ ಬಗ್ಗೆ ಮಾಹಿತಿ ಪಡೆದ ಎನ್‌ಐಎ ದಾಳಿ ನಡೆದಿದೆ. ಐಎಸ್ ಪರವಾದ ಹಲವು ಯುಟ್ಯೂಬ್ ಚಾನೆಲ್‌ಗಳು, ಇನ್‌ಸ್ಟಾಗ್ರಾಮ್ ಮತ್ತು ಟೆಲಿಗ್ರಾಮ್ ಮೂಲಕ ಮಾಹಿತಿ ಪಡೆಯುತ್ತಿದ್ದ ಎಂದು ತಿಳಿದುಬಂದಿದೆ. ಇದಕ್ಕೆ ಸಂಬಂಧಿಸಿದ ಕೆಲವು ತಾಂತ್ರಿಕ ಸಾಕ್ಷ್ಯಗಳನ್ನು ತಂಡ ವಶಕ್ಕೆ ಪಡೆದಿದೆ.

2016-17 ರಲ್ಲಿ ಕೇರಳದ ಕಾಸರಗೋಡಿನಿಂದ 15 ಮಂದಿ ನಿಗೂಢವಾಗಿ ನಾಪತ್ತೆಯಾಗಿದ್ದರು. ಇವರು ಸಿರಿಯಾಗೆ ತೆರಳಿ ಐಎಸ್ ಚಟುವಟಿಕೆಗಳಲ್ಲಿ ಭಾಗವಹಿಸಿದ್ದ-ರು ಎಂದು ಮಾಹಿತಿ ಲಭ್ಯವಾಗಿತ್ತು. ಈ ಆಧಾರದ ಮೇಲೆ ಎನ್‌ಐಎ ಎಫ್‌ಐಆರ್ ದಾಖಲಿಸಿ ತನಿಖೆ ಕೈಗೆ-ತ್ತಿಕೊಂಡಿತ್ತು. ಈ 15 ಮಂದಿಯಲ್ಲಿ ಬಾಷಾ ಅವರ ಪುತ್ರಿಯ ಮಗಳು ಅಜ್ಮಲಾ ಕೂಡಾ ಇದ್ದಳು. ಆದರೆ, 2019ರಲ್ಲಿ ಅಫ್ಘಾನಿಸ್ತಾನದಲ್ಲಿ ಅಮೆರಿಕ ಸೇನಾ ಪಡೆ ನಡೆಸಿದ ವೈಮಾನಿಕ ದಾಳಿಯಲ್ಲಿ ಈ ಕುಟುಂಬ ಮೃತಪಟ್ಟಿರುವ ಬಗ್ಗೆ ರಾಷ್ಟ್ರೀಯ ತನಿಖಾ ದಳ ಖಚಿತಪಡಿಸಿತ್ತು.

ತುಂಗಭದ್ರಾ ಜಲಾಶಯ ಪ್ರವೇಶಕ್ಕೆ ನಿರ್ಬಂಧ

ಹೊಸಪೇಟೆ (ವಿಜಯನಗರ): ಕೋವಿಡ್ ಪ್ರಕರಣಗಳ ಸಂಖ್ಯೆ ವೇಗವಾಗಿ ಏರಿಕೆಯಾಗುತ್ತಿರುವ ಕಾರಣಕ್ಕೆ ಇಲ್ಲಿನ ತುಂಗಭದ್ರಾ ಜಲಾಶಯಕ್ಕೆ ಪ್ರವಾಸಿಗರ ಪ್ರವೇಶಕ್ಕೆ ನಿರ್ಬಂಧ ಹೇರಿ ಜಿಲ್ಲಾಧಿಕಾರಿ ಪವನ್‌ಕುಮಾರ್ ಮಾಲಪಾಟಿ ಬುಧವಾರ ಸಂಜೆ ಆದೇಶ ಹೊರಡಿಸಿದ್ದಾರೆ.

ನಿಧನ ವಾರ್ತೆ

ಕ್ಷೀರಸಾಗರ



ಎಚ್.ಡಿ.ಕೋಟೆ: ಪಕ್ಷಿತಜ್ಞ ಹಾಗೂ ಪರಿಸರವಾದಿ ಕ್ಷೀರಸಾಗರ (69) ಬೆಂಗಳೂರಿನ ನಿಮ್ಹಾನ್ಸ್ ಆಸ್ಪ-ತ್ರೆಯಲ್ಲಿ ಬುಧವಾರ ನಿಧನರಾದರು. ಇವರಿಗೆ ಪತ್ನಿ ಲಕ್ಷ್ಮಿ ಇದ್ದಾರೆ.


ಹುಣಸೂರು ತಾಲ್ಲೂಕಿನ ಮುಳ್ಳೂರು ಗ್ರಾಮದ ಅವರು 1980ರಲ್ಲಿ ಬ್ರಹ್ಮಗಿರಿ ಹಾಡಿಯ ಗಿರಿಜನರ ಹೊಸ ಕಾಲೋನಿ ನಿರ್ಮಾಣಕ್ಕಾಗಿ ಹೋರಾಟ ನಡೆಸಿದ್ದರು. ‘ಜಲದ ಕಣ್ಣಾದ ಗಿರಿಬಾಲೆಯರು’, ‘ಜೇನು ಆಕಾಶದ ಅರಮನೆಯೂ’ ಸೇರಿದಂತೆ ಗಿರಿಜನರ ಬದುಕಿನ ಬವಣೆಗಳನ್ನು ಕುರಿತು ಕೃತಿಗಳನ್ನು ರಚಿಸಿದ್ದರು. ‘ಕಾಡಿನ ನಾಡಿ ಮಿಡಿದವರು’ ಕೃತಿಗೆ ಜಾನಪದ ಅಕಾಡೆಮಿ ಪ್ರಶಸ್ತಿ ಲಭಿಸಿತ್ತು.

2018ರಲ್ಲಿ 4ನೇ ತಾಲ್ಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ-ದ್ದರು. ಪರಿಸರ ಛಾಯಾಗ್ರಾಹಕರಾ-ಗಿದ್ದ ಅವರು ನೈಸರ್ಗಿಕ ಕೃಷಿಕರಾಗಿ ಪ್ರಸಿದ್ಧರಾಗಿದ್ದರು. ಅಂತ್ಯಕ್ರಿಯೆಯು ತಾಲ್ಲೂಕಿನ ವಡ್ಡರಗುಡಿ ಗ್ರಾಮದ ಅವರ ಜಮೀನಿನಲ್ಲಿ ನಡೆಯಿತು.

ಹೈಕೋರ್ಟ್‌ಗೆ ವರದಿ ಸಲ್ಲಿಸಿದ ಹಾಸನ ಜಿಲ್ಲಾಧಿಕಾರಿ

ಮಂಗಗಳ ಹತ್ಯೆ: ಎಸ್‌ಐಟಿ ರಚನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನಲ್ಲಿ ನಡೆದಿದ್ದ ಮಂಗಗಳ ಹತ್ಯೆ ಪ್ರಕರಣದ ತನಿಖೆಗಾಗಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚನೆ ಮಾಡಲಾಗಿದೆ ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ತಿಳಿಸಿದೆ.

‘ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ (ಎಸಿಎಫ್) ನೇತೃತ್ವದ ಎಸ್‌ಐಟಿ ತಂಡ ಏಳು ಆರೋಪಿಗಳನ್ನು ಈಗಾಗಲೇ ಬಂಧಿಸಿದೆ’ ಎಂದು ಹಾಸನ ಜಿಲ್ಲಾಧಿಕಾರಿ ವರದಿ ಸಲ್ಲಿಸಿದ್ದಾರೆ.

‘ಮಂಗಗಳು ಉಸಿರುಗಟ್ಟಿ ಅಥವಾ ವಿಷ ಪ್ರಾಶನದಿಂದ ಮೃತಪ-ಟ್ಟಿರಬಹುದು ಎಂದು ಮರಣೋತ್ತರ ಪರೀಕ್ಷಾ ವರದಿ ಹೇಳುತ್ತಿದೆ. ಬೆಳೆಹಾನಿ ಮಾಡುತ್ತಿದ್ದ ಕಾರಣಕ್ಕೆ ಮಂಗಗಳನ್ನು ಹಿಡಿಯುವವರನ್ನು ಕರೆಸಿ ಅವುಗಳನ್ನು ಹಿಡಿಸಿದ್ದರು. ಬೇರೆಡೆಗೆ ಸಾಗಿಸುವ ಸಂದರ್ಭದಲ್ಲಿ ಈ ರೀತಿ ಆಗಿರಬಹುದು ಎಂದು ಪ್ರಾಥಮಿಕ ತನಿಖೆಯಿಂದ ತಿಳಿದು ಬಂದಿದೆ’ ಎಂದು ಜಿಲ್ಲಾಧಿಕಾರಿ ವರದಿಯಲ್ಲಿ ಉಲ್ಲೇಖಿಸಿದ್ದಾರೆ. ‘ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ವರದಿಗಾಗಿ ಕಾಯಲಾಗುತ್ತಿದೆ’ ಎಂದು ಸರ್ಕಾರಿ ವಕೀಲರು ವಿವರಿಸಿದರು.

‘ಈ ರೀತಿಯ ಪ್ರಕರಣದಲ್ಲಿ ಆರೋಪಿಗಳ ವಿರುದ್ಧ ಕ್ರಮ ಜರುಗಿಸಲು ಇರುವ ಕಾನೂನು ತೊಡಕುಗಳನ್ನು ಪರಿಹರಿಸುವ ಅಗತ್ಯವಿದೆ’ ಎಂದು ತಿಳಿಸಿದ ಪೀಠ, ವಿಚಾರಣೆಯನ್ನು ಸೋಮವಾರಕ್ಕೆ ಮುಂದೂಡಿತು.

ಬೇಲೂರು ತಾಲ್ಲೂಕಿನ ಚೌಡನಹಳ್ಳಿ ರಸ್ತೆ ಬದಿಯಲ್ಲಿ ಬಿಸಾಡಿದ್ದ ಚೀಲದಲ್ಲಿ 38 ಮೃತಪಟ್ಟ ಮಂಗಗಳು, ಸಾವು–ಬದುಕಿನ ನಡುವೆ ಸೆಣೆಸುತ್ತಿದ್ದ 15 ಮಂಗಗಳು ದೊರೆತಿದ್ದವು. ಈ ಪ್ರಕರಣದ ಸಂಬಂಧ ಸ್ವಯಂ ಪ್ರೇರಿತ ಅರ್ಜಿ ದಾಖಲಿಸಿಕೊಂಡಿರುವ ಮುಖ್ಯ ನ್ಯಾಯಮೂರ್ತಿ ಎ.ಎಸ್.ಓಕಾ ನೇತೃತ್ವದ ವಿಭಾಗೀಯ ಪೀಠ, ವಿಚಾರಣೆ ನಡೆಸುತ್ತಿದೆ.

ಕೋರ್ಟ್ ಆದೇಶದ ನಂತರವೇ 1,242 ಅನಧಿಕೃತ ಕಟ್ಟಡ ನಿರ್ಮಾಣ

ರಾಜ್ಯದಲ್ಲಿ 6,185 ಅನಧಿಕೃತ ಕಟ್ಟಡಗಳು

● ನಾಗರಾಜ್ ಬಿ.ಎನ್.

ಪ್ರಜಾವಾಣಿ ವಿಶೇಷ

ಹುಬ್ಬಳ್ಳಿ: ಸಾರ್ವಜನಿಕ ಸ್ಥಳಗಳನ್ನು ಅತಿಕ್ರಮಿಸಿ ನಿರ್ಮಿಸಿರುವ ಧಾರ್ಮಿಕ ಹಾಗೂ ಇತರ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸಬೇಕೆಂದು ಸುಪ್ರೀಂ ಕೋರ್ಟ್ ಆದೇಶ ಹೊರಡಿಸಿದ ನಂತರದ ವರ್ಷಗಳಲ್ಲಿಯೇ ರಾಜ್ಯದಾದ್ಯಂತ 1,242 ಅನಧಿಕೃತ ಕಟ್ಟಡಗಳು ನಿರ್ಮಾಣವಾಗಿವೆ.

ಸಾರ್ವಜನಿಕ ಕಾಮಗಾರಿಗೆ ಹಾಗೂ ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗುತ್ತದೆ ಎಂದು 2009ರಲ್ಲಿ ಸುಪ್ರೀಂ ಕೋರ್ಟ್ ಅನಧಿಕೃತ ಕಟ್ಟಡಗಳ ತೆರವಿಗೆ ಆದೇಶ ನೀಡಿತ್ತು. ಆ ವೇಳೆ ಸಮೀಕ್ಷೆ ನಡೆಸಿದಾಗ 5,688 ಕಟ್ಟಡಗಳು ಅನಧಿಕೃತವಾಗಿ ನಿರ್ಮಿಸಿರುವುದು ದಾಖಲಾಗಿತ್ತು. ಕೋರ್ಟ್ ಆದೇಶದ ನಂತರದ ವರ್ಷಗಳಲ್ಲೂ ಬಹುತೇಕ ಜಿಲ್ಲೆಗಳಲ್ಲಿ ಅನಧಿಕೃತ ಕಟ್ಟಡಗಳು ನಿರ್ಮಾಣವಾಗಿದ್ದು, ಈಗ ಅವುಗಳ ಸಂಖ್ಯೆ 6,185ಕ್ಕೆ ಏರಿಕೆಯಾಗಿವೆ.

ಸುಪ್ರೀಂ ಕೋರ್ಟ್ ಆದೇಶ ನೀಡಿ 12 ವರ್ಷಗಳು ಕಳೆದಿವೆ. 2020ರ ಡಿಸೆಂಬರ್‌ನಲ್ಲಿಯೂ ಹೈಕೋರ್ಟ್ ಕಟ್ಟಡಗಳ ತೆರವಿಗೆ ನಿರ್ದೇಶನ ನೀಡಿದೆ. ನ್ಯಾಯಾಂಗ ನಿಂದನೆಯ ತೂಗುಗತ್ತಿ ತಪ್ಪಿಸಿಕೊಳ್ಳಲು ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದು ತೆರವು ಕಾರ್ಯಾಚರಣೆಗೆ ತುರ್ತು ಕ್ರಮ ಕೈಗೊಳ್ಳಲು ಸೂಚಿಸಿದ್ದಾರೆ. ತೆರವಿಗೆ ಕಾರ್ಯಯೋಜನೆ ಸಿದ್ಧಪಡಿಸಿ, ಕಾರ್ಯಾಚರಣೆಗೆ ಮುಂದಾಗಬೇಕು ಎಂದು ನಿರ್ದೇಶಿಸಿದ್ದಾರೆ.

ಕೆಲವು ಜಿಲ್ಲೆಗಳ ನಗರ, ಗ್ರಾಮಾಂತರ ಹಾಗೂ ರಾಷ್ಟ್ರೀಯ ಹೆದ್ದಾರಿಯಲ್ಲಿರುವ 2,887 ಸಣ್ಣಪುಟ್ಟ ಗುಡಿ, ಕಟ್ಟೆಗಳನ್ನಷ್ಟೇ ತೆರವು ಮಾಡಲಾಗಿದೆ. ಆದರೆ, ದೊಡ್ಡ ಧಾರ್ಮಿಕ ಕೇಂದ್ರಗಳು ಹಾಗೂ ಬೃಹತ್ ಕಟ್ಟಡಗಳು ಇನ್ನೂ ಹಾಗೆಯೇ ಇವೆ. ಅತಿ ಹೆಚ್ಚು ಅನಧಿಕೃತ ಕಟ್ಟಡಗಳು ದಕ್ಷಿಣ ಕನ್ನಡ, ಶಿವಮೊಗ್ಗ, ಬೆಳಗಾವಿ, ಬಾಗಲಕೋಟೆ ಜಿಲ್ಲೆಗಳಲ್ಲಿವೆ.

ರಾಮ ನಗರ, ಕೊಡಗು, ದಾವಣಗೆರೆ ಜಿಲ್ಲೆಗಳಲ್ಲಿ ಅತಿ ಕಡಿಮೆ ಇವೆ. ಸಮೀಕ್ಷೆ ಪ್ರಕಾರ ಒಂದೇ ಒಂದು ಅಕ್ರಮ ಕಟ್ಟಡಗಳಿಲ್ಲದ ಬಳ್ಳಾರಿ ಜಿಲ್ಲೆಯಲ್ಲಿ, ಸುಪ್ರೀಂ ಕೋರ್ಟ್ ಆದೇಶದ ನಂತರವೇ 410 ಅಕ್ರಮ ಕಟ್ಟಗಳು ತಲೆ ಎತ್ತಿದ್ದವು. ಅವೆಲ್ಲವನ್ನೂ ಈಗ ತೆರವುಗೊಳಿಸಲಾಗಿದೆ. ಕೊಪ್ಪಳದಲ್ಲಿ ನಿರ್ಮಾಣವಾಗಿರುವ 262 ಕಟ್ಟಡಗಳಲ್ಲಿ 212 ತೆರವು ಮಾಡಲಾಗಿದೆ.

ಜಿಲ್ಲಾಧಿಕಾರಿಗಳು ತಹಶೀಲ್ದಾರ್, ಪಟ್ಟಣ ಹಾಗೂ ಪುರಸಭೆ ಮುಖ್ಯಾಧಿಕಾರಿಗಳಿಗೆ ಪತ್ರ ಬರೆದು ಒತ್ತುವರಿ ತೆರವುಗೊಳಿಸಿ ನ್ಯಾಯಾಲಯದ ಆದೇಶ ಪಾಲಿಸಲು ಸೂಚಿಸಿದ್ದಾರೆ. ಮಹಾನಗರ ಪಾಲಿಕೆಗಳು ಸಹ ದೊಡ್ಡ ಕಟ್ಟಡಗಳ ಮಾಲೀಕರಿಗೆ ತೆರವು ಮಾಡಲು ಸೂಚಿಸಲಾಗಿದೆ.

> ತೆರವು ಕಾರ್ಯಾಚರಣೆ ಬಗ್ಗೆ ಎಲ್ಲ ಜಿಲ್ಲಾಧಿಕಾರಿಗಳು ಆ. 12ರ ಒಳಗೆ ಹೈಕೋರ್ಟ್‌ಗೆ ಅಫಿಡವಿಟ್ ಸಲ್ಲಿಸಬೇಕಿದೆ. ತಮ್ಮ ಕಾರ್ಯಯೋಜನೆ ಸಿದ್ಧತೆ ಕುರಿತು ಮಾಹಿತಿ ಕೇಳಲಾಗಿದೆ
> **ಪಿ. ರವಿಕುಮಾರ,** ಸರ್ಕಾರದ ಮುಖ್ಯ ಕಾರ್ಯದರ್ಶಿ

ಮುಖ್ಯ ಕಾರ್ಯದರ್ಶಿ ನಿರ್ದೇಶನವೇನು?

ತಾಲ್ಲೂಕು ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಒಟ್ಟು ಕಟ್ಟಡಗಳಲ್ಲಿ ವಾರಕ್ಕೆ ಒಂದು ಕಟ್ಟಡವನ್ನಾದರೂ ತೆರವುಗೊಳಿಸಲು ಮುಂದಾಗಬೇಕು. ಕಾರ್ಯಾಚರಣೆಗೆ ಜಿಲ್ಲಾಡಳಿತದ ನಿರ್ದೇಶನದ ಮೇರೆಗೆ ಸ್ಪಷ್ಟ ಯೋಜನೆ ಹಾಕಿಕೊಳ್ಳಬೇಕು. ನಗರ ಪ್ರದೇಶದ ಸ್ಥಳೀಯ ಸಂಸ್ಥೆಗಳು, ವಾರದಲ್ಲಿ ಒಂದು ಧಾರ್ಮಿಕ ಕಟ್ಟಡವನ್ನು ತೆರವುಗೊಳಿಸಲು ಕಾರ್ಯಯೋಜನೆ ಸಿದ್ಧಪಡಿಸಿಕೊಳ್ಳಬೇಕು. ಕೈಗೊಂಡ ತೆರವು ಕಾರ್ಯಾಚರಣೆಯ ವರದಿಯನ್ನು ಪ್ರತಿ ತಿಂಗಳು ಗೃಹ ಇಲಾಖೆಯ ಹೆಚ್ಚುವರಿ ಕಾರ್ಯದರ್ಶಿಗೆ ಕಳುಹಿಸಬೇಕು ಎಂದು ಸರ್ಕಾರದ ಮುಖ್ಯ ಕಾರ್ಯದರ್ಶಿ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದಾರೆ.

ಎಲ್ಲೆಲ್ಲಿ ಎಷ್ಟೆಷ್ಟು?

ಜಿಲ್ಲೆ	ಅನಧಿಕೃತ ಕಟ್ಟಡ	ತೆರವು
ದಕ್ಷಿಣ ಕನ್ನಡ	1579	659
ಶಿವಮೊಗ್ಗ	740	347
ಬೆಳಗಾವಿ	612	19
ಕೋಲಾರ	397	27
ಬಾಗಲಕೋಟೆ	352	159
ವಿಜಯಪುರ	339	283
ಧಾರವಾಡ	324	31
ಮೈಸೂರು	315	158
ಕೊಪ್ಪಳ	306	15
ಕಲಬುರ್ಗಿ	222	133

ಸ್ವದೇಶಿ ನಿರ್ಮಿತ ವಿಮಾನವಾಹಕ ಯುದ್ಧನೌಕೆಯ ಪ್ರಯೋಗಾರ್ಥ ಸಂಚಾರ

ನವದೆಹಲಿ (ಪಿಟಿಐ): ಸ್ವದೇಶಿ ನಿರ್ಮಿತ ಮೊದಲ ವಿಮಾನವಾಹಕ ಯುದ್ಧ ನೌಕೆ (ಐಎಸಿ) ವಿಕ್ರಾಂತ್ ಬುಧವಾರ ಸಮುದ್ರದಲ್ಲಿ ತನ್ನ ಮೊದಲ ಪ್ರಯೋಗಾರ್ಥ ಸಂಚಾರ ಆರಂಭಿಸಿತು.

ದೇಶದ ಅತಿದೊಡ್ಡ ಮತ್ತು ಅತ್ಯಂತ ಸಂಕೀರ್ಣದಿಂದ ಕೂಡಿರುವ ಯುದ್ಧ ನೌಕೆ ಇದಾಗಿದ್ದು, ಸಂಚಾರ ಆರಂಭಿಸಿದ ಈ ದಿನ ಭಾರತೀಯ ನೌಕಾಪಡೆಯ ಪಾಲಿಗೆ ಐತಿಹಾಸಿಕ ದಿನವೆಂದು ಬಣ್ಣಿಸಲಾಗಿದೆ.

ಅತ್ಯಾಧುನಿಕ ವಿಮಾನವಾಹಕ ಯುದ್ಧ ನೌಕೆಯನ್ನು ದೇಶೀಯವಾಗಿ ವಿನ್ಯಾಸಗೊಳಿಸಿ, ನಿರ್ಮಿಸಿ, ಸಂಯೋಜಿಸಲಾಗಿದೆ. ಈ ಮೂಲಕ ಭಾರತವು ಜಗತ್ತಿನಲ್ಲಿ ಇಂಥ ಸಾಮರ್ಥ್ಯ ಹೊಂದಿರುವ ಕೆಲವೇ ರಾಷ್ಟ್ರಗಳ ಗುಂಪಿಗೆ ಸೇರಿದಂತಾಗಿದೆ ಎಂದು ನೌಕಾಪಡೆ ತಿಳಿಸಿದೆ.

50 ವರ್ಷಗಳ ಹಿಂದೆ 1971ರ ಯುದ್ಧದಲ್ಲಿ ಇದೇ ಹೆಸರಿನ ಈ ಮೊದಲಿನವಿಮಾನವಾಹಕಯುದ್ಧನೌಕೆ ಭಾರತದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತ್ತು. ಮುಂದಿನ ವರ್ಷದ ದ್ವಿತೀಯಾರ್ಧದಲ್ಲಿ ಈ ಯುದ್ಧ ನೌಕೆ ಭಾರತೀಯ ನೌಕಾಪಡೆಗೆ ಸೇರ್ಪಡೆಗೊಳ್ಳಲಿದೆ.

'ಆತ್ಮನಿರ್ಭರ ಭಾರತ' (ಸ್ವಾವಲಂಬಿ ಭಾರತ) ಮತ್ತು 'ಮೇಕ್ ಇನ್ ಇಂಡಿಯಾ' ಭಾಗವಾಗಿ ಕೈಗೊಂಡ ಈ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ ಎಂದು ಭಾರತೀಯ ನೌಕಾಪಡೆಯ ವಕ್ತಾರ ಕಮಾಂಡರ್ ವಿವೇಕ್ ಮಧ್ವಾಲ್ ಹೇಳಿದರು.

ನ್ಯಾಯಾಧೀಶರ ಹತ್ಯೆ: ತನಿಖೆ ವಹಿಸಿಕೊಂಡ ಸಿಬಿಐ

ನವದೆಹಲಿ (ಪಿಟಿಐ): ಜಾರ್ಖಂಡ್‌ನ ಧನಬಾದ್ ಜಿಲ್ಲಾ ಸೆಷನ್ ನ್ಯಾಯಾಧೀಶ ಉತ್ತಮ್ ಆನಂದ್ ಅವರ ಸಾವಿನ ತನಿಖೆಯನ್ನು ಸಿಬಿಐ ಕೈಗೆತ್ತಿಕೊಂಡಿದೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

'ಪ್ರಕರಣದ ತನಿಖೆ ವಹಿಸಿಕೊಳ್ಳುವಂತೆ ಜಾರ್ಖಂಡ್ ಸರ್ಕಾರ ಸಲ್ಲಿಸಿದ್ದ ಮನವಿ ಮೇರೆಗೆ ಈ ಕ್ರಮ ಕೈಗೊಳ್ಳಲಾಗಿದೆ. ಪ್ರಕರಣ ಕುರಿತು ಧನಬಾದ್ ಪೊಲೀಸರು ದಾಖಲಿಸಿರುವ ಎಫ್‌ಐಆರ್‌ಅನ್ನು ಸಹ ಪಡೆದುಕೊಳ್ಳಲಾಗಿದೆ' ಎಂದು ಸಿಬಿಐ ಮೂಲಗಳು ಹೇಳಿವೆ.

ಉತ್ತಮ್ ಆನಂದ್ ಅವರು ಧನಬಾದ್ ಪಟ್ಟಣದ ಜಡ್ಜಸ್ ಕಾಲೊನಿಯಲ್ಲಿ ಜುಲೈ 28ರಂದು ಬೆಳಿಗ್ಗೆ 5 ಗಂಟೆಯಲ್ಲಿ ಜಾಗಿಂಗ್ ಹೊರಟಿದ್ದರು. ಆಗ ವಾಹನವೊಂದು ಅವರಿಗೆ ಡಿಕ್ಕಿ ಹೊಡೆದು, ಪರಾರಿಯಾಗಿತ್ತು. ರಕ್ತದ ಮಡುವಿನಲ್ಲಿ ಬಿದ್ದಿದ್ದ ಅವರನ್ನು ದಾರಿಹೋಕರೊಬ್ಬರು ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಆಸ್ಪತ್ರೆ ತಲುಪುವ ಮುನ್ನವೇ ಅವರು ಮೃತಪಟ್ಟಿದ್ದರು ಎಂದು ವೈದ್ಯರು ಘೋಷಿಸಿದ್ದರು.

ಕೇಂದ್ರ, 11 ರಾಜ್ಯಗಳಿಗೆ 'ಸುಪ್ರೀಂ' ನೋಟಿಸ್: ಪ್ರತಿಕ್ರಿಯೆಗೆ ಸೂಚನೆ

ಕಬ್ಬು ಪೂರೈಸಿದ 14 ದಿನಗಳ ಒಳಗೆ ಬಾಕಿ ಪಾವತಿ ಕೋರಿ ಪಿಐಎಲ್



ನವದೆಹಲಿ (ಪಿಟಿಐ): ಕಾರ್ಖಾನೆಗಳಿಗೆ ಕಬ್ಬು ಪೂರೈಸಿದ 14 ದಿನಗಳ ಒಳಗಾಗಿ ರೈತರಿಗೆ ಬಾಕಿ ಹಣ ಪಾವತಿಸುವ ವ್ಯವಸ್ಥೆಯನ್ನು ಜಾರಿಗೊಳಿಸಬೇಕು ಎಂಬ ಬೇಡಿಕೆ ಕುರಿತು ಪ್ರತಿಕ್ರಿಯೆ ಸಲ್ಲಿಸುವಂತೆ ಕೇಂದ್ರ ಸರ್ಕಾರ ಹಾಗೂ ಕಬ್ಬು ಬೆಳೆಯುವ 11 ರಾಜ್ಯಗಳಿಗೆ ಸುಪ್ರೀಂಕೋರ್ಟ್ ಬುಧವಾರ ನೋಟಿಸ್ ಜಾರಿ ಮಾಡಿತು.

ಮಹಾರಾಷ್ಟ್ರದ ಮಾಜಿ ಸಂಸದ ರಾಜು ಅಣ್ಣಾ ಶೆಟ್ಟಿ ಪರ ಹಿರಿಯ ವಕೀಲ ಆನಂದ್ ಗ್ರೋವರ್ ಈ ಸಂಬಂಧ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದಾರೆ.

ಮುಖ್ಯನ್ಯಾಯಮೂರ್ತಿ ಎನ್.ವಿ.ರಮಣ, ನ್ಯಾಯಮೂರ್ತಿ ಸೂರ್ಯಕಾಂತ್ ಅವರಿರುವ ನ್ಯಾಯಪೀಠ ಈ ಅರ್ಜಿ ವಿಚಾರಣೆ ನಡೆಸಿತು.

'ಬೆಳೆಗಾರರು ಪೂರೈಕೆ ಮಾಡಿದ ಕಬ್ಬು ಕಾರ್ಖಾನೆಗಳಿಗೆ ತಲುಪಿದ 14 ದಿನಗಳ ಒಳಗಾಗಿ ರೈತರಿಗೆ ಬಾಕಿ ಹಣವನ್ನು ಪಾವತಿಸಬೇಕು ಎಂದು ಅಲಹಾಬಾದ್ ಹೈಕೋರ್ಟ್ ಈ ಹಿಂದೆ ನೀಡಿರುವ ತನ್ನ ತೀರ್ಪಿನಲ್ಲಿ ಹೇಳಿದೆ. ಹೀಗಾಗಿ, ಬಾಕಿ ಹಣ ಪಾವತಿಗೆ ವ್ಯವಸ್ಥೆಯೊಂದನ್ನು ಜಾರಿಗೊಳಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

'ಹಲವು ರಾಜ್ಯಗಳು ರೈತರಿಗೆ ಭಾರಿ ಮೊತ್ತದ ಬಾಕಿ ಉಳಿಸಿಕೊಂಡಿವೆ' ಎಂದೂ ವಕೀಲ ಗ್ರೋವರ್ ಅವರು ನ್ಯಾಯಪೀಠದ ಗಮನಕ್ಕೆ ತಂದರು.

ಕೇಂದ್ರ ಹಾಗೂ ಕರ್ನಾಟಕ ಸೇರಿದಂತೆ 11 ರಾಜ್ಯಗಳಿಗೆ ನೋಟಿಸ್ ಜಾರಿ ಮಾಡಲು ಸೂಚಿಸಿದ ನ್ಯಾಯಪೀಠ, ವಿಚಾರಣೆಯನ್ನು ಮೂರು ವಾರಗಳ ನಂತರ ಕೈಗೆತ್ತಿಕೊಳ್ಳುವುದಾಗಿ ಹೇಳಿತು.

ಭೂಕಂಪನದ ಮುನ್ಸೂಚನೆ ನೀಡುವ ಮೊಬೈಲ್ ಆ್ಯಪ್

ಡೆಹ್ರಾಡೂನ್ (ಪಿಟಿಐ): ಭೂಕಂಪನದ ಮುನ್ನೆಚ್ಚರಿಕೆ ನೀಡುವ ದೇಶದ ಮೊದಲ ಮೊಬೈಲ್ ಅಪ್ಲಿಕೇಶನ್ 'ಉತ್ತರಾಖಂಡ್ ಭೂಕಂಪ್ ಅಲರ್ಟ್' ಅನ್ನು ಉತ್ತರಾಖಂಡದ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಬುಧವಾರ ಲೋಕಾರ್ಪಣೆ ಮಾಡಿದ್ದಾರೆ. ರೂರ್ಕಿಯ ಐಐಟಿಯಲ್ಲಿ ಈ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ.

ಉತ್ತರಾಖಂಡದಲ್ಲಿ ಭೂಕಂಪನಗಳು ಸಂಭವಿಸುವ ಸಾಧ್ಯತೆ ಹೆಚ್ಚಿದೆ. ಹಾಗಾಗಿ, ಈ ರೀತಿಯ ಮೊಬೈಲ್ ಅಪ್ಲಿಕೇಶನ್ ಬಗ್ಗೆ ಜನರಿಗೆ ಮಾಹಿತಿ ನೀಡಬೇಕು ಎಂದು ಮೊಬೈಲ್ ಆ್ಯಪ್ ಬಿಡುಗಡೆ ಬಳಿಕ ಧಾಮಿ ಹೇಳಿದ್ದಾರೆ.

ಆಂಡ್ರಾಯ್ಡ್, ಐಒಎಸ್ ವೇದಿಕೆಗಳಲ್ಲಿ ಲಭ್ಯವಾಗುವಂತೆ ಎರಡೂ ಆವೃತ್ತಿಗಳಲ್ಲಿ ಅಪ್ಲಿಕೇಶನ್ ಲಭ್ಯವಿದೆ.

ಸುಧಾ ಭಾರದ್ವಾಜ್ ಜಾಮೀನು ಅರ್ಜಿ: ತೀರ್ಪು ಕಾಯ್ದಿರಿಸಿದ ಬಾಂಬೆ ಹೈಕೋರ್ಟ್


ಸಾಂದರ್ಭಿಕ ಚಿತ್ರ

ಮುಂಬೈ (ಪಿಟಿಐ): ವಕೀಲೆ ಹಾಗೂ ಸಾಮಾಜಿಕ ಕಾರ್ಯಕರ್ತೆ ಸುಧಾ ಭಾರದ್ವಾಜ್ ಅವರು ಜಾಮೀನು ಕೋರಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದ ತೀರ್ಪನ್ನು ಬಾಂಬೆ ಹೈಕೋರ್ಟ್ ಬುಧವಾರ ಕಾಯ್ದಿರಿಸಿತು.

ಸುಧಾ ಭಾರದ್ವಾಜ್ ಅವರು ಎಲ್ಗಾರ್ ಪರಿಷತ್ ಹಾಗೂ ಮಾವೊವಾದಿಗಳ ನಡುವಿನ ನಂಟಿಗೆ ಸಂಬಂಧಿಸಿದ ಪ್ರಕರಣದ ಆರೋಪಿಯಾಗಿದ್ದಾರೆ.

ಮಹಾರಾಷ್ಟ್ರ ಸರ್ಕಾರದ ಪರ ಅಡ್ವೋಕೇಟ್ ಜನರಲ್ ಅಶುತೋಷ್ ಕುಂಭಕೋಣಿ, ಎನ್‌ಐಎ ಪರ ಹೆಚ್ಚುವರಿ ಸಾಲಿಸಿಟರ್ ಜನರಲ್ ಅನಿಲ್ ಸಿಂಗ್ ಅವರು ವಾದ ಮಂಡಿಸಿ, ಜಾಮೀನು ನೀಡುವುದಕ್ಕೆ ವಿರೋಧ ವ್ಯಕ್ತಪಡಿಸಿದರು. ಸುಧಾ ಭಾರದ್ವಾಜ್ ಪರ ಹಿರಿಯ ವಕೀಲ ಯುಗ್ ಚೌಧರಿ ವಾದ ಮಂಡಿಸಿದರು.

ಎರಡೂ ಕಡೆಯವರ ವಾದ ಆಲಿಸಿದ, ನ್ಯಾಯಮೂರ್ತಿಗಳಾದ ಎಸ್.ಎಸ್.ಶಿಂಧೆ ಹಾಗೂ ಎನ್.ಜೆ.ಜಮಾದಾರ್ ಅವರು ತೀರ್ಪನ್ನು ಕಾಯ್ದಿರಿಸಿ ಆದೇಶಿಸಿದರು.

ಸ್ವಾತಂತ್ರ್ಯೋತ್ಸವ: ಅಥ್ಲೀಟ್‌ಗೆ ಆಹ್ವಾನ

ನವದೆಹಲಿ(ಪಿಟಿಐ): ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡ ಭಾರತದ ಕ್ರೀಡಾಪಟುಗಳು ಈ ವರ್ಷದ ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿರುವರು. ಒಲಿಂಪಿಕ್ಸ್‌ನಿಂದ ವಾಪಸಾಗುವ ಅಥ್ಲೀಟ್‌ಗಳಿಗೆ ಪ್ರಧಾನಿ ನರೇಂದ್ರ ಮೋದಿ ಆಹ್ವಾನ ನೀಡುವರು. ಕೆಂಪುಕೋಟೆಯಲ್ಲಿ ಧ್ವಜಾರೋಹಣದ ನಂತರ ಕ್ರೀಡಾಪಟುಗಳೊಂದಿಗೆ ಪ್ರಧಾನಿ ಸಂವಾದ ನಡೆಸುವರು ಎಂದು ಮೂಲಗಳು ತಿಳಿಸಿವೆ.



ಅದಿತಿ ಅಶೋಕ್ –ರಾಯಿಟರ್ಸ್ ಚಿತ್ರ

ದಿಗ್ಗಜರ ನಡುವೆ ಮಿಂಚಿದ ಅದಿತಿ

ಟೋಕಿಯೊ(ಪಿಟಿಐ): ಸತತ ಎರಡನೇ ಬಾರಿ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುತ್ತಿರುವ ಭಾರತದ ಅದಿತಿ ಅಶೋಕ್ ಅವರು ಗಾಲ್ಫ್‌ನಲ್ಲಿ ಅಮೋಘ ಆರಂಭ ಕಂಡಿದ್ದಾರೆ. ಬುಧವಾರ ನಡೆದ ಮೊದಲ ಸುತ್ತಿನ ಸ್ಪರ್ಧೆಯಲ್ಲಿ ಅಗ್ರ ಆಟಗಾರ್ತಿಯರ ಪಟ್ಟಿಯಲ್ಲಿ ಎರಡನೇ ಸ್ಥಾನವನ್ನು ಹಂಚಿಕೊಂಡರು.

ಕಸುಮಿಗಸೇಕಿ ಕೌಂಟಿ ಕ್ಲಬ್‌ನಲ್ಲಿ ಬಲಿಷ್ಠ ಗಾಲ್ಫರ್‌ಗಳಿಗೆ ಭಾರಿ ಸವಾಲೊಡ್ಡಿದ ಅದಿತಿ ಆರಂಭದಿಂದಲೇ ಉತ್ತಮ ಸಾಮರ್ಥ್ಯ ತೋರುತ್ತ ಮುನ್ನಡೆದರು. ಹೀಗಾಗಿ ವಿಶ್ವ ರ‍್ಯಾಂಕಿಂಗ್‌ನಲ್ಲಿ ಮೊದಲ ಸ್ಥಾನದಲ್ಲಿರುವ ನೆಲ್ಲಿ ಕೊರ್ಡಾ ಜೊತೆ ಸ್ಥಾನ ಹಂಚಿಕೊಳ್ಳಲು ಅವರಿಗೆ ಸಾಧ್ಯವಾಯಿತು. ಮೊದಲ ಸ್ಥಾನದಲ್ಲಿರುವ ಸ್ವೀಡನ್‌ನ ಮದಲಿನ್ ಸಗ್‌ಸ್ಟ್ರೋಮ್ ಅವರಿಗಿಂತ ಅದಿತಿ ಒಂದು ಶಾಟ್ ಹಿಂದೆ ಉಳಿದಿದ್ದಾರೆ. ಮದಲಿನ್ 66 ಶಾಟ್‌ಗಳೊಂದಿಗೆ ಮಿಂಚಿದರು.

ಹಾಲಿ ಚಾಂಪಿಯನ್ ಇನ್‌ಬಿ ಪಾರ್ಕ್ ಅವರಂಥ ಶ್ರೇಷ್ಠ ಆಟಗಾರ್ತಿಯರ ಎದುರು ಅದಿತಿ ಮಿಂಚಿದರೆ ಭಾರತದ ಮತ್ತೊಬ್ಬರು ಗಾಲ್ಫರ್ ದೀಕ್ಷಾ ದಾಗರ್ ಅವರಿಗೆ 56ನೇ ಸ್ಥಾನವನ್ನು ಹಂಚಿಕೊಳ್ಳಲಷ್ಟೇ ಸಾಧ್ಯವಾಯಿತು. ಇದು ಅವರ ಮೊದಲ ಒಲಿಂಪಿಕ್ಸ್. 60 ಮಂದಿ ಸ್ಪರ್ಧಾಕಣದಲ್ಲಿದ್ದು ಪ್ರತಿಯೊಬ್ಬರು ಪ್ರತಿ ದಿನ 18 ಹೋಲ್ಸ್ ಆಡಲಿದ್ದಾರೆ.



ಜಾವೆಲಿನ್ ಥ್ರೋ

ವಿಶ್ವ ದಾಖಲೆ
ಅಂತರ 98.48 ಮೀ
ಅಥ್ಲೀಟ್ ಜಾನ್ ಜೆಲೆಸ್ನಿ
ದೇಶ: ಜೆಕ್ ಗಣರಾಜ್ಯ
ವರ್ಷ: 1996

ಒಲಿಂಪಿಕ್ ದಾಖಲೆ
ಅಂತರ 90.57 ಮೀ
ಅಥ್ಲೀಟ್ ಆ್ಯಂಡ್ರಿಯಾಸ್ ತೊರ್ಕಿಲ್‌ಸೆನ್
ದೇಶ: ನಾರ್ವೆ
ವರ್ಷ: 2008

ಪದಕದ ಸುತ್ತು ಪ್ರವೇಶಿಸಿದ ನೀರಜ್ ಚೋಪ್ರಾ

ಟೋಕಿಯೊ (ಪಿಟಿಐ): ನಿರೀಕ್ಷೆ ಹುಸಿಯಾಗಿಸದ ನೀರಜ್ ಚೋಪ್ರಾ ಅವರು ಜಾವೆಲಿನ್ ಥ್ರೋದಲ್ಲಿ ತಮ್ಮ ಸಾಮರ್ಥ್ಯ ಸಾಬೀತು ಮಾಡಿದರು. ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಪದಕದ ಭರವಸೆ ಮೂಡಿಸಿದರು. ಬುಧವಾರ ನಡೆದ ಅರ್ಹತಾ ಸುತ್ತಿನ ಸ್ಪರ್ಧೆಯಲ್ಲಿ 86.65 ಮೀಟರ್ಸ್ ದೂರದ ಸಾಧನೆ ಮಾಡಿದ ಅವರು ಫೈನಲ್ ಪ್ರವೇಶಿಸಿದರು. ಶಿವಪಾಲ್ ಸಿಂಗ್ ಎಡವಿದರು.


ಅರ್ಹತಾ ಸುತ್ತಿನ 'ಎ' ವಿಭಾಗದಲ್ಲಿದ್ದ ನೀರಜ್ ಮೊದಲಿಗರಾದರು. ಫೈನಲ್ ಪ್ರವೇಶಿಸಿದವರ ಒಟ್ಟಾರೆ ಪಟ್ಟಿಯಲ್ಲೂ ಮೊದಲ ಸ್ಥಾನ ಗಳಿಸಿದರು. ಒಲಿಂಪಿಕ್ಸ್‌ನ ಜಾವೆಲಿನ್ ಎಸೆತದಲ್ಲಿ ಫೈನಲ್ ಪ್ರವೇಶಿಸಿದ ಭಾರತದ ಮೊದಲ ಅಥ್ಲೀಟ್ ಎನಿಸಿ ಕೊಂಡರು. ಫೈನಲ್ ಶನಿವಾರ ನಡೆಯಲಿದೆ.

ಹರಿಯಾಣದ ರೈತನ ಮಗನಾದ ನೀರಜ್ ಇದೇ ಮೊದಲ ಬಾರಿ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸುತ್ತಿದ್ದಾರೆ. 'ಪದಕದ ಸುತ್ತಿನಲ್ಲಿ ವಿಭಿನ್ನ ರೀತಿಯ ಸ್ಪರ್ಧೆ ಇರಲಿದ್ದು ವಿಶ್ವದ ಅತ್ಯುತ್ತಮ ಎಸೆತಗಾರ ಚಿನ್ನ ಗೆಲ್ಲಲಿದ್ದಾರೆ. ಹೀಗಾಗಿ ಫೈನಲ್‌ನಲ್ಲಿ ಸ್ಪರ್ಧಿಸಲು ಮಾನಸಿಕ ಸಿದ್ಧತೆ ಅಗತ್ಯ' ಎಂದು ಅವರು ಅಭಿಪ್ರಾಯಪಟ್ಟರು.

ಚೋಪ್ರಾ ಈ ವರೆಗಿನ ಏಳನೇ ಅತ್ಯುತ್ತಮ ಸಾಮರ್ಥ್ಯವನ್ನು ಬುಧವಾರ ತೋರಿದರು. ಈ ಸಾಲಿನಲ್ಲಿ ಇದು ಅವರ ಮೂರನೇ ಅತ್ಯುತ್ತಮ ಸಾಧನೆಯಾಗಿದೆ. ಈ ವರ್ಷದ ಮಾರ್ಚ್‌ನಲ್ಲಿ ನಡೆದಿದ್ದ ಇಂಡಿಯನ್ ಗ್ರ್ಯಾನ್‌ಪ್ರಿಯಲ್ಲಿ 88.07 ಮೀ, 2018ರ ಏಷ್ಯನ್ ಗೇಮ್ಸ್‌ನಲ್ಲಿ 88.06 ಮೀ, 2020ರಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಡೆದ ಕೂಟದಲ್ಲಿ 87.87 ಮೀ, ಈ ವರ್ಷದ ಮಾರ್ಚ್‌ನಲ್ಲಿ ನಡೆದ ಫೆಡರೇಷನ್ ಕಪ್‌ನಲ್ಲಿ 87.80 ಮೀ, 2018ರಲ್ಲಿ ದೋಹಾದಲ್ಲಿ ನಡೆದ ಡೈಮಂಡ್ ಲೀಗ್‌ನಲ್ಲಿ 87.43 ಮೀ ಮತ್ತು ಈ ವರ್ಷ ಫಿನ್ಲೆಂಡ್‌ನಲ್ಲಿ ನಡೆದಿದ್ದ ಕೊರ್ತಾನೆ ಗೇಮ್ಸ್‌ನಲ್ಲಿ 86.79 ಮೀ ಎಸೆದಿದ್ದರು.

ಫೈನಲ್‌ನಲ್ಲಿ ಅವರು ಚಿನ್ನದ ಪದಕ ಗೆಲ್ಲುವ ನೆಚ್ಚಿನ ಅಥ್ಲೀಟ್‌ಗಳಲ್ಲಿ ಒಬ್ಬರು ಎನ್ನಲಾಗುವ ಹಾಗೂ 2017ರ ವಿಶ್ವ ಚಾಂಪಿಯನ್, ಜರ್ಮನಿಯ ಜೊಹಾನ್ಸ್ ವೆಟರ್ ಸೇರಿದಂತೆ ಪ್ರಮುಖರ ಸವಾಲನ್ನು ಮೀರಬೇಕಾಗಿದೆ. 2018ರ ಏಷ್ಯನ್ ಗೇಮ್ಸ್‌ನಲ್ಲಿ ನೀರಜ್ ಚಿನ್ನ ಗೆದ್ದಾಗ ಕಂಚಿನ ಪದಕ ಗಳಿಸಿದ್ದ ಪಾಕಿಸ್ತಾನದ ಅರ್ಷದ್ ನದೀಮ್ 'ಬಿ' ಗುಂಪಿನಲ್ಲಿ ಅಗ್ರ ಸ್ಥಾನ ಗಳಿಸಿದರು. ಅದೇ ಗುಂಪಿನಲ್ಲಿದ್ದ ಶಿವಪಾಲ್ ಸಿಂಗ್ (76.40 ಮೀ) 12ನೇ ಸ್ಥಾನಕ್ಕೆ ಕುಸಿದರು.

26 ವರ್ಷದ ಶಿವಪಾಲ್ ಅವರ ಈ ವರ್ಷದ ಅತ್ಯುತ್ತಮ ಸಾಮರ್ಥ್ಯ 81.63 ಮೀಟರ್ಸ್ ಆಗಿತ್ತು. ಅವರ ಜೀವನಶ್ರೇಷ್ಠ ಸಾಧನೆ 86.23 ಮೀಟರ್ಸ್ ಆಗಿದೆ. ಬುಧವಾರ ಮೊದಲ ಪ್ರಯತ್ನದಲ್ಲಿ 76.40 ಮೀಟರ್ಸ್ ದೂರ ಎಸೆದ ಅವರಿಗೆ ನಂತರ ಕ್ರಮವಾಗಿ 74.80 ಮತ್ತು 74.81 ಮೀಟರ್ಸ್ ಎಸೆಯಲಷ್ಟೇ ಸಾಧ್ಯವಾಯಿತು. ಅವರ ಒಟ್ಟಾರೆ ಸ್ಥಾನ 27 ಆಗಿದೆ. ಸ್ಪರ್ಧೆಯಲ್ಲಿ ಒಟ್ಟು 32 ಮಂದಿ ಇದ್ದರು.



ಶಿವಪಾಲ್ ಸಿಂಗ್ –ರಾಯಿಟರ್ಸ್ ಚಿತ್ರ

ಫೈನಲ್ ಪ್ರವೇಶಿಸಿದ ಅಗ್ರ 10 ಕ್ರೀಡಾಪಟುಗಳು

ಅಥ್ಲೀಟ್	ದೇಶ	ದೂರ(ಮೀ)	ಗರಿಷ್ಠ(ಮೀ)	ರ‍್ಯಾಂಕಿಂಗ್
ನೀರಜ್ ಚೋಪ್ರಾ	ಭಾರತ	86.65	88.07	16
ಜೊಹಾನ್ ವೆಟರ್	ಜರ್ಮನಿ	85.64	97.76	1
ನದೀಮ್ ಅರ್ಷದ್	ಪಾಕಿಸ್ತಾನ	85.16	86.38	23
ಲಸಿ ಎಟಲಾಟಲೊ	ಫಿನ್ಲೆಂಡ್	84.50	84.98	13
ಜುಲಿಯಾನ್ ವೆಬರ್	ಜರ್ಮನಿ	84.41	88.29	9
ಮಿಹಾತ ನೊವಾಕ್	ರೊಮೇನಿಯ	83.27	86.37	28
ವಿಟೆನ್‌ಸ್ಲಾವ್	ಜೆಕ್ ಗಣರಾಜ್ಯ	83.04	88.34	26
ಆ್ಯಂಡ್ರಿಯನ್ ಮರ್ದರೆ	ಮೊಲ್ಡೋವ	82.70	86.66	15
ಪವೆಲ್ ಮಿಯಾಲೆಸ್ಕ	ಬೆಲಾರಸ್	82.64	85.06	25
ಎಎಂಬಿ ಕಿಮ್	ಸ್ವೀಡನ್	82.40	86.49	12

ಗ್ರಾಸ್‌ಗೆ ಚಿನ್ನ; ಸಿಡ್ನಿ ದಾಖಲೆ

ಟೋಕಿಯೊ: ಅಮೆರಿಕದ ಸಿಡ್ನಿ ಮೆಕ್‌ಲಾಫ್ಲಿನ್ ಮಹಿಳೆಯರ 400 ಮೀಟರ್ ಹರ್ಡಲ್ಸ್‌ನಲ್ಲಿ ಬೆಳಿಗ್ಗೆ ವಿಶ್ವದಾಖಲೆಯೊಂದಿಗೆ ಚಿನ್ನ ಗೆದ್ದರೆ ರಾತ್ರಿ ಹೊನಲು ಬೆಳಕಿನಲ್ಲಿ ನಡೆದ ಪುರುಷರ 200 ಮೀಟರ್ಸ್ ಓಟದಲ್ಲಿ ಕೆನಡಾದ ಆಂಡ್ರೆ ಡಿ ಗ್ರಾಸ್ 'ಚಿನ್ನದ ಓಟ'ದೊಂದಿಗೆ ಮಿಂಚಿದರು. ಟ್ರ್ಯಾಕ್ ಮತ್ತು ಫೀಲ್ಡ್‌ನಲ್ಲಿ ದಿನದ ಐದು ಫೈನಲ್‌ಗಳಲ್ಲಿ ಅಮೆರಿಕ ಅಥ್ಲೀಟ್‌ಗಳು ಐದು ಪದಕ ತಮ್ಮದಾಗಿಸಿಕೊಂಡರು.

ಮೆಕ್‌ಲಾಫ್ಲಿನ್ 51.46 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ತಮ್ಮದೇ ಹೆಸರಿನಲ್ಲಿದ್ದ ವಿಶ್ವದಾಖಲೆ (51.90) ಮುರಿದರು. ಬೆಳ್ಳಿ ಪದಕವೂ ಅಮೆರಿಕದ ಪಾಲಾಯಿತು. ದಲಿಲಾ ಮುಹಮ್ಮದ್ 51.58 ಸೆಕೆಂಡುಗಳಲ್ಲಿ ಗುರಿ ಮುಟ್ಟಿದರು. ಜಮೈಕಾದ ಜನಿವಿ ರಸೆಲ್ ಅವರನ್ನು ಹಿಂದಿಕ್ಕಿ ನೆದರ್ಲೆಂಡ್ಸ್‌ನ ಫೆಮ್ಕೆ ಬೋಲ್ (52.03) ಕಂಚು ಗೆದ್ದರು.

ಆಂಡ್ರೆ ಡಿ ಗ್ರಾಸ್ 19.62 ಸೆಕೆಂಡುಗಳಲ್ಲಿ ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನಕ್ಕೆ ಮುತ್ತಿಕ್ಕಿದರು. ಅಮೆರಿಕದ ಕೆನೆತ್ ಬೆಂಡಾನೆರ್ಕ್ (19.68ಸೆ) ಮತ್ತು ನೊಹ್ ಲೈಲ್ಸ್ (19.74) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಪುರುಷರ 800 ಮೀಟರ್ಸ್ ಓಟದಲ್ಲಿ ಕೆನ್ಯಾ ಪಾರಮ್ಯ ಮೆರೆಯಿತು. ಇಮ್ಮಾನ್ಯುಯೆಲ್ ಕಿಪ್‌ಕುರುಲ್ (1 ನಿ 45.06ಸೆ) ಮತ್ತು ಚೆರುಯೊಟ್ ಫರ್ಗ್ಯುಸನ್ (1:45.23) ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಗಳಿಸಿದರೆ ಪೋಲೆಂಡ್‌ನ ಪ್ಯಾಟ್ರಿಕ್ ಡೊಬೆಕ್ (1:45.39) ಕಂಚಿನ ಪದಕ ಗೆದ್ದರು. ಪುರುಷರ ಹ್ಯಾಮರ್ ಥ್ರೋದಲ್ಲಿ ಪೋಲೆಂಡ್‌ನ ಒಜ್ಸಿ ನೊವಿಕಿ (82.52 ಮೀ) ಮತ್ತು ಪವೆಲ್ ಫಜೆಕ್ (81.53ಮೀ) ಕ್ರಮವಾಗಿ ಚಿನ್ನ ಮತ್ತು ಕಂಚು ಗಳಿಸಿದರೆ ನಾರ್ವೆಯ ಈವಿಂಡ್ ಹೆನ್ರಿಕ್ಸನ್ (81.58ಮೀ) ಬೆಳ್ಳಿ ಗೆದ್ದರು.



ಸಿಡ್ನಿ ಮೆಕ್‌ಲಾಫ್ಲಿನ್ (ಮಧ್ಯ) ಅವರು ಹರ್ಡಲ್ ದಾಟಿದ ಕ್ಷಣ –ಎಎಫ್‌ಪಿ ಚಿತ್ರ

ಮಹಿಳೆಯರ 3000 ಮೀ ಸ್ಟೀಪಲ್‌ಚೇಸ್‌ನ ಚಿನ್ನ ಉಗಾಂಡದ ಪೆರುತ್ ಚೆಮುತಾಯಿ (9 ನಿ 1.45ಸೆ) ಪಾಲಾಯಿತು. ಅಮೆರಿಕದ ಕರ್ಟ್ನಿ ಫ್ರೆರಿಚ್ (9:04.79) ಮತ್ತು ಕೆನ್ಯಾದ ಹೈವಿನ್ ಕಿಯೆಂಗ್ (9:05.39) ಕ್ರಮವಾಗಿ ಬೆಳ್ಳಿ ಹಾಗೂ ಕಂಚು ಗಳಿಸಿದರು.



ಆಂಡ್ರೆ ಡಿ ಗ್ರಾಸ್ ಸಂಭ್ರಮ – ರಾಯಿಟರ್ಸ್ ಚಿತ್ರ



ಇಟಲಿಯ ಗೊಂಜಾಲೊ ಹಾಗೂ ಸರ್ಬಿಯಾದ ಆ್ಯಂಡ್ರಿಯಾ ಪೈಪೋಟಿ –ಎಎಫ್‌ಪಿ ಚಿತ್ರ

ಸೆಮಿಫೈನಲ್‌ಗೆ ಗ್ರೀಸ್

ಟೋಕಿಯೊ (ಎಪಿ): ಕಾನ್‌ಸ್ಟಾಂಟಿನೊಸ್ ಜೆನಿಡೊನಿಯಾಸ್ ಐದು ಗೋಲು ಗಳಿಸಿದರು. ಅವರ ಭರ್ಜರಿ ಆಟದ ಬಲದಿಂದ ಗ್ರೀಸ್ ತಂಡವು 10–4ರಿಂದ ಮಾಂಟೆನೆಗ್ರೊ ತಂಡವನ್ನು ಮಣಿಸಿ ಒಲಿಂಪಿಕ್ಸ್‌ನ ವಾಟರ್‌ಪೋಲೊ ಸೆಮಿಫೈನಲ್‌ಗೆ ಲಗ್ಗೆಯಿಟ್ಟಿದೆ.

ಎಂಟರ ಘಟ್ಟದ ಇನ್ನೊಂದು ಹಣಾಹಣಿಯಲ್ಲಿ 12–8ರಿಂದ ಅಮೆರಿಕ ತಂಡವನ್ನು ಪರಾಭವಗೊಳಿಸಿದ ಸ್ಪೇನ್ ಕೂಡ ಸೆಮಿಗೆ ಕಾಲಿಟ್ಟಿತು. 2004ರ ಅಥೆನ್ಸ್ ಕೂಟದಲ್ಲಿ ನಾಲ್ಕನೇ ಸ್ಥಾನ ಗಳಿಸಿದ ಬಳಿಕ ಗ್ರೀಸ್ ತಂಡವು ಇದೇ ಮೊದಲ ಬಾರಿ ಒಲಿಂಪಿಕ್ಸ್‌ನಲ್ಲಿ ನಾಲ್ಕರ ಘಟ್ಟ ತಲುಪಿದೆ. 2016ರ ರಿಯೊ ಕೂಟದಲ್ಲಿ ಆ ತಂಡವು ಆರನೇ ಸ್ಥಾನ ಗಳಿಸಿತ್ತು. ಇನ್ನೊಂದು ಕ್ವಾರ್ಟರ್‌ಫೈನಲ್‌ನಲ್ಲಿ ಸರ್ಬಿಯಾ 10–6ರಿಂದ ಇಟಲಿಯನ್ನು ಪರಾಭವಗೊಳಿಸಿತು.

ಮ್ಯಾರಥಾನ್ ಈಜು: ಬ್ರೆಜಿಲ್‌ನ ಚಿನ್ನ ಆ್ಯನಾ

ಟೋಕಿಯೊ (ರಾಯಿಟರ್ಸ್): ಹಾಲಿ ಚಾಂಪಿಯನ್ ಶರೋನ್ ವ್ಯಾನ್ ರೌವೆಂಡಾಲ್ ಅವರನ್ನು ಹಿಂದಿಕ್ಕಿದ ಬ್ರೆಜಿಲ್‌ನ ಆ್ಯನಾ ಮಾರ್ಸೆಲಾ ಕುನ್ಹಾ ಮ್ಯಾರಥಾನ್ ಈಜು ಸ್ಪರ್ಧೆಯ 10 ಕಿ.ಮೀ. ವಿಭಾಗದಲ್ಲಿ ಚಿನ್ನದ ಪದಕಕ್ಕೆ ಮುತ್ತಿಕ್ಕಿದರು.

ಒಡೈಬಾ ಮರೀನ್ ಪಾರ್ಕ್‌ನಲ್ಲಿ ನಡೆದ ಜಿದ್ದಾಜಿದ್ದಿನ ಪೈಪೋಟಿಯಲ್ಲಿ ಆ್ಯನಾ ಮತ್ತು ನೆದರ್ಲೆಂಡ್ಸ್‌ನ ಶರೋನ್ ಕೇವಲ ಒಂದು ಸೆಕೆಂಡಿಗೂ ಕಡಿಮೆ ಅಂತರದಲ್ಲಿ ಗುರಿ ತಲುಪಿದರು. ಆಸ್ಟ್ರೇಲಿಯಾದ ಕರೀನಾ ಲೀ ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಆ್ಯನಾ ಅವರು ವಿಶ್ವ ಚಾಂಪಿಯನ್‌ಷಿಪ್‌ನ ವೈಯಕ್ತಿಕ ವಿಭಾಗದಲ್ಲಿ ಐದು ಚಿನ್ನ ಗೆದ್ದಿದ್ದರೂ ಒಲಿಂಪಿಕ್ಸ್ ಪದಕ ಅವರಿಗೆ ಮರೀಚಿಕೆಯಾಗಿತ್ತು. ಆದರೆ ಇಲ್ಲಿ ಯಶಸ್ಸು ಸಾಧಿಸುವಲ್ಲಿ ಅವರು ತಪ್ಪು ಮಾಡಲಿಲ್ಲ.

2008ರ ಬೀಜಿಂಗ್ ಒಲಿಂಪಿಕ್ಸ್‌ನಲ್ಲಿ ಐದನೇ ಸ್ಥಾನ ಗಳಿಸಿದ್ದ ಆ್ಯನಾ, 2016ರ ರಿಯೊ ಕೂಟದಲ್ಲಿ 10ನೇ ಸ್ಥಾನಕ್ಕೆ ಸಮಾಧಾನಪಟ್ಟಿದ್ದರು.

ಗುರಿ ತಲುಪಲು ಒಂದು ಕಿಲೊ ಮೀಟರ್ ದೂರ ಇರುವ ಸಂದರ್ಭದಲ್ಲಿ ಮುಂದೆ ಸಾಗಿದ ಆ್ಯನಾ ಬಳಿಕ ಹಿಂದುಳಿಯಲೇ ಇಲ್ಲ.

'ಈ ಫಲಿತಾಂಶ ನಿರೀಕ್ಷಿಸಿರಲಿಲ್ಲ. ಅತ್ಯಂತ ಖುಷಿಯಾಗಿದೆ' ಎಂದು ಆ್ಯನಾ ಸಂಭ್ರಮದ ನಗೆ ಬೀರಿದರು.

ಫಲಿತಾಂಶ

ಸ್ಪರ್ಧಿ	ದೇಶ	ಸಮಯ
ಆ್ಯನಾ ಮಾರ್ಸೆಲಾ ಕುನ್ಹಾ	ಬ್ರೆಜಿಲ್	1ತಾಸು 59 ನಿ.30.8 ಸೆ.
ಶರೋನ್ ವ್ಯಾನ್ ರೌಂಡೇಲಾ	ನೆದರ್ಲೆಂಡ್ಸ್	1ತಾಸು 59 ನಿ.31.7 ಸೆ.
ಕರೀನಾ ಲೀ	ಆಸ್ಟ್ರೇಲಿಯಾ	1ತಾಸು 59 ನಿ. 32.5 ಸೆ.



ಆ್ಯನಾ ಮಾರ್ಸೆಲಾ ಕುನ್ಹಾ ಸಂಭ್ರಮ– ರಾಯಿಟರ್ಸ್ ಚಿತ್ರ

ಈಜುಪಟುಗಳಿಗೆ ಪ್ರತ್ಯೇಕವಾಸ

ಟೋಕಿಯೊ (ಎಎಫ್‌ಪಿ): ಒಲಿಂಪಿಕ್ಸ್‌ನ ಆರ್ಟಿಸ್ಟಿಕ್ ಈಜು ಸ್ಪರ್ಧೆಯಲ್ಲಿ ಭಾಗವಹಿಸಬೇಕಿದ್ದ ಗ್ರೀಸ್‌ನ ಐದು ಮಂದಿಗೆ ಕೋವಿಡ್ ಖಚಿತಪಟ್ಟಿದ್ದು, ತಂಡದ ಎಲ್ಲ 12 ಸ್ಪರ್ಧಿಗಳನ್ನು ಪ್ರತ್ಯೇಕವಾಸದಲ್ಲಿಡಲಾಗಿದೆ. ಕ್ರೀಡಾಕೂಟದ ಅಧಿಕಾರಿಗಳು ಬುಧವಾರ ಈ ವಿಷಯ ತಿಳಿಸಿದ್ದಾರೆ.

ಗ್ರೀಸ್ ತಂಡವು ಸ್ಪರ್ಧೆಗಳಿಂದ ಹಿಂದೆ ಸರಿದಿದೆ. ಸೋಂಕಿತರೊಂದಿಗೆ ನಿಕಟ ಸಂಪರ್ಕ ಹೊಂದಿದ್ದರು ಎಂದು ಗುರುತಿಸಲಾದ ಏಳು ಜನರು ಪ್ರತ್ಯೇಕವಾಸಕ್ಕೆ ಒಪ್ಪಿಕೊಂಡಿದ್ದಾರೆ ಎಂದು ಒಲಿಂಪಿಕ್ಸ್ ವಕ್ತಾರ ಮಸಾ ಟಕಾಯಾ ತಿಳಿಸಿದ್ದಾರೆ. ಈ ಏಳು ಜನರಲ್ಲಿ ಯಾರಿಗೂ ಸೋಂಕು ಹರಡಿಲ್ಲ. ಅವರಿಗೆ ವೈದ್ಯಕೀಯ ಸೌಲಭ್ಯ ನೀಡಲಾಗುತ್ತಿದೆ ಎಂದು ಟಕಾಯಾ ನುಡಿದರು.

ಮಂಗಳವಾರ ನಡೆದ ಡ್ಯುಯೆಟ್ ಸ್ಪರ್ಧೆಯಲ್ಲಿ ಗ್ರೀಸ್ ತಂಡವು ಭಾಗವಹಿಸಿರಲಿಲ್ಲ. ಈ ವಾರಾಂತ್ಯದಲ್ಲಿ ನಡೆಯಲಿರುವ ತಂಡ ವಿಭಾಗದ ಸ್ಪರ್ಧೆಗಳಿಂದ ಹಿಂದೆ ಸರಿದಿದೆ.

ಜಪಾನ್‌ನಲ್ಲಿ ಇದುವರೆಗೆ ಒಲಿಂಪಿಕ್ಸ್‌ಗೆ ಸಂಬಂಧಿಸಿದ 322 ಕೋವಿಡ್ ಪ್ರಕರಣಗಳು ಪತ್ತೆಯಾಗಿವೆ. ಸೋಂಕಿತರಲ್ಲಿ ಅಥ್ಲೀಟ್‌ಗಳು, ಅಧಿಕಾರಿಗಳು ಮತ್ತು ಮಾಧ್ಯಮದವರೂ ಸೇರಿದ್ದಾರೆ.

ಸ್ಪರ್ಧಾ ಸಮಯ

ಅಥ್ಲೆಟಿಕ್ಸ್

ಸಮಯ	ಸ್ಪರ್ಧೆ
ಬೆಳಿಗ್ಗೆ 7.30	ಪುರುಷರ ಟ್ರಿಪಲ್ ಜಂಪ್ ಫೈನಲ್
ಬೆಳಿಗ್ಗೆ 7.35	ಪುರುಷರ ಶಾಟ್‌ಪಟ್ ಫೈನಲ್
ಬೆಳಿಗ್ಗೆ 8.25	ಪುರುಷರ 110 ಮೀ. ಹರ್ಡಲ್ಸ್ ಫೈನಲ್
ಮಧ್ಯಾಹ್ನ 1 ಗಂಟೆ	ಪುರುಷರ 20 ಕಿ.ಮೀ. ನಡಿಗೆ ಫೈನಲ್ (ಕೆ.ಟಿ. ಇರ್ಫಾನ್, ಸಂದೀಪ್ ಕುಮಾರ್, ರಾಹುಲ್ ರೋಹಿಲಾ)
ಮಧ್ಯಾಹ್ನ 3.30	ಮಹಿಳೆಯರ ಪೋಲ್‌ವಾಲ್ಟ್ ಫೈನಲ್
ಸಂಜೆ 5.30	ಪುರುಷರ 400 ಮೀ. ಓಟ ಫೈನಲ್

ಬಾಕ್ಸಿಂಗ್

ಸಮಯ	ಸ್ಪರ್ಧೆ
ಮಧ್ಯಾಹ್ನ 12.05	ಪುರುಷರ ಫೆದರ್‌ವೇಟ್ (52–57 ಕೆಜಿ) ಫೈನಲ್

ಡೈವಿಂಗ್

ಸಮಯ	ಸ್ಪರ್ಧೆ
ಬೆಳಿಗ್ಗೆ 11.30	ಮಹಿಳೆಯರ 10 ಮೀ. ಪ್ಲಾಟ್‌ಫಾರ್ಮ್ ಫೈನಲ್

ಕರಾಟೆ

ಸಮಯ	ಸ್ಪರ್ಧೆ
ಸಂಜೆ 4.20	ಮಹಿಳೆಯರ ಕಟಾ ವಿಭಾಗದ ಫೈನಲ್
ಸಂಜೆ 5.10	ಪುರುಷರ ಕುಮಿಟೆ (67 ಕೆಜಿ) ಫೈನಲ್
ಸಂಜೆ 5.20	ಮಹಿಳೆಯರ ಕುಮಿಟೆ (55 ಕೆಜಿ) ಫೈನಲ್

ಮ್ಯಾರಥಾನ್ ಈಜು

ಸಮಯ	ಸ್ಪರ್ಧೆ
ಮಧ್ಯಾಹ್ನ 3.30	ಪುರುಷರ 10 ಕಿ.ಮೀ. ಫೈನಲ್

ಗಾಲ್ಫ್

ಸಮಯ	ಸ್ಪರ್ಧೆ
ಬೆಳಿಗ್ಗೆ 4 ಗಂಟೆ	ಮಹಿಳೆಯರ ವೈಯಕ್ತಿಕ ವಿಭಾಗದ ಸ್ಟ್ರೋಕ್ ಪ್ಲೇ ಎರಡನೇ ಸುತ್ತು (ಅದಿತಿ ಅಶೋಕ್, ದೀಕ್ಷಾ ದಾಗರ್)

ಸ್ಕೇಟ್‌ಬೋರ್ಡಿಂಗ್

ಸಮಯ	ಸ್ಪರ್ಧೆ
ಬೆಳಿಗ್ಗೆ 9 ಗಂಟೆ	ಪುರುಷರ ಪಾರ್ಕ್ ವಿಭಾಗದ ಫೈನಲ್

ಟೇಬಲ್ ಟೆನಿಸ್

ಸಮಯ	ಸ್ಪರ್ಧೆ
ಸಂಜೆ 4 ಗಂಟೆ	ಮಹಿಳಾ ತಂಡ ವಿಭಾಗದ ಫೈನಲ್

ಕುಸ್ತಿ

ಸಮಯ	ಸ್ಪರ್ಧೆ
ಬೆಳಿಗ್ಗೆ 7.30	ಮಹಿಳೆಯರ 57 ಕೆಜಿ ವಿಭಾಗದ ಫ್ರೀಸ್ಟೈಲ್ ರಿಪೇಜ್ (ಅನ್ಶು ಮಲಿಕ್)
ಬೆಳಿಗ್ಗೆ 8ರಿಂದ	ಮಹಿಳೆಯರ 53 ಕೆಜಿ ವಿಭಾಗದ ಪ್ರೀಕ್ವಾರ್ಟರ್ ಮತ್ತು ಕ್ವಾರ್ಟರ್‌ಫೈನಲ್ (ವಿನೇಶಾ ಫೋಗಟ್)
ಸಂಜೆ 4 ಗಂಟೆ	ಮಹಿಳೆಯರ 53 ಕೆಜಿ ವಿಭಾಗದ ಸೆಮಿಫೈನಲ್ಸ್, ಪುರುಷರ 57 ಕೆಜಿ (ರವಿ ದಹಿಯಾ), 86 ಕೆಜಿ ಮತ್ತು ಮಹಿಳೆಯರ 57 ಕೆಜಿ ಫ್ರೀಸ್ಟೈಲ್ ವಿಭಾಗಗಳ ಫೈನಲ್ ಬೌಟ್‌ಗಳು
	ಪುರುಷರ 86 ಕೆಜಿ ವಿಭಾಗದ ಕಂಚಿನ ಪದಕದ ಬೌಟ್ (ದೀಪಕ್ ಪುನಿಯಾ)

ಹಾಕಿ (ಪುರುಷರ ತಂಡ)

ಸಮಯ	ಸ್ಪರ್ಧೆ
ಬೆಳಿಗ್ಗೆ 7 ಗಂಟೆ	ಕಂಚಿನ ಪದಕದ ಪಂದ್ಯ (ಭಾರತ– ಜರ್ಮನಿ)
ಮಧ್ಯಾಹ್ನ 3.30	ಫೈನಲ್ ಪಂದ್ಯ (ಆಸ್ಟ್ರೇಲಿಯಾ– ಬೆಲ್ಜಿಯಂ)

(ಆವರಣದಲ್ಲಿ ಭಾರತದ ಸ್ಪರ್ಧಿಗಳು)

ಭಾರತೀಯ ಕಾಲಮಾನ | ಲೈವ್ ಸೋನಿ ನೆಟ್‌ವರ್ಕ್

ರೊಮಾಶಿನಾ ಆರು ಚಿನ್ನದ ದಾಖಲೆ

ಟೋಕಿಯೊ (ಎಪಿ): ರಷ್ಯಾದ ಆರ್ಟಿಸ್ಟಿಕ್ ಈಜುಪಟು ಸ್ವೆಟ್ಲಾನಾ ರೊಮಾಶಿನಾ ಒಲಿಂಪಿಕ್ಸ್‌ನಲ್ಲಿ ಆರನೇ ಚಿನ್ನ ಗಳಿಸಿ ದಾಖಲೆ ಬರೆದರು. ಸ್ವೆಟ್ಲಾನಾ ಕೊಲೆಸ್ನಿಚೆಂಕೊ ಜೊತೆಗೂಡಿದ ಅವರು ಡ್ಯುಯೆಟ್ ಫ್ರೀ ರೂಟೀನ್ ಫೈನಲ್‌ನಲ್ಲಿ ಬುಧವಾರ ಅಗ್ರಸ್ಥಾನ ಗಳಿಸಿದರು.

ಎರಡು ದಶಕಗಳಿಗಿಂತ ಹೆಚ್ಚು ಕಾಲ ರಷ್ಯಾದ ಸ್ಪರ್ಧಿಗಳು ಆರ್ಟಿಸ್ಟಿಕ್ ಈಜು ವಿಭಾಗದಲ್ಲಿ ಪಾರಮ್ಯ ಸಾಧಿಸಿದ್ದಾರೆ. 1996ರ ಅಟ್ಲಾಂಟ ಒಲಿಂಪಿಕ್ಸ್‌ನಲ್ಲಿ ಆ ದೇಶದವರು ಕೊನೆಯ ಬಾರಿ ಸೋಲು ಕಂಡಿದ್ದರು.

ರಷ್ಯಾದ ಅನಸ್ತಾಸಿಯಾ ಡೆವೀ ಡೊವಾ ಮತ್ತು ನತಾಲಿಯಾ ಇಶ್ಚೆಂಕೊ ಒಲಿಂಪಿಕ್ಸ್‌ನಲ್ಲಿ ತಲಾ ಐದು ಚಿನ್ನ ಗೆದ್ದ ಸಾಧನೆ ಮಾಡಿದ್ದರು. ರೊಮಾಶಿನಾ ಈಗ ಅವರನ್ನು ಹಿಂದಿಕ್ಕಿದ್ದಾರೆ.

31 ವರ್ಷದ ರೊಮಾಶಿನಾ ತಾನು ಸ್ಪರ್ಧಿಸಿದ ಎಲ್ಲ ಒಲಿಂಪಿಕ್ಸ್, ವಿಶ್ವ ಚಾಂಪಿಯನ್‌ಷಿಪ್ ಮತ್ತು ಯೂರೋಪಿಯನ್ ಚಾಂಪಿಯನ್‌ಷಿಪ್‌ಗಳಲ್ಲಿ ಪದಕದ ಸಾಧನೆ ಮಾಡಿದ್ದಾರೆ.

ಫೈನಲ್‌ನಲ್ಲಿ ರಷ್ಯಾದ ಜೋಡಿ ಒಟ್ಟು 195.9079 ಪಾಯಿಂಟ್ಸ್ ಕಲೆಹಾಕಿತು. ಬೆಳ್ಳಿ ಪದಕ ವಿಜೇತ ಚೀನಾದ ಹುವಾಂಗ್ ಕ್ಸುಚೆನ್ ಮತ್ತು ಸನ್ ವೆನ್ಯಾನ್ ಜೋಡಿಗೆ ಸಿಕ್ಕಿದ್ದು 192.4499 ಪಾಯಿಂಟ್ಸ್. ಉಕ್ರೇನ್‌ನ ಮಾರ್ಟಾ ಫೆಡಿನಾ ಮತ್ತು ಅನಸ್ತಾಸಿಯಾ ಸಾಯ್ಚುಕ್ (189.4620) ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಆರ್ಟಿಸ್ಟಿನ್ ಈಜು ವಿಭಾಗದಲ್ಲಿ ಉಕ್ರೇನ್‌ಗೆ ಇದು ಮೊದಲ ಒಲಿಂಪಿಕ್ಸ್ ಪದಕವಾಗಿದೆ.



ಆರ್ಟಿಸ್ಟಿಕ್ ಸ್ವಿಮಿಂಗ್‌ನ ಮಹಿಳೆಯರ ಡ್ಯುಯೆಟ್ ವಿಭಾಗದಲ್ಲಿ ಚಿನ್ನ ಗೆದ್ದ ರಷ್ಯಾ ಒಲಿಂಪಿಕ್ ಸಮಿತಿಯ ಸ್ವೆಟ್ಲಾನಾ ಕೊಲೆಸ್ನಿಚೆಂಕೊ ಮತ್ತು ಸ್ವೆಟ್ಲಾನಾ ರೊಮಾಶಿನಾ ಅವರು ತಂಡದೊಂದಿಗೆ ಸೆಲ್ಫಿ ತೆಗೆದು ಸಂಭ್ರಮಿಸಿದರು – ರಾಯಿಟರ್ಸ್ ಚಿತ್ರ

ಮಣಿಕಾ ಬಾತ್ರಾಗೆ ನೋಟಿಸ್

ನವದೆಹಲಿ(ಪಿಟಿಐ): ಟೋಕಿಯೊ ಒಲಿಂಪಿಕ್ಸ್‌ನಲ್ಲಿ ರಾಷ್ಟ್ರೀಯ ಕೋಚ್ ಸೌಮ್ಯದೀಪ್ ರಾಯ್ ಅವರ ಸಹಾಯ ಪಡೆಯಲು ನಿರಾಕರಿಸಿದ ಟೇಬಲ್ ಟೆನಿಸ್ ಪಟು ಮಣಿಕಾ ಬಾತ್ರ ಅವರಿಗೆ ನೋಟಿಸ್ ನೀಡಲು ಭಾರತ ಟೇಬಲ್ ಟೆನಿಸ್ ಫೆಡರೇಷನ್ ನಿರ್ಧರಿಸಿದೆ.

ಮಣಿಕಾ ಅವರ ಕೋಚ್ ಸನ್ಮಯ್ ಪರಾಂಜಪೆ ಅವರು ಟೋಕಿಯೊದಲ್ಲಿದ್ದರೂ ಸ್ಪರ್ಧೆ ನಡೆಯುವ ಸ್ಥಳಕ್ಕೆ ತೆರಳಲು ಅನುಮತಿ ಇರಲಿಲ್ಲ. ಸೌಮ್ಯದೀಪ್ ಮಾತ್ರ ಸ್ಥಳದಲ್ಲಿದ್ದರು.

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	32	22	16	70
ಅಮೆರಿಕ	25	30	22	77
ಜಪಾನ್	21	7	12	40
ಬ್ರಿಟನ್	15	18	15	48
ಆಸ್ಟ್ರೇಲಿಯಾ	15	4	17	36
ಭಾರತ (65ನೇ ಸ್ಥಾನ)	0	1	2	3

ಕ್ಲೈಂಬಿಂಗ್: ಜಂಜಾ ಫೈನಲ್‌ಗೆ

ಟೋಕಿಯೊ(ರಾಯಿಟರ್ಸ್): ಸ್ಲೊವೇನಿಯಾದ ಜಂಜಾ ಗಾರ್ನ್‌ಬ್ರೆಟ್, ಒಲಿಂಪಿಕ್ಸ್ ಕ್ಲೈಂಬಿಂಗ್‌ನ ಫೈನಲ್ ಪ್ರವೇಶಿಸಿದರು. ಫೈನಲ್ ಶುಕ್ರವಾರ ನಡೆಯಲಿದೆ. ಕ್ಲೈಂಬಿಂಗ್ ಸ್ಪರ್ಧೆಯನ್ನು ಮೊದಲ ಬಾರಿ ಒಲಿಂಪಿಕ್ಸ್‌ಗೆ ಸೇರ್ಪಡೆಗೊಳಿಸಲಾಗಿದೆ.



ಕಂಚಿನ ಪದಕಕ್ಕಾಗಿ ದೀಪಕ್ ಪೂನಿಯಾ ಸೆಣಸು • ದಹಿಯಾ ಕೈಗೆ ಕಚ್ಚಿದ ಕಜಕಸ್ತಾನದ ಬಾಕ್ಸರ್

ಚಿನ್ನದ ಭರವಸೆ ಮೂಡಿಸಿದ ರವಿ

ಚಿಬಾ, ಜಪಾನ್ (ಎಎಫ್‌ಪಿ): ಎದುರಾಳಿಯ ತಂತ್ರಗಳ ವಿರುದ್ಧ 'ಬಿಗಿ' ಪಟ್ಟುಗಳನ್ನು ಬಳಸಿದ ಭಾರತದ ರವಿ ದಹಿಯಾ ಒಲಿಂಪಿಕ್ಸ್ ಕುಸ್ತಿಯ ಫೈನಲ್ ಪ್ರವೇಶಿಸಿದರು. ಬುಧವಾರ ನಡೆದ 57 ಕೆಜಿ ವಿಭಾಗದ ನಾಲ್ಕರ ಘಟ್ಟದ ಬೌಟ್‌ನಲ್ಲಿ ಕಜಕಸ್ತಾನದ ನೂರಿಸ್ಲಾಮ್ ಸನಯೆವ್ ಅವರನ್ನು 'ಕೆಡವಿ' ರವಿ ಚಿನ್ನದ ಪದಕದ ಭರವಸೆ ಮೂಡಿಸಿದರು.

86 ಕೆಜಿ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ ಅಮೋಘ ಸಾಮರ್ಥ್ಯ ತೋರಿದ್ದ ದೀಪಕ್ ಪೂನಿಯಾ ನಾಲ್ಕರ ಘಟ್ಟದ ಬೌಟ್‌ನಲ್ಲಿ ಅಮೆರಿಕದ ಬಲಿಷ್ಠ ಪೈಲ್ವಾನ್ ಡೇವಿಡ್ ಮೊರಿಸ್ ಟೇಲರ್‌ಗೆ ಮಣಿದರು. ಗುರುವಾರ ಅವರು ಕಂಚಿನ ಪದಕಕ್ಕಾಗಿ ಸೆಣಸುವರು. ಮಹಿಳೆಯರ 57 ಕೆಜಿ ವಿಭಾಗದಲ್ಲಿ ಯೂರೋಪಿಯನ್ ಚಾಂಪಿಯನ್ ಐರಿನಾ ಕುರಚಿಕಿನ ವಿರುದ್ಧ ಸೋತ ಅನ್ಶು ಮಲಿಕ್ ಮೊದಲ ಸುತ್ತಿನಲ್ಲೇ ಹೊರಬಿದ್ದರು.

ಮೊದಲ ಸುತ್ತಿನಲ್ಲಿ ರವಿ ದಹಿಯಾ 2–1ರ ಮುನ್ನಡೆ ಸಾಧಿಸಿದ್ದರು. ಎರಡನೇ ಸುತ್ತಿನಲ್ಲಿ ನಿರ್ದಿಷ್ಟ ರಣತಂತ್ರದೊಂದಿಗೆ ಬಂದ ನೂರಿಸ್ಲಾಮ್ ಅವರು ರವಿ ಅವರ ಎಡಗಾಲನ್ನು ಹಿಡಿದು ಬೀಳಿಸಿ ಬಿಗಿಯಾಗಿ ಹಿಡಿದುಕೊಂಡು ಮೂರು ಬಾರಿ ಗಿರಿಗಿರಿ ತಿರುಗಿಸಿ ಆರು ಪಾಯಿಂಟ್ ಕಲೆ ಹಾಕಿದರು. ನಂತರ 9–2ರಲ್ಲಿ ಮುನ್ನಡೆದರು.


ಈ ಹಂತದಲ್ಲಿ ರವಿ ಚೇತರಿಸಿಕೊಳ್ಳುವುದು ಕಷ್ಟ ಎನಿಸಿತು. ಎದುರಾಳಿಯ ಕಾಲು ಹಿಡಿದು ಹೊರನೂಕಿದ ರವಿ ಪಾಯಿಂಟ್‌ಗಳನ್ನು ಕಲೆ ಹಾಕಿದರೂ 7–9ರ ಹಿನ್ನಡೆಯಲ್ಲಿದ್ದರು. ಕೊನೆಯ ಒಂದು ನಿಮಿಷ ಬಾಕಿ ಇದ್ದಾಗ ಡಬಲ್ ಲೆಗ್ ಅಟ್ಯಾಕ್ ಮಾಡಿ ಮ್ಯಾಟ್‌ಗೆ ಬೀಳಿಸಿ ಬಿಗಿ 'ಲಾಕ್' ಹಾಕಿದರು. ಬಿಡಿಸಿಕೊಳ್ಳಲು ನಡೆಸಿದ ಪ್ರಯತ್ನಗಳೆಲ್ಲವೂ ನೂರಿಸ್ಲಾಮ್ ನಡೆಸಿದ ಪ್ರಯತ್ನಗಳೆಲ್ಲವೂ ವಿಫಲವಾದವು. ಹೀಗಾಗಿ ರವಿ ಅವರನ್ನು ವಿಜೇತ ಎಂದು ಘೋಷಿಸಲಾಯಿತು.

ನೂರಿಸ್ಲಾಮ್ ಅವರು ಒಂದು ಹಂತದಲ್ಲಿ ರವಿಯ ತೋಳಿಗೆ ಬಲವಾಗಿ ಕಚ್ಚಿದರು.

ಈ ಜಯದೊಂದಿಗೆ ರವಿ ದಹಿಯಾ ಒಲಿಂಪಿಕ್ಸ್ ಕುಸ್ತಿಯಲ್ಲಿ ಫೈನಲ್ ಪ್ರವೇಶಿಸಿದ ಭಾರತದ ಎರಡನೇ ಪೈಲ್ವಾನ್ ಎನಿಸಿಕೊಂಡರು. 2012ರ ಒಲಿಂಪಿಕ್ಸ್‌ನಲ್ಲಿ ಸುಶೀಲ್ ಕುಮಾರ್ ಚಿನ್ನದ ಪದಕದ ಬೌಟ್ ಪ್ರವೇಶಿಸಿ ಬೆಳ್ಳಿ ಗಳಿಸಿದ್ದರು. ವಿಶ್ವ ಚಾಂಪಿಯನ್, ರಷ್ಯಾದ ಜವೂರ್ ಉಗುವೆ ಎದುರು ಗುರುವಾರ ನಡೆಯಲಿರುವ ಫೈನಲ್‌ನಲ್ಲಿ ಗೆದ್ದರೆ ಇತಿಹಾಸ ನಿರ್ಮಾಣ ಮಾಡಿದಂತಾಗುತ್ತದೆ.

ಮೊದಲ ಎರಡೂ ಬೌಟ್‌ಗಳಲ್ಲಿ ರವಿ ತಾಂತ್ರಿಕ ಪಾರಮ್ಯ ಸಾಧಿಸಿ ಜಯ ಗಳಿಸಿದ್ದರು.

ನೂರಿಸ್ಲಾಮ್ ಸನಯೆವ್ ಅವರನ್ನು ಹೊರನೂಕಿದ ರವಿ ದಹಿಯಾ –ರಾಯಿಟರ್ಸ್ ಚಿತ್ರ



ಡೇವಿಡ್ ಮೊರಿಸ್ ಟೇಲರ್ ಎದುರು ಸೆಣಸಿದ ದೀಪಕ್ ಪೂನಿಯಾ

ಇಂದು ವಿನೇಶಾ ಕಣಕ್ಕೆ



ಭಾರತದ ಭರವಸೆಯ ಕುಸ್ತಿಪಟು ವಿನೇಶಾ ಪೋಗಟ್ ಗುರುವಾರ ಕಣಕ್ಕೆ ಇಳಿಯುವರು. 53 ಕೆಜಿ ಫ್ರೀಸ್ಟೈಲ್ ವಿಭಾಗದಲ್ಲಿ ಸ್ವೀಡನ್‌ನ ಸೋಫಿಯಾ ಮಗ್ದಲಿನಾ ಪ್ಯಾಟಿನ್ಸನ್ ವಿರುದ್ಧ ವಿನೇಶಾ ಸೆಣಸುವರು. ವಿನೇಶಾಗೆ ಇದು ಎರಡನೇ ಒಲಿಂಪಿಕ್ಸ್. ಕಳೆದ ಬಾರಿ ರಿಯೊದಲ್ಲೂ ಅವರು ಪಾಲ್ಗೊಂಡಿದ್ದರು. ಸೋಫಿಯಾ ಈಗಾಗಲೇ ಮೂರು ಒಲಿಂಪಿಕ್ಸ್‌ಗಳಲ್ಲಿ ಪಾಲ್ಗೊಂಡಿದ್ದಾರೆ.

ಇದಕ್ಕೂ ಮೊದಲು ಅನ್ಶು ಮಲಿಕ್ ಅವರು ರಿಪೇಜ್ ಬೌಟ್‌ನಲ್ಲಿ ರಷ್ಯಾದ ವಲೆರಿಯಾ ಕೊಬ್ಲೋವಾ ಎದುರು ಸೆಣಸುವರು. ಸಂಜೆ ರವಿ ದಹಿಯಾ ಅವರ ಫೈನಲ್ ಬೌಟ್ ನಡೆಯಲಿದ್ದು ನಂತರ ಕಂಚಿನ ಪದಕಕ್ಕಾಗಿ ದೀಪಕ್ ಪೂನಿಯಾ ಹೋರಾಡುವರು.

ಜಪಾನ್ ಹುಡುಗಿಯರ ಮೋಡಿ

ಟೋಕಿಯೊ: ಮಹಿಳೆಯರ ಸ್ಕೇಟ್‌ಬೋರ್ಡ್‌ನ ಪಾರ್ಕ್ ವಿಭಾಗದ ಫೈನಲ್‌ನಲ್ಲಿ ಜಪಾನ್‌ನ ಸಕುರಾ ಯೊಸೊಜುಮಿ ಮೋಡಿ ಮಾಡಿದರು.

ಅರಿಯಾಕೆ ಅರ್ಬನ್ ಸ್ಪೋರ್ಟ್ಸ್ ಪಾರ್ಕ್‌ನಲ್ಲಿ 19 ವರ್ಷದ ಈ ತಾರೆ 60.09 ಸ್ಕೋರ್ ಕಲೆಹಾಕಿ ಚಿನ್ನಕ್ಕೆ ಮುತ್ತಿಟ್ಟರು. ಆತಿಥೇಯ ದೇಶದ ಮತ್ತೋರ್ವ ಪ್ರತಿಭೆ, 12 ವರ್ಷದ ಕೊಕೊನಾ ಹಿರಾಕಿ ಬೆಳ್ಳಿಯ ಪದಕ ಪಡೆದರು. ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸಿದ ಜಪಾನ್‌ನ ಅತಿ ಕಿರಿಯ ಕ್ರೀಡಾಪಟು ಎಂಬ ಹಿರಿಮೆಯೂ ಅವರದ್ದಾಯಿತು. ಅವರು 59.04 ಸ್ಕೋರ್ ಕಲೆಹಾಕಿದರು. ಎರಡನೇ ರನ್‌ನಲ್ಲಿ ಅವರಿಂದ ಈ ಸಾಮರ್ಥ್ಯ ಮೂಡಿಬಂತು.

ಬ್ರಿಟನ್‌ನ 13 ವರ್ಷದ ಸ್ಕೈ ಬ್ರೌನ್ ಕಂಚು ತಮ್ಮದಾಗಿಸಿಕೊಂಡರು. ಜಪಾನ್‌ನಲ್ಲಿ ಹುಟ್ಟಿ ಬೆಳೆದ ಬ್ರೌನ್, ಕ್ಯಾಲಿಫೋರ್ನಿಯಾದಲ್ಲಿ ನೆಲೆಸಿದ್ದಾರೆ. ಇಲ್ಲಿ ಅವರು ಬ್ರಿಟನ್ ತಂಡವನ್ನು ಪ್ರತಿನಿಧಿಸಿದ್ದಾರೆ. ಬ್ರೌನ್ ಮೊದಲ ಎರಡು ರನ್‌ಗಳಲ್ಲಿ ನಿರೀಕ್ಷಿತ ಸ್ಕೋರ್ ಕಲೆಹಾಕಲು ವಿಫಲರಾದರು. ಮೂರನೇ ಹಾಗೂ ಅಂತಿಮ ರನ್‌ನಲ್ಲಿ 56.47 ಸ್ಕೋರ್ ಗಳಿಸಿ ಮೂರನೇ ಸ್ಥಾನದಲ್ಲಿ ಕಾಣಿಸಿಕೊಂಡರು.



ಮಹಿಳೆಯರ ಸ್ಕೇಟ್‌ಬೋರ್ಡ್‌ನ ಪಾರ್ಕ್ ಸ್ಪರ್ಧೆಯಲ್ಲಿ (ಎಡದಿಂದ) ಬೆಳ್ಳಿ ಗೆದ್ದ ಕೊಕೊನಾ ಹಿರಾಕಿ, ಚಿನ್ನಕ್ಕೆ ಮುತ್ತಿಟ್ಟ ಸಕುರಾ ಯೊಸೊಜುಮಿ ಮತ್ತು ಕಂಚು ಗಳಿಸಿದ ಸ್ಕೈ ಬ್ರೌನ್ ವಿಜಯ ವೇದಿಕೆಯಲ್ಲಿ ಸಂಭ್ರಮಿಸಿದರು –ರಾಯಿಟರ್ಸ್ ಚಿತ್ರ

ಕಂಚಿನೊಂದಿಗೆ ಹೃದಯ ಗೆದ್ದ ಲವ್ಲಿನಾ

ಟೋಕಿಯೊ (ಪಿಟಿಐ): ಮಹಿಳಾ ಬಾಕ್ಸಿಂಗ್‌ನಲ್ಲಿ ಭಾರತದ ಭರವಸೆಯಾಗಿದ್ದ ಲವ್ಲಿನಾ ಬೊರ್ಗೊಹೈನ್ ಕಂಚಿನ ಪದಕ ಗೆದ್ದು ತಂತ್ರಜ್ಞಾನದ ನಗರಿಯಲ್ಲಿ ತ್ರಿವರ್ಣ ಧ್ವಜ ರಾರಾಜಿಸುವಂತೆ ಮಾಡಿದರು.

69 ಕೆ.ಜಿ.ವಿಭಾಗದಲ್ಲಿ ಸ್ಪರ್ಧಿಸಿದ್ದ ಲವ್ಲಿನಾ 0–5ರಿಂದ ಟರ್ಕಿಯ ಹಾಲಿ ವಿಶ್ವ ಚಾಂಪಿಯನ್ ಬುಸೆನಾಜ್ ಸುರ್ಮೆನೆಲಿ ವಿರುದ್ಧ ಸೋತರು. ಹೀಗಿದ್ದರೂ ಕಂಚು ಪಡೆದು ಚೊಚ್ಚಲ ಒಲಿಂಪಿಕ್ಸ್ ಅನ್ನು ಸ್ಮರಣೀಯವಾಗಿಸಿಕೊಂಡರು.

ಅಸ್ಸಾಂ ರಾಜ್ಯದ 23 ವರ್ಷ ವಯಸ್ಸಿನ ಲವ್ಲಿನಾ, ಒಲಿಂಪಿಕ್ಸ್‌ನಲ್ಲಿ ಪದಕ ಜಯಿಸಿದ ಭಾರತದ ಮೂರನೇ ಬಾಕ್ಸರ್ ಎಂಬ ಹಿರಿಮೆ ತಮ್ಮದಾಗಿಸಿಕೊಂಡರು. ಇದಕ್ಕೂ ಮುನ್ನ ವಿಜೇಂದರ್ ಸಿಂಗ್ (2008) ಮತ್ತು ಎಂ.ಸಿ.ಮೇರಿ ಕೋಮ್ (2012) ಈ ಸಾಧನೆ ಮಾಡಿದ್ದರು.

ಹಿಂದಿನ ಪಂದ್ಯಗಳಲ್ಲಿ ಅಮೋಘ ಸಾಮರ್ಥ್ಯ ತೋರಿ ಚಿನ್ನದ ಭರವಸೆ ಮೂಡಿಸಿದ್ದ ಲವ್ಲಿನಾ, ಸುರ್ಮೆನೆಲಿ ವಿರುದ್ಧ ಸಂಪೂರ್ಣವಾಗಿ ಮಂಕಾದರು. ಹಲವು ಎಚ್ಚರಿಕೆಗಳನ್ನು ನೀಡಿದರೂ ಭಾರತದ ಬಾಕ್ಸರ್, ಪಂದ್ಯದ ರೆಫರಿಯ ಮಾತಿಗೆ ಕಿವಿಗೊಡಲಿಲ್ಲ. ಹೀಗಾಗಿ ಎರಡನೇ ಸುತ್ತಿನ ವೇಳೆ ಲವ್ಲಿನಾ ಖಾತೆಯಿಂದ ಒಂದು ಪಾಯಿಂಟ್ ಕಡಿತಗೊಳಿಸಲಾಯಿತು.

ಆರಂಭದಲ್ಲಿ ಲವ್ಲಿನಾ ಚುರುಕಿನ ಪಾದ ಚಲನೆಯ ಮೂಲಕ ಗಮನಸೆಳೆದಿದ್ದರು. ಬಳಿಕ ಸುರ್ಮೆನೆಲಿ ಮಿಂಚಿದರು. ಭಾರತದ ಬಾಕ್ಸರ್‌ನ ತಲೆ ಹಾಗೂ ಮುಖಕ್ಕೆ ಬಲವಾದ ಪಂಚ್‌ಗಳನ್ನು ಮಾಡಿ ಪಾಯಿಂಟ್ ಹೆಕ್ಕಿದರು. ಮೂರನೇ ಸುತ್ತಿನಲ್ಲೂ ಟರ್ಕಿಯ ಬಾಕ್ಸರ್ ಆಕ್ರಮಣಕಾರಿಯಾದರು. 23 ವರ್ಷದ ಸುರ್ಮೆನೆಲಿ ಈ ವರ್ಷ ಎರಡು ಅಂತರರಾಷ್ಟ್ರೀಯ ಕೂಟಗಳಲ್ಲಿ ಚಿನ್ನದ ಪದಕ ಗೆದ್ದ ಸಾಧನೆ ಮಾಡಿದ್ದರು.

'ಏನು ಹೇಳಬೇಕೊ ತೋಚುತ್ತಿಲ್ಲ. ಈ ಪಂದ್ಯದಲ್ಲಿ ಅಂದುಕೊಂಡ ರೀತಿಯಲ್ಲಿ ಹೋರಾಡಲು ಆಗಲಿಲ್ಲ. ಇನ್ನಷ್ಟು ಪರಿಣಾಮಕಾರಿ ಸಾಮರ್ಥ್ಯ ತೋರಬೇಕಿತ್ತು' ಎಂದು ಲವ್ಲಿನಾ ಪಂದ್ಯದ ಬಳಿಕ ಪ್ರತಿಕ್ರಿಯಿಸಿದರು.



ಭಾರತದ ಲವ್ಲಿನಾ ಮತ್ತು ಟರ್ಕಿಯ ಸುರ್ಮೆನೆಲಿ (ಕೆಂಪು ಪೋಷಾಕು) ಪೈಪೋಟಿ ನಡೆಸಿದ ರೀತಿ –ಎಎಫ್‌ಪಿ ಚಿತ್ರ

ಗಣ್ಯರಿಂದ ಗುಣಗಾನ

ಲವ್ಲಿನಾ ಸಾಧನೆಗೆ ಮೆಚ್ಚುಗೆಯ ಮಹಾಪೂರವೇ ಹರಿದುಬಂದಿದೆ.

ರಾಷ್ಟ್ರಪತಿ ರಾಮನಾಥ್ ಕೋವಿಂದ್, ಪ್ರಧಾನಿ ನರೇಂದ್ರ ಮೋದಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟ್ಯಾಲಿನ್ ಹೀಗೆ ಅನೇಕ ಗಣ್ಯರು ಲವ್ಲಿನಾ ಅವರನ್ನು ಅಭಿನಂದಿಸಿದ್ದಾರೆ.

'ದಿಟ್ಟತನದಿಂದ ಹೋರಾಡಿದ್ದೀರಿ. ನಿಮ್ಮ ಸಾಧನೆ ದೇಶದ ಅನೇಕರಿಗೆ ಸ್ಫೂರ್ತಿಯ ಸೆಲೆಯಾಗಲಿದೆ. ನಿಮಗೆ ಅಭಿನಂದನೆ' ಎಂದು ಮೋದಿ ಟ್ವೀಟ್ ಮಾಡಿದ್ದಾರೆ.

ಭಾರತದ ವನಿತೆಯರ ದಿಟ್ಟ ಆಟ

ಹಾಕಿ: ಮಹಿಳೆಯರಿಗೆ ಕಂಚಿನಾಸೆ ಬಾಕಿ; ಫೈನಲ್‌ಗೆ ಅರ್ಜೆಂಟೀನಾ



ಸೋಲಿನ ದುಃಖದಲ್ಲಿ ಕುಸಿದ ಭಾರತ ತಂಡದ ಆಟಗಾರ್ತಿಯರು –ಪಿಟಿಐ ಚಿತ್ರ

ಟೋಕಿಯೊ (ಪಿಟಿಐ): ವೀರಾವೇಷದಿಂದ ಹೋರಾಟ ಮಾಡಿದ ಭಾರತ ಮಹಿಳಾ ಹಾಕಿ ತಂಡಕ್ಕೆ ಒಲಿಂಪಿಕ್ಸ್ ಫೈನಲ್ ಪ್ರವೇಶಿಸುವ ಅವಕಾಶ ಒಲಿಯಲಿಲ್ಲ. ಆದರೆ, ಕಂಚಿನ ಪದಕ ಜಯಿಸುವ ಅವಕಾಶವೊಂದು ಈಗ ಬಾಕಿ ಇದೆ.

ಇದೇ ಮೊದಲ ಬಾರಿಗೆ ಸೆಮಿಫೈನಲ್ ಪ್ರವೇಶಿಸಿದ್ದ ಭಾರತ ತಂಡವು ಬುಧವಾರ ನಡೆದ ಪಂದ್ಯದಲ್ಲಿ 1–2ರಿಂದ ವಿಶ್ವದ ಎರಡನೇ ಶ್ರೇಯಾಂಕದ ಅರ್ಜೆಂಟಿನಾ ತಂಡದ ಎದುರು ಪರಾಭವಗೊಂಡಿತು.

ಆದರೆ, ಬಲಿಷ್ಠ ತಂಡಕ್ಕೆ ಸುಲಭದ ತುತ್ತಾಗಲಿಲ್ಲ. ಪಂದ್ಯದ ಎರಡನೇ ನಿಮಿಷದಲ್ಲಿಯೇ ಗುರ್ಜಿತ್ ಕೌರ್ ಪೆನಾಲ್ಟಿ ಕಾರ್ನರ್ ಅವಕಾಶವನ್ನು ಗೋಲಿನಲ್ಲಿ ಪರಿವರ್ತಿಸಿದರು. 1–0 ಮುನ್ನಡೆ ಗಳಿಸಿದ ಭಾರತವು ಕ್ವಾರ್ಟರ್‌ಫೈನಲ್ ಆಟವನ್ನೇ ಮರಳಿ ಅರಳಿಸುವ ಯತ್ನ ಮಾಡಿತು.

ಎಂಟರ ಘಟ್ಟದಲ್ಲಿ ಆಸ್ಟ್ರೇಲಿಯಾ ಎದುರು 1–0ಯಿಂದ ಜಯ ಸಾಧಿಸಿತ್ತು. ಆದರೆ, ಇಲ್ಲಿ ರಾಣಿ ರಾಂಪಾಲ್ ಬಳಗದ ತಂತ್ರಗಾರಿಕೆಗೆ ಅರ್ಜೆಂಟಿನಾ ಆಟಗಾರ್ತಿಯರು ಸವಾಲೊಡ್ಡಿದರು.

ತಂಡದ ನಾಯಕಿ ಮರಿಯಾ ಬ್ಯಾರಿಒನೆವೊ (18ನೇ ನಿಮಿಷ ಮತ್ತು 36ನೇ ನಿಮಿಷ) ಎರಡು ಗೋಲು ಹೊಡೆದು ಗೆಲುವಿನ ರೂವಾರಿಯಾದರು.

ಇದೇ ಮೊದಲ ಬಾರಿಗೆ ನಾಲ್ಕರ ಘಟ್ಟ ಪ್ರವೇಶಿಸಿ ಐತಿಹಾಸಿಕ ಸಾಧನೆ ಮಾಡಿರುವ ಭಾರತ ತಂಡದ ಕೋಚ್ ಶೋರ್ಡ್ ಮರೈನ್ ಮತ್ತು ನಾಯಕಿ ರಾಣಿ ಅವರ ಪ್ರಯತ್ನಕ್ಕೆ ಫಲ ಸಿಗಲಿಲ್ಲ. ಆದರೆ, ರಕ್ಷಣಾ ಪಡೆಯ ಆಟವೂ ಉತ್ತಮವಾಗಿತ್ತು. ಅದರಲ್ಲೂ ನಾಲ್ಕನೇ ಕ್ವಾರ್ಟರ್‌ನಲ್ಲಿ ಭಾರತದ ಆಟಗಾರ್ತಿಯರು ತಮ್ಮ ಸಾಮರ್ಥ್ಯವನ್ನು ಪಣಕ್ಕೊಡ್ಡಿದರು.

ಇದರಿಂದಾಗಿ 51ನೇ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್ ಲಭಿಸಿತು. ಆದರೆ ಈ ಬಾರಿ ಗುರ್ಜಿತ್ ಡ್ರ್ಯಾಗ್‌ಫ್ಲಿಕ್ ಅನ್ನು ಗೋಲ್‌ಕೀಪರ್ ಮಾರಿಯಾ ಸುಸಿ ತಡೆದರು.

ಪಂದ್ಯದ ಮುಕ್ತಾಯಕ್ಕೆ ಇನ್ನೂ 17 ಸೆಕೆಂಡುಗಳು ಬಾಕಿ ಇರುವಾಗ ನವನೀತಾ ಕೌರ್ ಮಾಡಿದ ಡಿಫ್ಲೆಕ್ಷನ್ ಮತ್ತು ಉದಿತಾ ಹೊಡೆದ ಚೆಂಡಿನ ವೇಗಕ್ಕೆ ಗೋಲ್‌ಕೀಪರ್ ತಡೆಯೊಡ್ಡಿದರು. ರಾಣಿ ಬಳಗದ ಆಟಗಾರ್ತಿಯರ ಕಣ್ಣಾಲಿಗಳು ತುಂಬಿದವು. ವಿಷಾದ ಆವರಿಸಿತ್ತು. ಇತ್ತ ಅರ್ಜೆಂಟಿನಾದವರು ಸಂಭ್ರಮದಲ್ಲಿ ಮುಳುಗಿದರು.

ಆ. 6ರಂದು ನಡೆಯಲಿರುವ ಫೈನಲ್‌ನಲ್ಲಿ ಅರ್ಜೆಂಟಿನಾ ತಂಡವು ನೆದರ್ಲೆಂಡ್ಸ್ ವಿರುದ್ಧ ಆಡಲಿದೆ. ಅದೇ ದಿನ ಕಂಚಿನ ಪದಕಕ್ಕಾಗಿ ನಡೆಯುವ ಪಂದ್ಯದಲ್ಲಿ ಭಾರತವು ಗ್ರೇಟ್ ಬ್ರಿಟನ್ ವಿರುದ್ಧ ಸೆಣಸಲಿದೆ.

> ಟೋಕಿಯೊ ಒಲಿಂಪಿಕ್ಸ್‌ನಲ್ಲಿ ನಮ್ಮ ಹಾಕಿ ತಂಡಗಳು ಅಮೋಘ ಸಾಧನೆ ಮಾಡಿವೆ. ಇಂದು ಮಹಿಳಾ ತಂಡವು ವೀರೋಚಿತವಾಗಿ ಆಡಿತು. ಅದ್ಭುತ ಕೌಶಲ ಮೆರೆಯಿತು. ಮುಂದಿನ ಪಂದ್ಯದಲ್ಲಿ ಒಳಿತಾಗಲಿ.
>
> **ನರೇಂದ್ರ ಮೋದಿ**
> ಪ್ರಧಾನಮಂತ್ರಿ



ಭಾರತದ ಪುರುಷರ ಹಾಕಿ ತಂಡವು ಜರ್ಮನಿ ತಂಡವನ್ನು ಸೋಲಿಸುವ ಹುಮ್ಮಸ್ಸಿನಲ್ಲಿದೆ

ಕಂಚು ಗೆಲ್ಲುವ ಛಲದಲ್ಲಿ ಭಾರತ

ಟೋಕಿಯೊ (ಪಿಟಿಐ): ನಾಲ್ಕು ದಶಕಗಳ ನಂತರ ಪದಕ ಜಯಿಸುವ ಅವಕಾಶವೊಂದು ಭಾರತದ ಪುರುಷರ ಹಾಕಿ ತಂಡದ ಮುಂದೆ ಈಗ ಇದೆ.

ಗುರುವಾರ ಮೂರನೇ ಸ್ಥಾನಕ್ಕಾಗಿ ನಡೆಯಲಿರುವ ಪಂದ್ಯದಲ್ಲಿ ಭಾರತವು ಜರ್ಮನಿಯ ವಿರುದ್ಧ ಜಯಿಸಿದರೆ ಕಂಚಿನ ಪದಕ ಕೊರಳಿಗೇರಿಸಿಕೊಳ್ಳಬಹುದು.

ಸೆಮಿಫೈನಲ್‌ನಲ್ಲಿ ಭಾರತವು ಬೆಲ್ಜಿಯಂ ವಿರುದ್ಧ ಸೋತಿತ್ತು. ಎರಡನೇ ಸೆಮಿಯಲ್ಲಿ ಜರ್ಮನಿ ತಂಡವು ಆಸ್ಟ್ರೇಲಿಯಾ ಎದುರು ಮಣಿದಿತ್ತು.

ಜರ್ಮನಿ ತಂಡವು ರಿಯೊ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದಿತ್ತು. ಮನಪ್ರೀತ್ ಸಿಂಗ್ ನಾಯಕತ್ವ ತಂಡವು ರಕ್ಷಣಾ ತಂತ್ರಗಳಲ್ಲಿ ಮೇಲುಗೈ ಸಾಧಿಸಿದರೆ ಪಂದ್ಯ ಜಯಿಸುವುದು ಸುಲಭವಾಗಲಿದೆ. ನಾಲ್ಕರ ಘಟ್ಟದ ಕೊನೆಯ ಕ್ವಾರ್ಟರ್‌ನಲ್ಲಿ ಬಹಳಷ್ಟು ಪೆನಾಲ್ಟಿ ಕಾರ್ನರ್‌ಗಳನ್ನು ಬಿಟ್ಟಿದ್ದ ಭಾರತ ಸೋಲಿನ ಕಹಿ ಅನುಭವಿಸಿತ್ತು. ಆ ಲೋಪವನ್ನು ಇಲ್ಲಿ ತಿದ್ದಿಕೊಳ್ಳುವ ಅನಿವಾರ್ಯತೆ ಇದೆ.

ಗುಂಪು ಹಂತದಲ್ಲಿ ಅಮೋಘ ಆಡಿರುವ ಹಾರ್ದಿಕ್ ಸಿಂಗ್, ರೂಪಿಂದರ್ ಪಾಲ್ ಸಿಂಗ್, ಗುರ್ಜಂತ್ ಸಿಂಗ್ ಅವರು ತಮ್ಮ ಗೋಲು ಗಳಿಕೆಯನ್ನು ಮುಂದುವರಿಸುವ ನಿರೀಕ್ಷೆ ಇದೆ. ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರು ತಮ್ಮ ಗಟ್ಟಿತನವನ್ನು ಎಲ್ಲ ಪಂದ್ಯಗಳಲ್ಲಿಯೂ ತೋರಿಸಿದ್ದಾರೆ. ಅವರಿಗೆ ರಕ್ಷಣಾ ವಿಭಾಗದ ಉತ್ತಮ ಜೊತೆ ದೊರೆತರೆ ಎದುರಾಳಿ ತಂಡವು ಪರದಾಡುವುದು ಖಚಿತ.

ಮೊದಲ ಟೆಸ್ಟ್: ಜೋ ರೂಟ್ ಅರ್ಧಶತಕ; ಭಾರತ ತಂಡದಲ್ಲಿ ನಾಲ್ವರು ಮಧ್ಯಮವೇಗಿಗಳಿಗೆ ಸ್ಥಾನ

ಬೂಮ್ರಾ–ಶಮಿ ಬಿರುಗಾಳಿಗೆ ಇಂಗ್ಲೆಂಡ್ ತತ್ತರ

ನಾಟಿಂಗ್‌ಹ್ಯಾಮ್ (ಪಿಟಿಐ): ಭಾರತ ತಂಡದ 'ಭಲೇ ಜೋಡಿ' ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಶಮಿ ಅವರ ಬೌಲಿಂಗ್ ಮುಂದೆ ಆತಿಥೇಯ ಇಂಗ್ಲೆಂಡ್ ತಡಬಡಾಯಿಸಿತು.

ಬುಧವಾರ ಇಲ್ಲಿ ಆರಂಭವಾದ ಮೊದಲ ಟೆಸ್ಟ್‌ನಲ್ಲಿ ಯಾರ್ಕರ್ ಪರಿಣತ ಬೂಮ್ರಾ (46ಕ್ಕೆ4) ಮತ್ತು ಸ್ವಿಂಗ್ ಸುಲ್ತಾನ ಶಮಿ (28ಕ್ಕೆ3) ಅವರಿಬ್ಬರ ಆಟಕ್ಕೆ ತತ್ತರಿಸಿದ ಇಂಗ್ಲೆಂಡ್ ತಂಡವು 65.4 ಓವರ್‌ಗಳಲ್ಲಿ 183 ರನ್ ಗಳಿಸಿ ಆಲೌಟ್ ಆಯಿತು.

ಮೊದಲ ಇನಿಂಗ್ಸ್ ಆರಂಭಿಸಿರುವ ಭಾರತ ತಂಡವು ದಿನದಾಟದ ಅಂತ್ಯಕ್ಕೆ 13 ಓವರ್‌ಗಳಲ್ಲಿ ವಿಕೆಟ್ ಕಳೆದುಕೊಳ್ಳದೆ 21 ರನ್ ಗಳಿಸಿತ್ತು. ಕನ್ನಡಿಗ ಕೆ.ಎಲ್.ರಾಹುಲ್ ಹಾಗೂ ರೋಹಿತ್ ಶರ್ಮಾ ತಲಾ ಒಂಬತ್ತು ರನ್ ಗಳಿಸಿ ಕ್ರೀಸ್‌ನಲ್ಲಿದ್ದರು.

ಟಾಸ್ ಗೆದ್ದ ಇಂಗ್ಲೆಂಡ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲ ಓವರ್‌ನಲ್ಲಿ ಬೂಮ್ರಾ ಗರ್ಜಿಸಿದರು. ಐದನೇ ಎಸೆತದಲ್ಲಿ ಅವರು ಬೀಸಿದ ಎಲ್‌ಬಿಡಬ್ಲ್ಯು ಬಲೆಯಲ್ಲಿ ರೋರಿ ಬರ್ನ್ಸ್ ಬಿದ್ದರು.ಅವರು ಖಾತೆ ತೆರೆಯದೇ ಮರಳಿದರು.


ಕ್ರೀಸ್‌ನಲ್ಲಿದ್ದ ಡ್ಯಾಮ್ ಸಿಬ್ಲಿ ಯೊಂದಿಗೆ ಸೇರಿದ ಜ್ಯಾಕ್ ಕ್ರಾಲಿ ಅವರು ಇನಿಂಗ್ಸ್‌ಗೆ ಸ್ಥಿರತೆ ಒದಗಿಸುವ ಪ್ರಯತ್ನ ಮಾಡಿದರು. ಅಪಾರ ತಾಳ್ಮೆಯಿಂದ ಆಡುತ್ತಿದ್ದ ಇವರ ಜೊತೆಯಾಟವನ್ನು ಮೊಹಮ್ಮದ್ ಸಿರಾಜ್ ಮುರಿದರು. 21ನೇ ಓವರ್‌ನಲ್ಲಿ ಕೀಪರ್ ರಿಷಭ್ ಪಂತ್‌ಗೆ ಕ್ರಾಲಿ ಕ್ಯಾಚಿತ್ತರು.

ರೂಟ್ ಅರ್ಧಶತಕ: ಕ್ರೀಸ್‌ಗೆ ಬಂದ ನಾಯಕ ಜೋ ರೂಟ್ ಮಾತ್ರ ದಿಟ್ಟತನ ಮತ್ತು ತಾಳ್ಮೆಯಿಂದ ಭಾರತದ ಬೌಲರ್‌ಗಳ ದಾಳಿಯನ್ನು ಎದುರಿಸಿದರು. 108 ಎಸೆತಗಳಲ್ಲಿ 64 ರನ್ ಗಳಿಸಿದ ಅವರು ಕ್ರೀಸ್‌ನಲ್ಲಿ ಇರುವಷ್ಟು ಹೊತ್ತು ತಂಡಕ್ಕೆ ಭರವಸೆ ಇತ್ತು. ಆದರೆ ಉಳಿದ ಬ್ಯಾಟ್ಸ್‌ಮನ್‌ಗಳು ದೊಡ್ಡ ಮೊತ್ತ ಗಳಿಸಲು ಬೌಲರ್‌ಗಳು ಬಿಡಲಿಲ್ಲ.

ಶಮಿ ಅವರು, ಡಾಮ್ ಸಿಬ್ಲಿ, ಜಾನಿ ಬೆಸ್ಟೊ ಮತ್ತು ಡ್ಯಾನ್ ಲಾರೆನ್ಸ್ ವಿಕೆಟ್ ಕಬಳಿಸಿದರು. ಇನ್ನೊಂದೆಡೆ ಬೂಮ್ರಾ ಬೌಲಿಂಗ್‌ಗೆ ಜೊಸ್ ಬಟ್ಲರ್, ಸ್ಟುವರ್ಟ್ ಬ್ರಾಡ್ ಮತ್ತು ಜೇಮ್ಸ್ ಆ್ಯಂಡರ್ಸನ್ ಅವರು ವಿಕೆಟ್ ಒಪ್ಪಿಸಿದರು.

ಮಧ್ಯಮ ಕ್ರಮಾಂಕದ ಬ್ಯಾಟಿಂಗ್‌ಗೆ ಶಾರ್ದೂಲ್ ಠಾಕೂರ್ (41ಕ್ಕೆ2) ಪೆಟ್ಟು ಕೊಟ್ಟರು.

ತಂಡದಲ್ಲಿ ಸ್ಥಾನ ಪಡೆದಿರುವ ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ ಅವರು ಕೇವಲ ಮೂರು ಓವರ್ ಬೌಲಿಂಗ್ ಮಾಡಿದರು. ಅವರಿಗೆ ವಿಕೆಟ್ ಲಭಿಸಲಿಲ್ಲ. ಆಫ್‌ಸ್ಪಿನ್ನರ್ ಆರ್. ಅಶ್ವಿನ್‌ಗೆ ವಿಶ್ರಾಂತಿ ನೀಡಲಾಗಿದೆ.



ಜಸ್‌ಪ್ರೀತ್ ಬೂಮ್ರಾ ಸಂಭ್ರಮ–ರಾಯಿಟರ್ಸ್ ಚಿತ್ರ

ಸ್ಕೋರ್ ಕಾರ್ಡ್

ಇಂಗ್ಲೆಂಡ್ (ಮೊದಲ ಇನಿಂಗ್ಸ್) 183 (65.4 ಓವರ್)
ರೋರಿ ಎಲ್‌ಬಿಡಬ್ಲ್ಯು ಬೂಮ್ರಾ 0 (5ಎ), ಸಿಬ್ಲಿ ಸಿ ರಾಹುಲ್ ಬಿ ಶಮಿ 18 (70ಎ, 4X2), ಕ್ರಾವ್ಲಿ ಸಿ ಪಂತ್ ಬಿ ಸಿರಾಜ್ 27 (68ಎ, 4X4), ರೂಟ್ ಎಲ್‌ಬಿಡಬ್ಲ್ಯು ಬಿ ಠಾಕೂರ್ 64 (108ಎ, 4X11), ಬೆಸ್ಟೊ ಎಲ್‌ಬಿಡಬ್ಲ್ಯು ಶಮಿ 29 (71ಎ, 4X4), ಲಾರೆನ್ಸ್ ಸಿ ಪಂತ್ ಬಿ ಶಮಿ 0 (4ಎ) ಜೋಸ್ ಬಟ್ಲರ್ ಸಿ ಪಂತ್ ಬಿ ಬೂಮ್ರಾ 0 (18ಎ), ಸ್ಯಾಮ್ ಔಟಾಗದೆ 27 (37ಎ, 4X3, 6X1), ರಾಬಿನ್ಸನ್ ಸಿ ಶಮಿ ಬಿ ಠಾಕೂರ್ 0 (3ಎ), ಬ್ರಾಡ್ ಎಲ್‌ಬಿಡಬ್ಲ್ಯು ಬೂಮ್ರಾ 4 (3ಎ), ಆ್ಯಂಡರ್ಸನ್ ಬಿ ಬೂಮ್ರಾ 1 (11ಎ)
ಇತರೆ (ಬೈ 1, ಲೆಗ್‌ಬೈ 8, ನೋಬಾಲ್ 4) 13
ವಿಕೆಟ್ ಪತನ: 1-0 (ರೋರಿ ಬರ್ನ್ಸ್, 0.5), 2-42 (ಜಾಕ್ ಕ್ರಾವ್ಲಿ, 20.6), 3-66 (ಡಾಮ್ ಸಿಬ್ಲಿ, 27.3), 4-138 (ಜಾನಿ ಬೆಸ್ಟೊ, 50.2), 5-138 (ಡ್ಯಾನ್ ಲಾರೆನ್ಸ್, 50.6), 6–145 (ಜಾಸ್ ಬಟ್ಲರ್, 55.5), 7–155 (ಜೋ ರೂಟ್, 58.1), 8–155 (ಒಲಿ ರಾಬಿನ್ಸನ್, 58.4), 9–160 (ಸ್ಟುವರ್ಟ್ ಬ್ರಾಡ್, 59.6), 10–183 (65.4)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 20.4–4–46–4, ಮೊಹಮ್ಮದ್ ಶಮಿ 17–2–28–3, ಮೊಹಮ್ಮದ್ ಸಿರಾಜ್ 12–2–48–1, ಶಾರ್ದೂಲ್ ಠಾಕೂರ್ 13–3–41–2, ರವೀಂದ್ರ ಜಡೇಜ 3–0–11–0

ಭಾರತ (ಮೊದಲ ಇನಿಂಗ್ಸ್) ವಿಕೆಟ್ ನಷ್ಟವಿಲ್ಲದೆ 21 (13 ಓವರ್)
ರೋಹಿತ್ ಬ್ಯಾಟಿಂಗ್ 9 (40ಎ, 4X2), ರಾಹುಲ್ ಬ್ಯಾಟಿಂಗ್ 9 (39ಎ, 4X1)
ಇತರೆ (ಬೈ 1, ಲೆಗ್‌ಬೈ 1, ನೋಬಾಲ್ 1) 3
ಬೌಲಿಂಗ್: ಜೇಮ್ಸ್ ಆ್ಯಂಡರ್ಸನ್ 3–1–9–0, ಸ್ಟುವರ್ಟ್ ಬ್ರಾಡ್ 5–1–9–0, ಒಲಿ ರಾಬಿನ್ಸನ್ 4–3–1–0, ಸ್ಯಾಮ್ ಕರನ್ 1–1–0–0


ಮೊಹಮ್ಮದ್ ಶಮಿಯನ್ನು ಅಭಿನಂದಿಸಿದ ಸಹ ಆಟಗಾರರು–ಎಎಫ್‌ಪಿ ಚಿತ್ರ


ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ) ಮುಖ್ಯಸ್ಥ ರಾಹುಲ್ ದ್ರಾವಿಡ್ ಅವರೊಂದಿಗೆ ಬ್ರಿಟಿಷ್ ಹೈಕಮಿಷನರ್ ಅಲೆಕ್ಸ್ ಎಲ್ಲಿಸ್ ಮಾತನಾಡಿದರು. ಕೆಎಸ್‌ಸಿಎ ಖಜಾಂಚಿ ವಿನಯ್ ಮೃತ್ಯುಂಜಯ, ಡೆಪ್ಯುಟಿ ಹೈಕಮಿಷನರ್ ಜೆರೆಮಿ ಪಿಲ್ಮೊರ್ ಬೆಡ್‌ಫೋರ್ಡ್, ಕೆಎಸ್‌ಸಿಎ ಅಧ್ಯಕ್ಷ ರೋಜರ್ ಬಿನ್ನಿ, ಕಾರ್ಯದರ್ಶಿ ಸಂತೋಷ್ ಮೆನನ್ ಹಾಜರಿದ್ದರು.

ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಬ್ರಿಟಿಷ್ ಹೈಕಮಿಷನರ್ ಭೇಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರಿಕೆಟ್ ಕ್ರೀಡಾಂಗಣ ಮತ್ತು ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಗೆ ಬುಧವಾರ ಬ್ರಿಟಿಷ್ ಹೈಕಮಿಷನರ್ ಅಲೆಕ್ಸ್ ಎಲ್ಲಿಸ್ ಭೇಟಿ ನೀಡಿದ್ದರು.

ಈ ಸಂದರ್ಭದಲ್ಲಿ ಅವರು ಎನ್‌ಸಿಎ ಮುಖ್ಯಸ್ಥ ರಾಹುಲ್ ದ್ರಾವಿಡ್ ಅವರನ್ನು ಭೇಟಿ ಮಾಡಿದರು. ಅಕಾ ಡೆಮಿಯ ಕಾರ್ಯಕ್ರಮಗಳ ಕುರಿತು ತಿಳಿದು ಕೊಂಡರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭಿವೃದ್ಧಿಪಡಿಸಲಾಗಿರುವ ಸೌರವಿದ್ಯುತ್ ವ್ಯವಸ್ಥೆ, ಮಳೆ ನೀರು ಸಂಗ್ರಹ ಮತ್ತು ಸಬ್ ಏರ್ ಸಿಸ್ಟಮ್‌ಗಳನ್ನು ವೀಕ್ಷಿಸಿದರು. ಆಟಗಾರರಿಗಾಗಿ ಇರುವ ಮೂಲಸೌಲಭ್ಯಗಳನ್ನು ನೋಡಿದರು.

ಈ ಸಂದರ್ಭದಲ್ಲಿ ಬ್ರಿಟಿಷ್ ಡೆಪ್ಯುಟಿ ಹೈಕಮಿಷನರ್ ಜೆರೆಮಿ ಪಿಲ್ಮೊರ್ ಬೆಡ್‌ಫೋರ್ಡ್, ಕೆಎಸ್‌ಸಿಎ ಅಧ್ಯಕ್ಷ ರೋಜರ್ ಬಿನ್ನಿ, ಉಪಾಧ್ಯಕ್ಷ ಜೆ. ಅಭಿರಾಮ್, ಕಾರ್ಯದರ್ಶಿ ಸಂತೋಷ್ ಮೆನನ್, ಖಜಾಂಚಿ ವಿನಯ್ ಮೃತ್ಯುಂಜಯ, ಜಂಟಿ ಕಾರ್ಯದರ್ಶಿ ಶಾವೀರ್ ತಾರಾಪೂರ್ ಹಾಜರಿದ್ದರು.

ಮಿಂಚಿದ ಶಶಾಂಕ್ ರೈ

ಬೆಂಗಳೂರು: ಮಂಗಳೂರು ಬಿ.ಸಿ ತಂಡದ ಶಶಾಂಕ್ ರೈ ಮತ್ತೆ ಮಿಂಚಿದರು. ಅವರು ಗಳಿಸಿದ 38 ಪಾಯಿಂಟ್‌ಗಳ ನೆರವಿನಿಂದ ತಂಡವು ಪ್ರೊ.ಪರಪ್ಪ ಸ್ಮಾರಕ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ 'ಎ' ಡಿವಿಷನ್ ಬ್ಯಾಸ್ಕೆಟ್‌ಬಾಲ್ ಟೂರ್ನಿಯಲ್ಲಿ ಜಯ ಗಳಿಸಿತು. ಬುಧವಾರ ಇಲ್ಲಿ ನಡೆದ ಪಂದ್ಯದಲ್ಲಿ 64–58ರಿಂದ ಸಿಎಂಪಿ ತಂಡವನ್ನು ಪರಾಭವಗೊಳಿಸಿತು.

ವಿಜೇತ ತಂಡದ ಸಂಕ್ರಿತ್ 10 ಪಾಯಿಂ ಟ್ಸ್ ಕಲೆಹಾಕಿದರು. ಸಿಎಂಪಿ ತಂಡದ ಪರ ರಾಜೇಶ್ ಕುಮಾರ್ (20 ಪಾಯಿಂಟ್ಸ್) ಮತ್ತು ಅಲ್ವಿನ್ (15) ಮಿಂಚಿದರು. ರೈಸಿಂಗ್ ಸ್ಟಾರ್ ಮೈಸೂರು ತಂಡವು ಹಿಂದೆ ಸರಿದಿದ್ದರಿಂದ ಇಂದಿರಾನಗರ ಬ್ಯಾಸ್ಕೆಟ್‌ಬಾಲ್ ತಂಡಕ್ಕೆ ವಾಕ್‌ಓವರ್ ದೊರೆಯಿತು.

ಐಎಸ್‌ಎಲ್:ಸಿಎಫ್‌ಸಿಗೆ ದೀಪಕ್

ಚೆನ್ನೈ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಆಡುವ ಚೆನ್ನೈಯಿನ್ ಎಫ್‌ಸಿ (ಸಿಎಫ್‌ಸಿ), ಡಿಫೆನ್ಸ್ ಆಟಗಾರ ದೀಪಕ್ ದೇವ್ರಾನಿ ಅವರನ್ನು ತಂಡಕ್ಕೆ ಸೇರಿಸಿಕೊಂಡಿದೆ. ಒಂದು ವರ್ಷದ ಅವಧಿಗೆ ಅವರು ತಂಡದೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆ.

28 ವರ್ಷದ ದೀಪಕ್ ಅವರು ಈ ಹಿಂದೆ ಗೋಕುಲಂ ಎಫ್‌ಸಿ ತಂಡದಲ್ಲಿದ್ದರು. ಆ ತಂಡವು 2020–21ರ ಋತುವಿನ ಐ-ಲೀಗ್ ಟೂರ್ನಿಯ ಚಾಂಪಿಯನ್ ಆಗಿದೆ.

ದೀಪಕ್ ಅವರು 2014ರ ಐಎಸ್‌ಎಲ್ ಟೂರ್ನಿಯ ಮೊದಲ ಆವೃತ್ತಿಯಲ್ಲಿ ಎಫ್‌ಸಿ ಪುಣೆ ಸಿಟಿ ತಂಡದಲ್ಲಿದ್ದರು. ಏಳು ವರ್ಷಗಳ ಬಳಿಕ ಲೀಗ್‌ಗೆ ಮರಳುತ್ತಿದ್ದಾರೆ.

'ಚೆನ್ನೈಯಿನ್ ಎಫ್‌ಸಿ ತಂಡ ಸೇರಿಕೊಂಡಿರುವುದು ಅತ್ಯಂತ ಖುಷಿಯ ಸಂಗತಿ. ಇದು ಅತ್ಯಂತ ಬಲಿಷ್ಠ ತಂಡ. ತಂಡದ ಪರ ಶ್ರೇಷ್ಠ ಸಾಮರ್ಥ್ಯ ತೋರಲು ಪ್ರಯತ್ನಿಸುತ್ತೇನೆ' ಎಂದು ಅವರು ಹೇಳಿದ್ದಾರೆ.

ಫುಟ್‌ಬಾಲ್: ರಘುನಾಥ್ ಎರಡು ಗೋಲು

ಬೆಂಗಳೂರು: ರಘುನಾಥ್ ಗಳಿಸಿದ ಎರಡು ಗೋಲುಗಳ ನೆರವಿನಿಂದ ಯಲ ಹಂಕ ಎಫ್‌ಸಿ ತಂಡವು ಜಯ ಸಾಧಿಸಿತು. ಇಲ್ಲಿ ನಡೆಯುತ್ತಿರುವ ಕೆಎಸ್‌ಎಫ್‌ಎ-ಬಿಡಿಎಫ್‌ಎ 'ಸಿ' ಡಿವಿಷನ್ ನಾಕೌಟ್ ಫುಟ್‌ಬಾಲ್ ಟೂರ್ನಿಯಲ್ಲಿ 2–1ರಿಂದ ಸಾಯಿ ಸ್ಪೋರ್ಟ್ಸ್ ಅಕಾಡೆಮಿ ತಂಡವನ್ನು ಸೋಲಿಸಿತು.

ತಂಡದ ಪರ ರಘುನಾಥ್ ಎರಡನೇ ನಿಮಿಷದಲ್ಲೇ ಗೋಲು ದಾಖಲಿಸಿ ಮುನ್ನಡೆ ದೊರಕಿಸಿಕೊಟ್ಟರು. ಆದರೆ 12ನೇ ನಿಮಿಷದಲ್ಲಿ ಗೋಲು ಹೊಡೆದ ಸಾಯಿ ಸ್ಪೋರ್ಟ್ಸ್ ತಂಡದ ತೊಬಾಯಿಸ್ ಜಸ್ಟಿನ್ ಪಂದ್ಯವನ್ನು ಸಮಬಲಕ್ಕೆ ತಂದರು. 34ನೇ ನಿಮಿಷದಲ್ಲಿ ಮತ್ತೊಮ್ಮೆ ಕಾಲ್ಚಳಕ ತೋರಿದ ರಘುನಾಥ್ ತಂಡದ ಗೆಲುವು ಖಚಿತಪಡಿಸಿದರು.

ಇನ್ನೊಂದು ಪಂದ್ಯದಲ್ಲಿ ಬೆಂಗಳೂರು ಸಿಟಿ ಎಫ್‌ಸಿ ತಂಡವು 3–2ರಿಂದ ಎಫ್‌ಸಿ ಹೈಡ್ರಾ ತಂಡವನ್ನು ಪರಾಭವಗೊಳಿಸಿತು. ಎಫ್‌ಸಿ ಹೈಡ್ರಾ ತಂಡದ ನಿಖಿಲ್ ಅಯ್ಯಪ್ಪ 2ನೇ ನಿಮಿಷದಲ್ಲೇ ಗೋಲು ದಾಖಲಿಸಿ ತಂಡಕ್ಕೆ ಮುನ್ನಡೆ ಒದಗಿಸಿದ್ದರು. ಆದರೆ ಫಾಜಿಲ್ ಹಸನ್ ಅಹಮದ್ (4ನೇ ನಿಮಿಷ) ಪೆನಾಲ್ಟಿ ಅವಕಾಶದಲ್ಲಿ ಗೋಲು ಹೊಡೆಯುವ ಮೂಲಕ ಸಿಟಿ ಎಫ್‌ಸಿ ಸಮಬಲ ಸಾಧಿಸುವಂತೆ ಮಾಡಿದರು. ತುಷಾರ್ ಪಾಟೀಲ್ (25ನೇ ನಿಮಿಷ) ಕಾಲ್ಚಳಕ ತೋರುವ ಮೂಲಕ ಸಿಟಿ ಎಫ್‌ಸಿ ಮುನ್ನಡೆ ಸಾಧಿಸಿತು. ಹೈಡ್ರಾ ಪರ 27ನೇ ನಿಮಿಷದಲ್ಲಿ ಸಿಕ್ಕ ಪೆನಾಲ್ಟಿ ಅವಕಾಶವನ್ನು ಗೋಲಾಗಿ ಪರಿವರ್ತಿಸಿದ ರೆವಿಂತೊ ರಾಯ್ ಮತ್ತೆ ಸಮಬಲಕ್ಕೆ ತಂದರು. ಆದರೆ 56ನೇ ನಿಮಿಷದಲ್ಲಿ ಗೋಲು ಹೊಡೆದ ಅಲೆನ್ ಜೊಹಂಟಿ ಎಕ್ಕಾ, ಸಿಟಿ ಎಫ್‌ಸಿ ಗೆಲುವು ಖಚಿತಪಡಿಸಿದರು.

ಮತ್ತೊಂದು ಪಂದ್ಯದಲ್ಲಿ ಹಾಕ್ಸ್ ಯುನೈಟೆಡ್ ಎಫ್‌ಸಿ ತಂಡವು ಪೆನಾಲ್ಟಿ ಶೂಟೌಟ್‌ನಲ್ಲಿ 5–4ರಿಂದ ಕಮ್ಮನಹಳ್ಳಿ ತಂಡವನ್ನು ಮಣಿಸಿತು.

ರಾಜಸ್ಥಾನ, ಮಧ್ಯಪ್ರದೇಶದಲ್ಲಿ ಮಳೆ, ಪ್ರವಾಹ

ಜೈಪುರ (ಪಿಟಿಐ): ರಾಜಸ್ಥಾನದ ಹದೌತಿ ಪ್ರದೇಶದಲ್ಲಿ ನಿರಂತರವಾಗಿ ಮಳೆ ಸುರಿಯುತ್ತಿರುವ ಪರಿಣಾಮ ಪ್ರವಾಹ ಪರಿಸ್ಥಿತಿ ಉಂಟಾಗಿದ್ದು, ನೂರಕ್ಕೂ ಹೆಚ್ಚು ಗ್ರಾಮಗಳಿಗೆ ರಸ್ತೆ ಸಂಪರ್ಕ ಕಡಿತಗೊಂಡಿದೆ.


ಅಶೋಕ್ ಗೆಹ್ಲೋಟ್

'ಭಾರಿ ಮಳೆಯಿಂದಾಗಿ ಕೋಟ, ಬಾರನ್, ಬಂಡಿ ಮತ್ತು ಜಲಾವರದ ಕೆಲವು ಪ್ರದೇಶಗಳಲ್ಲಿ ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಪರಿಹಾರ ಮತ್ತು ರಕ್ಷಣಾ ಕಾರ್ಯಾಚರಣೆಗಳ ಬಗ್ಗೆ ಆಡಳಿತಕ್ಕೆ ಸೂಚನೆಗಳನ್ನು ನೀಡಲಾಗಿದೆ' ಎಂದು ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಬುಧವಾರ ಟ್ವೀಟ್ ಮಾಡಿದ್ದಾರೆ.

ರಾಷ್ಟ್ರೀಯ ವಿಪತ್ತು ಕಾರ್ಯಾಚರಣೆ ಪಡೆಯವರು ರಕ್ಷಣಾ ಮತ್ತು ಪರಿಹಾರ ಕಾರ್ಯಗಳನ್ನು ನಡೆಸುತ್ತಿದ್ದಾರೆ. ಅಗತ್ಯವಿದ್ದರೆ, ಭಾರತೀಯ ಸೇನೆಯ ಸಹಾಯವನ್ನು ತೆಗೆದುಕೊಳ್ಳಲಾಗುತ್ತದೆ ಎಂದು ಅವರು ಹೇಳಿದ್ದಾರೆ.

ಮುಖ್ಯಾಂಶಗಳು
- ಪ್ರವಾಹದಿಂದಾಗಿ 1200 ಗ್ರಾಮಗಳು ತೊಂದರೆಗೆ ಸಿಲುಕಿರುವ
- ರಾಷ್ಟ್ರೀಯ ವಿಪತ್ತು ರಕ್ಷಣಾ ಪಡೆಯಿಂದ ಕಾರ್ಯಾಚರಣೆ

ಭೋಪಾಲ್ ವರದಿ: ಮಧ್ಯಪ್ರದೇಶದ ಉತ್ತರ ಭಾಗದಲ್ಲಿ ಪ್ರವಾಹ ಪರಿಸ್ಥಿತಿ ಗಂಭೀರವಾಗಿದೆ. ಸುಮಾರು 1200 ಗ್ರಾಮಗಳಿಗೆ ತೊಂದರೆಯಾಗಿದ್ದು 5,950 ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ ಎಂದು ಮುಖ್ಯಮಂತ್ರಿ ಶಿವರಾಜ್ ಸಿಂಗ್ ಹೇಳಿದ್ದಾರೆ.

ಇನ್ನೂ ಸುಮಾರು 1,950 ಮಂದಿ ಪ್ರವಾಹ ಪೀಡಿತ ಪ್ರದೇಶದಲ್ಲಿ ಸಿಲುಕಿದ್ದು ಅವರನ್ನು ರಕ್ಷಿಸುವ ಕಾರ್ಯ ಮುಂದುವರಿದಿದೆ ಎಂದಿದ್ದಾರೆ.

ಪ್ರಧಾನಿ ಮೋದಿ ಅವರು ಮುಖ್ಯಮಂತ್ರಿ ಶಿವರಾಜ್ ಸಿಂಗ್ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿ ಪ್ರವಾಹ ಪರಿಸ್ಥಿತಿ ನಿಭಾಯಿಸಲು ಸಹಕಾರ ನೀಡುವುದಾಗಿ ಹೇಳಿದ್ದಾರೆ.

ಮಮತಾಗೆ ಕರೆ ಮಾಡಿದ ಪ್ರಧಾನಿ; ಪ್ರವಾಹ ಪರಿಸ್ಥಿತಿಯ ಅವಲೋಕನ


ನರೇಂದ್ರ ಮೋದಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದಲ್ಲಿ ಉಂಟಾಗಿರುವ ಪ್ರವಾಹ ಪರಿಸ್ಥಿತಿ ಎದುರಿಸಲು ಅಗತ್ಯವಿರುವ ಎಲ್ಲ ಸಹಕಾರ ನೀಡುವುದಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ಭರವಸೆ ನೀಡಿದ್ದಾರೆ.

ಬುಧವಾರ ಬೆಳಿಗ್ಗೆ ಮಮತಾ ಬ್ಯಾನರ್ಜಿ ಅವರಿಗೆ ಕರೆ ಮಾಡಿದ ಪ್ರಧಾನಿ, ರಾಜ್ಯದ ವಿವಿಧ ಜಲಾಶಯಗಳಿಂದ ನೀರು ಹೊರಬಿಟ್ಟ ನಂತರ, ಉಂಟಾಗಿರುವ ಪ್ರವಾಹ ಪರಿಸ್ಥಿತಿ ಕುರಿತು ಚರ್ಚಿಸಿದರು ಎಂದು ಪ್ರಧಾನ ಮಂತ್ರಿ ಕಾರ್ಯಾಲಯ ಟ್ವೀಟ್ ಮಾಡಿದೆ.

ಹೌರಾ ಜಿಲ್ಲೆಯ ಪ್ರವಾಹ ಪೀಡಿತ ಉದಯನಾರಾಯಣಪುರಕ್ಕೆ ಭೇಟಿ ನೀಡಿದ್ದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು, ಅಲ್ಲಿನ ಪ್ರವಾಹ ಪರಿಸ್ಥಿತಿ ಮತ್ತು ಅದರಿಂದ ಉಂಟಾದ ಹಾನಿಯ ಬಗ್ಗೆ ಪ್ರಧಾನ ಮಂತ್ರಿ ಕಾರ್ಯಾಲಯಕ್ಕೆ ವಿವರವಾದ ವರದಿಯನ್ನು ಸಲ್ಲಿಸುವುದಾಗಿ ಪ್ರಧಾನಿಗೆ ಹೇಳಿದ್ದಾರೆಂದು ತಿಳಿದುಬಂದಿದೆ.

ದಾಮೋದರ್ ವ್ಯಾಲಿ ಕಾರ್ಪೊರೇಷನ್ ಮತ್ತು ದುರ್ಗಾಪುರ ಬ್ಯಾರೇಜ್‌ನಿಂದ ನೀರು ಹೊರಬಿಟ್ಟಿರುವ ಕಾರಣದಿಂದಾಗಿ ರಾಜ್ಯದ ಆರು ಜಿಲ್ಲೆಗಳಲ್ಲಿ ಪ್ರವಾಹ ಉಂಟಾಗಿದೆ. ಕನಿಷ್ಠ 15 ಜನರು ಸಾವನ್ನಪ್ಪಿದ್ದಾರೆ. ಸುಮಾರು 3 ಲಕ್ಷ ಜನರು ಸ್ಥಳಾಂತರಗೊಂಡಿದ್ದಾರೆ.

ಅಬ್ದುಲ್ ಕಯ್ಯುಮ್ ಪಿಒಕೆ ಪ್ರಧಾನಿ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಪ್ರಧಾನಿ ಇಮ್ರಾನ್ ಖಾನ್ ಅವರು ತಮ್ಮ ಪಕ್ಷದ ಶಾಸಕರಾದ ಅಬ್ದುಲ್ ಕಯ್ಯುಮ್ ನಿಯಾಜಿಯವರನ್ನು ದೀರ್ಘ ಸಮಾಲೋಚನೆಯ ನಂತರ ಪಾಕ್ ಆಕ್ರಮಿತ ಕಾಶ್ಮೀರದ ಮುಂದಿನ ಪ್ರಧಾನಿಯಾಗಿ ಬುಧವಾರ ನೇಮಿಸಿದ್ದಾರೆ.

ಅಬ್ಬಾಸ್ ಪುರ್-ಪೂಂಚ್ ಪ್ರದೇಶದಿಂದ ಇತ್ತೀಚೆಗೆ ನಡೆದ ವಿಧಾ ನಸಭಾ ಚುನಾವಣೆಯಲ್ಲಿ ನಿಯಾಜಿ ಗೆಲುವು ಸಾಧಿಸಿದ್ದರು.

ಖಾನ್ ಅವರ ಪಾಕಿಸ್ತಾನ್ ತೆಹ್ರೀಕ್-ಎ-ಇನ್ಸಾಫ್ (ಪಿಟಿಐ) ಪಕ್ಷವು 53 ಸದಸ್ಯ ಬಲದ ಸದನದಲ್ಲಿ 32 ಸ್ಥಾನಗಳನ್ನು ಪಡೆದುಕೊಂಡಿದೆ. ಪಿಒಕೆಯಲ್ಲಿ ಪಿಟಿಐ, ಇದೇ ಮೊದಲ ಬಾರಿಗೆ ಸರ್ಕಾರ ರಚಿಸುತ್ತಿದೆ. ಪಿಒಕೆಯಲ್ಲಿ ನಡೆದ ಇತ್ತೀಚಿನ ಚುನಾವಣೆಯನ್ನು ಭಾರತ ತಿರಸ್ಕ ರಿಸಿದೆ. ಈ ಬಗ್ಗೆ ತೀವ್ರ ಪ್ರತಿಭಟನೆ ದಾಖಲಿ ಸಿರುವ ಭಾರತವು, ಪಾಕಿಸ್ತಾನದ ಈ ಕ್ರಮ ತನ್ನ ಅನಧಿಕೃತ ಅತಿಕ್ರಮಣವನ್ನು ಮರೆಮಾಚುವ ಪ್ರಯತ್ನ ಎಂದು ಟೀಕಿಸಿದೆ.

ಅಕ್ಟೋಬರ್ 3ರವರೆಗೆ ಜಾರಿ, ಬಾಡಿಗೆದಾರರಿಗೆ ನೆಮ್ಮದಿ

ಬಾಡಿಗೆ ಮನೆ: ಹೊಸ ನಿಯಮ

ವಾಷಿಂಗ್ಟನ್ (ಎಪಿ): ಕೋವಿಡ್ ಸಾಂಕ್ರಾಮಿಕ ಅವಧಿಯಲ್ಲಿ ಮನೆ ಬಾಡಿಗೆ ಪಾವತಿಸಲಾಗದೇ ಪರಿತಪಿಸುತ್ತಿದ್ದ ಜನರಿಗೆ ಅನುಕೂಲ ಕಲ್ಪಿಸುವ ಹಿನ್ನೆಲೆಯಲ್ಲಿ ರೋಗ ತಡೆ ಮತ್ತು ನಿಯಂತ್ರಣ ಕೇಂದ್ರ (ಸಿಡಿಸಿ) 'ಬಾಡಿಗೆ ಪಾವತಿಸದಿದ್ದರೂ ಅವರನ್ನು ಮನೆಗಳಿಂದ ಹೊರ ಹಾಕದಂತೆ ರಕ್ಷಿಸುವಂತಹ ಹೊಸ ನಿಯಮ'ವನ್ನು ಜಾರಿಗೊಳಿಸಿದೆ.

ಮಂಗಳವಾರ ಈ ಹೊಸ ನಿಯಮವನ್ನು ಪ್ರಕಟಿಸಲಾಗಿದ್ದು, ಇದು ಅಕ್ಟೋಬರ್ 3ರವರೆಗೆ ಜಾರಿಯಲ್ಲಿರಲಿದೆ. ಈ ಹೊಸ ನಿಯಮದಿಂದಾಗಿ ಲಕ್ಷಾಂತರ ಬಾಡಿಗೆ ಮನೆ ನಿವಾಸಿಗಳಿಗೆ ನೆಮ್ಮದಿ ನೀಡಿದೆ.


ಜೋ ಬೈಡನ್

ಕೊರೊನಾ ಡೆಲ್ಟಾ ರೂಪಾಂತರ ತಳಿ ಹರಡುತ್ತಿರುವುದರ ಜೊತೆಗೆ, ರಾಜ್ಯ ಸರ್ಕಾರಗಳು ಬಾಡಿಗೆ ಸಹಾಯ ಧನವನ್ನು ಬಿಡುಗಡೆ ಮಾಡಲು ವಿಳಂಬ ಮಾಡುತ್ತಿರುವ ಹಿನ್ನೆಲೆಯಲ್ಲಿ ಮಂಗಳವಾರ ಘೋಷಿಸಿದ ಈ ಹೊಸ ನಿಯಮದಿಂದ ಲಕ್ಷಾಂತರ ಜನರು ನೆಮ್ಮದಿಯಾಗಿ ಈಗಿರುವ ಮನೆಗಳಲ್ಲೇ ಮುಂದುವರಿಸಲು ಸಹಾಯವಾಗಿದೆ.

ಕಳೆದ ವರ್ಷ ಡಿಸೆಂಬರ್ ತಿಂಗಳವರೆಗೆ ಇಂಥದ್ದೊಂದು ಬಾಡಿಗೆದಾರರ ರಕ್ಷಣೆ ನಿಯಮ ಜಾರಿಯಲ್ಲಿತ್ತು. ವರ್ಷಾಂತ್ಯಕ್ಕೆ ಅದು ಅಂತ್ಯಗೊಂಡಿತ್ತು. ಇದರಿಂದ ಬಾಡಿಗೆ ದಾರರು ಆತಂಕಕ್ಕೆ ಒಳಗಾಗಿದ್ದವು. ಈ ವಿಚಾರವಾಗಿ ಪ್ರಗತಿಪರ ಸಂಘಟನೆಗಳು ಸರ್ಕಾರದ ವಿರುದ್ಧ ಟೀಕೆ ಆರಂಭಿಸಿದ್ದವು. ಇವೆಲ್ಲವನ್ನೂ ತಣಿಸುವುದಕ್ಕಾಗಿ ಜೋ ಬೈಡನ್ ಆಡಳಿತ, ಹೊಸ ನಿಯಮವನ್ನು ಸಿಡಿಸಿ ಮೂಲಕ ಜಾರಿಗೊಳಿಸಿದೆ.

ಲಸಿಕೆ ಉತ್ಪಾದನೆ: ಭಾರತ, ಇತರ ದೇಶಗಳಿಗೆ ಅಮೆರಿಕ ನೆರವು

ವಾಷಿಂಗ್ಟನ್ (ಪಿಟಿಐ): ಕೋವಿಡ್ ಲಸಿಕೆಗಳನ್ನು ಉತ್ಪಾದಿಸುವ ಸಾಮರ್ಥ್ಯ ಹೊಂದಿರುವ ಭಾರತ ಮತ್ತು ಇತರ ದೇಶಗಳಿಗೆ ಲಸಿಕೆ ಉತ್ಪಾದನೆಗಾಗಿ ಅಮೆರಿಕ ಸಹಾಯ ಮಾಡುತ್ತಿದೆ ಎಂದು ಅಧ್ಯಕ್ಷ ಜೋ ಬೈಡನ್ ಹೇಳಿದರು.

ಪ್ರಪಂಚಕ್ಕೆ ಲಸಿಕೆಯ ಹಲವಾರು ಶತಕೋಟಿ ಡೋಸ್‌ಗಳ ಅಗತ್ಯವಿದೆ. ಅದರಲ್ಲಿ ಅಮೆರಿಕ 50 ಕೋಟಿ ಡೋಸ್‌ಗಳನ್ನು ನೀಡಲು ಬದ್ಧವಾಗಿದೆ ಎಂದು ಬೈಡನ್ ಮಂಗಳವಾರ ಶ್ವೇತಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

'ನಾವು ಲಸಿಕೆಯ 50 ಕೋಟಿ ಡೋಸ್‌ಗಳನ್ನು ಪೂರೈಸಲು ಬದ್ಧರಾಗಿದ್ದೇವೆ. ಅದಕ್ಕಿಂತಲೂ ಹೆಚ್ಚಿನದ್ದನು ಒದಗಿಸಲು ಪ್ರಯತ್ನಿಸುತ್ತಿದ್ದೇವೆ. ಅಲ್ಲದೆ ಲಸಿಕೆ ಉತ್ಪಾದಿಸುವಂತಹ ಸಾಮರ್ಥ್ಯ ಹೊಂದಿರುವ ಭಾರತದಂತಹ ದೇಶಗಳಿಗೆ ಲಸಿಕೆ ಉತ್ಪಾದನೆಗೆ ನೆರವು ನೀಡುವುದನ್ನು ಮುಂದುವರಿಸುತ್ತೇವೆ' ಎಂದು ಅವರು ಪ್ರತಿಕ್ರಿಯಿಸಿದರು.

'ಅಗತ್ಯವಿರುವ ದೇಶಗಳಿಗೆ ನಾವು ಲಸಿಕೆಯ ಡೋಸ್‌ಗಳನ್ನು ಉಚಿತವಾಗಿ ನೀಡಲಿದ್ದೇವೆ' ಎಂದು ಅವರು ಹೇಳಿದರು.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಬಾಂಬ್ ದಾಳಿ: 8 ಮಂದಿ ಸಾವು

ಕಾಬೂಲ್ (ಎಪಿ): 'ಅಫ್ಗಾನಿಸ್ತಾನದ ಹಂಗಾಮಿ ರಕ್ಷಣಾ ಸಚಿವರನ್ನು ಗುರಿಯಾಗಿಸಿಕೊಂಡು ನಡೆದ ಬಾಂಬ್ ದಾಳಿಯಲ್ಲಿ ಸುಮಾರು 8 ಮಂದಿ ಮೃತಪಟ್ಟಿದ್ದು, 20 ಮಂದಿಗೆ ಗಾಯಗಳಾಗಿವೆ' ಎಂದು ಅಧಿಕಾರಿಗಳು ತಿಳಿಸಿದರು.

'ಕಾಬೂಲ್ ನಗರದ ಹೊರವಲಯದಲ್ಲಿನ ರಕ್ಷಣಾ ಸಚಿವ ಬಿಸ್ಮಿಲ್ಲಾ ಖಾನ್ ಮೊಹಮ್ಮದಿ ಅವರ ಅತಿಥಿ ಗೃಹದ ಬಳಿ ಮಂಗಳವಾರ ತಡರಾತ್ರಿ ಬಾಂಬ್ ದಾಳಿ ನಡೆದಿದೆ. ಈ ಬಳಿಕ ಉಗ್ರರು ಮತ್ತು ಭದ್ರತಾ ಪಡೆ ನಡುವೆ ಗುಂಡಿನ ಚಕಮಕಿ ನಡೆದಿದ್ದು, ಇದರಲ್ಲಿ ಎಲ್ಲಾ ನಾಲ್ಕು ಉಗ್ರರನ್ನು ಹೊಡೆದುರುಳಿಸಲಾಗಿದೆ' ಎಂದು ಅವರು ಹೇಳಿದರು.

ತಂತ್ರಾಂಶದ ದುರ್ಬಳಕೆ ಆರೋಪ ಕುರಿತು ಪರಾಮರ್ಶೆ

ಪೆಗಾಸಸ್: ಗೌಪ್ಯಸಭೆಗೆ ಮುಂದಾದ ಇಸ್ರೇಲ್ ರಕ್ಷಣಾ ಇಲಾಖೆ ಸಮಿತಿ

ಜೆರುಸಲೇಮ್ (ಪಿಟಿಐ): ಎನ್‌ಎಸ್‌ಒ ಗ್ರೂಪ್‌ನ ಪೆಗಾಸಸ್ ಗೂಢಚರ್ಯೆ ತಂತ್ರಾಂಶ ದುರ್ಬಳಕೆಯಾಗಿರುವ ಬಗ್ಗೆ ಜಾಗತಿಕ ಮಟ್ಟದಲ್ಲಿ ಆರೋಪಗಳು ಕೇಳಿ ಬಂದ ಹಿನ್ನೆಲೆಯಲ್ಲಿ, ತಂತ್ರಾಂಶದ ಬಳಕೆ ಕುರಿತ ಪರಾಮರ್ಶೆಗೆ ಇಸ್ರೇಲ್ ಮುಂದಾಗಿದೆ.

ವಿದೇಶಾಂಗ ವ್ಯವಹಾರಗಳು ಹಾಗೂ ರಕ್ಷಣಾ ಸಮಿತಿ ಈ ಸಂಬಂಧ ಆ. 9ರಂದು ಗೌಪ್ಯ ಸಭೆ ನಡೆಸಲಿದೆ ಎಂದು ಮೂಲಗಳನ್ನು ಉಲ್ಲೇಖಿಸಿ ಕೆಲವು ಮಾಧ್ಯಮಗಳು ವರದಿ ಮಾಡಿವೆ.

ಆದರೆ, ಸಮಿತಿಯ ಅಧ್ಯಕ್ಷರೂ ಆದ ಸಂಸದ ರಾಮ್‌ಬೆನ್ ಬರಾಕ್ ಅವರು ಆ ದಿನ ಸಮಿತಿ ಸಭೆ ನಡೆಯಲಿದೆ ಎಂಬುದನ್ನು ನಿರಾಕರಿಸಿದ್ದಾರೆ.

ಪೆಗಾಸಸ್ ತಂತ್ರಾಂಶ ಮಾತ್ರವಲ್ಲ, ವಿವಿಧ ಕಂಪನಿಗಳ ವಿರುದ್ಧ ಕೇಳಿ ಬಂದಿರುವ ಆರೋಪಗಳ ಕುರಿತು ಈ ಸಮಿತಿ ಪರಾಮರ್ಶೆ ನಡೆಸುವುದು ಎಂದು ಸ್ಥಳೀಯ ಮಾಧ್ಯಮವೊಂದು ವರದಿ ಮಾಡಿದೆ.

ಎನ್‌ಎಸ್‌ಒ ಅಭಿವೃದ್ಧಿಪಡಿಸಿರುವ ಪೆಗಾಸಸ್ ಗೂಢಚರ್ಯೆ ತಂತ್ರಾಂಶವನ್ನು ಬಳಸಿ, ಹ್ಯಾಕ್ ಮಾಡಿರುವುದನ್ನು, ಆಯ್ದ ರಾಜಕಾರಣಿಗಳು, ಪತ್ರಕರ್ತರ ಮೇಲೆ ಕಣ್ಗಾವಲಿರಿಸಿದ್ದರ ಕುರಿತು ವಿವಿಧ ಮಾಧ್ಯಮ ಸಂಸ್ಥೆಗಳಿರುವ ಕೂಟ 'ಪೆಗಾಸಸ್ ಪ್ರಾಜೆಕ್ಟ್' ನಡಿ ಸಿದ್ಧಪಡಿಸಿರುವ ವರದಿಯಲ್ಲಿ ಹೇಳಲಾಗಿದೆ.

ಇಸ್ರೇಲ್‌ನ ಕ್ಯಾಂಡಿರು, ಕ್ವಾಡ್ರೀಮ್ ಎಂಬ ಸಂಸ್ಥೆಗಳು ಸಹ ತಾವು ಅಭಿವೃದ್ಧಿಪಡಿಸಿರುವ ಗೂಢಚರ್ಯೆ ತಂತ್ರಾಂಶಗಳನ್ನು ಹಲವು ದೇಶಗಳಿಗೆ ಮಾರಾಟ ಮಾಡಿವೆ ಎಂದೂ ಈ ವರದಿಯಲ್ಲಿ ವಿವರಿಸಲಾಗಿದೆ.